ಸಾಹಿತ್ಯ

ಸಂವಾದ-೫೦

ಸುವರ್ಣ ಸಂಚಿಕೆ

(ಏಪ್ರಿಲ್ - ಜೂನ್, ೧೯೯೯)

ಸಾಹಿತ್ಯ

ಸಂವಾದ-೫೦

ಸುವರ್ಣ ಸಂಚಿಕೆ
(ಏಪ್ರಿಲ್-ಜೂನ್,೧೯೯೯)

□ ನಮ್ಮ ಸಾಹಿತ್ಯಿಕ-ಸಾಂಸ್ಕೃತಿಕ ಬದುಕಿನ ಸ್ಪಂದನಕ್ಕೆ
□ ಬಹುಮುಖ ಸತ್ಯದ ಆವಿಷ್ಕಾರಕ್ಕಾಗಿ

ಸಂಪಾದಕರು
ಸವಿತಾ ನಾಗಭೂಷಣ
ಡಿ.ಎಸ್.ನಾಗಭೂಷಣ
ರಾಘವೇಂದ್ರ ಪಾಟೀಲ

ಚಂದಾ ವಿವರ
ಆಜೀವ ಚಂದಾ : ರೂ.೭೫೦ (ವ್ಯಕ್ತಿಗಳಿಗೆ) ರೂ.೧೦೦೦ (ಸಂಸ್ಥೆಗಳಿಗೆ)
ವಾರ್ಷಿಕ ಚಂದಾ : ರೂ.೭೫(ವ್ಯಕ್ತಿಗಳಿಗೆ) ರೂ.೧೦೦ (ಸಂಸ್ಥೆಗಳಿಗೆ)

ಅಕ್ಷರ ಜೋಡಣೆ ಹಾಗೂ ಪ್ರಕಾಶನ
ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ -೫೭೭೫೩೧
ದೂರವಾಣಿ: ೦೮೧೯೧ -೮೯೫೦೧

ಮುದ್ರಣ
ಲಿಪಿ ಮುದ್ರಣ, ಬ್ಯೂಗಲ್ ರಾಕ್ ರಸ್ತೆ, ಬೆಂಗಳೂರು -೫೬೦ ೦೦೪
ದೂರವಾಣಿ: ೬೫೨೪೬೫೩

(ಈ ಸಂಚಿಕೆಯಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ಲೇಖಕರವು. -ಸಂ.)

ಈ ಸಂಚಿಕೆಯಲ್ಲಿ

ಈ ಸಂಚಿಕೆಯ ಲೇಖಕರು

0 **ಡಾ.ಕೆ.ವಿ.ತಿರುಮಲೇಶ್**, ಲಿಂಗ್ವಿಸ್ಟಿಕ್ ಪ್ರೊಫೆಸರ್, ಸಿ.ಐ.ಇ.ಎಫ್.ಎಲ್., ಹೈದರಾಬಾದ - ೫೦೦೦೦೭

0 **ಡಾ.ರಹಮತ್ ತರೀಕೆರೆ**, ಕನ್ನಡ ವಿಶ್ವವಿದ್ಯಾಲಯ ಹಂಪಿ , ಕಮಲಾಪುರ ಅಂಚೆ , ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ

0 **ಪ್ರಹ್ಲಾದ ಅಗಸನಕಟ್ಟೆ** , ಸಾಮಾಜಿಕ ಕಾರ್ಯಕರ್ತರು, ಪಿ.ಎಸ್.ಎಮ್.ಡಿವಿಜನ್, ಕೆ.ಐ.ಎಂ.ಎಸ್. ಹುಬ್ಬಳ್ಳಿ -೫೮೦೦೨೨

0 **ಡಿ.ಎಸ್.ನಾಗಭೂಷಣ** , ಸಹಾಯಕ ನಿಲಯ ನಿರ್ದೇಶಕರು , ಆಕಾಶವಾಣಿ , ಚಿತ್ರದುರ್ಗ-೫೭೭ ೫೦೧

0 **ಡಾ.ಎಚ್.ಎಸ್.ವೆಂಕಟೇಶಮೂರ್ತಿ**, 'ಸಂಕಲ್ಪ' , ೩೦, ಪುಷ್ಪಗಿರಿನಗರ , ಹೊಸಕೆರೆಹಳ್ಳಿ , ಬನಶಂಕರಿ ೩ನೇ ಘಟ್ಟ ಬೆಂಗಳೂರು -೫೬೦೦೮೫

0 **ಡಾ.ತೀ.ನಂ.ಶಂಕರನಾರಾಯಣ** , ಕನ್ನಡ ವಿಭಾಗ , ಕುವೆಂಪು ವಿಶ್ವವಿದ್ಯಾಲಯ , ಜ್ಞಾನಸಹ್ಯಾದ್ರಿ ,ಶಂಕರಘಟ್ಟ ಶಿವಮೊಗ್ಗ ಜಿಲ್ಲೆ - ೫೭೭ ೪೫೧

0 **ಎಸ್.ಎ.ಕೃಷ್ಣಯ್ಯ** , ಜಾನಪದ ತಜ್ಞರು ,ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾಲಯ , ಉಡುಪಿ

0 **ಡಾ.ಸಂತೋಷ ಚೊಕ್ಕಾಡಿ** , ಕನ್ನಡ ಉಪನ್ಯಾಸಕ ಸರಕಾರೀ ಪದವಿ ಪೂರ್ವ ಕಾಲೇಜು ಮುಂಡಗೋಡ - ೫೮೧೩೪೯ (ಉತ್ತರ ಕನ್ನಡ ಜಿಲ್ಲೆ)

0 **ಅರುಂಧತಿ ರಾಯ್** ಬೂಕರ್ ಪ್ರಶಸ್ತಿ ಪಡೆದ 'ಗಾಡ್ ಆಫ್ ಸ್ಮಾಲ್ ಥಿಂಗ್ಸ್' ಇಂಗ್ಲಿಷ್ ಕಾದಂಬರಿಯ ಲೇಖಕಿ

0 **ರಾಘವೇಂದ್ರ ಪಾಟೀಲ** ಜೀವಶಾಸ್ತ್ರದ ಅಧ್ಯಾಪಕ ,ಪದವಿ ಪೂರ್ವ ಕಾಲೇಜು ಮಲ್ಲಾಡಿಹಳ್ಳಿ -೫೭೭ ೫೩೧

0 **ಆರ್.ತಾರಿಣಿ ಶುಭದಾಯಿನಿ** ಡಿ/ಆ ಶ್ರೀ ಟಿ.ಆರ್ ರಾಧಾಕೃಷ್ಣ,'ಆತ್ಮೀಯ', ಫಿಲ್ಟರ್ ಹೌಸ್ ರಸ್ತೆ, ಚಿತ್ರದುರ್ಗ

0 **ಯಶಸ್ವಿನಿ ಹೆಗಡೆ** ಡಿ/ಆ ಗಜಾನನ ಹೆಗಡೆ , ಶಿವಕುಮಾರನಗರ ಸಿರಿಗೆರೆ ಅಂಚೆ ಚಿತ್ರದುರ್ಗ ಜಿಲ್ಲೆ

0 **ಕೆ.ಎಸ್.ಶ್ರೀನಿವಾಸಮೂರ್ತಿ** ,೩೯೭ , ೪೩ನೇ ಅಡ್ಡ ರಸ್ತೆ , ೮ನೇ ಬ್ಲಾಕ್ ಜಯನಗರ ಬೆಂಗಳೂರು

0 **ಪ್ರೊ.ಬಿ.ವಿ.ವೀರಭದ್ರಪ್ಪ** ಬಿ -೧೮ , ವಿದ್ಯಾನಗರ , ದಾವಣಗೆರೆ - ೫೭೭ ೦೦೫

0 **ಸವಿತಾ ನಾಗಭೂಷಣ** ಅಂಚೆ ಅಧೀಕ್ಷಕರ ಕಚೇರಿ ,ಚಿತ್ರದುರ್ಗ-೫೭೭ ೫೦೧

0 **ಡಾ. ಆರ್ಕೆ ಮಣಿಪಾಲ** ೧೧೮ , ಎಂಐಜಿ ಹುಡ್ಕೋ ,ಮಣಿಪಾಲ - ೫೭೬ ೧೧೯

0 **ಜಿ.ಪಿ.ಬಸವರಾಜು** ಮುಖ್ಯ ಉಪ ಸಂಪಾದಕರು , ಪ್ರಜಾವಾಣಿ , ನಂ. ೭೫ ,ಮಹಾತ್ಮಾ ಗಾಂಧಿ ರಸ್ತೆ ಬೆಂಗಳೂರು -೫೬೦೦೦೧

ಕೆ.ವಿ.ತಿರುಮಲೇಶರ ಆರು ಕವಿತೆಗಳು

ಹಿಂದೆ ಕಲಾವಿದರು
ಎಲ್ಲಿ ಮಲಗಿದ್ದರೋ ಅಲ್ಲೆ ಭಿತ್ತಿಯ ಮೇಲೆ
ಚಿತ್ರಗಳ ಬರೆದು ಹೊರಟು ಹೋಗುವುದಿತ್ತು
ಅವರಿಗೆ ಚಿತ್ರ ವ್ಯಾಮೋಹ ಇರಲಿಲ್ಲ -
ಕವಿಗೆ ಪದ್ಯ ವ್ಯಾಮೋಹ ಕೂಡ
ಇರದಿರಲು ಸಾಧ್ಯವಾಗಬೇಕು.
ಪದ್ಯ ಬರೆದು ಬಸ್ ಸ್ಟಾಂಡಿನಲ್ಲಿ
ಬಿಟ್ಟು ಬಿಡಬೇಕು ...
ಅದು ಕಡಲೆ ಕಾಯಿ
ಕಟ್ಟೋದಕ್ಕಾಗುತ್ತದೆಯೆ
ಪ್ರೀತಿ ಮುಟ್ಟೋದಕ್ಕಾಗುತ್ತದೆಯೆ
ಅನ್ನೋದನ್ನ ಆಕಸ್ಮಿಕಕ್ಕೆ ಕೊಟ್ಟು ಬಿಡಬೇಕು .

★★★

ಎಂದಿನಹಾಗೆ ಆ ಸಂಜೆಯೂ
ಹಾರಿ ಬಂತು ಪಾರಿವಾಳ
ಕಿಟಕಿ ಬಳಿ ಕೂತಿತು -
ಎಂದಿನ ಹಾಗೆ ಅಲ್ಲಿ ಒಂದು
ಬಟ್ಟಲು ನೀರು ಇರಬೇಕಿತ್ತು
ಇರಲಿಲ್ಲ .ಇಣುಕಿ ನೋಡಿತು
ಮನೆಯೊಡತಿ ಕಾಣಿಸಲಿಲ್ಲ .
ಆಶ್ಚರ್ಯ !ಎಲ್ಲೂ ಹೋಗುವವಳಲ್ಲ !

ರಾತ್ರಿ ಬಹಳ ಹೊತ್ತಿನ ಮೇಲೆ
ಆಕೆ ಯಾರೊಡನೆಯೋ ಮರಳಿದ ಸದ್ದು
ಉತ್ಸಾಹದ ನಗು --ಮೌನ --

ಮುಂಜಾನೆ ಹಕ್ಕಿ ಹಾರಲೆ ಬೇಕು --
ನೋಡಿದರೆ ಪಕ್ಕದಲ್ಲೆ
ನೀರಿನ ಬಟ್ಟಲು ಎಂದಿನ ಹಾಗೆ!
ಕೇವಲ ನೀರಿಗಾಗಿ ಅಲ್ಲ
(ನೀರು ಎಲ್ಲಾದರೂ ಸಿಗಬಹುದು)
ನೀರಿನ ಪ್ರೀತಿಗೋಸ್ಕರ ಅದು
ಪ್ರತಿ ಬಾರಿ ಮರಳುವುದು ...

★★★

ನಂದಾ ದೀಪ ಉರಿಯುತ್ತ ...
ಹತ್ತಿಯ ಹೊಲ ಕಾಣಿಸಬೇಕಿತ್ತು
ಬೆಳೆದವರೂ ಇರಬೇಕಿತ್ತು
ಹಿಂದೆ ಗಾಣವೂ ಇತ್ತು
ಗಾಣಿಗ ಇದ್ದ
ಅದೇ ರೀತಿ ಎಳೆದ ಎತ್ತು ...
ಯಾವುದೂ ಕಾಣಿಸದೆ ಇತ್ತು
ಎಲ್ಲ ತೋರಿಸುವ ಬೆಳಕು
ಎಲ್ಲ ಮರೆಮಾಡಿತ್ತು!

★★★

ಪೋಲೀಸ್ ಸ್ಟೇಶನ್‌ನ ಹೂದೋಟ
ಯಾರೂ ನಂಬುವುದಿಲ್ಲ
ಕೆಂಪು ಗುಲಾಬಿ ಹೂ ಬಿಟ್ಟಿದೆ
ಯಾರೂ ನಂಬುವುದಿಲ್ಲ
ಮಲ್ಲಿಗೆ,ಸೇವಂತಿಗೆ ,ಕನಕಾಂಬರ
ಯಾರೂ ನಂಬುವುದಿಲ್ಲ

ಕಸಿಮಾವಲ್ಲಿ ಮಿಡಿಗಳಿವೆ
ಹಕ್ಕಿಗಳು ಕೂಡ ಬರುತ್ತಿರುತ್ತವೆ
ಯಾರೂ ನಂಬುವುದಿಲ್ಲ
ಸಂಜೆಯ ಸೂರ್ಯನ ಹೊಂಬಣ್ಣ
ಲಾನ್‌ನ ಮೇಲೆ ಸೆಳೆವುದು ಕಣ್ಣ
ಯಾರೂ ನಂಬುವುದಿಲ್ಲ
ಖಾಕಿ , ಕೋವಿ , ಬಯನೆಟ್ಟು
ಎಲ್ಲಾ ನುಂಗಿದೆ ಬಣ್ಣ ...

★★★

ನೆರೆಯವರ ಜತೆ ಮಾತು ಬಿಟ್ಟೆ
ಹೆಂಡತಿ ಮಕ್ಕಳ ಜತೆ ಮಾತು ಬಿಟ್ಟೆ
ಕಲೀಗ್ಸ್ ಜತೆ ಮಾತು ಬಿಟ್ಟೆ
ಏನಾಯಿತು ?
ನೀನು ನಿನ್ನ ಜತೆಯೆ ಮಾತಾಡಿಕೊಳ್ಳುವುದು
ಹೆಚ್ಚಾಯಿತು ...
ಮಾತು ಬಿಡೋದು ಸುಲಭವಲ್ಲ
ಮಾತು ತಾನಾಗಿಯೇ ಬಿಡುವ ವರೆಗೆ ...

★★★

ಯಾಕೆ ಮರೆಗೆ ಕೂತಿ ಮಗೂ
ನಿನ್ನ ಎಳೆ ಮೊಗನ್ನು ಯಾರು
ಚುಚ್ಚಿ ಬಿಟ್ಟರು --
ಕೈಗೆ ಬಳೆ ಕಾಲಿಗೆ ಗೆಜ್ಜೆ
ತೊಡಿಸಿ ಬಿಟ್ಟರು --
ಹಣೆಗೆ ಬೊಟ್ಟು ಕಣ್ಣಿಗೆ ಕಾಡಿಗೆ
ಹಚ್ಚಿ ಬಿಟ್ಟರು --

ಈಗಾಗಲೇ ನಿನ್ನ
ಕೂಡಿಸಿಬಿಟ್ಟರು !

●

ಬೇಂದ್ರೆ ಕಾವ್ಯ: ಅವೈದಿಕ ನೆಲೆಗಳಲ್ಲಿ

O ಡಾ .ರಹಮತ್ ತರೀಕೆರೆ

ನಮಗೆಲ್ಲ ಗೊತ್ತಿರುವಂತೆ ಹುಟ್ಟಿನಿಂದ ಬೇಂದ್ರೆ 'ಬ್ರಾಹ್ಮಣ' ಅನಿಸಿಕೊಂಡವರು ; ಕುವೆಂಪು ಶೂದ್ರರಾದವರು. ಸಾಮಾಜಿಕವಾದ ಈ ದಂದುಗದೊಳಗೆ ಬಿದ್ದಿರುವ ನಾವು, ನಮನಮ್ಮ ಕಾಲದ ಒತ್ತಡಗಳ ಕಾರಣಕ್ಕಾಗಿ ಬೇಂದ್ರೆಯವರಲ್ಲಿ ಬ್ರಾಹ್ಮಣಿಕೆಯನ್ನೂ, ಕುವೆಂಪು ಅವರಲ್ಲಿ ಶೂದ್ರತನವನ್ನೂ ಸಹಜವಾಗಿ ಕಾಣ ಹೊರಡುತ್ತೇವೆ. ಜಾತಿ ಮತಗಳು ಸಾಮಾಜಿಕ ವಾಸ್ತವ ; ಲೇಖಕರು ಹುಟ್ಟಿನಿಂದ ಸಾಮಾಜಿಕ ವಿಶಿಷ್ಟವಾದಂಥ ಅನುಭವ ಲೋಕವನ್ನು ಪಡೆದುಬರುತ್ತಾರೆ - ಅನ್ನುವುದೆಲ್ಲ ನಿಜ. ಆದರೆ ಬೆಳೆ ಬೆಳೆಯುತ್ತ ಅವರು ಯಾವ ಸಂವೇದನೆಯನ್ನು ಹೇಗೆ ಮತ್ತು ಯಾಕೆ ಪಡೆದುಕೊಂಡರು ಎಂಬುದು ಸಾಂಸ್ಕೃತಿಕವಾಗಿ ಮುಖ್ಯ ಪ್ರಶ್ನೆಯಾಗಬೇಕು. ಇದರಿಂದ ಲೇಖಕನನ್ನು ಇಷ್ಟ ಪಡುವ - ಪಡದಿರುವ ಸರಳ ಕ್ರಮದಿಂದ ತಪ್ಪಿಸಿಕೊಳ್ಳಬಹುದು.

ಕುವೆಂಪು ಅವರ ಅನೇಕ ಪದ್ಯಗಳನ್ನು ನೋಡಿ. 'ವೈದಿಕ' ಸಂಸ್ಕೃತಿಯೇ ಮೈತಳೆದು ಬಂದಂತೆ ಅವು ತೋಳುತ್ತವೆ. ಅವರಿಗೆ ಮರದಲ್ಲಿ ಕೂಗುವ ಒಂದು ಪಕ್ಷಿ ಋಷಿಮಾನವನೊಬ್ಬನ ಹೃದಯ ಅಭೀಪ್ಸಾ ಗಾಯತ್ರಿಯಾಗಿ, ಅತಿ ವಾಙ್ಮಯ ವೇದವಾಗಿ, ವೈದಿಕ ಋಷಿವಾಣಿಯಾಗಿ ತೋರುತ್ತದೆ. ವೇದೋಪನಿಷತ್ತುಗಳ ಮಂತ್ರ - ಶ್ಲೋಕಗಳನ್ನು ಇಡಿ ಇಡಿಯಾಗಿ ತಮ್ಮ ಪದ್ಯಗಳಲ್ಲಿ ಅವರು ಬಳಸಿಕೊಳ್ಳುತ್ತಾರೆ. ಶಂಕರಾಚಾರ್ಯರ ಕೃತಿಯನ್ನು 'ನಿರ್ವಾಣ ಷಟ್ಕಂ' ಎಂದು ಅನುವಾದಿಸುತ್ತಾರೆ. ಅಷ್ಟೇಕೆ ಅವರ ಸುಪ್ರಸಿದ್ಧ ಕವಿತೆ 'ಜಯಹೇ ಕರ್ನಾಟಕಮಾತೆ' ಯಲ್ಲಿನ ಭವ್ಯ ಬಾರತದ ಕಲ್ಪನೆಯ ತುಂಬ ವೈದಿಕ ಎಂದು ಕರೆಯಲಾಗುವ ರಾಘವ ಮಧುಸೂದನರೂ, ಶಂಕರ ರಾಮಾನುಜ ವಿದ್ಯಾರಣ್ಯರೂ ಇದ್ದಾರೆ; ಇಲ್ಲಿ "ಜನನಿಯ ಜೋಗುಳ, ವೇದದ ಘೋಷ" ವಾಗಿ ಕವಿಗೆ ಕೇಳಿಸುತ್ತದೆ. ಆದರೆ ಬೇಂದ್ರೆಗೆ ಶ್ರಾವಣ ಮಾಸದಲ್ಲಿ ಭೂಮಿ 'ಹೂವಹಡಲಿಗೆಯನು ಹೊತ್ತ ಜೋಗತಿ' ಯಂತೆ ಕಾಣುತ್ತಾಳೆ; ಹೆಣ್ಣಿನ ಕಣ್ಣು 'ಇಬ್ಬನಿ ತೊಳೆದರೂ ಹಾಲು ಮೆತ್ತಿದಾ ಕವಳಿ ಕಂಟಿಯಾ ಹಣ್ಣ'ನ್ನು ನೆನಪಿಸುತ್ತದೆ. 'ಕುರುಡು ಕಾಂಚಾಣ', 'ಹುಬ್ಬಳ್ಳಿಯಾಂವ', 'ಸಣ್ಣಸೋಮವಾರ' ಪದ್ಯಗಳ ಇಡೀ ಪರಿಭಾಷೆ ಕೃಷಿಕ ಜಾನಪದ ಲೋಕಗಳದ್ದು.

ಲೇಖಕರು ಚರಿತ್ರೆ ಮತ್ತು ವರ್ತಮಾನಗಳ ಯಾವ ನೆನಪುಗಳ ಮೂಲಕ ಬರೆಯುತ್ತಾರೆ ಎಂದು ನೋಡತೊಡಗಿದರೆ ಶೂದ್ರ - ಬ್ರಾಹ್ಮಣ, ವೈದಿಕ - ಅವೈದಿಕ ಎಂದು ಹೆಸರಿಸುವುದರ ಅಪಾಯಗಳು ತಿಳಿಯುತ್ತವೆ. ಉಪನಿಷತ್ ಶ್ರದ್ಧೆಯಿಂದ ಬರೆಯುವ ಕುವೆಂಪು ವೈದಿಕರಂತೆಯೂ, ಜಾನಪದ ಶ್ರದ್ಧೆಯಿಂದ

ಬರೆವ ಬೇಂದ್ರೆ ಅವೈದಿಕರಂತೆಯೂ ತೋರುವುದು ಕನ್ನಡ ಸಾಹಿತ್ಯದ ವಿಚಿತ್ರ ಸಂಗತಿ. ಸಾಂಸ್ಕೃತಿಕವಾಗಿ ನೋಡಿದರೆ, 'ಇರುವುದನ್ನು ಬಿಟ್ಟು ಇರದುದರೆಡೆಗೆ ತುಡಿವ' ಗುಣವುಳ್ಳ ಕನ್ನಡ ಲೇಖಕರಲ್ಲಿ ಇದೇನೂ ವಿಚಿತ್ರವಲ್ಲ. ಇದಕ್ಕೆ ಕಾರಣ ಲೇಖಕರೆಂಬ ವ್ಯಕ್ತಿಗಳ ವೈಯಕ್ತಿಕ ಸೆಳೆತಗಳಲ್ಲ; ಅವರನ್ನು ಕೆಲವು ಜ್ಞಾನಲೋಕಗಳಿಂದ ತಪ್ಪಿಸಿಟ್ಟಿರುವ ಸಾಮಾಜಿಕ ವ್ಯವಸ್ಥೆ. ಆದರೆ ಸಾಮಾಜಿಕ ವ್ಯವಸ್ಥೆ ಇಕ್ಕಿರುವ ಈ ತೊಡಕೇ ತನ್ನನ್ನು ತಾನು ದಾಟುವುದಕ್ಕೆ ಉತ್ತೇಜಿಸುತ್ತದೆ. ಹೀಗೆ ಉತ್ತೇಜನ ಪಡೆದ ಕುವೆಂಪು ಹಾಗೂ ಬೇಂದ್ರೆ; ಅಥವಾ ಬ್ರಾಹ್ಮಣನಾಗಿ ಹುಟ್ಟಿದ ಬಸವಣ್ಣನೆಂಬ ವಚನಕಾರ ಹಾಗೂ ಶೂದ್ರನಾಗಿ ಹುಟ್ಟಿದ ಕನಕದಾಸನೆಂಬ ಕೀರ್ತನಕಾರ, ವಿರುದ್ಧ ಸೆಳೆತಗಳಿಗೆ ಒಳಗಾಗಿ ಬಿಟ್ಟರು. ಇದು ಸೂಚಿಸುವ ಸತ್ಯ ಇದು: ಲೇಖಕರ ಕೃತಿಜಗತ್ತುಗಳಲ್ಲಿರುವ ಯಾವತ್ತೂ ಅನುಭವಲೋಕಗಳನ್ನು, ಸಂವೇದನೆಗಳನ್ನು, ಹಾಗೂ ಅವರು ತಳೆವ ದೃಷ್ಟಿಕೋನವನ್ನು ರೂಪಿಸುವ ಮುಖ್ಯ ಶಕ್ತಿ, ಅವರ ಕಾಲದ ಚಾರಿತ್ರಿಕ ಒತ್ತಡವಾಗಿರುತ್ತದೆ.

ವೈದಿಕ - ಅವೈದಿಕ ಎಂದರೇನು ? ಅವು ಪರಸ್ಪರ ವಿರುದ್ಧ ಲೋಕಗಳೇ? ಬೇಂದ್ರೆ ಕಾವ್ಯದಲ್ಲಿನ 'ಅವೈದಿಕ ನೆಲೆ'ಗಳ ಬಗ್ಗೆ ಬರೆಯುವಾಗ ಎದುರಿಸಲೇ ಬೇಕಾದ ಪ್ರಶ್ನೆಗಳಿವು. ವೈದಿಕ, ಅವೈದಿಕ ಎಂಬುವು (ವೇದಗಳಿಗೆ ಅನುಗುಣವಾದ ಹಾಗೂ ವೇದಗಳಿಗೆ ವಿರುದ್ಧವಾದ ಎಂಬರ್ಥದಲ್ಲಿ) ಮೂಲತಃ ದರ್ಶನ ಶಾಸ್ತ್ರದ ಪರಿಕಲ್ಪನೆಗಳು. 'ವೈದಿಕ'ರಾದವರು ತಮ್ಮದಲ್ಲದ ಅನ್ಯ ಸಂಸ್ಕೃತಿಗಳನ್ನು ವ್ಯಾಖ್ಯಾನಿಸುತ್ತ ಅವೆಲ್ಲ 'ಅವೈದಿಕ' ಎಂದು ಕರೆದರು. ಭಾರತೀಯ ತತ್ವಶಾಸ್ತ್ರದ ಚರಿತ್ರೆಯಲ್ಲಿ ಆತ್ಮವಾದಿ ಚಿಂತನೆಗಳಂತೆ, ವೇದ ಪ್ರಾಮಾಣ್ಯವನ್ನು ಒಪ್ಪದೆ ಅವಕ್ಕೆ ಪ್ರತಿಕ್ರಿಯೆಯಾಗಿ ಮೂಡಿದ ಚಾರ್ವಾಕ, ಸಾಂಖ್ಯ, ವೈಶೇಷಿಕ, ಮುಂತಾದ ದರ್ಶನಗಳನ್ನು 'ಅವೈದಿಕ' ಎನ್ನಲಾಗುತ್ತದೆ. ಇವೆಲ್ಲ ನಾಸ್ತಿಕ ದರ್ಶನಗಳು; ಬೌದ್ಧ - ಜೈನಧರ್ಮಗಳೂ ನಾಸ್ತಿಕವಾದಿ ಧರ್ಮಗಳು.

ಹಾಗೆಂದು, ವೈದಿಕ- ಅವೈದಿಕಗಳು ಕತ್ತರಿಸಿದಂತೆ ತುಂಡಾಗಿರುವ ಲೋಕಗಳಲ್ಲ. ವೇದಗಳಲ್ಲಿರುವ ಜೀವನಕ್ರಮ ಮತ್ತು ಅಭಿವ್ಯಕ್ತಿಗಳು ಆರ್ಯರು ಎನ್ನಲಾಗುವ, 'ಬುಡಕಟ್ಟು' ಜನರವು. ಅವೈದಿಕ ಎನ್ನಲಾಗುವ ಅನೇಕ ದರ್ಶನಗಳ ಮೂಲವೂ ವೇದಗಳಲ್ಲಿದೆ. ಪ್ರಥಮ ಲೋಕಾಯತವಾದಿಯಾದ ಬೃಹಸ್ಪತಿ ರಚಿಸಿದ ಮಂತ್ರಗಳು ಋಗ್ವೇದದಲ್ಲಿವೆ. ವೇದ- ಉಪನಿಷತ್ತುಗಳು ಸಾಮುದಾಯಿಕ ರಚನೆಗಳು. ಅಲ್ಲಿ ಉದ್ದಾಲಕನ ವೈಚಾರಿಕತೆ, ಕವಷ ಐಲೂಷ ನೆಂಬ 'ದಲಿತ'ನ ಕತೆ, ಎಲ್ಲ ಇದೆ. ಮುಂದಿನ ಹಂತದಲ್ಲಿ ದೇವರು, ಆತ್ಮ, ಕರ್ಮ, ಪುನರ್ಜನ್ಮ ಇವೆ ಎನ್ನುವ ಒಂದು ಗುಂಪು ಹಾಗೂ ಇವೆಲ್ಲವನ್ನು ನಿರಾಕರಿಸುವ ಬಂಡುಕೋರರ ಗುಂಪು ಪರಸ್ಪರ ಸಂಘರ್ಷ ಮಾಡುವ ರೋಚಕಕಥನ ಕಾಣಸಿಕೊಂಡಿತು. ಈ ಬಂಡುಕೋರರ ದರ್ಶನಗಳನ್ನು 'ಅವೈದಿಕ' ಎಂದು ಕರೆಯಲಾಯಿತು.

ಆದರೆ ಈಚೆಗೆ ವೈದಿಕ- ಅವೈದಿಕ ಎಂಬ ಪದಗಳು ಜಾತಿ- ಮತಗಳಿಗೆ ಸಂಬಂಧಿಸಿದ ಅರ್ಥಗಳನ್ನು ಪಡೆದುಕೊಂಡಿವೆ. ನಾಸ್ತಿಕವಾದಿ ದರ್ಶನಗಳನ್ನು ಕೆಳಜಾತಿಗಳಿಗೆ ಸೇರಿದ ಜನಸಮುದಾಯಗಳ ಸಂಸ್ಕೃತಿಗಳನ್ನೂ ಹಾಗೂ ಇಸ್ಲಾಂ- ಕ್ರೈಸ್ತ ಮುಂತಾದ ಮಧ್ಯ ರಶಿಯಾದಿಂದ ಬಂದ ಧರ್ಮಗಳನ್ನೂ ಕೂಡ, ಒಂದೇ ತೆಕ್ಕೆಗೆ ಸೇರಿಸಿ 'ಅವೈದಿಕ'ವೆಂದು ಕರೆಯಲಾಗುತ್ತಿದೆ. ಹಾಗೆಯೇ, ವೇದ, ಉಪನಿಷತ್ತು, ಗೀತೆ, ಸ್ಮೃತಿಗಳು, ರಾಮಾಯಣ - ಭಾರತ, ಮಹಾಭಾರತ ಮುಂತಾದ ಕಾವ್ಯಗಳುಳ್ಳ ವಾಙ್ಮಯವನ್ನೂ, ಅವುಗಳಿಗೆ ಉತ್ತರಾಧಿಕಾರಿಗಳಂತಿರುವ ಈ ಕಾಲದ ಬ್ರಾಹ್ಮಣರನ್ನೂ ಒಟ್ಟಿಗೆ ಕೂಡಿಸಿ 'ವೈದಿಕ' ಎಂದು ಕರೆಯಲಾಗುತ್ತಿದೆ. ಇದೊಂದು ಬಗೆಯಲ್ಲಿ ಶೂದ್ರ - ಬ್ರಾಹ್ಮಣಗಳಂತೆ ಸಡಿಲಾರ್ಥದ ಪರಿಕಲ್ಪನೆಗಳು.

ವಸ್ತುಸ್ಥಿತಿ ಏನೆಂದರೆ ಇವತ್ತು ಯಾವುದನ್ನು ಶೂದ್ರರು ಹಾಗೂ ಬ್ರಾಹ್ಮಣರು ತಮ್ಮ ಸಂಸ್ಕೃತಿ, ಧರ್ಮ ಅನ್ನುತ್ತಾರೋ, ಅವುಗಳ ಒಳಗೆ ಅವರದ್ದಲ್ಲದ ಏನೆಲ್ಲಾ ಸೇರಿಹೋಗಿದೆ. ವೈದಿಕ-ಅವೈದಿಕ ಬ್ರಾಹ್ಮಣ-ಶೂದ್ರ ಎಂಬುವನ್ನು ಕೇವಲ ಶಿಷ್ಟ-ಶಿಷ್ಟವಲ್ಲದ , ಮೇಲು ಕೆಳಗಿನ, ಸನಾತನ-ಪ್ರಗತಿಪರ ಇತ್ಯಾದಿ ಅರ್ಥಗಳಲ್ಲಿ ತೆಗೆದುಕೊಂಡರೆ, ಹುಟ್ಟಿದ ಜಾತಿಗೂ ಬದುಕುವ ಬದುಕಿಗೂ ನಡುವೆ ಇರುವ ದಿಗ್ಭ್ರಮೆಹುಟ್ಟಿಸುವ ವೈರುಧ್ಯಗಳು ಕಾಣುವುದೇ ಇಲ್ಲ. ಕುವೆಂಪು ಕಾದಂಬರಿಗಳಲ್ಲಿ ಬರುವ ಮಡಿಮೈಲಿಗೆ ಬ್ರಾಹ್ಮಣಿಕೆ ಮಾಡುವ ಒಕ್ಕಲಿಗರು, ಕಾರಂತರ ಕಾದಂಬರಿಗಳಲ್ಲಿ ಬರುವ ಮಣ್ಣಿನ ದುಡಿಮೆ ಮಾಡುವ ಶೂದ್ರಬದುಕಿನ ಬ್ರಾಹ್ಮಣರು ಈ ವೈರುಧ್ಯಕ್ಕೆ ಸಾಕ್ಷಿಗಳು. ಭೈರಪ್ಪನವರ ಆತ್ಮಕಥೆಯಲ್ಲಿ ಬರುವ ಬಾಲ್ಯದ ಬದುಕು ಬರೀ ಬ್ರಾಹ್ಮಣವೋ ಅಥವಾ ಯಾವುದೇ ಬಡಕುಟುಂಬದ ಕಥೆಯೋ? ಮನುಷ್ಯರು ಬದುಕುವ ಸಾಮಾಜಿಕ-ಆರ್ಥಿಕ ಸನ್ನಿವೇಶಗಳು ಅವರನ್ನು ರೂಪಿಸುವ ಬಗೆಯನ್ನು ಅರಿಯುತ್ತ ಹೋದರೆ, ವೈದಿಕ-ಅವೈದಿಕ ಎಂಬ ಪರಿಭಾಷೆಯ ಸಮಸ್ಯೆಗಳು ಗೊತ್ತಾಗುತ್ತವೆ. ಆಧುನಿಕ ಕಾಲದ ಒಬ್ಬ ಕವಿಯಾಗಿರುವ ಬೇಂದ್ರೆ ಕಾವ್ಯ ಪರಿಶೀಲಿಸುವಾಗ ಕೂಡ ಇದೇ ಸಮಸ್ಯೆ ಮುಖಾಮುಖಿಯಾಗುತ್ತದೆ.

ಕವಿಯೊಬ್ಬನ ಸಾಹಿತ್ಯದಲ್ಲಿ ತಾತ್ವಿಕ ನೆಲೆಗಳನ್ನು ಅರಸುವ ಕೆಲಸ ಬಲು ತೊಡಕಿನದು. ಯಾಕೆಂದರೆ ಕವಿಗೆ ಯಾವುದೋ 'ಒಂದು' ತಾತ್ವಿಕತೆ ಹಿನ್ನೆಲೆಯಾಗಿ ಇರುವುದಿಲ್ಲ. ಈ ತಾತ್ವಿಕನೆಲೆಗಳು ಒಬ್ಬ ಚಿಂತಕನಲ್ಲಿ ಇರುವ ಬಗೆಯಲ್ಲಿ ಕೂಡ ಇರುವುದಿಲ್ಲ. ಅವು ರೂಪಾಂತರಗಳನ್ನು ಪಡೆದುಕೊಂಡಿರುತ್ತವೆ. ಗುಪ್ತರೂಪಗಳಲ್ಲಿರುತ್ತವೆ. ಆದ್ದರಿಂದ ಬೇಂದ್ರೆಯವರಿಗೆ ಅರವಿಂದ ಫಿಲಾಸಫಿಯ ಪ್ರಭಾವವಾಗಿದೆ ಎಂದರೆ ಏನೂ ಹೇಳಿದಂತಾಗುವುದಿಲ್ಲ. ಇದು ಬೆನ್ನೆಲೆ ವಿಧಾನ. ಅರವಿಂದ ಪಿಲಾಸಫಿಗೆ ಬೇಂದ್ರೆ ಕಾವ್ಯದಲ್ಲಿ ಸಿಕ್ಕಿರುವ ರೂಪಾಂತರ ಯಾವುದು ಎಂಬುದನ್ನು ನೋಡಬೇಕು. ಇದು ಮುನ್ನೆಲೆ ವಿಧಾನ. ಕವಿತೆಯನ್ನು ಮುಖಾಬಿಲೆ ಮಾಡುವ ಮೂಲಕ, ಬೇಂದ್ರೆ ಕಾವ್ಯ ಪ್ರಕಟಿಸಿರುವ ತಾತ್ವಿಕ ನೆಲೆಗಳನ್ನು ಅರಿಯುವ ಈ ಮುನ್ನೆಲೆ ವಿಧಾನವೇ ಉಪಯುಕ್ತವಾದುದು.

ಬೇಂದ್ರೆ ಯಂಥವರ ಕಾವ್ಯವನ್ನು ಅವೈದಿಕ ನೆಲೆಯ ದೃಷ್ಟಿಯಿಂದ ನೋಡುವ ಅಗತ್ಯ ಯಾಕಾಗಿ ಬರುತ್ತವೆ ಎಂಬ ಸಣ್ಣ ಕುತೂಹಲ ಕಾಡುತ್ತಿದೆ. 'ಅವೈದಿಕ ' ಎನ್ನುವಂಥದ್ದು ಪ್ರಗತಿಪರ, ಜನಪರ, ಸಮುದಾಯಪರ, ಎಂದು ಗುಣಾತ್ಮಕವಾಗಿ ತಿಳಿಯುವ ; 'ವೈದಿಕ ನೆಲೆ 'ಯನ್ನು ಇದಕ್ಕೆ ವಿರುದ್ಧವಾಗಿ ಗ್ರಹಿಸುವ ಅಗತ್ಯವನ್ನು ಹುಟ್ಟು ಹಾಕಿರಬಹುದೇ? ಇದು ನಿಜವಾದರೆ, ಕನ್ನಡ ಸಾಹಿತ್ಯ ವಿಮರ್ಶೆಯನ್ನು ನಮ್ಮ ಕಾಲದ ರಾಜಕೀಯ-ಸಾಮಾಜಿಕ ಪಲ್ಲಟಗಳು ನಿರ್ದೇಶಿಸುತ್ತಿರುವದರ ಹೊಳಹು ಕಾಣುತ್ತದೆ.

ಭಾಗ :ಎರಡು

ಬೇಂದ್ರೆ ಮೂಲತಃ ಆರ್ಷೇಯ ವೈದಿಕ ಕವಿಯೇ :'ಕಾವ್ಯಯೋಗ ' ಎಂಬ ಲೇಖನದಲ್ಲಿ ಅವರು 'ಕಾವ್ಯ ಮೀಮಾಂಸೆ' ಯನ್ನು ವರ್ಣಿಸುವ ರೀತಿ ಹೀಗಿದೆ :

> **ರಸ, ಭಾವ, ವ್ಯಭಿಚಾರಿಭಾವ, ಅನುಭಾವ, ವಿಭಾಗ ಇಂತು ರಸಪಂಚಾಂಗವೆಂದು ಹೇಳಬಹುದು. ಈ ಪಂಚಾಂಗವನ್ನೇ ಉಪನಿಷತ್ತಿನ ಭಾಷೆಯಲ್ಲಿ ಹೇಳುವುದಾದರೆ ಆನಂದವೇ ಆತ್ಮ. ಪ್ರಿಯವೇ ಶಿರ. ಮೋದವೇ ದಕ್ಷಿಣಪಕ್ಷ. ಪ್ರಮೋದವೇ ಉತ್ತರ ಪಕ್ಷ.**

ಬ್ರಹ್ಮವೇ ಪ್ರತಿಷ್ಠೆ ಎಂದೆನ್ನಬಹುದು. ವೇದವು ಇದನ್ನೇ ಆನಂದ, ಮೋದ, ಮುದ, ಪ್ರಮುದ ಕಾಮವೆಂದುಸುರುವುದು. ಕಾಮವೂ ಕಾವ್ಯವೂ ಕರ್ಮವಾಗಿರುವುದರಿಂದ ಗೀತಾಶಾಸ್ತ್ರದ ಮಾತಿನಲ್ಲಿ ರಸವು ದೈವವು, ವಿಭಾವಗಳು ಅದಿಷ್ಠಾನ, ಸ್ಥಾಯಿಯೇ ಕರ್ತಾರ, ವ್ಯಭಿಚಾರಗಳೇ ಕಾರಣ, ಅನುಭಾವವೇ ಚೇಷ್ಟೆ..

ತಮ್ಮ ವಿಶ್ಲೇಷಣೆಯಲ್ಲಿ ಮೀಮಾಂಸಕ ಬೇಂದ್ರೆ ವೇದ, ಉಪನಿಷತ್ತು, ಗೀತೆಗಳ ಪ್ರಮಾಣವನ್ನು ಬಳಸುತ್ತಿರುವ ರೀತಿ ಗಮನಿಸಬೇಕು. ಆದರೆ 'ನೀ ಹೀಂಗ ನೋಡಬ್ಯಾಡ ನನ್ನ' ಎಂಬಂಥ ಸಾಲನ್ನು ಬರೆಯುವ ಹೊತ್ತಿನಲ್ಲಿ, ಕವಿ ಬೇಂದ್ರೆ, ಮೇಲಿನ ವಿಶ್ಲೇಷಣೆಯಲ್ಲಿ ಕಂಡ ವೈದಿಕತೆಯ ಶಾಸ್ತ್ರಭಾರವನ್ನೆಲ್ಲ ಕಳಚಿ ಎಸೆದು, ಸಂಸ್ಕೃತದ ಜಟಿಲತೆಗಳನೆಲ್ಲ ದಾಟಿ, ತನ್ನ ಹೆಂಡತಿಯ ನೋವಿಗೆ ಮಿಡುಕಾಡುತ್ತಿರುವ ಅಸಹಾಯಕ ಕೇವಲ ಗಂಡನನ್ನು ನಮ್ಮೆದುರು ಮೂಡಿಸಿಬಿಡುತ್ತಾರೆ. ಬೇಂದ್ರೆ ಕಾವ್ಯದ ಅವೈದಿಕತೆ ಎಂದರೆ ನನ್ನ ಪ್ರಕಾರ ಇದೇ.

ಬೇಂದ್ರೆಯವರ ಪ್ರೇರಣೆಯ ಬೇರುಗಳು ನಿಸ್ಸಂಶಯವಾಗಿ ವೇದ ಉಪನಿಷತ್ತು, ಗೀತೆಗಳಲ್ಲೂ, ಕಾಳಿದಾಸ ಮುಂತಾದವರ ಕ್ಲಾಸಿಕಲ್ ಸಾಹಿತ್ಯ ಪರಂಪರೆಯಲ್ಲಿ ಇಳಿದಂಥವು. ಕುವೆಂಪು, ಪುತಿನ, ವಿಸೀ, ಅಡಿಗರ ಬೇರುಗಳು ಕೂಡ ಇದೇ ನೆಲದಲ್ಲಿ ಹರಡಿವೆ. ಆದರೆ ಬಹುರೂಪಿಯಾಗಿರುವ ವೈದಿಕ ವಾಙ್ಮಯದಲ್ಲಿ ಯಾವ ಎಳೆಗಳನ್ನು ಈ ಲೇಖಕರು ಹಿಡಿದುಕೊಂಡರು ಎಂಬುದೇ ಮುಖ್ಯವಾದುದು. ಈ ವಾಙ್ಮಯದಲ್ಲಿ ಅಡಿಗರು ಕೊನೆಕೊನೆಗೆ ಸ್ಮೃತಿಕಾರರ ಎಳೆಹಿಡಿದು ಸನಾತನವಾದಿಯಾದರು. ವಿಸೀ ಉಪನಿಷತ್ತುಗಳಲ್ಲಿರುವ ವೈಚಾರಿಕತೆಯ ಸಂಶಯವಾದಿ ಎಳೆಹಿಡಿದು ಮಾನವತಾವಾದಿ ಜಿಜ್ಞಾಸು ಆದರು. ಕುವೆಂಪು ವ್ಯಕ್ತಿಸಾಧನೆಯ ಪರಮಾಧಿಕಾರವನ್ನು ಮನ್ನಿಸುವ ಆಧ್ಯಾತ್ಮವಾದಿ ಎಳೆಹಿಡಿದು, ತಮ್ಮ ಸಮಾಜವಾದಿ ದಾರ್ಶನಿಕತೆಗೆ ಬೆಸೆದುಕೊಂಡರು. ಶಂಬೂಕ ಏಕಲವ್ಯರ ಪ್ರಕರಣಗಳನ್ನು ನಾಟಕಗಳಿಗೆ ಆರಿಸಿಕೊಳ್ಳುವಾಗ ಅವರ ಈ ಸಂವೇದನೆ ಕೆಲಸಮಾಡಿದೆ. ವೈದಿಕ ವಾಙ್ಮಯದಲ್ಲಿ ಬೇಂದ್ರೆ ಹಿಡಿದ ಎಳೆಗಳು ಜೀವನ ಪ್ರೀತಿಯ, ಸಮೃದ್ಧಿ ಹಾರೈಸುವ ಸಂಗತಿಗಳಾಗಿದ್ದವು. ವೇದಗಳಲ್ಲಿ ಬರುವ 'ಸಹನಾಭವತು...' ಮುಂತಾದ ಕೂಡುಬಾಳಿನ ಆಶಯದ ಮಂತ್ರಗಳು ಅವರನ್ನು ಸೆಳೆದವು. ದೊಡ್ಡಶಕ್ತಿಯೊಂದಕ್ಕೆ ತನ್ನನ್ನು ಅರ್ಪಿಸಿಕೊಳ್ಳುವ ಅದ್ವೈತಿ ಭಕ್ತಿಯ ಧಾರೆಯನ್ನು ಅವರು ಹಿಡಿದರು. (ಈ ಭಕ್ತಿಯ ಧಾರೆ ಅವರಿಗೆ ಸಿಕ್ಕಿದ್ದು ವೈದಿಕ ವಾಙ್ಮಯದಲ್ಲಿ ಅಲ್ಲ. ಮರಾಠೀ ಮಹಾನುಭಾವರಲ್ಲಿ; ಕನ್ನಡದ ವಚನಕಾರರಲ್ಲಿ). ಕುವೆಂಪು ಅದ್ವೈತ ತತ್ವವನ್ನು ಸರ್ವಜೀವಗಳಲ್ಲಿ ದೈವೀಶಕ್ತಿಯನ್ನು ಕಾಣಬಲ್ಲ- ಆ ಕಾರಣಕ್ಕಾಗಿ ಅವೆಲ್ಲ ಸಮಾನವಾಗಿರುವ- ಸಮಾಜವಾದೀ ಚಿಂತನೆಯಾಗಿ ಹಿಡಿದರೆ, ಬೇಂದ್ರೆಯವರು ದೈವದೊಡನೆ ಜೀವವು ಬೆರೆಯುವ ಸಾಮರಸ್ಯದ ಚಿಂತನೆಯಾಗಿ ಹಿಡಿದರು :

ಅಣುರೇಣುವು ತಮ್ಮದಿಹುದು 'ನಾನು' ಎಂಬುದಾಟವು
ತಾವೆ ಜೀವನಾವೆಯಲ್ಲಿ ಕ್ರೀಡೆಯಾಡುತ್ತಿರುವಿರಿ ತಾವು ನಮ್ಮ
ರೇವು ನಾವು ಎತ್ತಹೋಗಿ ಬಂದರೂ ನಾರಾಯಣ
ನಾರಾಯಣ ನೃಸಿಂಹ ಪಾಹಿಮಾಮ್

('ನೃಸಿಂಹಸಿಂಹ')

ಜೀವನಾವೆಗಳು ಎತ್ತ ಹೋದರೂ ಅವನ ರೇವಿಗೇ ಬರುತ್ತವೆ ಮತ್ತು ಆ ನಾವೆಯಲ್ಲಿ ಕ್ರೀಡಿಸುತ್ತಿರುವವನೂ ಅವನೇ. ಇದು ಪಕ್ಕಾ ಅದ್ವೈತ ತತ್ವದ ರೂಪಕ. ಆದರೆ ಅನೇಕ ಅದ್ವೈತಿಗಳು

(ಉದಾ:ಶಂಕರ)ಮಾಯಾವಾದವನ್ನೂ ಜೀವನ ವಿರಕ್ತಿಯನ್ನೂ ಪ್ರತಿಪಾದಿಸಿದರು.ಆದರೆ ಬೇಂದ್ರೆ, ಕವಿಯಾಗಿ ಜೀವನವನ್ನು ಉತ್ಕಟವಾಗಿ ಅನುಭವಿಸಬೇಕೆಂಬ ಅನುರಕ್ತಿಯನ್ನು ಎತ್ತಿಹಿಡಿದರು.ಚಾರ್ವಾಕ ವಾದವನ್ನು ನೆನಪಿಸುವಂತಿರುವ,ಉಮರನ ರುಬಾಯಿಯನ್ನು ಬೇಂದ್ರೆ ಅನುವಾದಿಸಿದ್ದು ('ಬೆಳಗುಜಾವ') ಆಕಸ್ಮಿಕವಲ್ಲ.ಅವರ 'ಯುಗಾದಿ 'ಪದ್ಯಕ್ಕೂ ಉಮರನ 'ಬೆಳಗುಜಾವ 'ಕ್ಕೂ ತಾತ್ವಿಕವಾಗಿ ಇರುವ ಸಾಮೀಪ್ಯವನ್ನು ಗಮನಿಸಬೇಕು:

ಬಾನ್ ಹೊಗರಲುಂಟು, ಮರ ಚಿಗುರಲುಂಟು, ಬರಲುಂಟೆ ಸುಗ್ಗಿ ಮತ್ತೆ? ಈ ತುಂಬಿ
ಬಾಳು ತುಂಬಿರುವ ತನಕ ತುಂತುಂಬಿ ಕುಡಿಯಬೇಕು.

('ಬೆಳಗುಜಾವ')

ವರುಷಕೊಂದು ಹೊಸತು ಜನ್ಮ, ವರುಷಕೊಂದು ಹೊಸತು ನೆಲೆಯು ಅಖಿಲ ಜೀವಜಾತಕೆ ಒಂದೇ
ಜನ್ಮದಲ್ಲಿ ಒಂದೇ ಬಾಲ್ಯ ಒಂದೇ ಹರೆಯ ನಮಗದಷ್ಟೆ ಏತಕೆ?

('ಯುಗಾದಿ')

ಇಲ್ಲಿರುವುದು ಬರಿಯ ಪ್ರಶ್ನೆಯಲ್ಲ; ಪ್ರಶ್ನೆಯೊಳಗಣ ಗಾಢ ವಿಷಾದ - ವಿಷಾದದಾಚೆ ತುಡಿಯುತ್ತಿರುವ ಅಪಾರ ಜೀವನ ಪ್ರೀತಿ .ಒಂದೇ ಜನ್ಮದಲ್ಲಿ ಹಲವು ಹರೆಯಗಳ ಸುಖ ಸಮೃದ್ಧಿ ಬೇಡುವ ಮನಸ್ಸು. ಬೇಂದ್ರೆ ಬರೆಯುವ ಕನಸುಗವಿತೆಗಳಲ್ಲಿ ಕೂಡ ಸಮೃದ್ಧಿಯನ್ನು, ವಿಲಾಸ ಸುಖವನ್ನು ಅನುಭವಿಸುವ ಚಿತ್ರಗಳೇ ಇರುತ್ತವೆ :

ಅಲ್ಲಿ ಎಲ್ಲರಿಗೂ ನಾಕು ಕೈಗಳೇ
ಮಾಟ ತಪ್ಪದಿಹವು
ಎರಡು ಒಪ್ಪಿಸಿದವು ಕುಶಲ ಕಲೆಗಳಲ್ಲಿ
ಎರಡು ಅಪ್ಪಿ ಇಹವು

ಇಹವನ್ನು ಅಪ್ಪುವುದು ಕೂಡ ಇಲ್ಲಿದೆ. ವೈದಿಕ ನೆಲೆಯೊಳಗೆ ಬರೆಯುವ ಬೇಂದ್ರೆಯವರ ಬಂಡುಕೋರತನವೆಂದರೆ ಇದೇ: ಲೌಕಿಕದಲ್ಲಿ ಸಮೃದ್ಧಿಯನ್ನುಂಟುಮಾಡುವ ಮಳೆ, ಹೊಳೆ, ಗಾಳಿ, ನೀರು, ಹೂವು, ಹುಲ್ಲೆ, ಪ್ರೇಮ, ಕಾಮ,ಹೆಣ್ಣು-ಇವೇ ಅವರ ಕಾವ್ಯದ ಅಪೇಕ್ಷೆಗಳು. (ಈ ಜೀವನ ಶ್ರದ್ಧೆಯನ್ನು ಅವೈದಿಕ ಎನ್ನುವುದಾದರೆ,ಬೇಂದ್ರೆ ನಿಜಕ್ಕೂ ಕನ್ನಡದ ದೊಡ್ಡ ಅವೈದಿಕ ಕವಿ).ಲೌಕಿಕ ಸುಖಗಳನ್ನು ಅನುಭವಿಸಲು ಕವಿ ಯಾವ ಅತಿಗೆ ಹೋಗುತ್ತಾನೆಂದರೆ :

ಇರಲು ನೀರು ಕಪ್ಪೆ ಕೆಸರು
ಸಾಕು ಇರಲು ತಾವರೆ ('ಮಂಗಳಾ')

ಉತ್ಕಟ ಸುಖವನ್ನು ನೆಲಕ್ಕೆ ಕರೆಯುವ, ನೆಲದಲ್ಲಿ ನೆಲೆಸಿರುವ ವಿಸ್ಮಯ, ಸಂತೋಷಗಳನ್ನು ಕಂಡು ಸಂಭ್ರಮಿಸುವ ಬೇಂದ್ರೆ ಕಾವ್ಯದ ಹಿಂದೆ, ಅವರು ನಿಜಬದುಕಿನಲ್ಲಿ ಅನುಭವಿಸಿದ ಬಡತನ, ಕಷ್ಟಗಳಿವೆ; ಅವರ ಕಾಲದ ಕರ್ನಾಟಕದಲ್ಲಿ ಜನ ಪಟ್ಟ ಪಾಡುಗಳ ಚರಿತ್ರೆಯಿದೆ. ಹಸಿವಿನ ಕ್ರೌರ್ಯವನ್ನು, ಬರಗಾಲದ ರೈತರ ದಾರುಣ ದುಃಖವನ್ನು ,ಹಣವಂತರ ಮದವನ್ನು ಬೇಂದ್ರೆ ಯಾಕೆ ಅಷ್ಟೊಂದು ತೀವ್ರವಾಗಿ ಚಿತ್ರಿಸಿದರು ಎಂಬ ಪ್ರಶ್ನೆಗೆ ಕೂಡ ಉತ್ತರ ಅವರ ಕಾಲದ ಕರ್ನಾಟಕದಲ್ಲೇ ಇದ್ದಂತಿದೆ.

ಬಾಂಬೆ ಪ್ರೆಸಿಡೆನ್ಸಿಯ ಅಡಿಯಲ್ಲಿ ಬ್ರಿಟಿಶರ ದಮನಕಾರಿ ಆಳ್ವಿಕೆ ನಡೆಯುತ್ತ, ಅದರ ವಿರುದ್ಧ ಹಲವು ಬಗೆಯ ಪ್ರತಿರೋಧಗಳು ಜರುಗುತ್ತ ಇರುವ ಕಾಲದಲ್ಲಿ ಬೇಂದ್ರೆ ಹುಟ್ಟಿ ಬೆಳೆದರು. ಇದರ

ನಡುವೆ ಮರಾಠಿ ಭಾಷಿಕ ರಾಜಕಾರಣದ ವಿರುದ್ಧ ಕನ್ನಡವನ್ನು ಉಳಿಸುವ ಮತ್ತು ಕರ್ನಾಟಕವನ್ನು ಏಕೀಕರಣಗೊಳಿಸುವ ಚಳುವಳಿಗಳು ತೀವ್ರವಾಗಿದ್ದವು. ಮರಾಠಿ ಮನೆ ಮಾತಾಗಿದ್ದರೂ ಕನ್ನಡದ ಸತ್ವದಲ್ಲಿ ಜೀವವಿರಿಸಿಕೊಂಡಿದ್ದ ಬೇಂದ್ರೆಗೆ ಈ ಭಾಷಿಕ ರಾಜಕಾರಣದ ವಾಸ್ತವವೂ, ಇದರಾಚೆಗೆ ಇರುವ ಸಾಂಸ್ಕೃತಿಕ ಬದುಕೂ ಗೊತ್ತಿದ್ದವು. ಭೂರಹಿತ ಬ್ರಾಹ್ಮಣ ಕೆಳವರ್ಗಕ್ಕೆ ಸೇರಿದ ಬೇಂದ್ರೆಗೆ, ಸರ್ಕಾರಿ ನೌಕರಿ ಹಿಡಿದೇ ದೊಡ್ಡ ಸಂಸಾರವನ್ನು ಸಾಗಿಸಬೇಕಾದ ಅಸಹಾಯಕತೆಯಿತ್ತು; ಆಧುನಿಕತೆಯೂ ಅದರ ಮೌಲ್ಯಗಳೂ ಮುಂಚೂಣಿಗೆ ಬರುತ್ತಿರುವ ಹೊತ್ತಲ್ಲಿ, ಸನಾತನವಾದಿ ಬ್ರಾಹ್ಮಣಿಕೆಯು ಹೇಗೆ ಅಮಾನವೀಯವೂ ,ಹಾಸ್ಯಾಸ್ಪದವೂ ಆಗಬಲ್ಲವು ಎಂಬ ತೀಕ್ಷ್ಣ ಅರಿವಿತ್ತು. ಆದರೂ ಜಾತಿಯ ಕಾರಣಕ್ಕಾಗಿ ವೇದಶಾಸ್ತ್ರಗಳ ಸಂಸ್ಕೃತ ಪರಂಪರೆಯ ವಾತಾವರಣ ಅವರ ಜತೆಯಲ್ಲಿತ್ತು. ಅವರು ವಾಸಮಾಡಿದ ಧಾರವಾಡ, ಸೊಲ್ಲಾಪುರಗಳು ರೈತಾಪಿ ಸಮುದಾಯಗಳಿಂದ ಸುತ್ತುವರೆದ, ಹಳ್ಳಿಗಳನ್ನು ಒಳಗೊಂಡ ಪಟ್ಟಣಗಳಾಗಿದ್ದವು. ಆಧುನಿಕ ಶಿಕ್ಷಣ ಸಂಸ್ಥೆಗಳ ಜತೆ ಜತೆಯಲ್ಲೇ ಜಾನಪದ ಆಚರಣೆಗಳೂ ಇದ್ದಂಥ ಪಟ್ಟಣಗಳಾಗಿದ್ದವು. ಹೀಗಾಗಿ ದೂರದ ಯೀಟ್ಸ್ -ಅರವಿಂದರಷ್ಟೇ ಹೋಳಿಹುಣ್ಣಿಮೆಯ ನೋಟ, ಹಂತಿಪದಗಳ ಕೇಳುವಿಕೆ ಬೇಂದ್ರೆಯವರಿಗೆ ಸಾಧ್ಯವಾಗಿತ್ತು. ಧಾರವಾಡ ಸೊಲ್ಲಾಪುರಗಳು ಶಿಕ್ಷಿತ ಲಿಂಗಾಯತ ಸಮುದಾಯಗಳ ಸೀಮೆಯಾಗಿದ್ದರಿಂದ ವಚನಕಾರರ ದಟ್ಟಪ್ರಭಾವ ಅಲ್ಲಿತ್ತು. ಬಹಳ ಮುಖ್ಯವಾಗಿ ಮರಾಠಿಗರಾದ ಬೇಂದ್ರೆಗೆ ಮರಾಠಿ ಅವೈದಿಕ ಅನುಭಾವಿ ಪಂಥಗಳ ಗಾಢ ಸಂಸರ್ಗ ಸಿಕ್ಕಿತು.

ಹೀಗೆ ೨೦ನೇ ಶತಮಾನದ ವಸಾಹತುಶಾಹೀ ಆಧುನಿಕತೆ - ವೈಚಾರಿಕತೆಗಳು, ಸುಧಾರಣಾವಾದಗಳು, ಬ್ರಿಟಿಶರ ವಿರುದ್ಧದ ಹೋರಾಟಗಳು, ನಾಡನ್ನು ಕಟ್ಟುವ ಹಂಬಲಗಳು, ಒಟ್ಟಿಗೆ ಚುರುಕಾಗಿದ್ದು, ಸಾಮಾಜಿಕ -ರಾಜಕೀಯ ಪಲ್ಲಟಗಳು ಸಂಭವಿಸುತ್ತಿದ್ದ ಪ್ರಕ್ಷುಬ್ಧ ಕಾಲದಲ್ಲಿ ಬೇಂದ್ರೆ ಕಾವ್ಯ ಹುಟ್ಟಿತು. ಅದರ ಅಕ್ಕ -ಪಕ್ಕ ಅವಧೂತರು, ವಚನಕಾರರು, ಮರಾಠಿ ಸಂಸ್ಕೃತಿ, ಜನಪದ ಬದುಕು, ವೇದ- ಉಪನಿಷತ್ತುಗಳು ಸಮಸಮವಾಗಿ ಬೆರೆತುಕೊಂಡ ಪರಿಸರವಿತ್ತು. ಬೇಂದ್ರೆ ಕಾವ್ಯದ ಅವೈದಿಕತನವನ್ನು ಈ ರಾಜಕೀಯ ಪ್ರಕ್ಷುಬ್ಧತೆ ಮತ್ತು ಸಾಂಸ್ಕೃತಿಕ ಸಾಮರಸ್ಯತನಗಳಲ್ಲಿ ಕಾಣಬೇಕು.

ಭಾಗ - ಮೂರು

ಬೇಂದ್ರೆ ಕಾವ್ಯದ ಅವೈದಿಕತೆಯನ್ನು ಯೋಗ, ಸಾಂಖ್ಯ, ಬೌದ್ಧ -ಎಂದು ಮುಂತಾಗಿ ಕೇವಲ ದಾರ್ಶನಿಕ ಅರ್ಥದಲ್ಲಿ ನೋಡುವುದು ಒಂದು ಕ್ರಮ. ಇದರ ಜತೆಗೆ ಅವೈದಿಕತೆಯನ್ನು 'ಅಧಿಕಾರಸ್ಥವಾದುದರ ವಿರುದ್ಧ ಜೀವಪರವಾದ ತುಡಿತ' ಎಂದು ವ್ಯಾಖ್ಯಾನಿಸಿಕೊಂಡು ನೋಡುವುದು ಇನ್ನೊಂದು ಕ್ರಮ. ಬೇಂದ್ರೆಕಾವ್ಯ ತಾಯಿಯನ್ನೂ ಸಖಿಯನ್ನೂ ಹೇಗೆ ಪರಿಭಾವಿಸುತ್ತದೆ; ಸನಾತನವಾದವನ್ನು ಹೇಗೆ ಎದುರಾಗುತ್ತದೆ; ಅನುಭಾವಿಪಂಥಗಳ ಪ್ರೇರಣೆಯನ್ನು ಹೇಗೆ ಪಡೆದುಕೊಳ್ಳುತ್ತದೆ; ಜನಪದ ಬದುಕಿನಲ್ಲಿ ತನ್ನ ಶಕ್ತಿಯನ್ನು ಸೆಳೆದುಕೊಳ್ಳುತ್ತದೆ - ಇತ್ಯಾದಿ ಪರಿಶೀಲನೆಯಲ್ಲಿ ಅವೈದಿಕತೆಯನ್ನು ವ್ಯಾಖ್ಯಾನಿಸುವುದು ಎರಡನೇ ಕ್ರಮದ ರೀತಿ. ಸಾಂಸ್ಕೃತಿಕವಾಗಿ ಒಂದು ಕಾವ್ಯವನ್ನು ನೋಡಲು ಇದು ಉಪಯುಕ್ತ ಕ್ರಮಕೂಡ.

೧) ಬೇಂದ್ರೆಕಾವ್ಯ, ತಾಯ್ತನವನ್ನು ಕೊಂಡಾಡುವ ಶಿಶುಭಾವದ ಕಾವ್ಯ. ಮನುಕುಲವನ್ನು ಪೊರೆವ ಎಲ್ಲವನ್ನು, ಅದು ಬೆಳೆವ ಭೂಮಿಯಾಗಿರಲಿ, ಸುರಿಸುವ ಮೋಡವಾಗಿರಲಿ, ಕವಿಕಣ್ಣಿಗೆ ಮೊಲೆಯೂಡುವ ತಾಯ ಎದೆಯಾಗಿ ಕಾಣುತ್ತದೆ. ಇಲ್ಲಿನ ರೂಪಕ ಉಪಮೆಗಳಲ್ಲಿ ಮತ್ತೆಮತ್ತೆ ಮೈದಳೆವ ತಾಯಿ ಸ್ತನದಾಯಿನಿ. ಅಡಿಗರ 'ಭೂಮಿಗೀತ'ದ ಶಿಶುದ್ವೇಷೀ ತಾಯಿಯನ್ನು ನೆನೆದರೆ, ಬೇಂದ್ರೆಕಾವ್ಯದ ತಾಯಿಯ ವಿಶಿಷ್ಟತೆ ಗೊತ್ತಾಗುತ್ತದೆ. ವಿಶ್ವಮಾತೆ, ಭೂಮಿತಾಯಿ, ಭರತಮಾತೆ, ಕನ್ನಡತಾಯಿ, ತನ್ನತಾಯಿ ಹೀಗೆ ಐದು ತಾಯಂದಿರ ಕೂಸನ್ನಾಗಿ ತನ್ನನ್ನು ಬೇಂದ್ರೆ ವರ್ಣಿಸಿಕೊಳ್ಳುತ್ತಾರೆ; ಅರವಿಂದಾಶ್ರಮದ ತಾಯಿಗೂ ಮಗುವಾಗುತ್ತಾರೆ. ನಮ್ಮ ಸಾಮಾಜಿಕ ಸಂದರ್ಭದಲ್ಲಿ ತಾಯಿಯ ಮೂಲಕ ಗುರುತುಗೊಳ್ಳುವ ಮಗುವಿಗೆ ಯಾವ ಅರ್ಥವಿದೆ ಎಂಬುದು ನಮಗೆ ಗೊತ್ತಿದೆ. ಆದರೆ ಕವಿ ತನ್ನನ್ನು ತಾಯಿಯ ಮಗನನ್ನಾಗಿ (ಅಂಬಿಕಾತನಯದತ್ತ) ಯಾವ ಹಿಂಜರಿಕೆಯಿಲ್ಲದೆ ಮಂಡಿಸಿಕೊಳುತ್ತಾನೆ. ಈ ಅರ್ಥದಲ್ಲಿ ಬೇಂದ್ರೆಯವರದು ಶಾಕ್ತಕಾವ್ಯ. ಮಹಾಲಕ್ಷ್ಮಿ(ಕೊಲ್ಲಾಪುರ), ಅಂಬಾಭವಾನಿ(ತುಳಜಾಪುರ), ಬನಶಂಕರಿ (ಬದಾಮಿ), ಎಲ್ಲಮ್ಮ (ಸವದತ್ತಿ) ಮುಂತಾದ ಶಕ್ತಿಗಳು ಆವರಿಸಿರುವ ಸೀಮೆಯಿಂದ ಬಂದ ಬೇಂದ್ರೆಗೆ ಬಹುಶಃ ಇದರ ಪ್ರಭಾವವಿರಬೇಕು. ಕುವೆಂಪು ಭರತಮಾತೆ/ಕನ್ನಡಮಾತೆಯರನ್ನು ಕುರಿತು ಬರೆಯುತ್ತಾರಾದರೂ, ಅವರು ಸ್ತ್ರೀತನದ ಪರವಾದವರಲ್ಲ. ವಿವೇಕಾನಂದರ ವೀರತ್ವದ ಗಂಡುತನದ ಪರಿಭಾಷೆಯನ್ನು ಒಪ್ಪಿಕೊಂಡ ಅವರ ಕವಿತೆಗಳಲ್ಲಿ ಸ್ತ್ರೈಣಭಕ್ತಿ ಹೇಡಿತನವಾಗಿ ತೋರಿತು. ಕಲೋನಿಯಲ್ ರಾಜಕಾರಣ ಹಾಗೂ, ಜಾತಿಸಮಾಜವನ್ನು ಎದುರಿಸುತ್ತಿದ್ದ ಅವರಿಗೆ, ಮಿಲಿಟಂಟ್ ಪರಿಭಾಷೆಯ ಅಗತ್ಯವಿತ್ತು. ಆದರೆ ತಾಯ ಕರುಣೆಗಾಗಿ ಮೊರೆಯಿಡುವ ಕೂಸುತನದ ಕವಿಯಾಗಿ ಬೇಂದ್ರೆ, ಕರುಳಿನ ಭಾಷೆಯನ್ನು ಹುಡುಕಿಕೊಂಡರು. ತಮ್ಮ ಕಾಲದ ರಾಜಕಾರಣಕ್ಕೆ ತೋರಿದ ಪ್ರತಿಕ್ರಿಯೆಯ ಒಂದು ಭಾಗವಾಗಿ ಕೂಡ ಈ ತಾಯ್ತನದ ಕಲ್ಪನೆ ಮುಂದುವರೆಯುತ್ತದೆ. ಹಲವು ರಾಜಕೀಯ ಆಕ್ರಮಣಗಳನ್ನು ಚರಿತ್ರೆಯಲ್ಲಿ ಕಂಡಿರುವ ನೆಲದ ತಾಯಿಗೆ ಸೋಲಿಲ್ಲ. ಆಕೆ ಮೊದಲಗಿತ್ತಿಯಂತೆಯೇ ಮೆರೆಯಬಲ್ಲಳು ಎಂಬುದು ಕವಿಯ ಗ್ರಹಿಕೆ.

೨) ಬೇಂದ್ರೆ ಹೆಣ್ಣನ್ನು ಗ್ರಹಿಸುವ ಇನ್ನೊಂದು ಮಜಲು, ಅವರ ಕಾವ್ಯದ ಗಂಡು-ಹೆಣ್ಣಿನ ಸಂಬಂಧಗಳಲ್ಲಿ ಕಾಣಬಹುದು. ನಲ್ಲ-ನಲ್ಲೆಯರಿರಬಹುದು, ಗಂಡ-ಹೆಂಡತಿಯಿರಬಹುದು, ಮೂಲತಃ ಅಲ್ಲೆಲ್ಲ ಹೆಣ್ಣು ಸಖಿ(ಗೆಳತಿ); ವೈದಿಕ ಸ್ಮೃತಿಸಂಪ್ರದಾಯದಲ್ಲಿ ಗಂಡು(ಬೀಜ) ,ಹೆಣ್ಣಿಗಿಂತ(ಕ್ಷೇತ್ರ) ಪ್ರಧಾನ. ಕನ್ನಡದ ಅನೇಕ ಕವಿಗಳ ದಾಂಪತ್ಯ-ಪ್ರೇಮಗೀತೆಗಳನ್ನು ಗಮನಿಸಿದರೂ ಹೆಣ್ಣು, ಗಂಡಿನ ಒಡೆತನವನ್ನು ಒಪ್ಪಿಕೊಂಡಂಥ ನೆಲೆಯವು. ಹೆಂಡತಿ ಜತೆಗಿದ್ದರೆ ತಾನೂ ಒಬ್ಬ ಸಿಪಾಯಿಯಾಗಬಲ್ಲೆ ಎಂಬ ನರಸಿಂಹಸ್ವಾಮಿ ಕವನದ ತಮಾಷೆಯ ಧಾಟಿ, ಆಳದಲ್ಲಿ ಪುರುಷವಾದಿ ಸಂವೇದನೆಯನ್ನೇ ಉಳ್ಳದ್ದು. ಆದರೆ ಬೇಂದ್ರೆ ಕಾವ್ಯದಲ್ಲಿ ಹೆಣ್ಣು ಗಂಡನ್ನು ಧರಿಸಿದವಳು. ''ಕೈ ಹಿಡಿದವಳು''; ಗಂಡು ಹೆಣ್ಣಿನ ಕೈಹಿಡಿಯುವ ಸಂಪ್ರದಾಯವಿರುವ ಸಮಾಜದಲ್ಲಿ ಬೇಂದ್ರೆ ಕವಿತೆಗಳ ಗಂಡು ''ನನಕೈಯ್ಯ ಹಿಡಿದಾಕೆ'' ಎಂದು ನಂಬಿದವನು; ಆಕೆ 'ಏಳು ಮೆಟ್ಟಿನ ಪುಲಿಯ ಬೀರ ಬೇಂಟೆಯ ಬಿಡಿಸಿ, ಮಗುವ ಮುದ್ದಾಡವೊಲು ಮಾಡಿದಾಕೆ' ಆದವಳು(**'ಗೃಹಿಣಿ'**). ಪೌರುಷತನ ಮಂಡಿಸುವ ಕೆಲಸಗಳಲ್ಲಿ ಮಗುವನ್ನೇ ಮುದ್ದಿಸಲು ಮರೆಯುವ ಗಂಡನಿಗೆ ಆಕೆ ಪಾಠ ಕಲಿಸುವ ಗುರುವಾದವಳು; ಗಂಡು ಗೊಡ್ಡಾದಾಗ, ನಿಷ್ಕ್ರಿಯನಾದಾಗ ಅವನಲ್ಲಿ ಚೈತನ್ಯ ತುಂಬುವವಳು:

ಆಟದ ಕನ್ನಿಕೆ ಮಂಗಳ ಲಗ್ನಕೆ
ಮಾಲೆಯನಿಕ್ಕುತ ಮಡದಿಯಾದೆ;
ನಾಟಿಸಿ ಕಣ್ಣೋಟ ಸೋಕಿಸಿ ಕೈ ಬೆರಳು
ಮರವಟ್ಟ ಮನ-ಬನ ಚಿಗುರಿಸಿದೆ ('ಸಖೀಗೀತ')

ಇಲ್ಲಿಸ ದಾಂಪತ್ಯ ಗೀತೆಗಳಲ್ಲಿ ಗಂಡು ಯಾವಾಗಲೂ ವಿನಂತಿಸುವ ದೀನ. ಈ ದೈನ್ಯ ಅವನನ್ನು ಹಲವು ಬಾರಿ ಮಗುವನ್ನಾಗಿಸಿಬಿಡುತ್ತದೆ; ಹೆಂಡತಿ ಆಗ ತಾಯಿಯಾಗುತ್ತಾಳೆ:

ಗಂಡುದರ್ಪವ ಹರಿದು
ಬಿರುಸು ಬಿಂಕವ ತೊರೆದು
ತೋಳತೊಟ್ಟಿಲ ಮಗುವೆ ಆಗಿಬಂದೆ
ನಿನ್ನ ತಿಳಿವನು ಹಣಿಸು, ನಿನ್ನ ಹೊಟ್ಟೆಯನುಣಿಸು. ('ಮನದನ್ನೆ')

ಹೆಣ್ಣಿನ ಜತೆ ಜೀವಸಂವಾದಕ್ಕಾಗಿ ಹಸಿದಿರುವ ಗಂಡನ್ನು ಚಿತ್ರಿಸುವ ಬೇಂದ್ರೆ, ಹೆಣ್ಣಿನ ಸೇವೆಗಳನ್ನು ವೈಭವೀಕರಿಸುತ್ತಾ ಅವನ್ನು ಅಧಿಕೃತಗೊಳಿಸುತ್ತಿದ್ದಾರೆಯೇ? ಕುವೆಂಪು ತಮ್ಮ 'ಮನೆಮನೆಯ ತಪಸ್ವಿನಿಗೆ' ಪದ್ಯದಲ್ಲಿ ಹೆಣ್ಣನ್ನೂ ಅವಳ ಸೇವೆಗಳನ್ನೂ ಕೃತಜ್ಞತೆಯಿಂದ ಕೊಂಡಾಡುತ್ತಾ ವೈಭವೀಕರಿಸುತ್ತಾರೆ. ಯಾವತ್ತೂ ವೈಭವೀಕರಣವು ವಾಸ್ತವತೆಯ ಆಚೆ ಹುಟ್ಟುವ ತಾತ್ಕಾಲಿಕ ನಂಬಿಕೆಯಾಗಿದೆ. ಬೇಂದ್ರೆಯವರ 'ಗಂಡಸು-ಹೆಂಗಸಿಗೆ' ಎಂಬ ಪದ್ಯ ಓದುವಾಗ ಈ ಸಂಶಯ ಬರುತ್ತದೆ. ಆದರೂ ಸಖ-ಸಖಿತನದ ಸಮಾನತೆಯೇ ಅಲ್ಲಿನ ಗ್ರಹಿಕೆಯಾಗಿದೆ:

ಕಣ್ಣೆದಿರುಗಣ್ಣನೊಳಗೊಬ್ಬರ ಗೊಂಬೆ
ಚಿನ್ನದಂತಹ ಪಾಂಗು ನಮ್ಮಿಬ್ಬರೊಳಗೆ.

ಬೇಂದ್ರೆಯವರ ಪ್ರೇಮಗೀತೆಗಳಲ್ಲಿ 'ನಾನು' ಎಂಬ ಒಬ್ಬರ ಏಕವಚನಕ್ಕಿಂತ 'ನಾವು' ಎಂಬ ಕೂಡುವಚನ ಬಳಕೆಯಾಗುತ್ತದೆ. ಇದು ಮಾರ್ಮಿಕ ಸಂಗತಿ. ಅತ್ಯಂತ ಪ್ರಾಮಾಣಿಕ ದನಿಯಲ್ಲಿ ಹೆಣ್ಣನ್ನು ಸಖಿಯ ಘನತೆಯಲ್ಲಿ ಕಲ್ಪಿಸಿಕೊಂಡಿರುವ ಬೇಂದ್ರೆ, ತನ್ನನ್ನು 'ಚಹಾದ ಜೋಡಿ ಚೂಡಾದ್ಹಾಂಗ' ಎಂದು ಕರೆಯುವ ಗಂಡಸನ್ನು ಒಪ್ಪಿಕೊಂಡ ಹೆಣ್ಣನ್ನು ಕೂಡ, (**'ಹುಬ್ಬಳ್ಳಿಯಾಂವ'**) ಚಿತ್ರಿಸಿದರು ಎಂಬುದು ವೈರುಧ್ಯವಾಗಿದೆ. ಇಲ್ಲಿನ ಹೆಣ್ಣು ಹೆಂಡತಿಯಲ್ಲ. 'ವಾರದಾಗ ಮೂರುಸರತಿ' ಬಂದು ಹೋಗುವವನ ಗೆಣತಿ; ಈ ಸಂಬಂಧಗಳ ಒಳಗಿನ ಬಿರುಕುಗಳನ್ನು ಕವಿತೆ ಕಾಣಿಸುವುದಿಲ್ಲ.

ಬೇಂದ್ರೆ ಹೆಂಡತಿಯನ್ನು ಸಂಗಾತಿಯಾಗಿ, ಸಖಿಯಾಗಿ ಕಾಣಿಸಲು ಮಾತೃಪ್ರಧಾನ ಕುಟುಂಬದ ಆರ್ಥಿಕತೆಯಾಗಲೀ, ಶಾಕ್ತಪಂಥವಾಗಲೀ ಕಾರಣವಲ್ಲ. ದೊಡ್ಡ ಸಂಸಾರವನ್ನು ಆರ್ಥಿಕ ಭದ್ರತೆಯಿಲ್ಲದ ಸ್ಥಿತಿಯಲ್ಲಿ ತೂಗಿಸಿಕೊಂಡು ಹೋಗಬೇಕಾದ ಇಕ್ಕಟ್ಟಾಗಿದೆ.

೩) ಬೇಂದ್ರೆಯವರ ಕಾವ್ಯ ಪ್ರಜ್ಞೆ ವೈದಿಕ ಪರಂಪರೆಯೊಳಗೆ ಕಾಲೂರಿದ್ದರೂ, ಅವರ ಕಾಲದಲ್ಲಿ ಆಕ್ರಾಮಕವಾಗಿದ್ದ ಬ್ರಿಟಿಶ್ ಆಧುನಿಕತೆ, ಅವರನ್ನು ಹುಂಬ ಸಂಪ್ರದಾಯವಾದಿಯನ್ನಾಗಿ ಮಾಡಲಿಲ್ಲ. ಹೀಗಾಗಿ ಮಾನವೀಯತೆಗೆ, ಸಮಾನತೆಗೆ ವಿರುದ್ಧವಾದ ಸ್ಮೃತಿಸಂಪ್ರದಾಯವನ್ನು ಬೇಂದ್ರೆ ಧಿಕ್ಕರಿಸಿದರು. 'ಕರಿಮರಿನಾಯಿ', 'ಪುಟ್ಟ ವಿಧವೆ' ಪದ್ಯಗಳನ್ನು ನೆನೆಯಬೇಕು. ಮಳೆ ಹೊಡೆತಕ್ಕೆ ಬೆದರಿ ಮನೆಯೊಳಗೆ

ಬರುವ ನಾಯಿಮರಿಯನ್ನು ಮೈಲಿಗೆಯೆಂದು ತಡೆದು ಬಾಗಿಲಿಕ್ಕುವ ಭಟ್ಟರು ವ್ಯಂಗಕ್ಕೆ ಒಳಗಾಗುತ್ತಾರೆ. ಪುಟ್ಟವಿಧವೆಯ ಬಗ್ಗೆ ಬರೆಯುತ್ತಾ, ''ಮನೆಯವರು ವೈದಿಕರು ಊರು ಧರ್ಮದ ತವರು'' ಎನ್ನುವಾಗ ಬೇಂದ್ರೆ, ತಮ್ಮ ಕಾವ್ಯಜಾಯಮಾನಕ್ಕೇ ವಿರುದ್ಧವಾದ ಕಟು ವ್ಯಂಗ್ಯವನ್ನು ತರುತ್ತಾರೆ. ಮಾನವೀಯ ಸಂಕಟ ಬಂದಾಗ, ಧರ್ಮ, ಸಂಪ್ರದಾಯಗಳ ವಿರುದ್ಧ ಹೋಗುವುದು ಆಧುನಿಕ ಕನ್ನಡ ಸಾಹಿತ್ಯದ ಲಕ್ಷಣವೇ ಆಗಿದೆ. ಬೇಂದ್ರೆ ಅಪಾರವಾದ ವೈದಿಕ ಪುರಾಣ ಪ್ರಜ್ಞೆಯ ಒಳಗೆ ಬರೆಯುತ್ತಾರೆ. ಪು.ತಿ.ನ. ಅವರಂತೆ ಶ್ರದ್ಧೆಯಲ್ಲಿ ಅಲ್ಲ ; ಅಡಿಗರಂತೆ ಪರಿಷ್ಕರಣವಾದದ ಮಿಶನರಿ ಕೆಲಸಕ್ಕಲ್ಲ ; ವರ್ತಮಾನದ ವಾಸ್ತವದೊಂದಿಗೆ ಚರಿತ್ರೆಯನ್ನು ಮುಖಾಬಿಲೆ ಮಾಡಲು. ಈ ಅರ್ಥದಲ್ಲಿ ಬೇಂದ್ರೆ ಅತ್ಯಂತ ರ್‍ಯಾಶನಲ್ ಆದ ಆಧುನಿಕತೆಯ ಕವಿ. ಕರಡಿ ಅವರಿಗೆ ಪುರಾಣದ ಜಾಂಬುವಂತನ ನೆನಪು ತರುತ್ತದೆ. ಅದು 'ತ್ರೇತಾಯುಗದ ರಾಮನ್ನ ದ್ವಾಪರದ ಕೃಷ್ಣನ್ನ' ಕಂಡಿದೆ. ಆದರೆ ವೈದಿಕ ಪುರಾಣ ಸ್ಮೃತಿಗಳ ಮೂಲಕ ವೈಭವಗೊಳ್ಳುವ ಈ ಕರಡಿ ವರ್ತಮಾನದಲ್ಲಿ ಏನಾಗಿದೆ? 'ಧಣಿದಾನ' ಪಡೆಯುವ ದಣಿಯರ ಮನೆಮುಂದೆ ಕಾವಲು ಕಾಯುವ ಅಭಿನಯ ಮಾಡಬೇಕಾಗಿದೆ. ಇದು ತನಗಾಗಿ ಕೂಡ ಅಲ್ಲ, ಹೊಟ್ಟೆಗಿಲ್ಲದ ತನ್ನ ಒಡೆಯನ ಹೊಟ್ಟೆಹೊರೆಯಲು.

ಯಾವಾಗಲೂ ಬೇಂದ್ರೆ ನೋವು ಮತ್ತು ಹಸಿವಿನ ಪ್ರಶ್ನೆ ಬಂದಾಗ ಧಾರ್ಮಿಕ ಪರಂಪರೆಯನ್ನು ಕಟುವಾಗಿ ನೋಡಬಲ್ಲ ಛಾತಿಯನ್ನು ತೋರುತ್ತಾರೆ. ಹಸಿವನ್ನು, ಬಡತನವನ್ನು ಕುರಿತು ಬೇಂದ್ರೆಯಷ್ಟು ತೀವ್ರವಾಗಿ ಬರೆದ ಸಮಕಾಲೀನ ಕವಿಯೇ ಇಲ್ಲ. ಬಾಳಿನಲ್ಲಿ ಹಸಿವಿನ ಪ್ರಶ್ನೆಯನ್ನು ಎಂದೂ ಎದುರಿಸದ ಕುವೆಂಪು ಅವರಿಗೆ ಸಾಂಸ್ಕೃತಿಕ ಅಸಮಾನತೆಯ ಕಾರಣಕ್ಕಾಗಿ ಸಂಪ್ರದಾಯಗಳ ಮೇಲೆ. ಆಕ್ರೋಶ ಬಂದರೆ, ಬೇಂದ್ರೆಗೆ ಆರ್ಥಿಕ ಅಸಮಾನತೆಯ ಕಾರಣಕ್ಕಾಗಿ ಬರುತ್ತದೆ. ವ್ಯಂಗ್ಯವೆಂದರೆ, ಈ ಆಕ್ರೋಶ, ವ್ಯವಸ್ಥೆಯ ಮೇಲೆ ತಿರುಗದೆ, ಹತ್ತವತಾರ ಎತ್ತುವ ಹೇಡಿತನದ ದೇವರಮೇಲೆ ತಿರುಗುವುದು. ಬಡತನ ಸಿರಿತನಗಳು ದೇವರಿಕ್ಕಿದ ಅವಸ್ಥೆಗಳು ಎಂಬುದು ಇಲ್ಲಿನ ನಂಬಿಕೆ.

೪) ತನ್ನ ಕಾಲದ ರಾಜಕೀಯ-ಆರ್ಥಿಕ ಕ್ಷೋಭೆಗಳಿಗೆ ಬೇಂದ್ರೆ ತಮ್ಮದೇ ಆದ ರೀತಿಯ ಪ್ರತಿರೋಧಗಳನ್ನು ತೋರಿದರು. ಆದರೆ ಮೂಲತಃ ಅವರದು ಸಂಘರ್ಷವಾದಿ ಮನಸ್ಸಲ್ಲ. ವೈರುಧ್ಯ, ವಿರಸ, ವಿಷಮತೆಗಳನ್ನು ಅವರು ವಿಷವೆಂದು ಭಾವಿಸುತ್ತಾರೆ. ಹೀಗಾಗಿ ವೈರುಧ್ಯಗಳು ಇಲ್ಲವಾಗುವ ಸಾಮರಸ್ಯದ ಕಡೆಗೇ ಅವರ ಸೆಳೆತ. ಸಮರಸವೇ ಜೀವನ ಎಂಬುದು ಅವರ ಗಾಢನಂಬಿಕೆ. ವಸಾಹತುಶಾಹಿಗೆ ವ್ಯಕ್ತವಾದ ರಾಜಕೀಯ ಪ್ರತಿರೋಧಗಳಲ್ಲಿ ಸರ್ಕಾರಿ ನೌಕರರಾಗಿ ದಿಟ್ಟವಾಗಿ ಗುರುತಿಸಿಕೊಳ್ಳಲಾಗದ ಸ್ಥಿತಿಯಲ್ಲಿ ಮಾಸ್ತಿ, ಭಾರತೀಯರ ಸಾಂಸ್ಕೃತಿಕ ಹಿರಿಮೆಯನ್ನು ಮಂಡಿಸುವ ಕ್ಷೇಮದ ಉಪಾಯವನ್ನು ಶೋಧಿಸಿದರು. ಬೇಂದ್ರೆ ಒಂದು ಬಗೆಯ ಹಿಂಜರಿಕೆಯನ್ನು ತೋರುತ್ತ, ('ನರಬಲಿ' ಕವನಕ್ಕೆ ಸರ್ಕಾರದಿಂದ ಬಂದ ಪ್ರತಿಕ್ರಿಯೆ ಅವರನ್ನು ಅಧೀರಗೊಳಿಸಿರಬೇಕು.) ಈ ರಾಜಕೀಯ ಕ್ಷೋಭೆಗಳಾಚೆ ಇದ್ದ ಸಾಂಸ್ಕೃತಿಕ ಸಾಮರಸ್ಯದ ಲೋಕವನ್ನು ಶೋಧಿಸಿದರು. ಆ ಸಾಮರಸ್ಯ ಲೋಕವೆಂದರೆ ಭಕ್ತಿ /ಅನುಭಾವಿ ಪರಂಪರೆಗಳದ್ದು. ಈ ಪರಂಪರೆ ಸಂಘರ್ಷಾತೀತವಾದುದೇನಲ್ಲ. ಆದರೆ ಕವಿ ಅವನ್ನು ಗ್ರಹಿಸಿದ ರೀತಿ ಭಿನ್ನವಾಗಿತ್ತು. ಅವರುಬದುಕಿದ ಪರಿಸ್ಥಿತಿಯಲ್ಲಿ ಈ ಪರಂಪರೆಗಳ, (ವಚನಕಾರ, ಮಾನುಭಾವ, ವಾರಕರಿ ಸೂಫಿ, ನಾಥ, ಶಾಕ್ತ ಸಿದ್ಧಪಂಥಗಳ) ಪ್ರಭಾವಳಿ ಹಲವು ರೂಪಗಳಲ್ಲಿ ನೆಲೆಸಿತ್ತು. ತಾತ್ವಿಕವಾಗಿ ಇವುಗಳ ಮುಖ್ಯ ಪುರುಷರೆಲ್ಲ - ಅಲ್ಲಮ, ಜ್ಞಾನೇಶ್ವರ, ಕಾಡಸಿದ್ಧ, ಶರೀಫ, ಸಿದ್ಧಾರೂಢ, ನಾಗಲಿಂಗ, ಸಿದ್ಧರಾಮ

ಮುಂತಾದವರು-ಅವೈದಿಕ ನೆಲೆಯವರು. ವೇದ ಪ್ರಮಾಣ ವಿರೋಧಿಗಳು. ಸ್ವತಃ ಬೇಂದ್ರೆ ಹೆಸರೊಳಗಿರುವ 'ದತ್ತಾತ್ರೇಯ' ಕೂಡ ವೈದಿಕ ಪ್ರಮಾಣಗಳಾದ ಚತುರ್ವೇದಗಳನ್ನು ನಾಯಿಗಳನ್ನಾಗಿ ಮಾಡಿಕೊಂಡವನು! ದಕ್ಷಿಣ ಮಹಾರಾಷ್ಟ್ರದ ಅನುಭಾವೀ ಪಂಥಗಳ ಜತೆ ಮರಾಠಿ ಬಲ್ಲ ಬೇಂದ್ರೆಗೆ ಜೈವಿಕ ಸಂಬಂಧವಿತ್ತು. ಚಾಂಗದೇವಪಾಸಷ್ಠಿಯನ್ನೂ ಅವರು ಅನುವಾದಿಸಿದರು. ಬಹಳ ಮುಖ್ಯವಾಗಿ ಕನ್ನಡದ ವಚನಪರಂಪರೆಯ ಜತೆಗಿದ್ದ ಬೇಂದ್ರೆಯವರ ನಂಟು ಅವರನ್ನು 'ಅವೈದಿಕ 'ರಾಗಿಸಿತು. ಅವರ 'ಶಿವಕರುಣೆ' ಎಂಬ ಪದ್ಯ ,ವಚನವೊಂದರ ಹಿಗ್ಗಲಿಕೆಯೇ ಆಗಿದೆ. ಒಂದರ್ಥದಲ್ಲಿ ಬೇಂದ್ರೆ ಶಿವಸಂಸ್ಕೃತಿಯವರು. ಶ್ರಾವಣದ ಮಳೆ ಗುಡ್ಡದ ಮೇಲೆ ಸುರಿಯುವುದನ್ನು -

ಗುಡ್ಡಗುಡ್ಡ ಸ್ಥಾವರ ಲಿಂಗ, ಅವಕ ಅಭ್ಯಂಗ ಎರಿತಾವನೊಹಾಂಗ

ಎಂದು ಕಾಣಬಲ್ಲವರು. ಅನುಭಾವೀ ಪರಂಪರೆಗಳಿಂದ ಪ್ರೇರಣೆ ಪಡೆದರು ಎಂದರೂ ಬೇಂದ್ರೆ ಭಕ್ತಿಕವಿಯೇ. ಆದರೆ ಆ ಭಕ್ತಿಯೊಳಗೆ ಶ್ರದ್ಧೆಯಿಲ್ಲದಾಗ ಅವರಿಗೆ ಒಪ್ಪಲು ಕಷ್ಟವಾಗುತ್ತದೆ. ಸೊನ್ನಲಿಗೆ ಸಿದ್ಧರಾಮನ ಗುಡಿಗೆ ಹೋದಾಗ ಅವರು ಬರೆದ ಪದ್ಯ (**'ಸಿದ್ಧರಾಮರ ವಚನವನ್ನು ನೆನೆದು'**) ಪರಂಪರೆಗೆ ಕುರುಡಾಗಿ ತೆತ್ತುಕೊಳ್ಳದ ಎಚ್ಚರದ ಕುರುಹಾಗಿದೆ; ಅನೇಕ ಸಲ ಒಂದು ತಾತ್ವಿಕ ಕೇಂದ್ರವಿಲ್ಲದ ಬೇಂದ್ರೆ ಹಲವು ನೆಲೆಗಳಿಗೆ ತಮ್ಮನ್ನು ಮುಗ್ಧವಾಗಿ ಅರ್ಪಿಸಿಕೊಳ್ಳುತ್ತಾರೆ :

ಕಲ್ಯಾಣದಧ್ಯಕ್ಷನಾದ ಪ್ರಭು ಅಲ್ಲಮನ
ಗುರುಪಾದ ತೀರ್ಥ ತಂದು
'ಕಲ್ಯಾಣ ಕಲ್ಯಾಣ' ಎರೆವನು ಶಿರಬಾಗು
ಶಿವಶರಣವಾಗು ಎಂದು
ಉಡುಪಿಯೊಡೆಯನ ಅಡಿಯನುಡುಪು ಮಾಡುವ ನಮ್ಮ
ಆನಂದ ತೀರ್ಥ ತಂದು
ಮುಡಿಯಲ್ಲಿ ಧಾರೆಯಾಗಿಡುವೆ ಪುರುಷೋತ್ತಮನ
ದಾಸ ನೀನಾಗು ಎಂದು. ('ಹಂಕೆ')

ಅಲ್ಲಮ ಮತ್ತು ಮಧ್ವಾಚಾರ್ಯರು ತಾತ್ವಿಕವಾಗಿ ಎರಡುಧ್ರುವಗಳು. ಅವನ್ನು ಅವುಗಳ ನಡುವಣ ವೈರುಧ್ಯಗಳ ಯಾವ ಧ್ಯಾಸವಿಲ್ಲದೆ ಬೇಂದ್ರೆ ಒಂದೇ ಬೊಗಸೆಯಲ್ಲಿ ತರುತ್ತಾರೆ. ಇದೀಗ ಅವರ ಸಾಮರಸ್ಯವಾದದ ಅಥವಾ ಭಕ್ತಿ ಭಾವುಕತೆಯ ದೊಡ್ಡ ತೊಡಕು.

೫) **ಕೃಷ್ಣನಾಗೋ ನಲ್ಲ, ರಾಧೆಯಾಗಿ ಬಂದು ಸೇರುವೆ**
ಒಲವಿನಲ್ಲಿ ಬರಲಿ, ಒಳವೆರೆದು ಮುದ್ದಾಡುವೆನು
ಆದಮ್ಮ ಈವ್ಹರೊಲು ನಗ್ನರಾಗಿ ('ಓ ನಾರಾಯಣ')

ಬೇಂದ್ರೆ ಕಾವ್ಯದ ದೊಡ್ಡ ಶಕ್ತಿಯಿರುವುದು ಅವರ ಒಲವಿನ ಗೀತೆಗಳಲ್ಲಿ. ಈ ಗೀತೆಗಳ ಪರಿಭಾಷೆ ಹೆಣ್ಣಿನದ್ದು; 'ನಾನುಬಡವಿ' 'ರಾಧೆಯ ಪಾಡು' ಇವೆಲ್ಲ ಹೆಣ್ಣು ತನ್ನ ಸಖಿಯರೊಂದಿಗೆ ತೋಡಿಕೊಳ್ಳುವ ಕಥನಗಳು; ವೈಷ್ಣವ ಭಕ್ತಿಪಂಥದ ರಾಧಾಕೃಷ್ಣರ ಪ್ರಣಯ ಬೇಂದ್ರೆಯವರನ್ನು ಸಹಜವಾಗಿ ಸೆಳೆಯಿತು. ಅಗಲಿಕೆ - ವಿರಹ - ಮಿಲನಗಳ ಮಧುರ ಜಗತ್ತು ಇದು. ವಿಶೇಷವೆಂದರೆ ರಾಧಾಕೃಷ್ಣರ ನೆನಪಿನ ಮೂಲಕ ಶುರುವಾಗುವ ಈ ಗೀತೆಗಳಲ್ಲಿ ಜಾತಿ, ಧರ್ಮ, ದೇಶ, ಸಂಸ್ಕೃತಿಗಳಾಚೆಗಿನ ಎಲ್ಲ ಪ್ರೇಮಿಗಳು ಹಾದು ಬರುತ್ತಾರೆ. ಆದಮ್ಮ ಈವ್ಹರು, ನೂರು ಮಮತಾಜರು ಇಲ್ಲಿ ಒಂದೇ ಪರಿಭಾಷೆಗಳು. ಸೂಫೀ ಕಾವ್ಯದ

ಮಧುರ ಪ್ರೇಮದ ರೀತಿ ಕೂಡ ಜಾತ್ಯತೀತವಾಗಿ ಎಲ್ಲ ಸಂಸ್ಕೃತಿಗಳ ಅನುಭವಕ್ಕೆ ಕೈಹಾಕಿತು. ಈ ಸಂದರ್ಭದಲ್ಲಿ ಬೇಂದ್ರೆ ಕಾವ್ಯ ವೈದಿಕ ನಿಷ್ಠೆಯನ್ನು ಎಂದೂ ಕಾಯ್ದು ಕೊಳ್ಳಲಿಲ್ಲ. ಉಮರನ ರುಬಾಯಿ ಅವರ 'ಯುಗಾದಿ 'ಪದ್ಯದಲ್ಲಿ ಪ್ರತಿಧ್ವನಿಗೊಳ್ಳುವುದು ವಿಸ್ಮಯವೇ ಅಲ್ಲ.ಪ್ರೇಮಕವಿತೆಗಳಿಗೆ ಅನುರೂಪವಾಗುವ ಈ ಸಾಮರಸ್ಯವಾದಿ ಅದ್ವೈತ ತತ್ವವು,ಸಾಮಾಜಿಕವಾಗಿ ವೈರುಧ್ಯಗಳನ್ನು ಮುಖಾಮುಖಿಮಾಡದಂತೆ;ಮಾಡಿದರೆ ನೈತಿಕ ಆಕ್ರೋಶದ ಮಟ್ಟದಲ್ಲಿ ನಿಲ್ಲುವಂತೆ,ಅಥವಾ ಸಹಿಸಿಕೊಳ್ಳುವಂತೆ ('ಬಡತನ ಸಿರಿತನ ಕಡೆತನಕುಳಿದಾವೇನ, ಎದೆಹಿಗ್ಗು ಕಡೆಮುಟ್ಟ') ಮಾಡಿ ಬಿಡುತ್ತದೆ. ಇದು ಬೇರೆ ಸಂಗತಿ. ಆದರೆ ಆನು-ತಾನು, ನೀನು-ನಾನು ಎಂಬ ಭಿನ್ನಗಳು ಅಳಿದು ಒಂದಾಗುವುದೇ ಪ್ರೇಮತತ್ವದಲ್ಲಿ ಮುಖ್ಯವಾದುದು. ಭಿನ್ನಾಭಿಪ್ರಾಯ, ವಿರೋಧ, ಸಂಘರ್ಷಗಳು ಉಳಿಯುವುದಲ್ಲ.

ಒಲವನಲ್ಲಿ ಬೆಳಿ, ಒಲವಿನಲ್ಲಿ ಉಳಿ, ಒಲವೆ ಬಾಳ ಚೆಲುವು
ಒಲ್ಲದಿಲ್ಲ, ಒಲಿಯುವುದು ಎಲ್ಲ, ಒಲಿಯುವುದೆ ಬದುಕು-ಒಲವು
ಇದು ನೇತಿಯಲ್ಲ ಇತಿ ಪ್ರೀತಿ ಸ್ವಾತಿ ಮೌಕ್ತಿಕದ ದೈವ ಭುಕ್ತಿ

ನೇತಿಯ ನಿರಾಕರಣೆಯನ್ನು ಬೇಂದ್ರೆ ಮಾಡುತ್ತಾರೆ. ಆದರೆ ಚರಿತ್ರೆಯಲ್ಲಿ ಅವೈದಿಕ ದರ್ಶನಗಳು ಯಜಮಾನ ವ್ಯವಸ್ಥೆಯನ್ನು ಎದುರಿಸಿದ್ದು ನೇತಿಯ ಮೂಲಕವೇ; ಸಂಘರ್ಷದ ಮನೋಭಾವ ಹುಟ್ಟುವುದೇ ಪ್ರಶ್ನಿಸುವ ಗುಣದಿಂದ.

೬) ಒಬ್ಬ ಲೇಖಕ ಸಮುದಾಯಕ್ಕೆ ಮಾಡುವ ಬಹುದೊಡ್ಡ ಸೇವೆ ಎಂದರೆ, ಅದು ಆಡುವ ಭಾಷೆಯ ಅಭಿವ್ಯಕ್ತಿ ಸಾಮರ್ಥ್ಯವನ್ನು ಹಿಗ್ಗಿಸಿ ಸೂಕ್ಷ್ಮತೆಯನ್ನು ತಂದಿಕ್ಕುವುದು. ಬೇಂದ್ರೆ ಸಂಸ್ಕೃತ ಭಾಷೆಯಲ್ಲಿ ಹಾಗೂ ಆ ಭಾಷೆಯಲ್ಲಿರುವ 'ವೈದಿಕ' ಕೃತಿಪರಂಪರೆಯಲ್ಲಿ ಇಟ್ಟುಕೊಂಡಿರುವ ಸಂಬಂಧಗಳು,ಕನ್ನಡ ಸಂದರ್ಭಕ್ಕೆ ಯಾವ ರೂಪದಲ್ಲಿ ಹೊರಳಿ ಬಂದವು, ಕನ್ನಡ ಭಾಷೆ, ಕರ್ನಾಟಕದ ಬದುಕಿನೊಳಗೆ ಅವು ಹೇಗೆ ಸೇರಿಕೊಂಡವು-ಎಂಬುದನ್ನು ಗಮನಿಸಬೇಕು. ತಾತ್ವಿಕವಾಗಿ ಜಡವಾದ ಸಂಸ್ಕೃತಭಾಷಿಕ ಪದ್ಯಗಳನ್ನು ಅವರು ಬಹಳ ಬರೆದಿದ್ದಾರೆ. ಆದರೆ ಅವರ ಅತ್ಯುತ್ತಮ ಪ್ರಯತ್ನಗಳು ('ಕನ್ನಡ ಮೇಘದೂತ 'ವೂ ಇದರಲ್ಲಿ ಸೇರಿದೆ) ಕರ್ನಾಟಕ ನೆಲದ ಬದುಕಿನ ಜತೆ ರಕ್ತಸಂಬಂಧ ಪಡೆದಂಥವು. ಧಾರವಾಡ ಸೀಮೆಯ ಕೃಷಿಮೂಲವಾದ ಇಡೀ ಜನಪದ ಲೋಕ ಅವರ ಕಾವ್ಯದಲ್ಲಿ ಮೈತಳೆಯುವ ಬಗೆ ಇದಕ್ಕೆ ಸಾಕ್ಷಿ.ಅವರ ಕವಿತೆಗೆ ನೆಲವನ್ನು ಬಿಟ್ಟು ನೆಗೆಯುವ, ಕನಸುಕಾಣುವ ಆಶಯಗಳಿವೆ.ಆದರೆ ಕೊನೆಯಲ್ಲಿ ಮತ್ತೆ ಅವೆಲ್ಲ ನೆಲಕ್ಕೆ ಮರಳಿಬರುತ್ತವೆ.ಮೂಲತಃ ಬೇಂದ್ರೆಕಾವ್ಯ ಅವತರಣದ ಕಾವ್ಯ. ಗಂಗೆ ದೇವಲೋಕದವಳು ನಿಜ. ಆದರೆ ಆಕೆ ನೆಲಕ್ಕೆ ಅವತರಿಸುತ್ತಾಳೆ. 'ಅವತಾರವೆಂದೆ ಎಂದಾರೆ ತಾಯಿ ಈ ಅಧಃಪಾತವನ್ನೇ'- ದೈವಿಕವಾದುದು ಅಧಃಪತನಗೊಂಡು, ನೆಲದ ಬಾಳಿಗೆ ಅವತಾರವಾಗುವ ಕ್ರಿಯೆ,ಸಂಸ್ಕೃತದಿಂದ ಕನ್ನಡಕ್ಕೆ, ವೈದಿಕದಿಂದ ಅವೈದಿಕಕ್ಕೆ ಬರುವ ಕ್ರಿಯೆ ಕೂಡ ಆಗಿದೆ.ಬೆಳಗು ದೈವಿಕಾನುಭವದಷ್ಟು ಅನನ್ಯ ನಿಜ.ಅದು ನೆಲದ ಮೇಲೆಯೇ ಮೂಡಬೇಕಷ್ಟೆ ('ಯಾರಿರಿಸಿರುವರು ಮುಗಿಲಮೇಲಿಂದಿಲ್ಲಿಗೇ ತಂದು'). 'ಮೇಘದೂತ 'ದ ಯಕ್ಷ ಶಾಪಗ್ರಸ್ತನಾಗಿ ತಿರುಗುವುದು,ಧಾರವಾಡದ ಹಳ್ಳಿಗನಾಗಿಯೇ.ಬೇಂದ್ರೆ ವೈದಿಕಬ್ರಾಹ್ಮಣರಾಗಿ,ಕನ್ನಡಕ್ಕೆ ಮಣ್ಣಿನ ಬದುಕಿನ ಅನುಭವಗಳನ್ನು ಕಟ್ಟುವ ಈ ಬಗೆಯನ್ನೇ ನಾನು ಅವೈದಿಕತನ ಎಂದು ಭಾವಿಸುತ್ತೇನೆ.

ಬೇಂದ್ರೆ ಕಾವ್ಯ:ಕೆಲವು ಚೆಲ್ಲುವರಿದ ಟಿಪ್ಪಣಿಗಳು

೦ ಪ್ರಹ್ಲಾದ ಅಗಸನಕಟ್ಟೆ

ವ್ಯಂಗ್ಯವೆಂದರೆ, ಮಾತಿಗೆ ಮಂತ್ರತ್ವ ತಂದುಕೊಟ್ಟ ಬೇಂದ್ರೆಯವರು,ಮಾತುಗಳು ಸ್ಫುರಿಸುವ ಅರ್ಥ ಕುರಿತೇ ಸಂದೇಹವಾದಿಯಾಗಿದ್ದರು.ಮಾತು ಮಂತ್ರತ್ವ ಮುಟ್ಟಿದ ಕೂಡಲೆ ಕವಿ - ದಾರ್ಶನಿಕನಾಗಿ ಬಿಡುತ್ತಾನೆ, ಮೌನಿಯಾಗುತ್ತಾನೆ,ಮಾತು ಕಂಡರೆ ಮೊಗತಿರುವುತ್ತಾನೆ.ಇಷ್ಟಾಗಿಯೂ ಮಾತನ್ನು ಮಂತ್ರ ಮಾಡುವ ಹಠ ಪ್ರತಿ ಕವಿಗೆ.ಮಾತು ದ್ವಂದ್ವ ಸ್ವರೂಪಿ. ಮಾತು ಅಥವ ಶಬ್ದ ಒಂದನ್ನು ಎರಡನ್ನಾಗಿ, ಎರಡನ್ನು ಹಲವನ್ನಾಗಿಸಿ ನೋಡಲು ಉದ್ದೀಪಿಸುತ್ತವೆ. ವೈರುದ್ಧ್ಯದ ನೆಲೆಯಿಂದ ಶಬ್ದಕ್ಕೆ ಜಗತ್ತಿನಲ್ಲಿ ಸ್ಥಾನವೇ ಇಲ್ಲವೇನೋ...? All words are formed out of duality ಎನ್ನುವ ಮಾತು ಇದನ್ನೇ ಹೇಳುತ್ತದೆ .

ಪ್ರಾಯಶಃ ಬೇಂದ್ರೆಯವರನ್ನು ಅವರ ಸಂಜೆಯ ಆಯುರ್ಮಾನದಲ್ಲಿ ಕಾವ್ಯ ಅಂದರೇನು ಎಂದು ಕೇಳಿದ್ದಲ್ಲಿ,ಅವರು ಚೈನಾದ ಖ್ಯಾತ ಕವಿ ಯಾಂಗ್‌ವ್ಯಾಂಗ್‌ಲೀ ಹೇಳಿದಂತೆ ಹೇಳಿ ಬಿಡುತ್ತಿದ್ದರೇನೋ...ಒಮ್ಮೆ ಚೀನಾದ ಈ ಖ್ಯಾತ ಕವಿಯನ್ನು ಯಾರೋ "Now what is poetry " ಅಂತ ಕೇಳಿದರಂತೆ. ಅದಕ್ಕೆ ಆತ "If you say it is simply a matter of words I will say, a good poet gets rid of words.. If you say it is a simply a matter of meaning, I will say a good poet gets rid of meaning. But if you ask, "without words and without meaning where is poetry?" To this I reply get rid of words and get rid of meaning and is still poetry.." ಅಂದನಂತೆ. ಬೇಂದ್ರೆ ಕೂಡ ತಮ್ಮ ಕೊನೆಗಾಲದಲ್ಲಿ ಈ ಹಂತಕ್ಕೆ ತಲುಪಿದ್ದಂತೆ ಕಾಣುತ್ತದೆ.

ನಾನು ನವೋದಯ ಕವಿ, ನವ್ಯ ಕವಿ ಅಲ್ಲ
ನಾನು ವೇದಕವಿ, ವೇದವಿತ್ ಕವಿ.....

ಎಂಬಂರ್ಥ ಧ್ವನಿ ಸ್ಫುರಿಸುವ,ತಮ್ಮ ಕಾವ್ಯ ನಿಲುವನ್ನು ಪುಷ್ಟೀಕರಿಸುವಂತಹ ಹಲವಾರು ಸಾಲುಗಳು ಬೇಂದ್ರೆಯವರ ಇಡೀ ಕಾವ್ಯದ ತುಂಬ ತುಂಬಿಕೊಂಡಿವೆ. ಬೇಂದ್ರೆಯವರದು ಪರಿಘದಿಂದ ಹೊರಟು ಕೇಂದ್ರವನ್ನು ಶೋಧಿಸುವ ಕಾವ್ಯ. ಅದರ ನಡಿಗೆ ಅಖಂಡತೆಯ ಕಡೆಗೆ,ಪರಿಪೂರ್ಣತೆಯ ಕಡೆಗೆ ಅವ್ಯಾಹತ ತುಡಿಯುತ್ತದೆ. ಸಮಗ್ರತೆ ಮತ್ತು ಅಖಂಡತೆಯನ್ನು ಬೆನ್ನು ಹತ್ತಿದ ಬೇಂದ್ರೆಯವರ ಕಾವ್ಯ ಕನ್ನಡ ಕಾವ್ಯ

ವಿಮರ್ಶೆಯ ಖಂಡ ಖಡ್ಗಕ್ಕೆ ಸಿಕ್ಕು ಛಪ್ಪನ್ನ ಚೂರಾಗಿ ಓದುವವರನ್ನು ತಬ್ಬಿಬ್ಬುಗೊಳಿಸುತ್ತದೆ.

> " ನಿನ್ನ ಹೆಸರಿನಲ್ಲಿ ನಾನು ಬರೆಯುವುದೇನು ಸೋಜಿಗ
>
> ತಿಳಿಯಲಾರದೀ ಜಗ...."

ಎಂದೆನ್ನುವ ಬೇಂದ್ರೆ ಸರಳಸೋಜಿಗದಲ್ಲಿ ಮೈ ಮರೆಯುವುದಿಲ್ಲ.ತಾವು ಶೋಧಿಸುವ ಅಖಂಡತೆಯನ್ನು ಅದರ ಎಲ್ಲಾ ಪ್ಯಾರಡಕ್ಸಿಕಲ್ ನೆಲೆಗಳನ್ನು ಎದುರು ಹಾಕಿಕೊಂಡು ಸೆಣಸುತ್ತಾರೆ.ಅಂಬಿಕಾತನಯದತ್ತ v/s ಬೇಂದ್ರೆಯ ನಡುವೆಯ ಸಂಘರ್ಷ ಅವರ ಕಾವ್ಯದಲ್ಲಿ ಅನನ್ಯವಾಗಿ ಮೇಳೈಸುತ್ತದೆ.ಕನ್ನಡ ಕಾವ್ಯ ಪರಂಪರೆಯ ಲೌಕಿಕ/ ಆಗಮಿಕ ಪ್ರಜ್ಞಾಧಾರೆಗಳು, ದೃಷ್ಟಿಗಳು, ಧೋರಣೆಗಳು ಅರ್ಥಪೂರ್ಣವಾಗಿ ಕನ್ನಡ ಸಂದರ್ಭದಲ್ಲಿ ಮೊಟ್ಟಮೊದಲು ಬ್ಲೆಂಡ್ ಆಗಿರುವುದೇ ಬೇಂದ್ರೆಯವರ ಕಾವ್ಯದಲ್ಲಿ. ಲೌಕಿಕ/ಅಲೌಕಿಕ ಘರ್ಷಣೆಗಳ ತೀವ್ರ ಆಸ್ಫೋಟವೇ ಬೇಂದ್ರೆಯವರ ಯಶಸ್ವಿ ಪದ್ಯಗಳ ಜೀವಾಳ. ಬೇಂದ್ರೆಯವರ ಕಾವ್ಯ ಕೈಂಕರ್ಯ ಮತ್ತು ಶೋಧ -ಮತ್ತು ಅವರ ಬದುಕಿನ ಗುರಿ ವಿಭಿನ್ನವೇ ಅಲ್ಲ.ಅದೊಂದು ದಿವ್ಯ mission.ಇದನ್ನೇ ಬೇಂದ್ರೆಯವರು ಒಂದು ಕಡೆ ''ಒಂದು ಬಗೆಯಲ್ಲಿ ನನಗೆ ಸಾಹಿತ್ಯವು ಶಾಸ್ತ್ರವಾಗಿಯೂ, ಧರ್ಮವಾಗಿಯೂ, ಜೀವನವೇ ಆಗಿಯೇ ಪರಿಣಮಿಸಿದೆ'' ಎಂದೆನ್ನುವುದು ದಾರಿಯೇ ಗುರಿಯಾದದ್ದನ್ನು ಸೂಚಿಸುತ್ತದೆ.ಮಹತ್ವದ ಕವಿಗಳಲ್ಲಿ ಕಾವ್ಯ ಬದುಕಿನ ಒಂದು ಆನುಷಂಗಿಕ ಕ್ರಿಯೆಯಾಗಿ ಉಳಿಯುವುದಿಲ್ಲ.

ಬೇಂದ್ರೆಯವರು ರೂಪಿಸಿಕೊಂಡ ಒಂದು ವೈಚಾರಿಕ ಆಕೃತಿಯನ್ನು ಡಾ. ಡಿ. ಆರ್. ನಾಗರಾಜ್ ತಮ್ಮ 'ಶಕ್ತಿ ಶಾರದೆಯ ಮೇಳ 'ದಲ್ಲಿ ಸರಿಯಾಗಿ ಗ್ರಹಿಸಿದ್ದರೂ...ಬೇಂದ್ರೆಯವರಿಗೆ ಈ ಬಗೆಯ ಬೌದ್ಧಿಕ-ತರ್ಕಬದ್ಧ ಆಕೃತಿಗಳನ್ನು ಕಟ್ಟಿಕೊಳ್ಳಬೇಕೆಂಬ ಸ್ವಯಂಪ್ರೇರಿತ ಉದ್ದೇಶಗಳಿದ್ದಂತೆ ತೋರುವುದಿಲ್ಲ. ಬೇಂದ್ರೆಯವರಿಗೆ ವೈಚಾರಿಕತೆ ಕುರಿತೇ ತೀವ್ರ ಅನುಮಾನಗಳಿದ್ದವು .

> "ಕರುಳಿನ ಸಂಬಂಧ ತಿಳಿಯುವುದು
>
> ಕರುಳಿಗೆ
>
> ತಲೆಗೇನು ಕಂಡೀತು ಅದರ ತಲೆ "

ಎಂಬಂತಹ ನಿಲುವುಗಳು ಅವರ ಕಾವ್ಯದುದ್ದ ಹಾಸು ಹೊಕ್ಕಾಗಿವೆ. 'ಬಾ ಹತ್ತರ' ಎನ್ನುವ ಪದ್ಯವನ್ನೆ ಈ ದೃಷ್ಟಿಯಿಂದ ನೋಡಬಹುದು.''ಬೇಂದ್ರೆಯವರು ವೇದಗಳನ್ನು , ವೇದಾಂತಗಳನ್ನು ಉಪನಿಷತ್, ಬ್ರಹ್ಮ ಸೂತ್ರ, ಗೀತೆಗಳ ಮತ ಕ್ರಮ ವಿವರಣೆಗಳನ್ನು ಚೆನ್ನಾಗಿ ಅರಿತಿದ್ದೂ, ಅವರಿಗೆ ತರ್ಕದ ಚೌಕಟ್ಟು ಹಾಕಿದ ಈ ತೆರನಾದ ದರ್ಶನ ಪ್ರಕಾರಗಳಲ್ಲಿ ವಿಶ್ವಾಸವಿರಲಿಲ್ಲವೆಂದು ಅವರ ಕಾವ್ಯ ತೋರುತ್ತದೆ '' ಎನ್ನುವ ಪ್ರೊ.ಕೆ.ಎಸ್.ನಾರಾಯಣಾಚಾರ್ಯ ('ಬೇಂದ್ರೆಯವರ ಕಾವ್ಯದಲ್ಲಿ ಅಧ್ಯಾತ್ಮ ಮತ್ತು ಆರ್ಷಪ್ರಜ್ಞೆ ') ಸರಿಯಾಗಿಯೇ ಗುರುತಿಸಿದ್ದಾರೆ. ಸಾಂಸ್ಕೃತಿಕ ಧರ್ಮ ಬದುಕನ್ನು ಕುರಿತು ಕೊಡುವ ಸಿದ್ಧ ಉತ್ತರಗಳತ್ತ ಬೇಂದ್ರೆಯವರಿಗೆ ಎಂದೂ ಒಲವಿಲ್ಲ. ಬೇಂದ್ರೆಯವರು ತಮ್ಮ ಅನ್ವೇಷಣೆಯ ನೆಲೆಗಳನ್ನು ಅಲ್ಲಲ್ಲಿ ಉಲ್ಲೇಖಿಸಿದ್ದಾರೆ : ''೧೯೪೪ ರಿಂದ ೧೯೫೦ ರ ಈ ಹತ್ತು ವರ್ಷಗಳಲ್ಲಿ ಸ್ವಾಮಿಯ ಅಚ್ಯುತತೆಯಿಂದ ವಿವಿಧ ಸಂಚಾರಿ ಘಟನೆಗಳಾಗಿಯೂ, ಹೋಗಿಯೂ ರಸೋತ್ಕರ್ಷವೇ ಅನುಭವಕ್ಕೆ ಬರುತಿತ್ತು. ನೆಲೆ, ಹಲಸಂಗಿಯ ಗಾಳಿ ಸುಖಕರವಾಗಿ ಬೀಸಿ ಹೃದಯಕ್ಕೆ ಧೈರ್ಯ ತುಂಬಿತು. ಗುಳವಣೆ ಮಹಾರಾಜರು, ಪ್ರಭಾಕರ ಮಹಾರಾಜರು, ಶ್ರದ್ಧೆಗೆ ಪುಷ್ಟಿ, ತುಷ್ಟಿ ತಂದರು. ವಿಠಲ ಭಕ್ತಿ, ದತ್ತ ಭಕ್ತಿ, ಇವುಗಳು ಹೊಸ

ಬೆಲೆ ಕಂಡವು. ಕಾಲಿದಾಸ, ಜ್ಞಾನೇಶ್ವರ,ರತ್ನಾಕರ, ಅಲ್ಲಮ,ಇವರ ಅಭ್ಯಾಸವು ಶ್ರೀ ಅರವಿಂದರ ತತ್ವಕ್ಕೆ ಉನ್ನತಿಯನ್ನು ತಂದವು'' ಎನ್ನುವ ಅವರ ಮಾತುಗಳಲ್ಲಿ ಸ್ಥಾಪಿತ ಸಾಂಸ್ಕೃತಿಕ ಧರ್ಮಕ್ಕಿಂತ ಅವಧೂತ ಪರಂಪರೆ (Mysticism)ಯ ಕಡೆ ತುಯ್ಯುದಿರುವುದನ್ನು ಹೇಳುತ್ತದೆ. ಇದನ್ನು ಈಗಾಗಲೆ ಕನ್ನಡ ವಿಮರ್ಶೆ ಗುರುತಿಸಿದ್ದರೂ...ಅದು ಬಹುದೂರ ಹೋಗಿಲ್ಲ. ತೀವ್ರ ವೈಯಕ್ತಿಕಾನ್ವೇಷಣೆ, ಸ್ವಾನುಭವ, ಅಣುವಿನಲ್ಲಿಯೇ ಬ್ರಹ್ಮಾಂಡ ಕಾಣುವ,ಸಮಾಜ ಪ್ರಣೀತ ಆಚಾರ ವಿಚಾರ ಕುರಿತ ಅನುಮಾನ, ಕಾರ್ಯ-ಕಾರಣ ಸಂಭಾವ್ಯಗಳಾಚೆಗಿನ ನಿಗೂಢಗಳ ಅನ್ವೇಷಣೆ...ಇತ್ಯಾದಿಗಳು ಅವಧೂತ ಪರಂಪರೆಯ ಕೆಲ ಸ್ಥೂಲ ಲಕ್ಷಣಗಳು.ವೈರುಧ್ಯ್ಯದ ಉನ್ನತಾವಸ್ಥೆ ಏನಿರಬಹುದೆಂಬುದನ್ನು ಇಂಥ ಸಂತರ ಬದುಕಲ್ಲಿ ನಾವು ಕಾಣಬಹುದು.ಒಂದು ಅತಿಗೆ ಹೋಗಿ ಅದರ ಮಿತಿಯನ್ನು ಕಾಣುವುದನ್ನು ನಾವು ಇಂಥಲ್ಲಿ ಕಾಣುತ್ತೇವೆ. Extremeನ endನಲ್ಲಿ ಸತ್ಯವಿರಬಹುದೇ ಬೆಳಕಿರಬಹುದೇ..? ಬೇಂದ್ರೆಯವರು ಇಂಥ ಅತಿಗೆ ಹೋಗಿ ಅದರ ಮಿತಿಯನ್ನು ಕಾಣಲೆತ್ನಿಸಿದವರು ಎಂಬುದನ್ನು ಮಾತುಗಳ ಅಪ್ರಯೋಜಕತ್ವದ ಬಗ್ಗೆ ಬೇಸರಿಸಿ '' ೮೮೧+೪೪೧ ಇದುವೆ ನನ್ನ ಮಹಾಕಾವ್ಯ'' ಎಂದು ಕಟ್ಟಕಡೆಯಲ್ಲಿ ಘೋಷಿಸಿದುದರ ಹಿನ್ನಲೆಯಲ್ಲಿ ಅರ್ಥ ಮಾಡಿಕೊಳ್ಳಬಹುದು.ಹಾವು ಹಿಡಿದು ಮಣಿಸಿ ಅದರೊಡನೆ ಆಡುವ ಹಾವಾಡಿಗ ಒಂದು ದಿನ ಅದೇ ಹಾವಿನಿಂದ ಕಚ್ಚಿಸಿಕೊಂಡು ಸಾಯುವಂತೆ...ಯಾರು ಯಾವುದರಲ್ಲಿ ಪ್ರವೀಣರೋ... ಅದರಲ್ಲಿಯೇ ಅಡಗಿದೆ ಅವರ ಮಿತಿ..ಅವರ ಪ್ರಾಣ ಹರಣ ಎನ್ನುವಂತೆ.ಕಾವ್ಯ ಕ್ಷೇತ್ರದಲ್ಲಿ ಅಗಾಧ ಕೃಷಿಗೈದ ಅವರು ಕವಿತ್ವದ ಪ್ರಯೋಜಕತ್ವ ಮತ್ತು ಉದ್ದೇಶಗಳಿಗೆ ಸಂಶಯವಾದಿಯಾಗಿ ಬಿಡುತ್ತಾರೆ.

'' ಯಾರಿಗೆ ಬೇಕಾಗ್ಯೆತಿ ನಿಮ್ಮ ಕವಿತಾ
ಇದ್ರ ಒಂದು ಬ್ರೆಡ್ ತಾ
ಮ್ಯಾಲೆ ಅದಕ್ಕೆ ಬೆಣ್ಣೆ ತಾ
ಇಲ್ಲಾ..? ಹೋಗ್ಲಿ... ಎಣ್ಣೆತಾ ''

ಅಂತ ಕವಿತೆಗಳನ್ನೆ ಹಂಗು ಹರಿದು ಚಾಷ್ಟಿ ಮಾಡಿ ನಕ್ಕು ಬಿಡುತ್ತಾರೆ.ಬೇಂದ್ರೆಯವರು ತಮ್ಮನ್ನು ತಾವು ಅವಧೂತರೆಂದು,ಕಾಳಿದಾಸನ ಮರುಜನ್ಮವೆಂದು ಕರೆಕೊಳ್ಳುತ್ತಿದ್ದುದುಂಟು.ಈ ಅವಧೂತದ ಪರಿಕಲ್ಪನೆ ಮತ್ತು ಪ್ರಭಾವ ಈ ಹಿಂದೆ ಅವರೇ ಹೇಳಿಕೊಂಡಂತೆ ಅವರಿಗೆ ದೊರೆತದ್ದು , ಅಲ್ಲಮ, ಜ್ಞಾನೇಶ್ವರ, ವಿಠಲ, ದತ್ತ, ಗಿಬ್ರಾನ್, ಅರವಿಂದರಿಂದ. ಅವಧೂತ ಕಲ್ಪನೆಗೂ ,ಜಂಗಮ ಪ್ರವೃತ್ತಿಗೂ ಬಹಳ ಹತ್ತಿರ. ಬಸವಣ್ಣನಿಗಿಂತ ಅಲ್ಲಮ ಪ್ರಭು ಹತ್ತಿರವಾದದ್ದೇ ಈ ಕಾರಣಕ್ಕಿರಬೇಕು.ಬೇಂದ್ರೆಯವರದು ಜಂಗಮ ಸ್ವಭಾವ...ಭೃಂಗ ಸ್ವಭಾವದ ಅವರ ಕಾವ್ಯ ಹಲವು ಹೂಗಳ ಅರಸಿ- ಒಲಿಸಿ- ಒಳಗು ಮಾಡಿಕೊಂಡು ಬೆನ್ನೇರಿ ಬಂದ ಕಲ್ಪನಾ ವಿಲಾಸ. ಅರವಿಂದರ ತತ್ವಜ್ಞಾನಕ್ಕಿಂತ, ಅರವಿಂದರ ಕಾವ್ಯ ಮತ್ತು ಕಾವ್ಯ ಮೀಮಾಂಸೆ ಬೇಂದ್ರೆಯವರ ಮೇಲೆ ಹೆಚ್ಚು ಪರಿಣಾಮ ಬೀರಿದಂತೆ ತೋರುತ್ತದೆ.ಅರವಿಂದರ ದರ್ಶನದಲ್ಲಿಯೇ ಅಡಕವಾಗಿರುವ ಅನೇಕ ತೊಡಕು ಮತ್ತು ದೋಷಗಳನ್ನು ಈಗ ಎಲ್ಲೆಡೆ ಚರ್ಚಿಸಲಾಗುತ್ತಿದೆ.ಮಧುರಚೆನ್ನರ ಗೆಳೆತನ ಕೂಡ ಆಧ್ಯಾತ್ಮಿಕ ಅನ್ವೇಷಣದ ಸಮಯೋಗದ ಅಖ್ಯಾನವೇ ಆಗಿದೆ. ''ಜೋಗಿ'' ಎನ್ನುವ ಅವರ ಶ್ರೇಷ್ಠ ಪದ್ಯದ ಸತ್ವವೇ-ಕಾತುರವೇ ಇಂಥ ಅನ್ವೇಷಕತೆಯ ಒಡಲೊಳಗಿಂದ ಹುಟ್ಟಿದ್ದು. ಕತ್ತಲೆಯನ್ನು ದಾಟದೇ ಬೆಳಕನ್ನು ಕಾಣುವುದು ಅಸಾಧ್ಯದ ಮಾತೇ ಸರಿ... ಕಾಳರಾತ್ರಿ... ಭಯ -ಭೀತಿಗಳ ಭೀಭತ್ಸ

ಚಿತ್ರಣದ ತರುವಾಯ ಕೋಗಿಲೆಯ ಸ್ವರ ಕೇಳುತ್ತದೆ :

> " ಕನಸಿನೊಳಗ ನಾ ಸ್ವರ ಕೇಳಿ ಮಾಮರ ಆಗತೇನೋ..
>
> ಅಂತ ಭ್ರಮಾ ಆಗೇದ ಮನಕ ನೀ ಬಂದೆ ಜೋಗಿ ಏನೋ "

ಈ ಜೋಗಿಯ ಅನ್ವೇಷಣೆ ಮತ್ತು ಮಾಮರ ಆಗುವ ಹಂಬಲ ಅವರ ಕಾವ್ಯದ ಕೇಂದ್ರ ಕಾಳಜಿಯೇ ಆಗಿದೆ. ಅವರ ಸಖೀಗೀತ ಎನ್ನುವ ಶ್ರೇಷ್ಠ ನೀಳ್ಗಕವಿತೆಯಲ್ಲಿ world of beauty ಮತ್ತು world of mistery ಒಂದನ್ನೊಂದು ಪ್ರಭಾವಿಸುವ, ಎದುರಾಗುವ - ಐಕ್ಯವಾಗುವ ವಿಶಿಷ್ಠತೆಯನ್ನು ಈ ಹಿನ್ನಲೆಯಲ್ಲಿಯೇ ನೋಡಬೇಕು.

ಡಾ. ಡಿ. ಆರ್. ನಾಗರಾಜ್ ಅವರು, ಬೇಂದ್ರೆಯವರು ಭಾರತದ ಧಾರ್ಮಿಕ ಪರಂಪರೆ ನಂಬಿಕೊಂಡ ಇತಿಹಾಸವನ್ನು ನಿರಾಕರಿಸಿ...ಊರ್ಧ್ವಮುಖಿಗತಿಯ ವಿಕಾಸ(ಲೀನಿಯರ್)ಶೀಲ ಇತಿಹಾಸವನ್ನು ಅರವಿಂದರ ಪ್ರಭಾವದಿಂದ ರೂಪಿಸಿಕೊಂಡರೆಂಬ ವಿಚಿತ್ರ ತರ್ಕವನ್ನು ರೂಪಿಸುತ್ತಾರೆ. ವಸಾಹತುಶಾಹಿ ತಂದ ಹೊಸ ವಿಚಾರಧಾರೆಗಳು ಭಾರತದ ಮಧ್ಯಮ ವರ್ಗದಲ್ಲಿ ಉಂಟಾದ ಪುನುರುಜ್ಜೀವನ ಮತ್ತು ಚಿಂತನ ಮಾದರಿಗಳು ನೂತನ ಶಿಕ್ಷಣ, ಸಮಾಜ ಸುಧಾರಕರ ಹೋರಾಟ ಹಾಗೂ ಬೇಂದ್ರೆಯವರೇ ಒಪ್ಪಿಕೊಂಡ ಅವಧೂತ ಪರಂಪರೆಯ ಕ್ರಾಂತಿಕಾರಿಗುಣ ಇಂಥದ್ದಕ್ಕೆ ಕಾರಣವೇ ಹೊರತು ಡಿ.ಆರ್. ಭಾವಿಸಿದಂತೆ ಅಲ್ಲ. ಅವಧೂತ ಪರಂಪರೆಯ ಕ್ರಾಂತಿಕಾರಿ ವಿಚಾರಗಳು ಯಾವ ಇಸಂಗಿಂತಲೂ ಕಡಿಮೆ ಇಲ್ಲವೆಂಬುದನ್ನು ಅದರ ಇತಿಹಾಸ ಬಲ್ಲವರಿಗೆ ಗೊತ್ತು. ಗುರುಗೋವಿಂದ ಭಟ್ಟರು ಶರೀಫರನ್ನು ತನ್ನ ಶಿಷ್ಯನನ್ನಾಗಿಸಿಕೊಂಡ ಚರಿತ್ರೆ ಇವೊತ್ತಿನದಲ್ಲ... ಭಾರತದಲ್ಲಿ ಅದಕ್ಕೊಂದು ದೀರ್ಘ ಪರಂಪರೆಯೇ ಇದೆ. ಮಧ್ಯ ಕಾಲೀನ ಭಾರತದ ಭಕ್ತಿ ಪಂಥದಲ್ಲಿ ಇದಕ್ಕೆ ಹೇರಳ ಉದಾಹರಣೆಗಳು ದೊರಕಬಲ್ಲವು. ಮುಸ್ಲಿಂ ಸೂಫಿಗಳು ತಮ್ಮ ತಮ್ಮ ಫೆನಟಿಕ್ ಧರ್ಮದ ದಮನೀಯ, ಶೋಷಣಾ ಮುಖವನ್ನು ವಿರೋಧಿಸಿದ್ದು ಮಾನವ ಪ್ರೇಮ ಮೆರೆದದ್ದು ಇದೆ. ಬೇಂದ್ರೆಯವರ ಬದುಕು ಮತ್ತ ಅವರ ಕಾವ್ಯದ ಮೇಲೆ ಈ ಝರಿಯ ಸೆಳಕು ಬಲವಾಗಿ ಹಾದು ಹೋಗಿದೆ. ಅವರ ಕಾವ್ಯದಲ್ಲಿ ಇದನ್ನು ಗುರುತಿಸುವ ಪ್ರಯತ್ನವನ್ನು ಪ್ರೊ. ಕೆ. ಎಸ್. ನಾರಾಯಣಾಚಾರ್ಯರರು ಇತ್ತೀಚಿನ ಅವರ ಪುಸ್ತಕದಲ್ಲಿ ಮಾಡುತ್ತಾರಾದರೂ ಅವರ ಬಹುಪಾಲು ಶ್ರಮ ಬೇಂದ್ರೆ ವಿರೋಧಿಗಳನ್ನು ಟೀಕಿಸಲು ಮತ್ತು ಉತ್ತರ ಕೊಡಲು ವ್ಯಯವಾಗಿ ಹೋಗಿದೆ. ಹಾಗೆಯೇ ಡಾ. ಜಿ. ಎಸ್. ಅವಮೂರರ 'ಭುವನದ ಭಾಗ್ಯ' ಕೇವಲ ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ಸ್ವರೂಪದ ಬರಹವಾಗಿ ಬೇಂದ್ರೆ ಕಾವ್ಯ ಕುರಿತು ವಿಮರ್ಶಕರು ಎತ್ತಿದ ಪ್ರಶ್ನೆಗಳಿಗೆ ಉತ್ತರ ಕೊಡುವ ರೂಪದಲ್ಲಿದೆ.

ಅಧುನಿಕ ಮನುಷ್ಯನ ಅಸ್ವಸ್ಥತೆ ಮತ್ತು ಚಡಪಡಿಕೆಯೇ ಅಡಿಗರ ಕಾವ್ಯದ ಕೇಂದ್ರ ಕಾಳಜಿಯಾಗಿರುವಂತೆ, ಬೇಂದ್ರೆಯವರಲ್ಲಿ ಮನುಷ್ಯ ಮತ್ತು ನಿಸರ್ಗದ ಚರಾಚರಗಳ ಹಿಂದಣ ವಿಸ್ಮಯ ಚೈತನ್ಯದ ಅನ್ವೇಷಣೆಯೇ ಕೇಂದ್ರ ಕಾಳಜಿಯಾದಂತೆ ತೋರುತ್ತದೆ. ಒಂದು ಬಗೆ ವಿಹ್ವಲ ಪ್ರಾರ್ಥನೆಯ ನಿವೇದನೆಯಂತೆ ತೋರುತ್ತದೆ. ಅಂದಂದಿನ, ದೈನಂದಿನ, ನೋವು-ನಲಿವುಗಳ ಹಿಂದೆ ನಿಂತು ಕೆಲಸ ಮಾಡುವ ಆ ಮರ್ಮಭೇದಕ ಶಕ್ತಿಯ ಸ್ಫೋಟಕದತ್ತ ಕವಿಯ ಏಕಾಗ್ರತೆ ಇದೆ. ಇಂಥಲ್ಲಿ ಸಾಮಾಜಿಕ ವಿಷಮತೆಗಳು ದೊಡ್ಡ ದನಿಯಲ್ಲಿ, ಕಾವ್ಯದ ಮೇಲ್ಮೈಯಲ್ಲಿ ಪ್ರಧಾನವಾಗಿ, ಇಡೀ ಕವಿಯನ್ನು ಗಾಢವಾಗಿ ಕಾಡಿದಂತೆ ತೋರದಿರುವುದು ಸಹಜವೇ ಆಗಿದೆ. ''ಕುರುಡು ಕಾಂಚಾಣ'', ''ಅನ್ನ ದೇವರು ಬರಲಿಲ್ಲವೋ..'' ಎನ್ನುವ

ಕೊರಗು ಕವಿಯಲ್ಲಿ ಇದ್ದರೂ ,ಇದು "ಲೋಕದ ಕಾಳಜಿ ಮಾಡತೇನಂತಿ ...ಯಾರು ಬ್ಯಾಡಂದರಾ ಮಾಡಪ್ಪ ಚಿಂತಿ...''ಎನ್ನುವ ಧೋರಣೆಯದು.ಇಷ್ಟಕ್ಕೆ ಅದನ್ನು ತಟ್ಟನೆ ಪ್ರತಿಗಾಮಿ ನಿಲವು ಅನ್ನಲುಬಾರದು.ಟ್ರಾನ್ಸನ್‌ಡೆಂಟಲ್ ಆದ ಮನಸ್ಸು ಕಲ್ಪವೃಕ್ಷ ವೃಂದಾವನಗಳಲಿ-ರಾಧೆಯಾಗಿ ಮೈಮರೆವ ಹಂಬಲ,ಹಸಿವನ್ನು, ತೃಷೆಯನ್ನು ತೃಣೀಕರಿಸಬಹುದು.ಇಷ್ಟಾಗಿಯೂ ಅಲ್ಲಿ ಬದುಕಿನ ಅದಮ್ಯ ಪ್ರೇಮಕ್ಕೆ ಉತ್ಸಾಹಕ್ಕೆ ಕೊರತೆಯಿಲ್ಲ."ಈ ತುಂಬಿ ಬಾಳು ತುಂಬಿರುವ ತನಕ ತುಂತುಂಬಿ ಕುಡಿಯಬೇಕು''ಎನ್ನುವ ಉತ್ಸಾಹವನ್ನು ಆಶಾವಾದವನ್ನು ಪ್ರಕಟಿಸುತ್ತದೆ.

ಜಡತ್ವದಲ್ಲಿ ಚೈತನ್ಯವನ್ನು ಬೇಂದ್ರೆಯವರು ಕಂಡಷ್ಟು ಮತ್ತಾವ ಕನ್ನಡದ ಕವಿಯು ಇಷ್ಟೊಂದು ಉತ್ಕಟವಾಗಿ ಕಂಡಿಲ್ಲ.ನಿಸರ್ಗಾರಾಧನೆ,ಪರಿಪೂರ್ಣ ದೃಷ್ಟಿಕೋನ,ಆದರ್ಶಪರತೆ,ಇವೆಲ್ಲಾ ಕನ್ನಡ ನವೋದಯ ಕಾವ್ಯದ ಮುಖ್ಯ ಲಕ್ಷಣಗಳೆಂದು,ಅವೂ ಬೇಂದ್ರೆಯವರ ಕಾವ್ಯದಲ್ಲಿ ಪ್ರಕಟವಾಗಿವೆಯೆಂಬ ಸರಳೀಕೃತ ನಿಲುವು ತಾಳಿದಲ್ಲಿ ಬೇಂದ್ರೆಯವರ ಕಾವ್ಯಕ್ಕೆ ಅಪಾರ್ಥ ತಂದಂತೆಯೇ ಸರಿ.ಬೇಂದ್ರೆಯವರಲ್ಲಿ ಕವಿ ಮತ್ತು ಪ್ರಕೃತಿ ಬೇರೆ ಬೇರೆಯಲ್ಲ.ಅವು ಒಂದರೊಳಗೊಂದು ಏಕತ್ರ ಮೇಳೈಸಿವೆಯೇನೋ ಎನ್ನುವಷ್ಟು,ಇಂಡಿವಿಜ್ಯುಯಲೈಜೇಷನ್ ಆಗಿ ಹೋಗಿವೆ.ಪ್ರಕೃತಿಯನ್ನು ಎಲ್ಲೋ ನಿಂತು ವೀಕ್ಷಿಸಿ,ವರ್ಣಿಸುವ ಪ್ರಕೃತಿಯಾರಾಧಕ ಕವಿ ಬೇಂದ್ರೆ ಅಲ್ಲ.ಇಂಥದ್ದನ್ನು ಕುವೆಂಪು ಅವರಲ್ಲಿ ನೋಡಬಹುದು.ನಿಸರ್ಗಾರಾಧನೆ ಕುವೆಂಪು ಅವರದ್ದಾದರೆ,ನಿಸರ್ಗದಲ್ಲಿ 'ಐಕ್ಯ'ಗೊಳ್ಳುವುದು ಬೇಂದ್ರೆಯವರ ಲಕ್ಷಣ.ಕುವೆಂಪುಗೆ ಪ್ರಕೃತಿ 'ವರ್ಣಾನಾತ್ಮಕ'-ಬಾಹ್ಯ ,ಕವಿಗೆ ಅದನ್ನು ಸಹೃದಯರಿಗೆ ತೋರಿಸುವ ತವಕ.ಆದರೆ ಬೇಂದ್ರೆಗೆ ಪ್ರಕೃತಿ ಇನ್ನೊಬ್ಬರಿಗೆ ತೋರಿಸಿ ಸಂಭ್ರಮ ಪಡುವಂತಹದಲ್ಲ... Eddingtonಎನ್ನುವ ತತ್ವಶಾಸ್ತ್ರಜ್ಞ ಹೇಳುವಂತೆ "The universe no longer looks like a thing, but like a thought ''ಎನ್ನುವ ಹಾಗೆ ಜಡತ್ವವನ್ನು ಕಳಕೊಂಡು ಇಡೀ ವಿಶ್ವ ಅನಂತ ಚಿಂತನೆಯ,ಹಲವು ಧ್ವನಿಗಳನ್ನು ಅನುರಣನಗೊಳಿಸುವ ಒಂದು ಜೀವಿಯೇ ಆಗಿ ಬಿಡುತ್ತದೆ.ಶ್ರಾವಣದ ಪದ್ಯಗಳು, ಬೆಳಗು, ರಾಗರತಿ, ಸಖಿಗೀತದಲ್ಲಿನ ಪ್ರಕೃತಿ ವರ್ಣನೆ, ಮೇಘದೂತದ ಋತುಸಂಹಾರ,ಇವೆಲ್ಲ ಪ್ರಕೃತಿಯ ವಿವಿಧ ಮುಖಗಳ ವರ್ಣನೆಗಳಾಗಿ ಬಿಡುವುದಿಲ್ಲ. "ಇದು ಬರಿ ಬೆಳಗಲ್ಲೊ ಅಣ್ಣಾ ''ಎಂಬ ವಿಸ್ಮಯ,ಬೆಳಗಿನ ಒಳಗಿನ ಬೆಳಗಿಗೆ ಸಹೃದಯನನ್ನು ಕೊಂಡೊಯ್ಯುತ್ತದೆ .

" ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ

ಕಣ್ಣಿಗು ಕಣ್ಣಾಗಿ ಒಳಗಿಹುದು "

ಎಂಬ ಮಾತೇ ಕಣ್ಣಿನಾಚೆಯ ಕಾಣ್ಕೆಗೆ ಸೌಂದರ್ಯ ಒಂದು ರಹದಾರಿ ಎಂಬ ಮಾತನ್ನು ಪುಷ್ಟೀಕರಿಸುತ್ತದೆ. ಪಾಶ್ಚಾತ್ಯ ರೊಮ್ಯಾಂಟಿಕ್ ಕವಿಗಳಾದ ಬೈರನ್,ಶೆಲ್ಲಿ,ಕೀಟ್ಸ್,ವರ್ಡ್ಸ್‌ವರ್ತ್ ಇವರು ನೋಡುವ,ಕಾಣುವ ಪ್ರಕೃತಿಗೂ-ಬೇಂದ್ರೆಯವರಂತಹ ಕನ್ನಡದ ಕವಿಗಳು ಕಾಣುವ ಪ್ರಕೃತಿಗೂ ಇರುವ ಗುಣಾತ್ಮಕ ವ್ಯತ್ಯಾಸವನ್ನೂ ಇಲ್ಲಿ ಗಮನಿಸಬೇಕು.ಈ ರೊಮ್ಯಾಂಟಿಕ್ ಕವಿಗಳ ಪ್ರಕೃತಿ ಪ್ರೇಮ ಹುಟ್ಟಿದ್ದು-ಆಧುನಿಕ ಜಗತ್ತಿನ,ಯಾಂತ್ರಿಕ ಜಗತ್ತಿನ ವಿರುದ್ಧದ ನಿರಾಸೆಯಿಂದ.ನಗರದ ಬದುಕಿಗೆ ಬೇಸತ್ತು- ಇದು ಪ್ರಕೃತಿಯಲ್ಲಿ ಮೈಮರೆಸಿಕೊಳ್ಳುವ ಪಲಾಯನವಾದಿ ಸ್ವರೂಪದ್ದು .ಆದರೆ ಬೇಂದ್ರೆ ಮತ್ತು ನವೋದಯ ಕವಿಗಳಲ್ಲಿ ಪ್ರಕೃತಿ ಬದುಕಿನ ಒಂದು ಅವಿಭಾಜ್ಯ ಅಂಗ ಮತ್ತು ಆಶಾವಾದದಿಂದ ಪ್ರೇರಿತವಾದದ್ದು.ಅದು ವಿಶ್ವದ ನಿಗೂಢತೆಯನ್ನು ತನ್ನೆಲ್ಲಾ ಬಣ್ಣಗಳಲ್ಲಿ,ವಿಸ್ಮಯಗಳಲ್ಲಿ ಮತ್ತು ಹಲವು ಕ್ರಿಯೆಗಳಲ್ಲಿ ಪ್ರಕಟಿಸುತ್ತದೆ ಎಂಬ

ನಿಲುವಿನಿಂದ ಹೊರಟಿದ್ದು.

ಬೇಂದ್ರೆಯವರ ಕಾವ್ಯ ಮತ್ತು ಅವರ ದರ್ಶನ ರೂಪಗೊಂಡದ್ದೇ ಪೂರ್ವ ಸಿದ್ಧ ಸೂತ್ರಗಳ ಸಂಪೂರ್ಣ ನಿರಾಕರಣೆಯಿಂದ.ಇಂಥ ಸಂಪೂರ್ಣ ತ್ಯಾಜ್ಯೀಕರಣ ಮತ್ತು ಹೊಸದರ ಸೃಜನೆ ಯಾವಾಗಲೂ ಕೆಂಡದ ಮೇಲೆ ನಡೆಯುವಂಥ ಯಾತನ ಸ್ವರೂಪವು,ಕತ್ತಲಲ್ಲಿ ತಡವುತ್ತ ಬೆಳಕಿನ ಸೆಳಕಿಗೆ ಆಶಿಸುವ ನೋವಿನ ಗತಿಯದ್ದು.ಇಂಥ ನೋವೇ ಅವರ ಕಾವ್ಯದ ಮೂಲ ಭಿತ್ತಿಯೂ ಹೌದು.ದ್ವಂದ್ವಗಳಲ್ಲಿ ಏಕತೆಯನ್ನು ಕಾಣುವುದೂ ಕೂಡ ಸಾಧಾರಣ ಮಾತಲ್ಲ.ಸ್ವಾನುಭವದ ಬೆಳಕಿನಲ್ಲಿ ಸತ್ಯ ಕಾಣಬೇಕೆಂಬ ತೀವ್ರ ನಿಷ್ಠೆ ಕೂಡ ತಲ್ಲಣಗೊಳಿಸುವಂತಹದ್ದು.ಇಂಥ ತೀವ್ರ ನಿಷ್ಠೆ ಮತ್ತು ಸೆಣಸಾಟ ಅನಾಯಾಸವಾಗಿ ಅವರ ಕವಿತೆಗೆ ಒಂದು ತೀವ್ರತೆಯನ್ನು ಪ್ರಾಪ್ತಗೊಳಿಸಿದೆ.ಬೇಂದ್ರೆಯವರೇ ಹೇಳಿಕೊಂಡಂತೆ ''ಭಾವದ ತಂತಿ ಮಿಡಿದಾಗ ಶಬ್ದ,ಅರ್ಥ,ಸಂಕೇತ,ಅದರ ಕೇಂದ್ರೀಕರಣ ಕೃತಿಗೆ ಆಕೃತಿ ತರುತ್ತದೆ''; ಅನುಭವ-ಅನುಭಾವವಾಗಿ-ಗೀತೆಯಾಗಿ ರೂಪಗೊಳ್ಳುತ್ತದೆ.'ಇರುವಿ'ನ ಆಸ್ಫೋಟದಿಂದ, ಘರ್ಷಣೆಯಿಂದ ಅವರ ಕಾವ್ಯ ಹುಟ್ಟಿಕೊಳ್ಳುತ್ತದೆ. '' ಇದು ಮಂತ್ರ: ಅರ್ಥಕ್ಕೊಗ್ಗದ ಶಬ್ದಗಳ ಪವಣಿಸುವ ತಂತ್ರ'' ಎಂದು ನಂಬಿದ ಕವಿ ತಮ್ಮ ಜೀವಮಾನದುದ್ದಕ್ಕೂ ಅರ್ಥಕ್ಕೊಗ್ಗದ ಶಬ್ದಗಳಿಗೆ ಅರ್ಥ ತುಂಬುತ್ತಾ ಅದನ್ನು ಮಂತ್ರ ಮಾಡಲು ಶ್ರಮಿಸಿದರು.ಬೇಂದ್ರೆಯವರು ಯಾಕೆ ಸಮಾಜದ ಅನಿಷ್ಟಗಳನ್ನು ಕುರಿತು, ಜಾತಿ ಪದ್ಧತಿಯನ್ನು ವಿರೋಧಿಸಿ ಪದ್ಯ ಬರೆಯಲಿಲ್ಲ? ಯಾಕೆ ಅವರು ಮಹಾಕಾವ್ಯ ಬರೆಯಲಿಲ್ಲ? ಎಂಬೆಲ್ಲ ಪ್ರಶ್ನೆಗಳನ್ನು ಕೇಳಲಾಗುತ್ತಿದೆ.ಹೀಗೆ ಕೇಳುವುದರಲ್ಲಿ ಏನಾದರೂ ಅರ್ಥವಿದೆಯೇ ಎಂಬುದೇ ಮೊದಲ ಪ್ರಶ್ನೆ.ರಸೋತ್ಕರ್ಷಮತ್ತು ಭಾವತೀವ್ರತೆಯನ್ನೆ ತನ್ನ ಸೃಜನಶೀಲ ಗಳಿಗೆ ಎಂದು ನಂಬಿಕೊಂಡ,ಅಂಥ ಮುಹೂರ್ತಕ್ಕಾಗಿ ಹಂಬಲಿಸುವ ಕವಿ -ಅಂಥ ಸ್ಫೂರ್ತಿಯನ್ನು,ಭಾವವನ್ನು ಬಹು ದೀರ್ಘ ಕೊಂಡೊಯ್ಯಲಾರ.ಈ ಭಾವಗೀತೆಗಳು ಕ್ಷಣದಲ್ಲಿ ಮಿಂಚಿ ಮಾಯವಾಗುವ ಬೆಳಕಿನ ಸೆಳಕುಗಳು. ಇಂಥ ಕ್ಷಣದಲ್ಲಿಯೇ ಅನಂತ ಮಿಂಚಿ-ಹೊಂಚಿ ಹೋಗಿ ಬಿಡುತ್ತದೆ.ಅದನ್ನು ಅನುಸಂಧಾನಗೊಳಿಸಿ... ಲಂಬಿಸಿ... ದೀರ್ಘಗೊಳಿಸುವ ಬೌದ್ಧಿಕ ಸಿದ್ಧತೆಯ ಬಗ್ಗೆಯೇ ಬೇಂದ್ರೆಯವರಿಗೆ ಅಂಥ ಆಸಕ್ತಿ ಇದ್ದಂತಿಲ್ಲ. ಬೇಂದ್ರೆಯವರೇ ಇದನ್ನು ,ತಮ್ಮ ಅಸ್ಥಿರ ಮನೋಭಾವವನ್ನು ,ಪ್ರಾಂಜಲವಾಗಿ ಒಪ್ಪಿಕೊಂಡಂತೆ ಕಾಣುತ್ತದೆ.ಹಾಗೆ ನೋಡಿದರೆ ಬೇಂದ್ರೆಯವರೇ ಕನ್ನಡದ ಮೊಟ್ಟಮೊದಲ ವ್ಯಕ್ತಿ ವಿಶಿಷ್ಟವಾದಿ ಕವಿ.ಏನೆಲ್ಲವೂ -ತನ್ನಲ್ಲಿ ಸಂಭವಿಸದ ಹೊರತು ಅದಕ್ಕೆ ಸೃಜನಶೀಲತೆಯ ಚಾಲನೆಯೇ ದಕ್ಕುವುದಿಲ್ಲ.ಹೀಗಾಗಿ ಅವರ ಪ್ರತಿ ಪದ್ಯಕ್ಕೊಂದು ವೈಯಕ್ತಿಕ ಮೊಹರು... ಉಲ್ಲೇಖ,ಘಟನೆಗಳ ನೆರಳು ಇದೆ.ಅವರ ಇಡೀ 'ಸಖೀಗೀತ'ವೇ ಅವರ ಆತ್ಮಕಥನವಾಗಿದೆ.ಇಷ್ಟಾಗಿಯೂ ಅವರಿಗೆ ಸಖೀಗೀತವನ್ನು ಮುಂದುವರೆಸಲಾಗಲಿಲ್ಲ.

ಬೇಂದ್ರೆಯವರ ಭಾಷಾ ಪ್ರಯೋಗ,ಅವರು ಬಳಸಿದ ವಿವಿಧ ಛಂದಸ್ಸು,ಪ್ರಯೋಗಗಳನ್ನು ಕುರಿತು ಕನ್ನಡದಲ್ಲಿ ಈಗಾಗಲೆ ಸಮೃದ್ಧ ಚರ್ಚೆ ನಡೆದಿದೆ.''ಬೇಂದ್ರೆಯವರಂತೆ ಅಕ್ಷರಸ್ಥ ಹಾಗೂ ಮೌಖಿಕ ಪರಂಪರೆಗಳೆರಡಕ್ಕೂ ಸೃಜನಶೀಲವಾಗಿ ಪ್ರತಿಕ್ರಿಯಿಸಿದ ಕವಿಗಳು ವಿರಳ.ಆದರೆ ಪರಂಪರೆಯನ್ನು ಇಡಿಯಾಗಿ ಗ್ರಹಿಸಬೇಕೆನ್ನುವ ಮಹತ್ವಾಕಾಂಕ್ಷೆಯನ್ನು ಹೊಂದಿದ ಕನ್ನಡದ ಕವಿಗೆ ಇದು ಅನಿವಾರ್ಯ'' ಎಂದೆನ್ನುವ ಜಿ.ಎಸ್.ಅಮೂರರ ಮಾತು ಸರಿಯಾದದ್ದೇ ಹೌದಾದರೂ ಪರಂಪರೆಯನ್ನು ಇಡಿಯಾಗಿ ಗ್ರಹಿಸಬೇಕೆನ್ನುವ ಮಾತಿಗೆ ಬದುಕನ್ನು ಇಡಿಯಾಗಿ ಗ್ರಹಿಸಬೇಕೆನ್ನುವ ಎನ್ನುವ ತಿದ್ದುಪಡಿ

ಅಗತ್ಯವೇನೋ. ಬದುಕನ್ನು ಅದರ ಎಲ್ಲಾ ಪರಿಪೂರ್ಣತೆಯಲ್ಲಿ ಗ್ರಹಿಸಬೇಕೆನ್ನುವುದೇ ಬೇಂದ್ರೆಯವರ ಮುಖ್ಯ ಕಾಳಜಿಯಾಗಿತ್ತು.Great poetry communicates itself,even before it is understood -ಎನ್ನುವ ಮಾತು ಇವೊತ್ತು ಬೇಂದ್ರೆಯವರ ಕವಿತೆಗಳಿಗೆ ಹೆಚ್ಚು ಅರ್ಥಪೂರ್ಣವಾಗಿ ಅನ್ವಯವಾಗುತ್ತದೆ. ಅವರ ನಾದಲೀಲೆ,'ನೃತ್ಯಯಜ್ಞ','ಭಾವಗೀತೆ','ಸಖೀಗೀತ, 'ಜೋಗಿ'... 'ಬೆಳಗು'... ಮುಂತಾದ ಹಲವಾರು ಕವಿತೆಗಳು... ನಂತರ ಅವರ ಕಾವ್ಯ ಜೀವನದ ಕಡೆಗಾಲದಲ್ಲಿ ಬರೆದ ಪದ್ಯಗಳು ಇನ್ನೂ ತಮ್ಮ ಪೂರ್ಣ ಅರ್ಥಗಳನ್ನು ಬಿಟ್ಟುಕೊಡದಿದ್ದರೂ, ಅವುಗಳು ತಮ್ಮ ಕಾವ್ಯ ಗುಣದಿಂದ, ಭಾಷೆ ಮತ್ತು ನಾಟಕೀಯತೆಯಿಂದ ಓದುಗರಿಗೆ ಥಟ್ಟನೆ ಓದಿನ ಸುಖವನ್ನು ಕೊಡುತ್ತಿವೆ. ಓದುಗನ ಎದೆಯಲ್ಲಿ ಚುಂಬಕ ಗಾಳಿ ಬೀಸಿ ಹೋಗುತ್ತವೆ.

ಇಡೀ ಭಾರತೀಯ ದರ್ಶನವೇ ಅಖಂಡತ್ವದ ಆಕರ್ಷಣೆಗೆ, ಶೂನ್ಯ ಸಂಪಾದನೆಯತ್ತ ಮೋಹಗೊಂಡದ್ದು. ಖಂಡ ದೃಷ್ಟಿಕೋನವೇ ಪೌರ್ವಾತ್ಯ ಚಿಂತನೆಗೆ ಹೊರತು. ವಿಭಜಕ ದೃಷ್ಟಿಕೋನ, ಒಂದನ್ನು ಎರಡನ್ನಾಗಿಸುವ ತರ್ಕ, ಕೂದಲನ್ನು ಸೀಳಿ ಅದರ ಗುಣಾವಗುಣಗಳನ್ನು ಅಳೆವ ಅಳತೆಗೋಲು ದೊರಕಿದ್ದೇ ಆಧುನಿಕ ವಿದ್ಯೆಯಿಂದ. ವಾದಗಳನ್ನು ಮೀರಬೇಕೆಂದು ಹೊರಡುವ ಕಾವ್ಯ, ವಾದಗಳಿಗೆ ಸಿಕ್ಕು ಒದ್ದಾಡುತ್ತದೆ. ಅಖಂಡತೆ ಖಂಡದೃಷ್ಟಿಗೆ ಸಿಕ್ಕು ನುಜ್ಜು-ಗುಜ್ಜಾಗುತ್ತದೆ. ಪ್ರಯೋಜಕತ್ವ, ವರ್ಗ-ವರ್ಣ ಆಧಾರಿತ ವಿಭಜಕ ಮನೋಭಾವ, ಪಾರ್ಶ್ವನೋಟ, ವೈಯಕ್ತಿಕ ವಿಶಿಷ್ಟವಾದಗಳು ಹೆಚ್ಚುತ್ತಿರುವ ಈ ಕಾಲದಲ್ಲಿ ಸಮಗ್ರ ದೃಷ್ಟಿಕೋನದ ಇಂಥ ಕಾವ್ಯ ಇಂಥ ಅಗ್ನಿ ದಿವ್ಯವನ್ನು, ಬೆಂಕಿ ಕೊಂಡವನ್ನು ಹಾಯುವುದು ಅನಿವಾರ್ಯವೇನೋ? ಪ್ರತಿಯೊಂದು ಕಾಲ, ಆ ಕಾಲ ಸೃಷ್ಟಿಸಿದ ಓದುಗ, ಆ ಕಾಲ ಸೃಷ್ಟಿಸಿದ ಅಕಾಂಕ್ಷೆಗಳ ಪ್ರೇರಿತ ಬಯಕೆಗಳನ್ನು -ಧ್ವನಿಗಳನ್ನು, ಅರ್ಥಗಳನ್ನು, ತಾನು ಓದುವ ಕಾವ್ಯದಿಂದ ಅಪೇಕ್ಷಿಸುತ್ತಾನೆ. ಅದಕ್ಕೆ ಬೆಲೆ ಕಟ್ಟುತ್ತಾನೆ. ಅಂಥ ಕಾಲನ ಸವಾಲನ್ನು ಎದುರಿಸಬಲ್ಲದೆಂದು ಬೇಂದ್ರೆ ಕಾವ್ಯ ಮರುವಿಮರ್ಶೆಗೆ ಮತ್ತೆ ಮತ್ತೆ ಒಳಗಾಗಿ ತನ್ನ ಅರ್ಥಪರಂಪರೆಯನ್ನು ಹಿಗ್ಗಿಸಿಕೊಳ್ಳುತ್ತಾ ಹೋಗುತ್ತದೆ. ಶ್ರೇಷ್ಠ ಕಾವ್ಯ ಕೇವಲ ಅರ್ಥ ಬಿಟ್ಟು ಕೊಡುವುದಿಲ್ಲ, ಹೊಸ ಅರ್ಥವನ್ನೂ ಪಡೆಯುತ್ತಿರುತ್ತದೆ. ಒಬ್ಬ ಮಾರ್ಕ್ಸ್‌ವಾದಿ ಓದುಗ ಬೇಂದ್ರೆಯವರ ಭಾವಗೀತದ 'ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸ' ಓದಿ ಆನಂದ ಪಡುತ್ತಾನೆಂದರೆ, ಆ ಆನಂದದ ಸ್ವರೂಪ ಎಂಥದ್ದು? ಅವನ ಭೌತವಾದಿ ಡೈಲೆಕ್ಟಿಕಲ್ ದೃಷ್ಟಿಕೋನಕ್ಕೂ, ಅವನು ಜಗತ್ತನ್ನು ಅರ್ಥೈಸುವುದಕ್ಕೂ, ಈ ಕವಿತೆಯ ಆಶಯಕ್ಕೂ ಏನಾದರೂ ಸಂಬಂಧವಿದೆಯೇ? ಸಂಬಂಧ ಇಲ್ಲದ್ದಕ್ಕೆ ಸಂಬಂಧ ಕಲ್ಪಿಸುವುದೇ ಕವಿತೆಯ ಕೆಲಸವಲ್ಲವೆ? ಇದನ್ನು ಈ ಕಾಲದಲ್ಲಿ ದೊಡ್ಡದಾಗಿ ಮಾಡಿದವರು ಬೇಂದ್ರೆ. ಭಾಷೆಯನ್ನು ಅವರಷ್ಟು ದುಡಿಸಿಕೊಂಡ ಕವಿ ಮತ್ತೊಬ್ಬರಿಲ್ಲದಿದ್ದರೂ - ಅವರಿಗೆ ತಿಳಿದ ಸತ್ಯ: "Language,however cannot speak of anything without breaking it into two...."

'ಮುಕ್ತರ ಧರ್ಮವೇ ಭಕ್ತರ ಜೀವನ,
ಇದು ಎಲ್ಲ ಕಾವ್ಯದ ಧ್ವನಿ'

- ದ.ರಾ.ಬೇಂದ್ರೆ

ಕುವೆಂಪು : ಸ್ವಾತಂತ್ರ್ಯೋತ್ತರ ಸನ್ನಿವೇಶದಲ್ಲಿ

○ ಡಿ.ಎಸ್.ನಾಗಭೂಷಣ

ರಾಷ್ಟ್ರಕವಿ ಕುವೆಂಪು ವಿಚಾರವೇದಿಕೆ ಕಳೆದ ಕೆಲವು ವರ್ಷಗಳಿಂದ ಪ್ರತಿವರ್ಷ ಕುವೆಂಪು ಜನ್ಮದಿನವನ್ನು ವಿಚಾರ ಸಂಕಿರಣಗಳ ಮೂಲಕ ಆಚರಿಸಿಕೊಂಡು ಬರುತ್ತಾ ಕುವೆಂಪು ವಿಚಾರ ಧಾರೆಯನ್ನು ಕನ್ನಡ ಜನಮನದಲ್ಲಿ ಉಳಿಸಿ ಬೆಳೆಸುವ ದಿಕ್ಕಿನಲ್ಲಿ ತನ್ನ ಕೈಲಾದ ಪ್ರಯತ್ನ ಮಾಡುತ್ತಿದೆ.ಈ ಪ್ರಯತ್ನದ ಅಂಗವಾಗಿ ಈ ವರ್ಷ ಈ ದಿನ ಭಾರತೀಯ ಸ್ವಾತಂತ್ರ್ಯ ಸುವರ್ಣೋತ್ಸವದ ನೆನಪಿಗಾಗಿ 'ಕುವೆಂಪು ಮತ್ತು ರಾಷ್ಟ್ರೀಯತೆ' ಎಂಬ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿರುವುದಾಗಿ ವೇದಿಕೆಯ ವ್ಯವಸ್ಥಾಪಕರು ಹೇಳಿದ್ದಾರೆ.ಯಾವುದೇ ದೇಶದ ಸ್ವಾತಂತ್ರ್ಯದ ಸುವರ್ಣೋತ್ಸವದ ಸಂದರ್ಭದಲ್ಲಿ ಮುಖ್ಯವಾಗಿ ನೆನಪಿಗೆ ಬರುವವರು ರಾಷ್ಟ್ರನಾಯಕಗಣ - ವಿಶೇಷವಾಗಿ ರಾಜಕೀಯ ಕ್ಷೇತ್ರದಲ್ಲಿ ವಿಚಾರ ಬಿತ್ತಿ ಬೆಳೆದು ಹೋರಾಟ ಮಾಡಿ ಧೀರರೆನಿಸಿಕೊಂಡವರು.ನಮ್ಮ ದೇಶದ ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಆಚರಣೆಯ ಸಂದರ್ಭದಲ್ಲಿ ಆಗುತ್ತಿರುವುದೂ ಇದೇ.ನಮ್ಮ ರಾಷ್ಟ್ರನಾಯಕರೆನಿಸಿದ ಗಾಂಧಿ -ನೆಹರೂ -ಪಟೇಲ್ ಮತ್ತು ಅವರ ರಾಜಕೀಯ ಸಹಚರರ ಚಿಂತನೆ ಮತ್ತು ಚಳುವಳಿಗಳನ್ನು ಕುರಿತು ವಿಚಾರ ಸಂಕಿರಣಗಳೂ, ಪ್ರಕಟಣೆಗಳೂ,ಚಲನಚಿತ್ರ ಮಾಲಿಕೆಗಳೂ ರೂಪಿತವಾಗುತ್ತಿವೆ.ಇಂತಹ ಸಂಪೂರ್ಣ ರಾಜಕೀಯ ಆಚರಣೆಯ ಸನ್ನಿವೇಶದಲ್ಲಿ ಕವಿಯೊಬ್ಬರನ್ನು ಕುರಿತು ರಾಷ್ಟ್ರೀಯತೆಯ ಚೌಕಟ್ಟಿನಲ್ಲಿ ಚರ್ಚೆ ಮಾಡಬಹುದೆಂಬುದು ಆ ಕವಿಯ ಶಕ್ತಿ ಮತ್ತು ಪ್ರಭಾವ ವಿಶೇಷತೆಗೆ ಸಾಕ್ಷಿಯಾಗಿದೆ.ಕನ್ನಡದಲ್ಲಿ ಇಂತಹ ವಿಶಿಷ್ಟ ಮಾನ್ಯತೆಗೆ ಒಳಗಾಗಬಲ್ಲ ಲೇಖಕರು ಇಲ್ಲವೆಂದೇ ಹೇಳಬೇಕು.ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಲೇಖಕರಿದ್ದಾರೆ,ಸ್ವಾತಂತ್ರ್ಯ ಹೋರಾಟವನ್ನು ವಸ್ತುವಾಗಿಸಿಕೊಂಡು ಕಥೆ -ಕವನ - ಕಾದಂಬರಿಗಳನ್ನು ಬರೆದವರಿದ್ದಾರೆ,ಸ್ವಾತಂತ್ರ್ಯೋತ್ತರ ಭಾರತವನ್ನು ನೇರವಾಗಿ ಅದರ ರಾಜಕಾರಣದೊಂದಿಗೆ,ತಮ್ಮ ಕೃತಿಗಳಲ್ಲಿ ಚಿತ್ರಿಸಿದವರೂ ಇದ್ದಾರೆ.ಕುವೆಂಪು ಅವರಿಗೆ ಸರಿಸಮವಾಗಿ, ಶಕ್ತಿಯುತ,ಸ್ಫೂರ್ತಿಯುತ ದೇಶಭಕ್ತಿ ಗೀತೆಗಳನ್ನು ಬರೆದ ಕವಿಗಳಿದ್ದಾರೆ.ಆದರೆ ಇವರ್ಯಾರನ್ನೂ ರಾಷ್ಟ್ರೀಯತೆ ಎಂಬ ತತ್ವದ ಹಿನ್ನೆಲೆಯಲ್ಲಿ ವ್ಯಾಪಕವಾಗಿ ಚರ್ಚಿಸುವುದು ಅಸಾಧ್ಯವೆಂದೇ ನನ್ನ ಭಾವನೆ.ಏಕೆಂದರೆ ಕುವೆಂಪು ಅವರಿಗೆ ರಾಷ್ಟ್ರೀಯತೆ ಎನ್ನುವುದು,ಇವರ ತಲೆಮಾರಿನ ಬೇರೆಲ್ಲ ಲೇಖಕರ ಪರಿಭಾವನೆಗಿಂತ

★ ೧೯೯೮ ರ ಜನವರಿಯಲ್ಲಿ ರಾಷ್ಟ್ರಕವಿ ಕುವೆಂಪು ವಿಚಾರ ವೇದಿಕೆ ಏರ್ಪಡಿಸಿದ್ದ ವಾರ್ಷಿಕ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ.

ಹೆಚ್ಚು ಸಂಕೀರ್ಣವಾದ ತತ್ವವಾಗಿತ್ತು. ಒಮ್ಮೆಗೇ ಅದು ಆಧ್ಯಾತ್ಮಿಕ ತತ್ವವೂ ಲೌಕಿಕ ತತ್ವವೂ ಆಗಿತ್ತು. ಅವರದೇ ಆದ ಪರಿಭಾಷೆಯಲ್ಲಿ ಹೇಳುವುದಾದರೆ ಅನ್ನಮಯ ಕೋಶದಿಂದ ಆನಂದಮಯ ಕೋಶದವರೆಗಿನ ಪಂಚಕೋಶಗಳಲ್ಲೂ ಅಂತರ್ಗತವಾಗಿರುವ ಸಮಸ್ತದಲ್ಲೂ ವ್ಯಾಪ್ತವಾಗಿದ್ದ ತತ್ವವದು. ಜೊತೆಗೆ ಕಾಡಿನ ಮೂಲೆಯೊಂದರಿಂದ, ಅಕ್ಷರಜ್ಞಾನಕ್ಕೆ ಅದೀಗ ತಾನೇ ಕಣ್ತೆರೆಯುತ್ತಿದ್ದ ಹಿನ್ನೆಲೆಯಿಂದ ಬಂದ ಕುವೆಂಪು ಅವರಿಗೆ ರಾಷ್ಟ್ರೀಯತೆಯು ಒಂದು ಒಟ್ಟಾರೆ ಬಿಡುಗಡೆಯ ತುರ್ತೂ ಆಗಿತ್ತು. ಈ ತರಹದ ತುರ್ತೇ ಅವರಿಂದ ''ನೂರು ದೇವರನೆಲ್ಲ ನೂಕಾಚೆ ದೂರ/ ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ'' ಎಂಬ ಆಧ್ಯಾತ್ಮಿಕ ಸ್ತರವನ್ನು ಲೋಕಸ್ತರಕ್ಕಿಳಿಸಿ, ಲೋಕಸ್ತರವನ್ನು ಆಧ್ಯಾತ್ಮಿಕ ಸ್ತರಕ್ಕೇರಿಸುವ ಅಲ್ಲೋಲ ಕಲ್ಲೋಲಮಯವಾದ ಸಾಲುಗಳನ್ನು ಬರೆಸಿದ್ದು. ''ಸತ್ತ ಕಲ್ಲಗಳ ಮುಂದೆ ಅತ್ತು ಕರೆದುದು ಸಾಕು/ ಜೀವದಾತೆಯನಿಂದು ಕೂಗಬೇಕು'' ಎಂಬ ಇದೇ ಪದ್ಯದ ಮುಂದಿನ ಸಾಲುಗಳು, ಆ ಹೊತ್ತಿಗೆ ದೇವರುಗಳು ಏನಾಗಿದ್ದವು, ಭಾರತಾಂಬೆ ಎಂದರೆ ಯಾರು ಎಂಬುದನ್ನು ಕುರಿತ ಕುವೆಂಪು ಅವರ ಪರಿಭಾವನೆಯ ಸ್ತರಗಳನ್ನೂ ಸೂಚಿಸುತ್ತವೆ. ಭಾರತಾಂಬೆ ಕುವೆಂಪು ಅವರಿಗೆ ವಿಶಾಲತೆ, ಉದಾರತೆ ಹಾಗೂ ಸಮಾನತೆಗಳನ್ನೊಳಗೊಂಡ ಬಿಡುಗಡೆಯಸಂಕೇತವಾಗಿದ್ದಳು. ಸ್ವಾತಂತ್ರ್ಯಾನಂತರವೂ ಕುವೆಂಪು ಅವರಿಗೆ ಈ ಸಂಕೇತಾರ್ಥ ಬದಲಾಗಲಿಲ್ಲ. ಇದೇ ಕುವೆಂಪು ಅವರನ್ನು ಈ ಸಂದರ್ಭದಲ್ಲಿ ಇತರ ಲೇಖಕರಿಗಿಂತ ವಿಶಿಷ್ಟವಾಗಿಸುವುದು. ಇತರೆ ಪ್ರಮುಖ ಲೇಖಕರಿಗೆ ಸ್ವಾತಂತ್ರ್ಯಾನಂತರದ ಸನ್ನಿವೇಶ ಹುಳ್ಳುಹುಳ್ಳಾಗತೊಡಗಿದೆ ಎನ್ನಿಸಿ, ವಿಶ್ವಾಸ ಕಳೆದುಕೊಂಡವರಂತೆ ವ್ಯಂಗ್ಯ, ವಿಡಂಬನೆ ಸಿನಿಕತೆಗಳಿಗೆ ಇಳಿದರೆ, ಕುವೆಂಪು ಹೆಚ್ಚು ಪ್ರಬುದ್ಧ ಹಾಗೂ ಸಮಗ್ರ ಚಿಂತಕರಂತೆ ೧೯೪೭ರ ಆಗಸ್ಟ್ ೧೫ರ ಸ್ವಾತಂತ್ರ್ಯವನ್ನು ಒಂದು ಘಟ್ಟದ ಸ್ವಾತಂತ್ರ್ಯ ಮಾತ್ರ -ಸಂಪೂರ್ಣ ಸ್ವಾತಂತ್ರ್ಯಸಾಧನೆ ಕಾಲ ಕ್ರಮೇಣ ಹಂತಾನುಹಂತವಾಗಿ ಆಧ್ಯಾತ್ಮಿಕ ಸಿದ್ಧಿಯಂತೆ ಆಗಬೇಕಾದ್ದು ಎಂಬ ಅರಿವಿನೊಂದಿಗೆ ಬದುಕಿ ಬರೆದರು. ಅವರಿಗೆ ಸಂಪೂರ್ಣಸ್ವಾತಂತ್ರ್ಯವೆಂದರೆ ದಾಸನೀಶನಾಗುವ ಆಧ್ಯಾತ್ಮಿಕ ಸ್ವಾತಂತ್ರ್ಯ. ಹಾಗೆಂದೇ ಈಗ ತಾನೇ ನಾನು ಪ್ರಸ್ತಾಪಿಸಿದ ''ನೂರು ದೇವರನೆಲ್ಲ ನೂಕಾಚೆ ದೂರ'' ಎಂದು ಆರಂಭವಾಗುವ 'ಇಂದಿನ ದೇವರು' ಎಂಬ ಪದ್ಯ ಮುಗಿಯುವುದು ಈ ಸಾಲುಗಳೊಂದಿಗೆ :

ಇಂದೋ ನಾಳೆಯೋ ದಾಸನೀಶನಾಗಲೆ ಬೇಕು
ಎಂದಿಂದೆ ಎದ್ದೇಳಿ; ನಾಳೆಯನೆ ಹೋಕು!
ನಾವೆ ದೇವತೆಗಳ್ಗೆ ಭಾರತವೇ ಸ್ವರ್ಗವು
ಭಾರತಾಂಬೆಯೆ ನಮಗೆ ದೇವಿಯ್ಯೆ ಜನನಿ

ಅಂದರೆ ಕುವೆಂಪು ಅವರ ರಾಷ್ಟ್ರೀಯ ಸ್ವಾತಂತ್ರ್ಯದ ಕಲ್ಪನೆ ಲೌಕಿಕಾರ್ಥವನ್ನು ಮೀರಿದ್ದು-ಅವರು ನಂಬಿ, ಬಹುಶಃ ಅನುಭವಿಸಿ ಬದುಕಿದ ಅದ್ವಯ ಸ್ಥಿತಿಗೇರುವಂತಹದ್ದು. ಹಾಗೆಂದೇ ಕುವೆಂಪು ಅವರಿಗೆ ರಾಷ್ಟ್ರೀಯ ಸ್ವಾತಂತ್ರ್ಯ ಎನ್ನುವುದು ವ್ಯಕ್ತಿತ್ವ ಆಗುತ್ತಾ ಆಗುತ್ತಾ ಅರಳಿಕೊಳ್ಳುವ ವೈಯಕ್ತಿಕ ನೆಲೆಯ ಪ್ರಕ್ರಿಯೆಯ ಒಂದು ಪ್ರಾಥಮಿಕ ಹಾಗೂ ಅನಿವಾರ್ಯ ಹಂತ ಮಾತ್ರವಾಗಿತ್ತು. ಸ್ವಾತಂತ್ರ್ಯಪೂರ್ವದ ಅವರ ಕವಿತೆಗಳಲ್ಲಿ ಹಾಗೂ ಲೇಖನಗಳಲ್ಲಿ, ವಿಶೇಷವಾಗಿ ''ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ'' ಎಂಬ ಸಂಕಲನದ ಭಾಷಣಗಳಲ್ಲಿ; ಸ್ವಾತಂತ್ರ್ಯಾನಂತರದ ಕವಿತೆಗಳಲ್ಲಿ ಹಾಗೂ ಭಾಷಣಗಳಲ್ಲಿ ನಾವು ಕಾಣುವುದು ಈ ಆಗುವಿಕೆಯ ಕಡೆಗೆ ವ್ಯಕ್ತವಾಗುವ ವಿವಿಧ ರೀತಿಯ ತುಡಿತಗಳನ್ನೇ. ಈ ತುಡಿತಕ್ಕೆ ರಾಷ್ಟ್ರೀಯ ಸ್ವಾತಂತ್ರ್ಯ

ಎನ್ನುವುದು ಕಾಲ ಧರ್ಮೀಯವಾದ ಒಂದು ನೆಪವಷ್ಟೆ :

ನಿತ್ಯತೆಯ ಗಬ್ಬದಲಿ
ಮುಂದೆಯದು ತೋರುವುದು
ಬಿಡುಗಡೆಯ ಹಬ್ಬದಲಿ

ಅದಕ್ಕೇ

ನಡೆಮುಂದೆ ನಡೆ ಮುಂದೆ

ನುಗ್ಗಿ ನಡೆ ಮುಂದೆ

ಈ ನಡೆ ಇನ್ನೊಂದು ಸ್ತರದಲ್ಲಿ ಎಲ್ಲಿಯೂ ನಿಲ್ಲದ ನಡೆ ಕೂಡಾ ಆಗಿಬಿಡುತ್ತದೆ :

ಎಲ್ಲಿಯೂ ನಿಲ್ಲದಿರು
ಮನೆಯನೆಂದು ಕಟ್ಟದಿರು
ಕೊನೆಯನೆಂದು ಮುಟ್ಟದಿರು
ಓ ಅನಂತವಾಗಿರು
ಓ ನನ್ನ ಚೇತನ
ಆಗು ನೀ ಅನಿಕೇತನ

ಕುವೆಂಪು ಅವರ ಆತ್ಯಂತಿಕ ಸ್ವಾತಂತ್ರ್ಯಗೀತೆ ಎಂದೂ ಎನಿಸಿಕೊಳ್ಳಬಲ್ಲ ಈ ಗೀತೆ ಸ್ವತಃ ಕುವೆಂಪು ಅವರೇ ಘೋಷಿಸಿದಂತೆ ಅವರ ಬದುಕಿನ ಸಾರ ಸಂದೇಶವಾದ ವಿಶ್ವಮಾನವ ಸಂದೇಶವನ್ನು ಹೊತ್ತ ಗೀತೆ. ಹೀಗೆ ಕುವೆಂಪು ಅವರಿಗೆ ಸ್ವಾತಂತ್ರ್ಯವೆಂಬುದು ನಿಜಾರ್ಥದಲ್ಲಿ ಅವಿಭಾಜ್ಯವೂ ಅಖಂಡವೂ ಆಗಿದ್ದುದರಿಂದ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಸನ್ನಿವೇಶಗಳೆರಡರಲ್ಲೂ ಕುವೆಂಪು ಪ್ರತಿಕ್ರಿಯಿಸಿದ್ದು ಒಂದೇ ನೆಲೆಯಲ್ಲಿ : ಅದು ಚೇತನಾರೋಹಣ ನೆಲೆ.

ಅಂದ ಮಾತ್ರಕ್ಕೆ ಕುವೆಂಪು ಅವರಿಗೆ ಆಗಸ್ಟ್ ೧೫ರ ಸ್ವಾತಂತ್ರ್ಯ ಅಷ್ಟು ಮಹತ್ವದ್ದಾಗಿರಲಿಲ್ಲ ಎಂದಲ್ಲ. ಆಗಸ್ಟ್ ೧೫ರ ಆ ದಿನಕ್ಕಾಗಿ ಭಾರತದ ಎಲ್ಲ ಸ್ವಾತಂತ್ರ್ಯ ಪ್ರಿಯ ಪ್ರಜೆಗಳಂತೆ ಅವರೂ ಕಾದಿದ್ದರು. ಏಕೆಂದರೆ ಅವರು ಮುಂದೆ ರಾಷ್ಟ್ರಕವಿ ಪ್ರಶಸ್ತಿ ಸ್ವೀಕಾರ ಮಾಡಿದ ಸಂದರ್ಭದಲ್ಲಿ ಹೇಳಿದಂತೆ "ನಾನು ಲಾಠಿಯೇಟು ತಿಂದಿಲ್ಲ. ಸೆರೆಮನೆಗೆ ಹೋಗಿಲ್ಲ. ಬ್ರಿಟಿಶರ ವಿರುದ್ಧವಾಗಿ ತಿಲಕ ಮತ್ತು ಗಾಂಧೀಜಿ ಪ್ರಭಾವವು ಪ್ರಚೋದಿಸಿದ ವಿದ್ಯಾರ್ಥಿ ಮೆರವಣಿಗೆಗಳಲ್ಲಿ ಕೂಗಿಕೊಂಡು ಅಲೆದಿದ್ದೇನೆ. ವಿದೇಶಿ ವಸ್ತ್ರ ದಹನ ಯಜ್ಞಗಳಲ್ಲಿ ಭಾಗವಹಿಸಿ, ಪ್ರೇಕ್ಷಕನಾಗಿ ನಿಂತಿದ್ದು, ಪಕ್ಕದಲ್ಲಿ ನಿಂತಿದ್ದ ಮಿತ್ರರು ಹುರಿದುಂಬಿಸಿದ್ದಕ್ಕಾಗಿ ತಾತ್ಕಾಲಿಕ ಭಾವಾವೇಶಕ್ಕೊಳಗಾಗಿ ಇದ್ದುದೊಂದು ಅಂಗಿಯನ್ನೂ, ಟೋಪಿಯನ್ನೂ ಬೆಂಕಿಗೆ ಎಸೆದದ್ದು ಉಂಟು ... ಸುಮಾರು ೧೯೨೫ರಿಂದ ೧೯೪೭-೪೮ರವರೆಗೆ ನಡೆದ ಭಾರತದ ಜಗನ್ಮಹಾದ್ಭುತ ಸ್ವಾತಂತ್ರ್ಯ ಸಂಗ್ರಾಮದ ಚಿತ್ಸಾಗರದಲ್ಲಿ ನನ್ನ ಕವಿಚೇತನ ಸಮುದ್ರ ಸಂಪೂರ್ಣ ಮಗ್ನವಾಗಿಬಿಟ್ಟಿತು. ಆ ಬೃಹತ್ ಸಾಗರದ ಸಂಮಥನ ಕ್ಷೋಭೆಯಿಂದ ಉಲ್ಲೋಲ ಕಲ್ಲೋಲವಾದ ಮಹಾ ತರಂಗಗಳೆಲ್ಲ ಈ ಕವಿಚೇತನ ಸಮುದ್ರದಲ್ಲಿಯೂ ಪ್ರತಿಫಲನವಾಗಿ, ಸಾವಿರಾರು ಕವನರಾಶಿ ಪುಂಜೀಭೂತವಾದುವು ಸಾಹಿತ್ಯವೇಲೆಯಲ್ಲಿ. ಆ ಕಾಲದಲ್ಲಿ ನಡೆದ ಯಾವ ಮಹಾ ಘಟನೆಯೂ ಬಹುಶಃ ನನ್ನ ಲೇಖನಿಯಿಂದ ವಂಚಿತವಾಗಿಲ್ಲ".

ಪ್ರತಿಯೊಂದು ವಿದ್ಯಮಾನವನ್ನೂ ಅದರ ಅಲ್ಪಕಾಲಿಕ ಹಾಗೂ ದೀರ್ಘಕಾಲಿಕ ಮತ್ತು ಲೌಕಿಕ

ಹಾಗೂ ಪಾರಮಾರ್ಥಿಕ ಅರ್ಥ ಹಾಗೂ ನೆಲೆಗಳಲ್ಲಿ ತಹತಹಿಸುತ್ತಿದ್ದ ಕುವೆಂಪು ಅವರಿಗೆ ಆಗಸ್ಟ್ ೧೫ ಸಹಜವಾಗಿಯೇ ಒಂದು ದೊಡ್ಡ ಹಬ್ಬವಾಗಿತ್ತು. ಇಡೀ ಮಧ್ಯರಾತ್ರಿ ಅವರು ರೇಡಿಯೋ ಮುಂದೆ ಕೂತು ಆ ಮೊದಲ ಸ್ವಾತಂತ್ರ್ಯ ದಿನದಂದು ದೆಹಲಿಯಲ್ಲಿ ನಡೆದ ಸಮಾರಂಭಗಳ ವೀಕ್ಷಕ ವಿವರಣೆ ಕೇಳುತ್ತಾ ಅಲ್ಲಿನ ಚಿತ್ರಗಳನ್ನು ಕಲ್ಪಿಸಿಕೊಳ್ಳುತ್ತಾ ಬರೆದ 'ಶ್ರೀ ಸ್ವಾತಂತ್ರ್ಯೋದಯ ಮಹಾ ಪ್ರಗಾಥಾ ' ಎಂಬ ಖಂಡ ಕವನ ಸ್ವತಂತ್ರ ಭಾರತ ಕುರಿತ ಅವರ ಕನಸುಗಳನ್ನೆಲ್ಲ ಆ ದಿನದ ರೋಮಾಂಚನದೊಂದಿಗೆ ನಿರೂಪಿಸುತ್ತದೆ :

ಸಾರಿ ಬಾ ಸರ್ವರ್ಗೆ ಸ್ವಾತಂತ್ರ್ಯಮಂ
ಸಾರಿ ಬಾ ಸರ್ವರ್ಗೆ ಸಾಮ್ಯತ್ವಮಂ
ಸರ್ವರ್ಗೆ ಸಾರಿಬಾ ಸೌಹಾರ್ದಮಂ
ಸರ್ವ ಲೋಕದ ಸರ್ವಸಂತೋಷಮಂ
ಸರ್ವರಿಂ ಸರ್ವರಾ ಉದ್ಧಾರಮಂ

ಇದೆಲ್ಲ ಆಗಬೇಕಾದದ್ದು ಹೀಗೆ :

ಆ ಜಾತಿಯ ಈ ವರ್ಣದ
ಭೇದದ ಭೂತವನಿಂದೇ
ಸಂಹರಿಸುವ ಸುರನೀತಿಯ
ವ್ರತವಾಗಲಿ ಪಥವೊಂದೇ
ಪೊರೆಗಳಚಿದ ಹೊಸನಾಗರ
ಹೆಡೆಯೆತ್ತುವ ತೆರದಿ
ಹೊಸ ನೋಂಪಿಯ ಹೊಸ ಹುರುಪಿಂ
ಝಳಪಿಸಲಾ ಋತಖಡ್ಗಂ
ದೃಢ ಮುಷ್ಟಿಯ ಕರದಿ

ಕೊನೆಗೆ ಈ ಲಹರಿ ಹೊರಳುವುದು -

ಪುರುಷಾರ್ಥದ ಪರಮಾರ್ಥದ
ಆಧ್ಯಾತ್ಮಿಕ ಚೇತನಕೀ
ಸ್ವಾತಂತ್ರ್ಯದ ಸಂಕೇತವೆ
ಚಿರಕೇತನವಾಗುವವೋಲ್
ಕೃಪೆಯಿರಲೆಂದೆಂದೂ

ಎಂಬ, ನಾನು ಈ ಹಿಂದೆ ಪ್ರಸ್ತಾಪಿಸಿದ ಸ್ವಾತಂತ್ರ್ಯದ ನಿರಪೇಕ್ಷ ಅರ್ಥದ ನೆಲೆಗೆ.

ಕುವೆಂಪುರವರ ವ್ಯಕ್ತಿತ್ವವೇ ಹಾಗೆ. ಉಪನಿಷತ್ ಪ್ರಣೀತವಾದ ಪೂರ್ಣದೃಷ್ಟಿ, ರಾಮಕೃಷ್ಣ ಪರಮಹಂಸ ಪ್ರಣೀತವಾದ ಸಮನ್ವಯ ತಂತ್ರ ಹಾಗೂ ವಿನೋಬಾ ಪ್ರಣೀತವಾದ ಸರ್ವೋದಯ ಮಂತ್ರ ಅವರ ಚಿಂತನಾ ಕ್ರಮವನ್ನು ರೂಪಿಸಿದ ಅಂಶಗಳು. ಭಾರತವು ೧೯೫೦ರಲ್ಲಿ ಗಣರಾಜ್ಯವೆಂದು ಘೋಷಿಸಲ್ಪಟ್ಟಾಗ ಅವರು ಬರೆದ 'ಶ್ರೀ ಸಾಮಾನ್ಯರ ದೀಕ್ಷಾಗೀತೆ' ಯೆಂಬ ಪದ್ಯವನ್ನು ಈ ಹಿನ್ನೆಲೆಯಲ್ಲಿ ಗ್ರಹಿಸಿದಾಗ, ಈ ಪದ್ಯದ ಆರಂಭದಲ್ಲಿಯೇ ಬರುವ ''ಶ್ರೀಸಾಮಾನ್ಯವೇ ಭಗವನ್ ಮಾನ್ಯಂ ; 'ಶ್ರೀಸಾಮಾನ್ಯ 'ವೆ ಭಗವದ್ ಧನ್ಯಂ ! ಸಾಮಾನ್ಯತೆ ಭಗವಂತನ ರೀತಿ ; ಸಾಮಾನ್ಯವೆ ದಿಟ ಭಗವತ್

ಪ್ರೀತಿ'' ಎಂಬ ಸಾಲುಗಳಲ್ಲಿರುವ ಕ್ರಾಂತಿಕಾರಕತೆಯನ್ನು ಅರ್ಥಮಾಡಿಕೊಳ್ಳಬಹುದು.'ಶ್ರೀಸಾಮಾನ್ಯ' ಎಂಬ ಶಬ್ದವೇ ಕುವೆಂಪುರವರ ಕೊಡುಗೆಯೆಂದು ನಾನು ಕೇಳಿದ್ದೇನೆ. ಗಣರಾಜ್ಯವೆಂದರೆ ಸಾಮಾನ್ಯದ ಪೂಜೆ ಎಂಬ ಅವರ ಕಾಣ್ಕೆ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಹಾಗೂ ಗಣರಾಜ್ಯದ ಕಲ್ಪನೆಗಳನ್ನು ಅವರು ಎಷ್ಟು ಮೂಲಭೂತವಾಗಿ ಗ್ರಹಿಸಿದ್ದರು ಎಂಬುದರ ಸೂಚನೆ ನೀಡುತ್ತದೆ. ಅವರು ಗಣರಾಜ್ಯ ವ್ಯವಸ್ಥೆಯ ಆಗಮನವನ್ನು ಗುರುತಿಸುವುದು ಹೀಗೆ :

ಕೊನೆಗೊಂಡಿತೋ ಓರೋರ್ವರ ಗರ್ವದ ಕಾಲ
ಇದು ಸರ್ವರ ಕಾಲ
ಸರ್ವೋದಯ ಸರ್ವೋದಯ
ಸರ್ವೋದಯ ಯುಗಮಂತ್ರ
ಸರ್ವೋದಯವೇ ಸ್ವಾತಂತ್ರ್ಯದ ಶ್ರೀತಂತ್ರ
ಮೇಲಿಲ್ಲವೋ ಕೀಳಿಲ್ಲವೋ
ಸರ್ವ ಸಮಾನದ ರಾಜ್ಯ
ಅಧ್ಯಕ್ಷನೋ ಸೇನಾನಿಯೋ
ಕಮ್ಮಾರನೋ ಚಮ್ಮಾರನೋ
ಕಾಯಕವೆಲ್ಲವೂ ಪೂಜ್ಯ

ಇಂತಹ ಸಾಲುಗಳಲ್ಲಿ ವಿಮರ್ಶಕರು ಕಾವ್ಯವಿದೆಯೋ ಇಲ್ಲವೋ ಎಂದು ನೋಡಿ ಮುಖ ಆಕಡೆ ತಿರುಗಿಸಿದರೆ, ಶ್ರೀಸಾಮಾನ್ಯರು ಇಲ್ಲಿ ತಾವಿದ್ದೇವೆಯೋ ಇಲ್ಲವೋ ಎಂದು ನೋಡಿ ಕುವೆಂಪು ಅವರನ್ನು ಜನತೆಯ ಕವಿ ಎಂದು ಗುರುತಿಸಿದರು. ಕುವೆಂಪು ಅವರ ಬರಹಗಳಲ್ಲಿ ಶ್ರೀಸಾಮಾನ್ಯನ ಅಸಾಮಾನ್ಯತೆಯದೇ ಮೇಲಾಟ. ಅದೇ ಪ್ರಜಾಪ್ರಭುತ್ವದ ತಿರುಳು. ಕುವೆಂಪು ಅವರನ್ನು ಸಾಮಾನ್ಯವಾಗಿ ದಂತಗೋಪುರದ ಕವಿ ಎಂದು ವರ್ಣಿಸುತ್ತಿದ್ದುದು ಉಂಟು. ಆದರೆ ಈ ದಂತಗೋಪುರದ ಕವಿ ಶ್ರೀಸಾಮಾನ್ಯನ ಏಳ್ಗೆಯ ವಿಷಯವಾಗಿ ತೋರಿದಷ್ಟು ವೈವಿಧ್ಯಮಯವೂ ತೀವ್ರವೂ ಆದ ಕಾಳಜಿಯನ್ನು ಇನ್ನಾವ ಆಧುನಿಕ ಕನ್ನಡ ಬರಹಗಾರನೂ ತೋರಿದಂತಿಲ್ಲ.

ಅವರು ಕನ್ನಡ ಪ್ರಾಧ್ಯಾಪಕರಾಗಿ, ಕಾಲೇಜೊಂದರ ಪ್ರಾಂಶುಪಾಲರಾಗಿ, ವಿಶ್ವವಿದ್ಯಾಲಯವೊಂದರ ಉಪಕುಲಪತಿಯಾಗಿ ಮಾಡಿದ ಕೆಲಸ, ಚಿಂತನೆಗಳೆಲ್ಲವೂ ಈ ಪ್ರಜಾಪ್ರಭುತ್ವದ ತಿರುಳನ್ನು ಪುಷ್ಟಿಗೊಳಿಸುವಂತಹವೇ ಆಗಿದ್ದವು. ಆಡಳಿತ ಹಾಗೂ ಶಿಕ್ಷಣದ ಭಾಷೆಯಾಗಿ ಕನ್ನಡ, ಅಖಂಡ ಕರ್ನಾಟಕ, ಜಾತಿ ನಿರ್ಮೂಲನ -ಇವು, ಅವರು ಬದುಕನ್ನು ಸಕಲವೂ ಪರಿಪೂರ್ಣತೆಯೆಡೆಗೆ ವಿಕಾಸವಾಗುತ್ತಿದೆ ಎಂಬ ದೃಷ್ಟಿಯೊಡನೆ ಗ್ರಹಿಸುವ ಅವರ ಪೂರ್ಣ ದೃಷ್ಟಿಯ ಅವಿಭಾಜ್ಯ ಅಂಗಗಳೇ ಆಗಿದ್ದವು. ಭಾಷೆ ಹಾಗೂ ಸ್ವಾತಂತ್ರ್ಯದ ಸಂಬಂಧವನ್ನು ಅವರು ವಿಶ್ಲೇಷಿಸುವ ತೀವ್ರತೆ ನೋಡಿ: ''ಕನ್ನಡ ಭಾಷೆ ಮಾತಾಡುವ ಜನರ ನಡುವೆಯೇ ಬಾಳಿ ಬದುಕಿ ಅನ್ನ ಸಂಪಾದನೆ ಮಾಡುತ್ತಾ, ಜ್ಞಾನ, ಆಲೋಚನೆ, ವಿಚಾರಗಳನ್ನೆಲ್ಲ ಬೇರೊಂದು ಭಾಷೆಯಲ್ಲೇ ಇಡಲೆತ್ನಿಸುವವನು, ನೀಗ್ರೋ ಗುಲಾಮರಿಂದ ದುಡಿಸಿಕೊಂಡು ದೊಡ್ಡವರಾದ ಅಮೆರಿಕನ್ ಶೋಷಕರಿಗಿಂತ ಕೆಟ್ಟ ಹಾಗೂ ಅತಿ ಸೂಕ್ಷ್ಮ ಶೋಷಕ.'' ಸ್ವಾತಂತ್ರ್ಯ ಬರುವ ಮುನ್ನವೇ ಅಖಂಡಕರ್ನಾಟಕದ ಹಾಗೂ ಅದಕ್ಕಾಗಿ ಈಗಿನ ಅವರ ನಾಡಗೀತೆಯ ಪ್ರಪಿತಾಮಹನೆಂದು ಅವರೇ ಕರೆದಿರುವ ಕರ್ನಾಟಕ ರಾಷ್ಟ್ರ ಗೀತೆಯನ್ನು ಬರೆದು, ಆ

ಅಖಂಡ ಕರ್ನಾಟಕದಲ್ಲಿ ಸರ್ವ ರಂಗಗಳಲ್ಲೂ ಕನ್ನಡವೇ ರಾರಾಜಿಸುವ ಕನಸನ್ನು ಕಂಡಿದ್ದ ಕುವೆಂಪು ಸ್ವಾತಂತ್ರ್ಯಾನಂತರ ತಮಗೆ ದೊರಕಿದ ಎಲ್ಲ ಅವಕಾಶ -ಸಂದರ್ಭಗಳಲ್ಲೂ ಕನ್ನಡದ ವೀರ ಸೇನಾನಿಯಾಗಿ ಏನೆಲ್ಲ ಮಾಡಿದರು ; ಅದಕ್ಕಾಗಿ ಏನೆಲ್ಲ ಟೀಕೆ -ದೋಷಾರೋಪಣೆಗಳಿಗೆ ಒಳಗಾದರು ಎಂಬುದನ್ನು ನಾನು ಇಲ್ಲಿ ವಿವರವಾಗಿ ಹೇಳಬೇಕಿಲ್ಲ.ಕರ್ನಾಟಕದಲ್ಲಿ ಇಂದು ಇಂಗ್ಲಿಷ್‌ಮಯ ವಾತಾವರಣದೆದುರಲ್ಲೂ ಕನ್ನಡ ಭಾಷೆ ಒಂದು ಜನತಾ ವಾಣಿಯಾಗಿ,ಪ್ರಜಾಪ್ರಭುತ್ವದ ಸಂಕೇತವಾಗಿ ಉಳಿಯಲೆತ್ನಿಸುತ್ತಿದ್ದರೆ ಅದಕ್ಕೆ ಕುವೆಂಪು,ಕರ್ನಾಟಕದ ಜನತೆಗೆ ನೀಡಿದ ಕನ್ನಡ ದೀಕ್ಷೆಯೇ ಪ್ರಮುಖ ಪ್ರೇರಕ ಶಕ್ತಿಯಾಗಿದೆಯೆಂದರೆ ತಪ್ಪಾಗಲಿಕ್ಕಿಲ್ಲ.ಕನ್ನಡವನ್ನು ಒಂದು ಪ್ರಬಲ ಜನತಾ ಶಕ್ತಿಯಾಗಿಸಲಿಕ್ಕೇ ಕುವೆಂಪು ಅವರು ಮೇಲ್ನೋಟಕ್ಕೆ ಒಂದು ರಾಜಕೀಯ ಪರಿಕಲ್ಪನೆಯಾಗಿ ಕಾಣುವಂತಿದ್ದ ಅಖಂಡ ಕರ್ನಾಟಕದ ಕಲ್ಪನೆಯನ್ನು ಒಂದು ಸಾಂಸ್ಕೃತಿಕ ಕಲ್ಪನೆಯನ್ನಾಗಿ ಅರ್ಥೈಸಿದ್ದು.ಕರ್ನಾಟಕವೆಂಬುದು ಬರೀ ದೇಶವಿಸ್ತೀರ್ಣವಲ್ಲ;ಕಾಲ ವಿಸ್ತೀರ್ಣ ಹಾಗೂ ಮನೋವಿಸ್ತೀರ್ಣ ತತ್ವಗಳೂ ಅದರಲ್ಲಡಗಿದ್ದು ಕನ್ನಡಿಗರ ಆತ್ಮತುಷ್ಟಿ ಭೌತಿಕ ಪುಷ್ಟಿಗಳೆರಡಕ್ಕೂ ಇದು ಭೂಮಿಕೆಯಾಗಬಲ್ಲುದೆಂದು ಅವರು ಪ್ರತಿಪಾದಿಸಿದರು.ಸ್ವಾತಂತ್ರ್ಯದ ನಿಜವಾದ ಫಲಗಳನ್ನು ತನ್ನ ಜನತೆಗೆ ಸಮರ್ಥ ಬರಹಗಾರ ಅಥವಾ ಚಿಂತಕನೊಬ್ಬ ದೊರಕಿಸಿಕೊಡಲೆತ್ನಿಸುವುದು ಹೀಗೇ :

ಬರಿಯ ಚದರ ಮೈಲಿಗಳಲ್ತು ಕರ್ಣಾಟಕ ದೇಶ ವಿಸ್ತೀರ್ಣಮಂ
ನೆನೆ ನೆನೆ ಮನೋಮಯದ ಸಂಸ್ಕೃತಿಯ ಕೋಶ ವಿಸ್ತೀರ್ಣಮಂ
ಮರೆಯದಿರು ಚದರ ಸಂವತ್ಸರದ ಶತಮಾನಗಳ ಕಾಲವಿಸ್ತೀರ್ಣಮಂ
ಪ್ರಾಣಮಯ, ಭಾವಮಯ ವಿಸ್ತೀರ್ಣಮಂ, ಚಿದಾಕಾಶ ವಿಜ್ಞಾನ ವಿಸ್ತೀರ್ಣಮಂ

('ಕರ್ನಾಟಕ ರಾಜ್ಯೋದಯ ಶ್ರೀಗೀತೆ')

ಸ್ವಾತಂತ್ರ್ಯದ ನಿಜಫಲಗಳು ಜನತೆಗೆ ದೊರಕದಂತೆ ಪ್ರತಿಬಂಧಿಸಿರುವ ಶಕ್ತಿಗಳನ್ನೂ ಗುರುತಿಸಿ ಅವುಗಳ ವಿರುದ್ಧ ತಮ್ಮ ವೈಚಾರಿಕ ಕತ್ತಿಯನ್ನು ಝಳಪಿಸುವಲ್ಲಿ ಕುವೆಂಪು ಹಿಂದೆ ಬಿದ್ದಿಲ್ಲ.ನಮ್ಮ ಸ್ವಾತಂತ್ರ ಹರಣಕ್ಕೆ ಇಂಗ್ಲಿಷಿಗಿಂತ ಹೆಚ್ಚಾಗಿ ನಮ್ಮ ಪಾರಂಪರಿಕ ಮತಭ್ರಾಂತಿಯೇ ಕಾರಣವೆಂದು ಕುವೆಂಪು ನಂಬುತ್ತಾರೆ.ಅವರ ' ಧ್ರಾಂ ಧ್ರೀಂ ಧ್ರೂಂ ' ಎಂಬ ಸ್ವಾತಂತ್ರ್ಯ ಪೂರ್ವ ಕವನದಲ್ಲಿ ಅದನ್ನು ಸಾಂಕೇತಿಕವಾಗಿ ನಿರೂಪಿಸಿದ್ದಾರೆ.ಮತಭ್ರಾಂತಿ ಹಾಗೂ ಅದರ ಶನಿ ಸಂತಾನವೆಂದು ಅವರು ಕರೆಯುವ ಜಾತಿಪದ್ಧತಿಯ ವಿರುದ್ಧ 'ನಿನ್ನೆದೆಯ ದನಿಯೆ ಋಷಿ, ಮನು ನಿನಗೆ ನೀನು' ಎಂಬ ಘೋಷ ವಾಕ್ಯವನ್ನಾಧರಿಸಿದ ಅವರ ವೈಚಾರಿಕ ಕದನ,ಸ್ವಾತಂತ್ರ್ಯ ಪೂರ್ವ ಸನ್ನಿವೇಶದಿಂದ ಸ್ವಾತಂತ್ರ್ಯೋತ್ತರ ಸನ್ನಿವೇಶಕ್ಕೂ ಚಾಚಿಕೊಂಡಿದೆ.ಸ್ವಾತಂತ್ರ್ಯ ಪೂರ್ವದಲ್ಲಿ ಈ ಕದನ ಕವನಗಳ ಮೂಲಕ ನಡೆಯುತ್ತಿದ್ದುದು ಸ್ವಾತಂತ್ರ್ಯೋತ್ತರ ಸನ್ನಿವೇಶದಲ್ಲಿ ಗದ್ಯಕ್ಕೆ ಪರಿವರ್ತಿತವಾಗಿದೆ.ಸೂಚ್ಯ ವಾಚ್ಯವಾಗಿದೆ.ಅದಕ್ಕೆ ಸ್ವಾತಂತ್ರ್ಯೋತ್ತರ ಸನ್ನಿವೇಶದ ವಿಕೃತ ಜಾತೀಯತೆಯೇ ಕಾರಣವಾಗಿದೆ.೧೯೭೪ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಘಟಿಕೋತ್ಸವ ಭಾಷಣ ಮಾಡುತ್ತ ವಿಚಾರ ಕ್ರಾಂತಿಗೆ ಆಹ್ವಾನ ನೀಡಿ ಹೇಳಿದುದು ಹೀಗೆ :

"ನಮ್ಮ ಪ್ರಜಾಸತ್ತೆ ಕಲುಷಿತವಾಗಲು ಹಣ ಒಂದೆಯೆ ಕಾರಣವೆಂದು ತಿಳಿಯುವುದು ತಪ್ಪಾಗುತ್ತದೆ.ಅದಕ್ಕಿಂತಲೂ ಮಹತ್ತಾದ ಮತ್ತು ಮೂಲಭೂತವಾದ ಮತ್ತೊಂದು ಕಾರಣವೂ ಇದೆ,ನಮ್ಮ ಪುಣ್ಯಭೂಮಿ ಭಾರತದಲ್ಲಿ !ಅದುಒಂದು ಅಮೂರ್ತವಸ್ತು,ಅದು ಹಾಕಿಕೊಂಡಿರುವ

ವೇಷದಿಂದ ತುಂಬ ಸಾಧು ಮತ್ತು ಪೂಜ್ಯ ಎಂಬಂತೆ ತೋರುತ್ತದೆ.ಅದು ಭಾವರೂಪಿಯಾದುದರಿಂದ ಅತಿ ಸೂಕ್ಷ್ಮವಾಗಿ ಹೃದಯ ಪ್ರವೇಶಮಾಡಿ ನಮ್ಮನ್ನು ಆಕ್ರಮಿಸುತ್ತದೆ .ಮತ್ತು ನಮ್ಮಲ್ಲಿ ನಿಜವಾಗಿಯೂ ಇರುವ ಒಂದು ಅನಿರ್ವಚನೀಯ -ಅತ್ಯಂತ ಅಂತರತಮ -ಸತ್ಯಸ್ಯ ಸತ್ಯವಾದ ಸನಾತನ ತತ್ವಕ್ಕೆ (ಅದನ್ನು ಅಧ್ಯಾತ್ಮ ಎಂದು ಹೆಸರಿಸುತ್ತೇವೆ) ಅದು ತನ್ನ ಬಾಂಧವ್ಯವನ್ನು ಘೋಷಿಸುತ್ತಾ ಬಂದಿರುವುದರಿಂದಲೂ ಮತ್ತು ಅದನ್ನೇ ತಾನು ಪೋಷಿಸುತ್ತಿರುವುದಾಗಿ ಹೇಳುತ್ತಲೂ ಇರುವುದರಿಂದಲೂ ಅದರ ಪ್ರಚ್ಛನ್ನ ವಂಚನೆಯ ಮುಷ್ಟಿಯಿಂದ ತಪ್ಪಿಸಿಕೊಳ್ಳುವುದೂ ಕಷ್ಟಸಾಧ್ಯವಾಗಿದೆ.ಅದರ ಹೆಸರು 'ಮತ '! ಈ ಮತಭ್ರಾಂತಿಯಿಂದ ಲೋಕಕ್ಕೆ ಆಗಿರುವಷ್ಟು ಹಾನಿ ಮತ್ತಾವುದರಿಂದಲೂ ಆಗಿಲ್ಲ ಎಂದು ತೋರುತ್ತದೆ.ಇನ್ನು ಮುಂದೆಯಾದರೂ ನೀವು ಅಧ್ಯಾತ್ಮವನ್ನು ಉಳಿಸಿಕೊಂಡು ಮತ ಮತ್ತು ಅದರಿಂದ ಜನ್ಯವಾದ ಮತಭ್ರಾಂತಿ ಮತ್ತು ಮತಮೌಢ್ಯಗಳನ್ನು ನಿರಾಕರಿಸದಿದ್ದರೆ ನಿಜವಾದ ಪ್ರಜಾಸತ್ತೆಯಾಗಲೀ ಸಮಾಜವಾದವಾಗಲೀ,ಸಮಾನತಾ ಭಾವಸ್ಥಾಪನೆಯಾಗಲೀ ಎಂದೆಂದಿಗೂ ಸಾಧ್ಯವಾಗುವುದಿಲ್ಲ.

ಐಕ್ಯಕ್ಕೂ ಮೈತ್ರಿಗೂ ಸಾಧನವಾಗುವ ಆ ಚಿರಂತನ ಅಧ್ಯಾತ್ಮವನ್ನು ಈ ಅಜ್ಞಾನಜನ್ಯವಾದ ಮತಭಾವನೆ ಆಕ್ರಮಿಸಿ ವರ್ಣ ಜಾತಿ ಪಂಥ ಕೋಮು ಪಂಗಡಗಳೆಂಬ ನೂರಾರು ಭೇದ ಭಾವನೆಗಳ ಬಿರುಕು ಒಡಕುಗಳಿಗೆ ಸಮಾಜವು ಸಿಕ್ಕಿ ಛಿದ್ರ ಛಿದ್ರವಾಗುವಂತೆ ಮಾಡಿದೆ.ಈ ಭೇದಭಾವಗಳೂ ಛಿದ್ರಗಳೂ ಎಲ್ಲಿಯವರೆಗೆ ಇರುತ್ತವೆಯೋ ಅಲ್ಲಿಯವರೆಗೆ ನಿಜವಾದ ಸಮಾನತಾಭಾವನೆಯ ಪ್ರಜಾಸತ್ತೆ ಬರಿಯ ಮರು ಮರೀಚಿಕೆಯ ಭ್ರಾಂತಿಜಲವಾಗುತ್ತದೆ. ಆದ್ದರಿಂದ ಸಮಾಜವಾದದ ಪ್ರಜಾಸತ್ತೆ ನಿಮ್ಮ ಗುರಿಯಾಗಿದ್ದರೆ ಮತಭಾವನೆಯ ಶನಿಸಂತಾನವಾದ ಜಾತಿ ಪದ್ಧತಿಯ ಸಂಪೂರ್ಣ ವಿನಾಶಕ್ಕೆ ನೀವು ಕಂಕಣ ಕಟ್ಟಿಕೊಂಡು ಹೋರಾಡಬೇಕು ''.[೧]

ಈ ಹೋರಾಟ ಯಾರ ವಿರುದ್ಧವೂ ಅಲ್ಲ.ನಮ್ಮ ವಿರುದ್ಧವೇ ಎಂದು ಮಾರ್ಮಿಕವಾಗಿ ಕುವೆಂಪು ತಮ್ಮ ಇನ್ನೊಂದು, ಒಕ್ಕೂಟದ ಭಾಷಣವೆಂದೇ ಸುಪ್ರಸಿದ್ಧವಾದ 'ಸಂಸ್ಕೃತಿ ಕ್ರಾಂತಿಗೆ ಕಹಳೆ'ನಾಂದಿಯಲ್ಲಿ ಹೀಗೆ ಹೇಳುತ್ತಾರೆ.[೨]

''.....ಈ ಪುರೋಹಿತಶಾಹಿ ಹುಲಿಯಂತೆ .ಇದಕ್ಕೆ ಸಣ್ಣ ಪುಟ್ಟ ಕಲ್ಲನ್ನು ಜೇಬಿನಲ್ಲಿಟ್ಟುಕೊಂಡು ಹೋಗಿ ಹೊಡೆಯುತ್ತೇನೆಂದರೆ ಹುಡುಗಾಟದ ಕೆಲಸವಲ್ಲ.ಅದನ್ನು ಹೊಡೆಯಬೇಕಾದರೆ ನಾವು ಮದ್ದು ಗುಂಡುಗಳನ್ನು ತಯಾರು ಮಾಡಬೇಕು.ನಾವು ಹೇಳುವಂತಹ ಮದ್ದು ಗುಂಡು ರೂಪಕವಾದದ್ದು ಅಂತ ಇಟ್ಟುಕೊಳ್ಳೋಣ .ವಾಚ್ಯವಾಗಿಯೇ ಗುಂಡಿನಲ್ಲಿ ಹೊಡೆಯಬೇಕು ಅಂತ ಅಲ್ಲ .ಆದರೆ ಈ ವಿಚಿತ್ರ ಬೇಟೆಯಲ್ಲಿ (ಈ ಸಂದರ್ಭದಲ್ಲಿ) ಮೊದಲ ಗುಂಡು ತಗುಲ ಬೇಕಾದದ್ದು ಹುಲಿಯ ತಲೆಗಲ್ಲ ,ನಿಮ್ಮ ತಲೆಗೇ ! ತಲೆ ...ತಲೆ ...ತಲೆ ,ಮೊದಲು ತಲೆಯಲ್ಲಿರುವ ಮೆದುಳನ್ನು ಕ್ಲೀನ್ ಮಾಡಬೇಕು. ಅವರಿಗಲ್ಲ .ಆ ಪುರೋಹಿತ ವರ್ಗದವರಿಗಲ್ಲ. ನಿಮಗೇ ! 'ನೀವು ' ಅಂತ ಹೇಳಿದೆ.ನನ್ನ ಮಟ್ಟಿಗೆ ನಾನೇನೋ ಅದರಿಂದ ಸಂಪೂರ್ಣ ಪಾರಾಗಿದ್ದೇನೆ .ಆದ್ದರಿಂದ ನನಗೇನೂ ರಗಳೆಯಿಲ್ಲ,ಗೊತ್ತಾಯಿತೇ ! ನಾನು ಯಾವ ದೇವಸ್ಥಾನಕ್ಕಾಗಲೀ ಪೂಜೆ ಮಾಡಿಸಲು ಹೋಗದೆ ಐವತ್ತು ವರುಷಗಳ ಮೇಲೆ ಆಗಿದೆ.ಯಾವ ಭಟ್ಟನಾಗಲೀ,ಯಾವ ಪುರೋಹಿತನಾಗಲೀ ಯಾವ ಪಂಚಾಂಗವಾಗಲೀ ನನ್ನ ಬಳಿ ಸುಳಿಯಗೊಡುವುದಿಲ್ಲ .ನಮ್ಮ ಮದುವೆಗಿದುವೆಗೆ ಯಾವ ಹಾರುವನನ್ನಾಗಲೀ ಪೌರೋಹಿತ್ಯಕ್ಕೆ ಕರೆಸುವುದಿಲ್ಲ .ಕರೆಸಲೂ ಇಲ್ಲ.ಆದರೆ ಬೇರೆ ಬೇರೆ ಜನರಿಗೆ ಇದನ್ನೆಲ್ಲ ಹೇಳಿದರೆ 'ಏನಿದು? ನೀವು ಹೇಳುವುದು ಭಯಂಕರವಾಗಿ ಕಾಣಿಸುತ್ತದೆ ' ಎನ್ನುತ್ತಾರೆ. ಅಂದರೇನು ಅದರ ಅರ್ಥ? ಅಜ್ಞಾನದ ಇಲ್ಲಣ , ಅದನ್ನು ನೀವು ತೆಗೆಯಬೇಕು.ಅದಕ್ಕೆ ಎಷ್ಟು

೧ ಮತ್ತು ೨ : 'ವಿಚಾರ ಕ್ರಾಂತಿಗೆ ಆಹ್ವಾನ' ಉದಯರವಿ ಪ್ರಕಾಶನ, ಮೈಸೂರು

ಕೆಲಸ ಮಾಡಬೇಕಾಗುತ್ತದೆ ಗೊತ್ತೇ? ಆ ಅರ್ಥದಲ್ಲಿ ನಾನು ಹೇಳಿದ್ದು - ಈ ವಿಚಿತ್ರ ಬೇಟೆಯಲ್ಲಿ ಮೊದಲ ಗುಂಡು ತಗುಲಬೇಕಾದದ್ದು ನಿಮ್ಮ ತಲೆಗೇ ಎಂದು.''

ಹೀಗೆ ಕುವೆಂಪು ಸ್ವಾತಂತ್ರ್ಯೋತ್ತರ ಸನ್ನಿವೇಶದ ಸಕಲ ಆಯಾಮಗಳಿಗೂ ತಮ್ಮದೇ ವೈಚಾರಿಕ ಸಾಂಸ್ಕೃತಿಕ ಸ್ಪರ್ಶ ನೀಡಿ ಜನಶಕ್ತಿಯನ್ನು ಎಚ್ಚರಿಸುವ ಕೆಲಸ ಮಾಡಿದ್ದಾರೆ.ಸರಳ ವಿವಾಹಕ್ಕಾಗಿ ಅವರು ನಿರೂಪಿಸಿದ 'ಮಂತ್ರ ಮಾಂಗಲ್ಯ ' ಪದ್ಧತಿ ಈ ಜಾಗೃತಿಯ ಕೆಲಸಕ್ಕೇ ಇನ್ನೊಂದು ಉದಾಹರಣೆ.ಇದು ಮುಂದೆ ಸರಳ ವಿವಾಹ ಮತ್ತು ಅಂತರ್ಜಾತಿ ವಿವಾಹ ಚಳುವಳಿಗೆ ನಾಂದಿ ಹಾಡಿತು.ಇಂತಹ ಜಾಗೃತಿಯ ಕೆಲಸಗಳನ್ನು ಗಮನಿಸಿಯೇ ಸಮಾಜವಾದಿ ನಾಯಕ ಡಾ . ರಾಮಮನೋಹರ ಲೋಹಿಯಾ ಅವರು ಕುವೆಂಪು ಅವರನ್ನು ರಾಜಕಾರಣಕ್ಕೆ ಆಹ್ವಾನಿಸುವ ಪ್ರಯತ್ನ ಮಾಡಿದರು.ಆಗ ಕುವೆಂಪು ಗೊಳ್ಳೆಂದು ನಕ್ಕು ''ನನಗೂ ಅಂತ ವ್ಯವಹಾರಕ್ಕೂ ಎಣ್ಣೆ ಸೀಗೆ ಕಾಯಿ ನಂಟು .ನನ್ನ ಧರ್ಮ ನನಗೆ ,ನಿಮ್ಮ ಧರ್ಮ ನಿಮಗೆ.ಸ್ವಧರ್ಮೇ ನಿಧನಂ ಶ್ರೇಯಃ ! ನೀವು ಯಾವುದನ್ನು ರಾಜಕೀಯ ಪರಿಭಾಷೆಯಲ್ಲಿ ಹೇಳುತ್ತಿದ್ದೀರೋ ಅದರ ಸಾಂಸ್ಕೃತಿಕ ಆವೃತ್ತಿಯನ್ನಷ್ಟೇ ನಾನು ಹೇಳುತ್ತಿರುವುದು'' ಎಂದರಂತೆ.(ನೋಡಿ: *'ರಾಷ್ಟ್ರಕವಿ ಕುವೆಂಪು' ಲೇ: ದೇಜಗೌ ಪ್ರ: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು*) ಆದರೂ ಮುಂದೆ ಕುವೆಂಪು ಲೋಹಿಯಾ ತತ್ವಗಳ ಸಂಕಲನವೊಂದಕ್ಕೆ ಮುನ್ನುಡಿ ಬರೆದರು.ಅಷ್ಟೇ ಅಲ್ಲ ಏರುತ್ತಿದ್ದ ಜೆ.ಪಿ. ಚಳುವಳಿಯ ಕಾವಿನಲ್ಲಿ ಸಾಂಸ್ಕೃತಿಕ ಪರಿಧಿಯಾಚೆಗೆ ಬಂದು 'ವಿಚಾರ ಕ್ರಾಂತಿಗೆ ಆಹ್ವಾನ' ನೀಡುವ ಸಂದರ್ಭದಲ್ಲಿಯೇ ಹೇಳಿದರು :

ನಮ್ಮ ಸ್ವಾತಂತ್ರ್ಯ ಸಂಪಾದನೆಗೆ ನಮ್ಮ ರಾಷ್ಟ್ರಪಿತನನ್ನೇನೋ ಉಪಯೋಗಿಸಿಕೊಂಡೆವು.ಆತ ಬೋಧಿಸಿದ ಸ್ವದೇಶಿ ,ಸತ್ಯಾಗ್ರಹ ,ಅಹಿಂಸೆ,ಗ್ರಾಮಸ್ವರಾಜ್ಯ,ಸರಳ ಜೀವನ,ತ್ಯಾಗಬುದ್ಧಿ ಮೊದಲಾದ . ಕೈದುಗಳನ್ನಾಂತು.ಆದರೆ ಸ್ವಾತಂತ್ರ್ಯ ಸಂಪಾದನೆ ಆದೊಡನೆಯೇ ಆತನನ್ನು ತೊಲಗಿಸಿದೆವು : ಆತನ ದೇಹಕ್ಕೆ ಗುಂಡಿಕ್ಕಿದವನೇನೋ ಒಬ್ಬನೆ ;ಆದರೆ ತರುವಾಯ ಆತನ ಧ್ಯೇಯಕ್ಕೆ ಉರುಳಿಕ್ಕಿ ಕೊಂದವರು ಹಲವರು ಆತನ ಅನುಯಾಯಿಗಳೇ! ನೆಹರೂ ಅವರ ಮುಂದಾಳುತನದ ನೇತೃತ್ವದಲ್ಲಿ ನಾವು ಗಾಂಧಿಯ ಮೂಲತತ್ವಗಳನ್ನೆಲ್ಲ ಮೂಲೆಗೊತ್ತಿ , ನಮ್ಮ ರಾಷ್ಟ್ರವನ್ನು ಏಕಾಏಕಿ ಅಭಿವೃದ್ಧ ಶ್ರೀಮಂತ ಪಾಶ್ಚಾತ್ಯ ದೇಶಗಳ ಸರಿಸಮಕ್ಕೇರಿಸುವ ಹುಮ್ಮಸ್ಸಿನಲ್ಲಿ ಸಂಪೂರ್ಣವಾಗಿ ಅವರ ಅನುಕರಣೆಗೆ ದೀಕ್ಷಿತರಾದೆವು.ತರುವಾಯ ಸ್ವದೇಶದ ಮತ್ತು ವಿದೇಶದ ಕೆಲವು ರಾಜಕೀಯ ಮತ್ತು ಆರ್ಥಿಕ ಪ್ರಾಜ್ಞರು ಕೊಟ್ಟ ಎಚ್ಚರಿಕೆಯನ್ನೂ ನಾವು ಲೆಕ್ಕಿಸಲಿಲ್ಲ ;★ ಪ್ರತಿಗಾಮಿ ಸೂಚನೆಗಳೆಂದೂ ಅವನ್ನು ತಿರಸ್ಕರಿಸಿದೆವು.ಆದರೂ ಗಾಂಧೀಜಿಯನ್ನು ಕೈಬಿಟ್ಟೆವು ಎಂದಾಗಬಾರದೆಂದು ಅವರ ಧ್ಯೇಯಗಳನ್ನು ಮ್ಯೂಸಿಯಂಗಳಲ್ಲಿ ಪ್ರದರ್ಶನಕ್ಕಿಟ್ಟೆವು : ಅಂದರೆ ಆ ಧ್ಯೇಯಗಳ ಜೀವ ತೆಗೆದು ಕೊಂದು ,ಚರ್ಮ ಸುಲಿದು ,ಹದ ಹಾಕಿ ,ಪ್ರದರ್ಶನ ಮಂದಿರಗಳನ್ನು ಕಟ್ಟಿಸಿ ಬಿಟ್ಟೆವು.ಅವುಗಳ ಪೂಜೆಗೂ ಏರ್ಪಾಟು ಮಾಡಿ ಅವರ ಭಕ್ತರನ್ನೂ ಸಮಾಧಾನಪಡಿಸಿ ,ಮೂಲೆಗೆ ತಳ್ಳಿ ,ಮತ್ತೆ ನಮ್ಮ ಪಾಶ್ಚಾತ್ಯರ ಅನುಕರಣೆಯ ಪಾಂಚವಾರ್ಷಿಕ ಯೋಜನೆಗಳ ಯಾಗಕ್ಕೆ ಶುರುಮಾಡಿದೆವು.''

ಆದರೆ ಕುವೆಂಪು ಅವರ ಪಶ್ಚಿಮದ ವಿರೋಧ ರಾಜಕೀಯಕ್ಕೆ ಸಂಬಂಧಿಸಿದ್ದೇ ಹೊರತು ಸಾಂಸ್ಕೃತಿಕವಾದುದಲ್ಲ.ಡಾ.ಜಿ.ಎಸ್.ಶಿವರುದ್ರಪ್ಪನವರು ಸಂದರ್ಶನವೊಂದರಲ್ಲಿ ''ಪಶ್ಚಿಮದಿಂದ ನಾವು ಸಾಂಸ್ಕೃತಿಕವಾಗಿ ಬಿಡಿಸಿಕೊಂಡು ಭಾರತೀಯವಾಗುವುದು ಹೇಗೆ ?'' ಎಂದು ಕೇಳಿದ ಪ್ರಶ್ನೆಗೆ ಅವರು

★ ಒತ್ತು ಮೂಲದಲ್ಲೇ ಇದೆ.

''ಏನಂದಿರಿ? ಪಶ್ಚಿಮದಿಂದ ಸಾಂಸ್ಕೃತಿಕವಾಗಿ ಬಿಡಿಸಿಕೊಳ್ಳುವುದೇ? ಅದು ತೀರಾ ಅನಾವಶ್ಯಕ. ಪಶ್ಚಿಮದಿಂದ ಸಾಂಸ್ಕೃತಿಕವಾಗಿ ನಾವು ಬಿಡಿಸಿಕೊಳ್ಳಲೇಬಾರದು. ಉತ್ತಮವಾದುದನ್ನು ನಾವು ಉಳಿಸಿಕೊಳ್ಳಲೇಬೇಕು. ಇನ್ನು ಭಾರತೀಯತೆ ಅಂದರೆ ಏನು? ಭಾರತೀಯತೆಯ ಹೆಸರಿನಲ್ಲಿ ಎಲ್ಲ ಜಾತಿ-ಮತ ಇತ್ಯಾದಿಗಳನ್ನು ಉಳಿಸಿಕೊಳ್ಳೋದಾದರೆ ಆ ಭಾರತೀಯತೇನೇ ಬೇಡ. ಮತ್ತೆ ಉಪನಿಷತ್ತುಗಳು ಹೇಳೋ ತತ್ವಗಳಿಗೆ, ಎಲ್ಲಿ ಜಾತಿ ಮತ ಏನೂ ಇಲ್ಲವೋ ಅಲ್ಲಿಗೆ ಹೋಗೋದಾದ್ರೆ ಹೋಗಿ. ಭಾರತೀಯನಾಗೋದು ಅಂದ್ರೆ ವಿಶ್ವಮಾನವನಾಗೋದು. ಮತ್ತೆ ಮೂಢನಂಬಿಕೆ, ಜಾತಿ -ಮತ ಪುರಾಣ -ಸಂಪ್ರದಾಯ ಇತ್ಯಾದಿಗಳಲ್ಲಿ ಸಿಕ್ಕಿಹಾಕಿಕೊಳ್ಳೋದು ಭಾರತೀಯತೆ ಆಗೋದಿಲ್ಲ. ಇದನ್ನೆಲ್ಲ ಹೇಳೋರು ಯಾರು? ವಿಚಾರವಂತರೋ, ಮಠಾಧಿಪತಿಗಳೋ, ಯಾರು? ನಮ್ಮ ಮಠಾಧಿಪತಿಗಳೋ ಬಿಡಿ ಬಿಡಿ. ಇವರ ಅರ್ಥದ ಭಾರತೀಯತೆಯಿಂದ ನಾನು ದೂರವೇ. ಹಾಗೆ ನೋಡಿದರೆ ನಾನು ಹಿಂದೂ ಅಂತ ಹೇಳಿಕೊಳ್ಳೋದೇ ಇಲ್ಲ. ನಾನು ಹಿಂದೂ ಅಲ್ಲ. ಹಿಂದೂ ಅಂದರೆ ಗಂಗೆ-ಗಾಯತ್ರಿ-ಗೋವು ಇವು ಪವಿತ್ರ ಅಂತ ಭಾವಿಸೋದು. ಗಂಗಾ ಯಾಕೆ ಪವಿತ್ರ? ನಮ್ಮ ಮಲೆನಾಡಿನ ತುಂಗಾ ಕೂಡಾ ಪವಿತ್ರ ಅಲ್ಲವೆ? ಗಾಯತ್ರಿ ಒಂದು ಪ್ರಾರ್ಥನೆ. ಆದರೆ ನಾನು ಹಾಡೋ ಪದ್ಯಾನೂ ಗಾಯತ್ರೀನೆ. ಇನ್ನು ಗೋವು ಕಡೀಬಾರದು ಅನ್ನೋದಾದ್ರೆ ಅದೊಂದೇ ಪ್ರಾಣೀನಾ? ಬೇರೆ ಪ್ರಾಣಿಗಳೇನು ಪಾಪ ಮಾಡಿದ್ದಾವೆ? ಅವೂ ಅಷ್ಟೇ ಮುಖ್ಯ. ಪೂಜೆ, ಪುನಸ್ಕಾರ ವಿಧಿ ಇಂಥವುಗಳನ್ನು ಮಾಡೋರು ಹಿಂದುಗಳಾದರೆ ಇದಾವುದನ್ನೂ ನಾನು ಮಾಡೋದಿಲ್ಲ. ನೀವು ಹೇಳುವ ಹಿಂದುವಿನ ಯಾವ ಲಕ್ಷಣಗಳೂ ನನ್ನಲ್ಲಿಲ್ಲ. ಹಾಗಾದ್ರೆ ನಾನೆಂಥ ಹಿಂದು! ಎಂಥಾ ದೊಡ್ಡ ಸಾಹಿತೀನೇ ಆಗಲಿ, ಅವನು ಅನುಷ್ಠಾನಕ್ಕೆ ತರೋದಕ್ಕೆ ಆಗದೇ ಇದ್ರೂ ಚಿಂತೆ ಇಲ್ಲ- ವಿಶ್ವಮಾನವತ್ವವನ್ನು ಭಾರತದ ಮಟ್ಟದಲ್ಲಾದ್ರೂ ಒಪ್ಪಿಕೊಳ್ಳದೇ ಹೋದರೆ, ಅಂಥವನನ್ನು ಮೂರನೇ ದರ್ಜೆ ಅಥವಾ ನಾಲ್ಕನೇ ದರ್ಜೆಯವನೆಂತಲೇ ತಿಳಕೊಳ್ಳಬೇಕು.''[೧]

ಕುವೆಂಪು ಸ್ವಾತಂತ್ರ್ಯ ಬಯಸಿದ್ದು ಬ್ರಿಟಿಶರ ಆಳ್ವಿಕೆಯಿಂದ ಎನ್ನುವುದಕ್ಕಿಂತ ಹೆಚ್ಚಾಗಿ ಬ್ರಿಟಿಶರ ಆಳ್ವಿಕೆಗೆ ಕಾರಣವಾದ ಮತಮೌಢ್ಯ, ಜಾತಿ ಪದ್ಧತಿ, ರಾಜಶಾಹಿ ಹಾಗೂ ಸಂಬಂಧಿತ ಮೂಢ ಆಚರಣೆಗಳಿಂದ. ಕುವೆಂಪು ತಮ್ಮ ಸ್ವಾತಂತ್ರ್ಯ ಗೀತೆಗಳಲ್ಲಿ ಎಲ್ಲಿಯೂ ಬ್ರಿಟಿಶರನ್ನು ನಾಮಪದೀಯವಾಗಿ ದೂಷಿಸಲು ಹೋಗಿಲ್ಲ ಎಂಬುದು ಗಮನಾರ್ಹ. ಬ್ರಿಟಿಶರು ಬಾರದಿದ್ದರೆ ಭಾರತದ ಇಡೀ ಶೂದ್ರ ಜನಸ್ತೋಮ ಮನುಸ್ಮೃತಿಯ ಗುಲಾಮಗಿರಿಯಲ್ಲೇ ತೊಳಲಾಡಬೇಕಾಗಿರುತ್ತಿತ್ತು ಎನ್ನುವ ಕುವೆಂಪು ''ಇಂಡಿಯಾ ದೇಶವನ್ನು ಗೆದ್ದು ಅದರ ರಾಜಕೀಯ ಅವ್ಯವಸ್ಥೆಗೆ ಒಂದು ಸುವ್ಯವಸ್ಥೆಯನ್ನು ತಂದುಕೊಟ್ಟು ಬ್ರಾಹ್ಮಣಾದಿ ಉಚ್ಚ ವರ್ಣದವರಿಂದ ಸಾವಿರಾರು ವರ್ಷಗಳಿಂದ ತುಳಿಯಲ್ಪಟ್ಟು ದ್ವೇಷಿಸಲ್ಪಟ್ಟು ದಾಸ್ಯತ್ವವನ್ನೇ ದೈವತ್ವವೆಂದೂ ವಿಧಿಯೆಂದೂ ಒಪ್ಪಿಕೊಂಡು ಕಾಲಡಿಯ ಕಸವಾಗಿ ಬಿದ್ದಿದ್ದ ಶೂದ್ರಾದಿ ವರ್ಗದವರನ್ನು ತಲೆಯೆತ್ತುವಂತೆ ಪ್ರೇರಿಸಿದ್ದು ಇಂಗ್ಲೀಷೇ'' ಎಂದು ವಿಶ್ಲೇಷಿಸುತ್ತಾರೆ[೨]. ತಮ್ಮ ಚಿಂತನೆಯ ಬೆನ್ನೆಲುಬಾಗಿ ಅಳವಡಿಸಿಕೊಂಡಿದ್ದ ಇಂತಹ ದಿಟ್ಟ ನಿಸ್ಸಂಕೋಚ ಐತಿಹಾಸಿಕ ದೃಷ್ಟಿಕೋನದಿಂದಾಗಿಯೇ ಕುವೆಂಪು ಕರ್ನಾಟಕದಲ್ಲಿ ಎಲ್ಲ ಪ್ರಗತಿಪರ ಚಳುವಳಿಗಳ ಹಿಂದಿನ ಪ್ರೇರಕ ಶಕ್ತಿಯಾಗಿದ್ದರು - ಅದು ಕನ್ನಡ ಚಳುವಳಿಯೇ ಆಗಿರಲಿ, ಬಂಡಾಯ ಸಾಹಿತ್ಯ ಚಳುವಳಿಯೇ ಆಗಿರಲಿ- ಅವುಗಳ ಹಿಂದೆ ಕುವೆಂಪು ಅವರ ಒಂದೊಂದು ಕೃತಿಯನ್ನು ಸ್ಥೂಲವಾಗಿಯಾದರೂ ಗುರುತಿಸುವಷ್ಟರ ಮಟ್ಟಿಗೆ. ಕನ್ನಡ ಚಳುವಳಿಯ ಹಿಂದೆ 'ಬಾರಿಸು ಕನ್ನಡ ಡಿಂಡಿಮವ ...' ಇದ್ದರೆ, ರೈತ ಚಳುವಳಿಯ ಹಿಂದೆ 'ಧನ್ವಂತರಿಯ ಚಿಕಿತ್ಸೆ' ಎಂಬ ಕಥೆ; ದಲಿತ ಚಳುವಳಿಯ ಹಿಂದೆ 'ಕರಿಸಿದ್ಧ' ಪದ್ಯವಿದೆ. ಬಂಡಾಯಸಾಹಿತ್ಯ ಚಳುವಳಿಯ ಹಿಂದೆ

೧ ಮತ್ತು ೨: 'ಕುವೆಂಪು' ಸಂ: ಸುಜನಾ ಪ್ರ: ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ

'ಕಲ್ಕಿ' ಪದ್ಯವಿದೆ. ಹೀಗೆ ಕುವೆಂಪು ಕರ್ನಾಟಕ ಸ್ವಾತಂತ್ರ್ಯೋತ್ತರ ಸನ್ನಿವೇಶದಲ್ಲಿ ಎಲ್ಲ ಜಡತೆಯ ವಿರುದ್ಧ ವೈಚಾರಿಕವಾಗಿ ಬಂಡೆದ್ದ ಒಂದು ಆಧ್ಯಾತ್ಮಿಕ ಶಕ್ತಿ ರೂಪದಲ್ಲಿ ಕಾಣಸಿಗುತ್ತಾರೆ. ಏಕೆಂದರೆ ಜಡತೆಯ ವಿರುದ್ಧದ ಅವರೆಲ್ಲ ಬಂಡೂ ಆತ್ಯಂತಿಕವಾಗಿ, ಅದರ ಪೂರ್ಣಾವತಾರದಲ್ಲಿ ಕರ್ನಾಟಕ ಚೇತನದ ಉನ್ನತೀಕರಣವನ್ನೇ ಉದ್ದೇಶವಾಗಿಟ್ಟುಕೊಂಡಿರುತ್ತಿತ್ತು.

ಇಷ್ಟೆಲ್ಲವನ್ನೂ ನಾವು ಕುವೆಂಪು ಅವರ ಕೊನೆಯ ಸಾರ್ವತ್ರಿಕ ಭಾಷಣದ ಸುಮಾರು೨೩ ವರ್ಷಗಳ ನಂತರದ ಅಂತರದಲ್ಲಿ ನಿಂತು ನೋಡುತ್ತಿದ್ದೇವೆ. ಈ ಎರಡು ದಶಕಗಳಲ್ಲಿ ಕಾವೇರಿ ಗಂಗೆಗಳಲ್ಲಿ ಬಹಳ ನೀರು ಹರಿದು ಹೋಗಿದೆ. ಕುವೆಂಪು ಅವರು ಎಲ್ಲ ಒಳ್ಳೆಯದಕ್ಕೂ ಉದಾಹರಿಸುತ್ತಿದ್ದ ಸೋವಿಯೆತ್ ಯೂನಿಯನ್ ಕುಸಿದು ಬಿದ್ದಿದೆ. ಅವರ ಆಧ್ಯಾತ್ಮಿಕ ಪ್ರೇರಣಾ ಶಕ್ತಿಗಳಾಗಿದ್ದ ಪರಮಹಂಸ, ವಿವೇಕಾನಂದರು ರಾಮಕೃಷ್ಣ ಮಠಗಳಲ್ಲಿ ಮಡಿಯುಟ್ಟು ಕುಳಿತಿದ್ದಾರೆ. ಅವರ ಸರ್ವೋದಯ ತತ್ವದ ಗುರುವಾಗಿದ್ದ ವಿನೋಬಾ ಕುವೆಂಪು ಕಾಲದ ಹೊತ್ತಿಗೇ ಅಪ್ರಸ್ತುತವಾಗಿ ಹೋಗಿದ್ದರು. ಇನ್ನು ಕುವೆಂಪು ಚಿಂತನೆಯ ಹೃದಯ ಭಾಗದಂತಿದ್ದ ಜಾತಿ ವಿನಾಶ ತತ್ವ ಇಂದು 'ಸಾಮಾಜಿಕ ನ್ಯಾಯ'ವೆಂಬ ರಾಜಕೀಯ ಅಸ್ತ್ರದ ಹಿನ್ನೆಲೆಯಲ್ಲಿ ವಿಕೃತಾರ್ಥಕ್ಕೆ ಈಡಾಗಿದೆ. ಮತಭ್ರಾಂತಿಯಂತೂ 'ಸಾಂಸ್ಕೃತಿಕ ರಾಷ್ಟ್ರೀಯತೆ' ಎಂಬ ಹೆಸರಿನಲ್ಲಿ ಘನತೆಯನ್ನು ಪಡೆದುಕೊಳ್ಳುತ್ತಿದೆ. ಅಖಂಡ ಕರ್ನಾಟಕದ ಕಲ್ಪನೆ ಜಾಗತೀಕರಣದ ಹೆಬ್ಬಲೆಗೆ ಸಿಕ್ಕಿ ಕೊಚ್ಚಿ ಹೋಗುತ್ತಿದೆ. ಎಲ್ಲ ಸಿದ್ಧಾಂತಗಳೂ ಚಳುವಳಿಗಳೂ ಸುಸ್ತಾಗಿ ಕೂತಿವೆ. ಇಂತಹ ಒಂದು ದಿಕ್ಕೆಟ್ಟ ಸನ್ನಿವೇಶದಲ್ಲಿ ಕುವೆಂಪು ಅವರನ್ನು ನೆನಪು ಮಾಡಿಕೊಳ್ಳುತ್ತಿರುವುದೇ ಒಂದು ಸಾಂಸ್ಕೃತಿಕ ಸೋಜಿಗವೆನಿಸಿಕೊಳ್ಳಬಹುದು. ಎಷ್ಟಾದರೂ ಕುವೆಂಪು ಅವರೇ ಅವರ ಕಾಲದಲ್ಲಿ ಒಂದು ಸಾಂಸ್ಕೃತಿಕ ಸೋಜಿಗದಂತಿದ್ದರಲ್ಲವೇ?

ಭಗವದ್ ವಿಭೂತಿಯ ಆವಿರ್ಭಾವ ರೀತಿಗಳಲ್ಲಿ ಎಲ್ಲ ದೇಶಗಳಲ್ಲಿಯೂ, ಸರ್ವಸಾಧಾರಣವಾಗಿ, ಎಲ್ಲರ ಆದರಕ್ಕೂ ವಿಶೇಷವಾಗಿ ಪಾತ್ರವಾಗಿರುವ ಒಂದು ರಸಪೂರ್ಣವಾದ ರೀತಿ ಎಂದರೆ ಕವಿ. ಕವಿಯಲ್ಲಿ ಮೈದೋರುವ ವಿಭೂತಿ ಸರ್ವೋಚ್ಚವಾದುದು ಎಂದಲ್ಲ. ಏಕೆಂದರೆ, ಸಚ್ಚಿದಾನಂದಾಭಿಮುಖವಾದ ಆತ್ಮದ ವಿಕಾಸ ಪಥದಲ್ಲಿ ಕವಿಯ ಪೂಜೆಗೂ ಪಾತ್ರವಾಗುವಂತೆ ಮುಂಬರಿದಿರುವ ಅನೇಕ ವಿಭೂತಿಗಳಿರುತ್ತವೆ : ಯೋಗೀಶ್ವರ, ಸಿದ್ಧಗುರು, ಮಹರ್ಷಿ, ಮಹಾತ್ಮಾ ಇತ್ಯಾದಿ. ಅಥವಾ ಕವಿಯೆ ಯೋಗಿಯೂ ಸಿದ್ಧನೂ ಋಷಿಯೂ ಆಗಿರಲಾರನು ಎಂದೂ ಅಲ್ಲ. ಕವಿಯಲ್ಲಿರುವ ಕಲಾವಿಭೂತಿಯನ್ನು ಮಾತ್ರ ಲಕ್ಷ್ಯದಲ್ಲಿಟ್ಟುಕೊಂಡು ನಾವು ಮಾತನಾಡುತ್ತಿದ್ದೇವೆ. ಆ ಅರ್ಥದಲ್ಲಿ ಆ ಕಾರಣಕ್ಕಾಗಿ 'ಕವಿ'ಯಲ್ಲಿ ಮೈದೋರುವ ವಿಭೂತಿಗೆ ಲೋಕವಿಶ್ವಾಸ, ಲೋಕಾದರ, ಲೋಕಪೂಜೆಗಳು ಆ ದೇಶ ಈ ದೇಶ ಎನ್ನದೆ, ಆ ಕಾಲ ಈ ಕಾಲ ಎನ್ನದೆ, ಆ ಮತ ಈ ಮತ ಎನ್ನದೆ, ಅವರಿವರೆನ್ನದೆ, ಎಲ್ಲ ದೇಶಗಳಲ್ಲಿಯೂ, ಎಲ್ಲ ಕಾಲಗಳಲ್ಲಿಯೂ, ಎಲ್ಲರಿಂದಲೂ ಏಕಪ್ರಕಾರವಾಗಿ ಸಲ್ಲುತ್ತಾ ಬಂದಿದೆ.

-ಕುವೆಂಪು

("ಕವಿಯಲ್ಲಿ ವಿಭೂತಿ" ಲೇಖನದಿಂದ)

ಸೃಷ್ಟಿಶೀಲತೆಯ ಆರಾಧಕ ಕವಿ : ಜಿ.ಎಸ್.ಎಸ್.

೦ ಎಚ್.ಎಸ್. ವೆಂಕಟೇಶ ಮೂರ್ತಿ

ಈ ಬಾರಿಯ ಪಂಪ ಪ್ರಶಸ್ತಿ ಡಾ.ಜಿ..ಎಸ್.ಶಿವರುದ್ರಪ್ಪ ಅವರಿಗೆ ಸಂದು ಕನ್ನಡದ ಸಾಹಿತ್ಯಾಭಿಮಾನಿಗಳೆಲ್ಲಾ ಸಮಾಧಾನದಿಂದ ನಿಟ್ಟುಸಿರು ಬಿಡುತ್ತಿದ್ದಾರೆ.ಈ ಸಮಾಧಾನದ ನಿಟ್ಟುಸಿರಿಗೆ ಕಾರಣವಿದೆ.ಈಚಿನ ದಿನಗಳಲ್ಲಿ ಪ್ರಶಸ್ತಿ ಪುರಸ್ಕಾರಗಳು ಹೇಗೆ ದಿಕ್ಕು ತಪ್ಪಿ ಅಪಾತ್ರ ಯೋಗ ಪಡೆಯುತ್ತಿವೆ ಎಂಬುದು ಎಲ್ಲರಿಗೂ ಗೊತ್ತು.ಈ ಹಿನ್ನಲೆಯಲ್ಲಿ ಈ ಸಮಾಧಾನ -ಸಂತೃಪ್ತಿಯ ನಿಟ್ಟುಸಿರು.

ಡಾ.ಜಿ.ಎಸ್.ಎಸ್.ಕಳೆದ ನಾಲಕ್ಕು ದಶಕಗಳಿಂದ ನಿರಂತರವಾಗಿ ಕಾವ್ಯ ರಚನೆ ಮಾಡುತ್ತಾ ಬಂದಿರುವ ಕವಿ.ಹಾಡುವುದು ನನ್ನ ಅನಿವಾರ್ಯ ಕರ್ಮ ಎಂದವರು.ಕನ್ನಡ ಜನತೆ ಅವರ ಹಾಡನ್ನು ಪ್ರೀತಿಯಿಂದ ಕೇಳುತ್ತಾ ಬಂದಿದೆ.ಅವರ ಕವಿತಾ ಸಂಗ್ರಹಗಳು ಮತ್ತೆ ಮತ್ತೆ ಪುನರ್ಮುದ್ರಣಗೊಳ್ಳುತ್ತಾ ಬಂದಿರುವುದು ಇದನ್ನು ವಾಸ್ತವಿಕ ನೆಲೆಯಲ್ಲಿ ಸೂಚಿಸುವ ಅಂಶ.ಬೇಂದ್ರೆ,ಕುವೆಂಪು,ನರಸಿಂಹಸ್ವಾಮಿ ಅವರ ಕವಿತಾ ಸಂಗ್ರಹಗಳು ನಮ್ಮಲ್ಲಿ ಈಗಲೂ ಪುನರ್ಮುದ್ರಣಗೊಳ್ಳುತ್ತಲೇ ಇವೆ.ಜಿ.ಎಸ್.ಎಸ್ ಇವರಂತೆಯೇ ಜನತೆಯ ಪ್ರೀತಿಯ ಕವಿ. ಜಿ.ಎಸ್.ಎಸ್.ಕಾವ್ಯದ ಸುಭಗತೆ,ಸಂವೇದನಾಶೀಲತೆ, ಅಂದಂದಿನ ಅನುಭವಕ್ಕೆ ಪ್ರಾಮಾಣಿಕ ಅಭಿವ್ಯಕ್ತಿ ಕೊಡುವ ತುಡಿತ -ಇವು ಅವರ ಜನಪ್ರೀತಿಯ ಒಳಗುಟ್ಟುಗಳು.ವ್ಯಷ್ಟಿ ಮತ್ತು ಸಮಷ್ಟಿಯ ಅನ್ಯೋನ್ಯತೆಯನ್ನು ಸದಾ ಹಾರೈಸುವ ಜಿ.ಎಸ್.ಎಸ್.ಕಾವ್ಯ ಜನತೆಗೆ ಪ್ರಿಯವಾದ ಕಾವ್ಯವಾದುದರಲ್ಲಿ ಆಶ್ಚರ್ಯವಿಲ್ಲ.ವಾಸ್ತವದ ಕಠೋರದ ಮಧ್ಯೆಯೂ ಒಂದು ಆಸೆಯ ಹಂಬಲ ಜನತೆಗೆ ಬೇಕಾಗಿತ್ತು.ಅದನ್ನು ಜಿ.ಎಸ್.ಎಸ್.ಕಾವ್ಯ ಅವರಿಗೆ ಒದಗಿಸಿತು.

ಡಾ.ಜಿ..ಎಸ್.ಶಿವರುದ್ರಪ್ಪನವರು ಕಾವ್ಯ ರಚನೆಯನ್ನು ಪ್ರಾರಂಭಿಸಿದ ಸಂದರ್ಭ ಒಂದು ಸಂಧಿಕಾಲದ ಸಂದರ್ಭ.೧೯೫೧ ರಲ್ಲಿ ಅವರ ಮೊದಲ ಕವಿತಾ ಸಂಗ್ರಹ **ಸಾಮಗಾನ** ಪ್ರಕಟವಾಯಿತು. ದೇಶಹಿತದಲ್ಲಿ ಹುರಿಗಟ್ಟಿಕೊಂಡು ಮಿಂಚಿನ ಚಾವಟಿ ಆಡಿಸಿದ್ದ ಸಮಾಜ,ಎಳೆಬಿಡಿಸಿಕೊಂಡು ಸ್ವಹಿತದ ಕಡೆ ಹೊರಳಿಕೊಳ್ಳುತ್ತಿದ್ದ ಸಂಧಿ ಸಮಯ ಅದು.ಆದ್ದರಿಂದ ಇಂಡಿಯಾದ ಸೂಕ್ಷ್ಮ ಮನಸ್ಸು ಉತ್ಸಾಹದ ಭೂಮಿಕೆಯಿಂದ ವಿಷಾದದ ಭೂಮಿಕೆಗೆ ಅನಿವಾರ್ಯವಾಗಿ ಜರುಗತೊಡಗಿತು.ಸಾಹಿತ್ಯದಲ್ಲಿ ಈ ಸಂವೇದನೆಯ,ವೇದನೆಯ ಗುರುತುಗಳು ಸ್ಪಷ್ಟವಾಗಿ ಕಾಣಿಸತ್ತೊಡಗಿದ್ದವು.ನವೋದಯದ ಉತ್ಸಾಹ ಪರ್ವ,ಉದ್ಯೋಗ ಪರ್ವ ಮುಗಿತಾಯ ಪಡೆದು,ನವ್ಯದ ವಿಷಾದ ಪರ್ವ,ಅಶಾಂತಿ ಪರ್ವ ಪ್ರಾರಂಭವಾದ ಸಂಧಿ ಸಮಯ ಅದು.ಅದೇ ಹೊತ್ತಿನಲ್ಲೆ ಭೌತಿಕವಾಗಿ ಹಡಗು ಹತ್ತಿದ ವಸಾಹತುಶಾಹಿ,ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷೀಲಿ ಎನ್ನುತ್ತಾ ನಿರ್ದಾಹಿಯಾಗಿ,ದೆಯ್ಯವಾಗಿ ಇಂಡಿಯಾವನ್ನುಅಖಂಡವಾಗಿ

ಹಿಡಿದು, ವೇಷಾಂತರಿಯಾಗಿ ಕಾಡತೊಡಗಿದ ಸಂಧಿಸಮಯ. ವಾಸ್ತವಿಕವಾದ ಒಂದೇ ಉದಾಹರಣೆಯಿಂದ ಇದನ್ನು ಸೂಚಿಸಿ ಮುಂದುವರೆಯುತ್ತೇನೆ. ಸ್ವಾತಂತ್ರ್ಯ ಪೂರ್ವದಲ್ಲಿ ರಾಷ್ಟ್ರೀಯ ಶಾಲೆಯನ್ನು ಆರಂಭಿಸುವ ವಿದ್ಯಮಾನ ಒಂದು ಚಳುವಳಿಯಂತೆ ಭಾರತದ ಮೂಲೆ ಮೂಲೆಯಲ್ಲಿ ನಡೆಯಿತು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಈ ರಾಷ್ಟ್ರೀಯ ಶಾಲೆಗಳು ('National' ಎಂಬ, 'ದೇಶೀಯ' ಎಂಬ ಹೆಸರು ಹೊತ್ತ ಎಷ್ಟೊಂದು ಶಾಲೆಗಳು ಆ ಕಾಲದಲ್ಲಿ ಕರ್ನಾಟಕದಲ್ಲಿ ಪ್ರಾರಂಭವಾದುವು ಎಂಬುದನ್ನು ಗಮನಿಸಿ!) ಅರಾಷ್ಟ್ರೀಯ ಶಾಲೆಗಳಾಗಿ ಪರಿವರ್ತಿತವಾಗುವುದೇ ಮುಖ್ಯ ವಿದ್ಯಮಾನ. ಹಳ್ಳಿ ಹಳ್ಳಿಗಳಲ್ಲಿ ಈಗ ಕಾನ್ವೆಂಟ್ ಚಳುವಳಿ! ಜಿ.ಎಸ್.ಎಸ್. ಕಾವ್ಯರಚನೆಗೆ ತೊಡಗಿದ್ದು ಇಂಥ ಸಂದರ್ಭದಲ್ಲಿ. ಆದ್ದರಿಂದಲೇ ವಿಷಾದ ಮತ್ತು ವಿಡಂಬನೆ, ಅಡಿಗರಂತೇ, ಅವರ ಕಾವ್ಯದಲ್ಲೂ ಪ್ರಧಾನ ಮನೋಭೂಮಿಕೆ ಆಗಿದೆ. ಮುಖ್ಯ ವ್ಯತ್ಯಾಸವೆಂದರೆ, ಇಂಥ ವಿಷಮ ಕಾಲದಲ್ಲೂ ಜಿ.ಎಸ್.ಎಸ್. ನವೋದಯದ ಹಿರೀಕರಿಂದ ಪಡೆದಿದ್ದ ಆದರ್ಶ ಮತ್ತು ಕನಸುಗಾರಿಕೆಯ ದೊಂದಿ ಹಿಡಿದುಕೊಂಡೇ ತಮ್ಮ ಕತ್ತಲ ಯಾನವನ್ನು ಮುಂದುವರೆಸಿದ್ದು. ಆದರೆ ಸ್ವಾತಂತ್ರ್ಯೋತ್ತರದ ಎಲ್ಲ ಕವಿಗಳಂತೇ ಜಿ.ಎಸ್.ಎಸ್. ಅವರದ್ದೂ ವ್ಯಷ್ಟಿಯ ಧ್ವನಿ. ನವೋದಯದವರಂತೆ ಸಮಷ್ಟಿಯ ಧ್ವನಿಯಾಗುವ ಭಾಗ್ಯವನ್ನು ಕಳೆದುಕೊಂಡವರು ನಾವು. ಇದು ಪ್ರವಾಹದ ವಿರುದ್ಧ ಈಜುವ ವ್ಯಕ್ತಿ ಸಾಹಸದ ಕಥೆ. ಕೊಚ್ಚೆ ಮತ್ತು ಹಚ್ಚ ಹಸಿರು - ಎರಡರ ಅರಿವೂ ಇರುವ, ತೀವ್ರವಾದ ವಾಸ್ತವಿಕ ಅರಿವು ಮತ್ತು ಕನಸುಗಾಣುವ ಹುಚ್ಚು ಎರಡೂ ಏಕತ್ರ ಮುಖಾಮುಖಿಯಾಗುವ ವಿಶಿಷ್ಟ ಮನಃಸ್ಥಿತಿಯಲ್ಲಿ ಕಾವ್ಯ ರಚಿಸುತ್ತಾ, ಜಿ.ಎಸ್.ಎಸ್. ನವೋದಯದವರಿಂದ ಮಾತ್ರವಲ್ಲ, ನವ್ಯರಿಂದಲೂ ತಮ್ಮನ್ನು ಪ್ರತ್ಯೇಕಿಸಿಕೊಂಡರು. ಇದೇ ಅವರ ಕಾವ್ಯದ ಸ್ವರೂಪ ಮತ್ತು ಚಾರಿತ್ರ್ಯವನ್ನು ರೂಪಿಸಿತು ಎನ್ನಬಹುದು.

ಜಿ.ಎಸ್.ಎಸ್. ಅವರದ್ದು ಪ್ರಧಾನವಾಗಿ ಇಹನಿಷ್ಠ ಮನೋಧರ್ಮ. ನೆಲವೆ ನನ್ನ ವಾಹನ ಎನ್ನುವ ಕಾವ್ಯ ಅವರದ್ದು. ಆಕಾಶಯಾನಕ್ಕೆ ಅದು ವಿಮುಖವಾಗಿದೆ :

ಉಪಗ್ರಹಗಳನೊಂದೆ ಸಮನೆ
ಆಕಾಶಕೆ ಏರಿಸುತಿದೆ
ರಾಕೆಟ್ಟಿನ ಸಾಧನ.
ಜನಮನಗಳ ಹಾದಿಯಲ್ಲಿ
ನಡೆದು ಮೆಲ್ಲನೆ ನುಡಿವನಿವನು
ನೆಲವೆ ನನ್ನ ವಾಹನ ! **(ಸ್ಪೂಟ್ನಿಕ್-ವಿನೋಬಾ)**

ದೊಡ್ಡ ದೊಡ್ಡ ಮಾತನಾಡುತ್ತಾ, ದಿನ ದಿನದ ಸರಳ ಸಾಧಾರಣದ ಬದುಕಿಗೆ ಅವಮಾನ ಮಾಡುವವರನ್ನು ಕಂಡರೆ ಅವರಿಗಾಗುವುದಿಲ್ಲ. ಈ ನೆಲೆಯಲ್ಲಿ ಅವರು ನಿಜಕ್ಕೂ ಸಾಧಾರಣತೆಯ ಆರಾಧಕ. ಪ್ರಜಾಪ್ರಭುತ್ವಕ್ಕೆ ಕಡೆದು ಮಾಡಿಸಿದ ಮನಃಸ್ಥಿತಿ ಇದು. ವ್ಯಕ್ತಿ ಏಕಾಂಗಿಯಾದಾಗ ಸಿನಿಕನಾಗಬೇಕು, ಅಥವ ವಿನಯಶಾಲಿಯಾಗಬೇಕು. ಜಿ.ಎಸ್.ಎಸ್. ಕಾವ್ಯ ವ್ಯಕ್ತಿತ್ವ ಹೀಗೆ ವಿನಯದಲ್ಲಿ ತನ್ನನ್ನು ರೂಪಿಸಿಕೊಂಡ ವ್ಯಕ್ತಿತ್ವ.

ಹೇಗೋ ನನ್ನ ಪಾಡಿಗೆ ನಾನು ಬದುಕುತ್ತೇನೆ
ಇದ್ದಷ್ಟು ನೆಲವ ಉತ್ತು ಬಿತ್ತಿ ನೀರೆರೆದು
ಮಲಗಿರುವ ಬೀಜಗಳ ಕಣ್ಣು ತೆರೆಸುತ್ತೇನೆ
ನಾಳೆ ಈ ಸಸಿಗಳೆಲ್ಲ ವಟ ವೃಕ್ಷವಾಗಿ

ಸಾವಿರ ಜನಕ್ಕೆ ನೆರಳಾದಾವೆಂಬ ಮಹದಾಸೆ ಇರದಿದ್ದರೂ
ಒಂದೆರಡಾದರೂ ಬೀಜವಾಗುವಂಥ ಹಣ್ಣು
ಬಿಟ್ಟಾವೆಂದು ನಂಬಿ ಕಾಯುತ್ತೇನೆ.

ಹೀಗೆ ಉತ್ತು ಬಿತ್ತು ಹೊಸ ಬೀಜಗಳ ಕಣ್ತೆರೆಸುವ ಕಾರ್ಯವನ್ನು ಜಿ.ಎಸ್.ಎಸ್ ತಮ್ಮ ಕಾವ್ಯದಲ್ಲಿ ಮಾಡಿಕೊಂಡು ಬಂದಿರುವಂತೆ ತಮ್ಮ ಜೀವನದಲ್ಲೂ ಮಾಡಿಕೊಂಡು ಬಂದಿದ್ದಾರೆ.ನಾಶದ ಪ್ರಜ್ಞೆ ಅವರನ್ನು ತೀವ್ರವಾಗಿ ಕಾಡಿದೆ ನಿಜ.'ನಾಶ' ಅನಿವಾರ್ಯ ಎಂಬ ದಾರುಣ ಅರಿವಿನಲ್ಲಿ 'ಸೃಷ್ಟಿ' ಶೀಲವಾಗಿರುವ ಮನಸ್ಸು ಅವರದ್ದು. ರುದ್ರಭೂಮಿಯ ನಿಶ್ಶಬ್ದಗಳಲ್ಲಿ ಎಂಬ ಅವರ ಪದ್ಯದ ಕೆಲವು ಸಾಲುಗಳು ಈಗ ನೆನಪಾಗುತ್ತಿವೆ.

ಉಸಿರಾಡುತ್ತಾ ಇದನ್ನೆಲ್ಲ ನೋಡುತ್ತ
ನನಗು ಅವರಿಗು ನಡುವೆ
ವ್ಯತ್ಯಾಸವೇನೆಂದು ಚಿಂತಿಸುತ್ತ
ಒಳಗು ಹೊರಗಿನ ಗೆರೆಯ

ಗುರುತಿಸುತ್ತ -ಅವರ ಕಾವ್ಯ ವಿಷಾದ ಮುಖಿ ಆಗಿದೆ. ಈ ನಾಶವನ್ನು ಎದುರಿಸುವ ಏಕೈಕ ಉಪಾಯ ಸೃಷ್ಟಿಕ್ರಿಯೆ ಎಂದು ಅವರು ನಂಬಿದ್ದಾರೆ. ಆದಕಾರಣವೇ 'ಹುಟ್ಟುಹಬ್ಬ' ಅವರಲ್ಲಿ ಒಂದು ಆರಾಧನೆಯ ಸ್ವರೂಪ ಪಡೆಯುತ್ತದೆ.

ಬೀಜದಿಂದ ಬೀಜಕ್ಕೆ
ಈ ನಡುವೆ ಎಷ್ಟೊಂದು ಮರ ಎಷ್ಟು ಎಲೆ
ಎಷ್ಟು ಹೂ ಎಷ್ಟು ಹಣ್ಣು
ಎಲ್ಲಾ ಮಣ್ಣು!
ಈ ಒಂದು ಬೀಜ ಕಡೆಗೂ ಮತ್ತೆ
ಒಂದು ಬೀಜವಾಗುವುದಕ್ಕೆ *(ಬೀಜದಿಂದ ಬೀಜಕ್ಕೆ)*

ಈ ದೃಷ್ಟಿಯಿಂದ ಜಿ.ಎಸ್.ಎಸ್ ಅವರ ' ಅಸ್ತಮಾನ' ಎಂಬುದು ತುಂಬ ಅರ್ಥಪೂರ್ಣವಾದ ಪದ್ಯ.ಅಸಾಮಾನ್ಯ ಪುರುಷನಾದ ಕೃಷ್ಣನ ಸಾವನ್ನು ಆ ಕವಿತೆ ಚಿಂತಿಸುತ್ತಿದೆ.ಆ ಯುಗಪುರುಷನ ಸಾವಿನ ದಾರುಣ ಪರಿಣಾಮ ಭೂಮಿ ವ್ಯೋಮಗಳನ್ನು ವ್ಯಾಪಿಸುವಂಥದ್ದು. ಅಂಥ ವಿಷಾದದ ಭೂಮಿಕೆಯಲ್ಲಿ ಒಂದು ಆಸೆಯ ಬೀಜವನ್ನು ಬಿತ್ತುವುದನ್ನು ಅವರ ಕವಿತೆ ಮರೆಯುವುದಿಲ್ಲ :

ಹೊಲದಲ್ಲಿ ಗೇಯುತ್ತಿದ್ದ ಆ ರೈತ ಕಂಡ
ನೊಂದದ್ಭುತವ, ಇದ್ದಕ್ಕಿದ್ದಂತೆ ಸಂಜೆಯ ಸೂರ್ಯ
ಜಗ್ಗನೆ ಜಾರಿ ಕಡಲೊಳಗೆ, ಪಾಂಚಜನ್ಯದ
ಮೊಳಗು ಒಂದೇ ಒಂದು ಕ್ಷಣ, ಪರಮಾಶ್ಚರ್ಯ.

ಪ್ರಭೆಯಾಗಿ ವ್ಯಾಪಿಸಿತು ಭೂಮಿ ವ್ಯೋಮಗಳನ್ನು
ಬೆರಗಾಗಿ ನೇಗಿಲ ಹೊತ್ತು ನಡೆದನು ರೈತ
ಇಡೀದಿನ ಹರಗಿ ಹದಮಾಡಿದ್ದ ಹೊಲದೊ
ಳಗೆ ಬೀಜ ಬಿತ್ತುವ ಬಗ್ಗೆ ಯೋಚಿಸುತ್ತ.

ಜಿ.ಎಸ್.ಎಸ್ ಅವರು ಜೀವನವನ್ನು ಮಾತ್ರವಲ್ಲ, ಪ್ರಕೃತಿಯನ್ನು ಈ ಸೃಷ್ಟಿಶೀಲತೆಯ ಆಡಂಬೊಲವಾಗಿಯೇ ಪ್ರೀತಿಸುತ್ತಾರೆ.ಕುವೆಂಪು,ಬೇಂದ್ರೆ, ಪುತಿನ ಮೊದಲಾದ ಹಿರೀಕರಿಂದ ಪ್ರಕೃತಿಯನ್ನು ನೋಡುವ ಕ್ರಮದಲ್ಲಿ ಭಿನ್ನರಾಗುತ್ತಾರೆ.ಪ್ರಕೃತಿ ಜಿ .ಎಸ್.ಎಸ್ ಅವರಲ್ಲಿ ಆಧ್ಯಾತ್ಮಿಕ ತುಡಿತವನ್ನೋ, ಭಕ್ತಿಭಾವವನ್ನೋ,ಚಿಂತನಶೀಲತೆಯನ್ನೋ ಕೆರಳಿಸುವುದಿಲ್ಲ.ಪ್ರಕೃತಿ,ಸೌಂದರ್ಯ ಮತ್ತು ಸೃಷ್ಟಿ ಶೀಲತೆಯಿಂದ ಅವರಿಗೆ ಪ್ರಿಯವಾಗುತ್ತದೆ .

ಬೇಸರವೇ ಇಲ್ಲ ಈ ನಿಸರ್ಗಕ್ಕೆ
ಸದಾ ಹೊಚ್ಚ ಹೊಸದಾಗಿ ಹೊಮ್ಮುವುದಕ್ಕೆ
ಬೇಸರವೇ ಇಲ್ಲ ಈ ಮನಸ್ಸಿಗೆ
ಇವುಗಳ ಜೊತೆ ಬೆರೆಯುವುದಕ್ಕೆ
ಕೊನೆಯೇ ಇಲ್ಲ ಈ ಮೂರ್ತ ಅಮೂರ್ತಗಳ
ಸಂಗಮದಿಂದ ಸ್ಫುರಿಸುವಾನಂದಕ್ಕೆ (ನಿದರ್ಶನಕ್ಕೆ)

'ಬಿತ್ತು' ಮತ್ತು 'ಬಿತ್ತುವಿಕೆ' ಜಿ .ಎಸ್.ಎಸ್ ಕಾವ್ಯದ ಪ್ರಧಾನ ಕಾಳಜಿಯಾಗುತ್ತದೆ. ಮರುಭೂಮಿಯನ್ನು ಫಲವತ್ತಾಗಿಸುವ ಏಕಮೇವ ಉಪಾಯ ಅದು ಎಂದು ಅವರು ನಂಬಿದ್ದಾರೆ. 'ಪ್ರಕೃತಿ' ಮತ್ತು ಮನುಷ್ಯನ 'ಅಂತರಂಗ' ಈ ಎರಡೂ ಭೂಮಿಕೆಯಲ್ಲಿ ಈ ಬಂಜರನ್ನು ಹಸಿರುಗೊಳಿಸುವ ಯತ್ನ ನಡೆಸಬೇಕಾಗಿದೆ.ಈ ಸೃಷ್ಟಿಶೀಲತೆಗೆ ಪ್ರೀತಿಯೊಂದೇ ಮಾರ್ಗ ಎಂದು ಅವರು ನಚ್ಚಿದ್ದಾರೆ.

ಪ್ರೀತಿ ಇಲ್ಲದ ಮೇಲೆ
ಸಂಶಯದ ಗಡಿಗಳುದ್ದಕ್ಕು
ಸಿಡಿಗುಂಡುಗಳ ಕದನ ನಿಂತೀತು ಹೇಗೆ ?
ಜಾತಿ ಮತ ಭಾಷೆ ಬಣ್ಣಗಳ ಗೋಡೆಯ ನಡುವೆ
ನರಳುವ ಪಾಡು ತಪ್ಪೀತು ಹೇಗೆ ?
ನಮ್ಮ ನಿಮ್ಮ ಮನಸ್ಸು
ಮರುಭೂಮಿಯಾಗದ ಹಾಗೆ
ತಡೆಗಟ್ಟುವುದು ಹೇಗೆ ? (ಪ್ರೀತಿ ಇಲ್ಲದ ಮೇಲೆ)

ಜಿ .ಎಸ್.ಎಸ್ ಅವರ ಈ ಪ್ರೀತಿಯ ಕಲ್ಪನೆ ವಿಶ್ವ ವಿಶಾಲವಾದುದು. ಮನುಷ್ಯರ ನಡುವೆ ನಿಂತ ಗೋಡೆಗಳೆಲ್ಲ ಬಿದ್ದು ಅವರು ಒಂದಾಗುವ ದಿನವನ್ನು ಅವರ ಕಾವ್ಯ ಹಂಬಲಿಸುತ್ತಿದೆ.ಇದು ವ್ಯಷ್ಟಿ ಕಾಣುವ ಸಮಷ್ಟಿಯ ಕನಸು.ಆ ಕನಸು ಆರ್ತವಾಗಿದೆ.ದೀನವಾಗಿದೆ.ಆದರೂ ಉರಿಯದ ಹಟವನ್ನು ಬಿಟ್ಟುಕೊಟ್ಟಿಲ್ಲ. ಆಧುನಿಕ ಸಮಾಜದ ಅಬ್ಬರದ ನಡುವೆಯೂ ಜಿ .ಎಸ್.ಎಸ್ ಅವರಿಗೆ ಒಂದು ಹೃದಯ ವಿದ್ರಾವಕವಾದ ಸೂಕ್ಷ್ಮ ಧ್ವನಿ ಕೇಳುತ್ತಿದೆ. ಅದು ಕೊಳಲಿನ ಕರೆ ಅಲ್ಲ; ಕೋಗಿಲೆಯ ಕುಹುಕುಹು ಅಲ್ಲ; ಮೋಹನ ಮುರುಳಿಯೂ ಅಲ್ಲ. ಎಲ್ಲೋ ಒಂದು ಮಗು ಅಳುತ್ತಿರುವ ಹೃದಯ ಹಿಂಡುವ ನೀಳ್ದನಿ:

ಮಗು ಅಳುತಾ ಇದೆ
ಒಂದೇ ಸಮನೆ.
ಶತಶತಮಾನದ ಬೆವರಿನ ತೆನೆಗಳ
ನೆತ್ತಿದ ಹೊಲ ಗದ್ದೆಗಳಲ್ಲಿ
ಕವಿ ವಿಜ್ಞಾನಿಯ ಕ್ರಾಂತಿಕಾರಿಗಳ

ಸಾಧನೆ ಅನ್ವೇಷಣೆಗಳ ಹಾದಿಯಲಿ
ಬಿರುಗಣ್ಣುರಿಯಲಿ ಕವರುವ ಕನಸಿನ
ಚಿತೆಯ ಜ್ವಾಲೆಗಳ ಧೂಮದಲಿ
ಚರಿತ್ರೆಯುದ್ದಕು ಕೆನೆವ ಕುದುರೆಗಳ
ರಥ ಚಕ್ರದ ಕೆಂಧೂಳಿಯಲಿ
ಎಲ್ಲೋ ಮಗು ಅಳುತಾ ಇದೆ
ಒಂದೇ ಸಮನೆ. (ಎಲ್ಲೋ ಮಗು ಅಳುತಾ ಇದೆ)

ಅನಾಥವಾದ ಮಾನವತೆಯ ಈ ಆರ್ತದನಿ ಜಿಎಸ್ಎಸ್ ಅವರ ಕಾವ್ಯಗಾಯನದ ಅಖಂಡ ಶ್ರುತಿ.

ಪ್ರತಿಭೆ ಎಂದರೇನು? ಅದರ ಪರಿಕರಗಳೇನು? ಅದು ಕವಿ -ಕಲಾವಿದರಲ್ಲಿ ಯಾವ ರೀತಿಯಲ್ಲಿ ಕೆಲಸ ಮಾಡುತ್ತದೆ ? ಇತ್ಯಾದಿ ಪ್ರಶ್ನೆಗಳಿವೆ .ಅದರ ವಿಲಾಸವನ್ನು ಕವಿಗಳು ರಸಿಕರು ಉದ್ದಕ್ಕೂ ಗೌರವಿಸಿದ್ದಾರೆ. ಕಾವ್ಯ ನಿರ್ಮಾಣ ಸಾಮರ್ಥ್ಯವಾದ ಈ ಪ್ರತಿಭೆಯ ಪ್ರಕಾಶವನ್ನು ಕಂಡು 'ಏನಗ್ಗಳಮೋ ವಲಂ ಕಲ್ಪಿ ಕವೀಂದ್ರರಾ ' ಎಂದು ಉದ್ಗಾರವೆತ್ತುತ್ತಾನೆ ನೇಮಿಚಂದ್ರ ; ಕವಿಯ ಕಣ್ಣು ಒಂದು ಆವೇಶದ ಮಾಧುರ್ಯದ ಮತ್ತಿನಲ್ಲಿ ಸ್ವರ್ಗದಿಂದ ಮರ್ತ್ಯಕ್ಕೆ, ಮರ್ತ್ಯದಿಂದ ಸ್ವರ್ಗಕ್ಕೆ ಹೊಳೆದು , ಗಾಳಿಗಾಳಿಯಾದ ಸಂಗತಿಗಳಿಗೆ ಒಂದು ನಾಮ-ರೂಪವನ್ನು ದಾನಮಾಡುತ್ತದೆ ಎನ್ನುತ್ತಾನೆ ಶೇಕ್ಸ್‌ಪಿಯರ್ ;ಅದು ನೀರ ಮೇಲೂ ,ನೆಲದ ಮೇಲೂ ಇಲ್ಲದ ಒಂದು ಪ್ರಕಾಶ ಎನ್ನುತ್ತಾನೆ ವರ್ಡ್ಸ್‌ವರ್ತ್ ; ಅದೊಂದು ಸರಸ್ವತಿಯ ಕೃಪೆ ಎನ್ನುತ್ತಾರೆ ಅನೇಕ ಭಾರತೀಯ ಕವಿಗಳು ಮತ್ತು ಅಲಂಕಾರಿಕರು.ಅಂತೂ ಈ ಸಾಮರ್ಥ್ಯ ಹೇಗೆ ಬಂತು , ಏಕೆ ಬಂತು ಎನ್ನುವುದು ಇತರರಿಗಿರಲಿ ,ಕವಿಗೇ ತಿಳಿಯದಿರುವಾಗ , ಅದನ್ನು ಬೌದ್ಧಿಕವಾಗಿ ವಿಶ್ಲೇಷಿಸುವದಕ್ಕಿಂತ ಅದಕ್ಕೊಂದು ಅತಿ ಮಾನುಷವಾದ ಕಾರಣವನ್ನು ಕಲ್ಪಿಸಿ ಕೈ ತೊಳೆದುಕೊಂಡು ಬಿಡುವುದರಲ್ಲಿಯೇ ಬಹುಮಂದಿ ಪ್ರವೃತ್ತರಾಗಿದ್ದಾರೆ.ಎಲ್ಲಿಯೇ ಆಗಲಿ, ಬುದ್ಧಿಗೆ ಅತೀತವೆಂದು ಕಂಡುಬಂದ ಸಂಗತಿಗಳಿಗೆ ಅಲೌಕಿಕತೆಯ ಬಣ್ಣ ಕಟ್ಟುವುದು ತೀರಾ ಸಹಜವಾದ ವಿಷಯವಾಗಿದೆ . ಹೀಗಾಗಿ ಅನೇಕ ಭಾರತೀಯ ಹಾಗೂ ಪಾಶ್ಚಿಮಾತ್ಯ ಅಲಂಕಾರಿಕರು,ಕವಿಯ ಕಾವ್ಯ ನಿರ್ಮಾಣ ಕೌಶಲ್ಯಕ್ಕೆ ಇರುವ ಅತಿಶಯತೆಯನ್ನು ಕುರಿತು, ಅದೊಂದು ವರ ; ಅದೊಂದು ಕೃಪೆ ;ಜನ್ಮಾಂತರ ಸಂಸ್ಕಾರ- ಇತ್ಯಾದಿಯಾಗಿ ವರ್ಣಿಸಿದ್ದಾರೆ. ಹೀಗೆ ಈ ವಿಚಾರವನ್ನು ಒಂದು ಅಲೌಕಿಕ ನೆಲೆಗೆ ಕೂರಿಸಿದ ಕೂಡಲೇ, ಇದಕ್ಕೆ ಇನ್ನೂ ಕೆಲವು ಅಂಶಗಳು ಸಲೀಸಾಗಿ ಬಂದು ಸುತ್ತಿಕೊಳ್ಳುತ್ತವೆ : ಕವಿ ದೇವಾಂಶ ಸಂಭೂತ ; ಅವನೊಬ್ಬ ಸಾಧಕ; ಋಷಿ ಅಲ್ಲದವನು ಕವಿಯಾಗಲಾರ; ಅಂಥವನ ಧ್ಯಾನ ಸ್ಥಿತಿಯಲ್ಲಿ ಕಾವ್ಯ ಅವತರಿಸುತ್ತದೆ ; ಸರಸ್ವತಿಯ ಕೃಪೆಗೆ ಪಾತ್ರರಾಗುವ ಇಂಥ ಶುಚಿಶೀಲರಿಗೆ , ಅವಳೇ ಬೇಕಾದ ಅರ್ಥಗಳನ್ನು ಕಾಣಿಸುತ್ತಾಳೆ ; Poetry is something divine - ಹೀಗೆ ಕಾವ್ಯಮೀಮಾಂಸೆ ಮಡಿಯುಟ್ಟುಕೊಂಡು, ವೇದಾಂತವೋ, ತಾತ್ವಿಕವೋ ಆದ ಪರಿಭಾಷೆಯಲ್ಲಿ ದಾರಿತಪ್ಪುತ್ತದೆ.

-ಜಿ.ಎಸ್.ಶಿವರುದ್ರಪ್ಪ
('ಕಾವ್ಯಾರ್ಥ ಚಿಂತನ 'ದಿಂದ)

ಪ್ರೊ. ಎ. ಕೆ. ರಾಮಾನುಜನ್ ಅವರೊಡನೆ ಸಂದರ್ಶನ

೦ ಸಂದರ್ಶಕರು : **ಶೀ.ನಂ.ಶಂಕರನಾರಾಯಣ**

ಮತ್ತು

ಎಸ್.ಎ.ಕೃಷ್ಣಯ್ಯ

ದಿವಂಗತ ಪ್ರೊ.ಎ.ಕೆ.ರಾಮಾನುಜನ್ ಕನ್ನಡದ ಪ್ರಮುಖ ನವ್ಯ ಸಾಹಿತಿಗಳೆಂದು, ಅನುವಾದಕರೆಂದು, ಭಾಷಾ ವಿಜ್ಞಾನಿ ಎಂದು ಪ್ರಸಿದ್ಧರಾಗಿದ್ದಾರೆ. ಅವರು ಅಷ್ಟೇ ಪ್ರಮುಖ ಜಾನಪದ ವಿದ್ವಾಂಸರೂ ಹೌದು. ಆದರೆ ಅವರ ಈ ಮಹತ್ವವನ್ನು ಕನ್ನಡ ವಿದ್ವಾಂಸರ ವಲಯದಲ್ಲಿ ಗುರುತಿಸಿದಂತೆ ತೋರುವುದಿಲ್ಲ. ಉಡುಪಿಯ ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರದಲ್ಲಿ (RRC) ಫೋರ್ಡ್ ಫೌಂಡೇಶನ್ ನೆರವಿನಿಂದ ೧೯೭೯-೮೦ ರ ಕಾಲಾವಧಿಯಲ್ಲಿ ಕರ್ನಾಟಕದ ಮತ್ತು ಆಂಧ್ರದ ಯುವ ವಿದ್ವಾಂಸರಿಗಾಗಿ ಅಂತರರಾಷ್ಟ್ರೀಯ ಜಾನಪದ ಅಧ್ಯಯನದ ಬಗ್ಗೆ ತಲಾ ೨೦ ದಿನಗಳ ನಾಲ್ಕು ಕಮ್ಮಟಗಳನ್ನು ಏರ್ಪಡಿಸಲಾಗಿತ್ತು. ಇದರಲ್ಲಿ ಭಾರತದ ಮತ್ತು ಅಮೆರಿಕಾದ ಪ್ರಮುಖ ಜಾನಪದ ವಿದ್ವಾಂಸರು ಉಪನ್ಯಾಸಗಳನ್ನು ನೀಡಿದರು. ಈ ಕಮ್ಮಟಗಳಲ್ಲಿ ನಾವು ಅಭ್ಯರ್ಥಿಗಳಾಗಿ ಭಾಗವಹಿಸಿದ್ದೆವು. ಮೈಸೂರಿನಲ್ಲಿ ನಡೆದ ಎರಡನೆಯ ಕಮ್ಮಟದಲ್ಲಿ ಪ್ರೊ.ಎ.ಕೆ. ರಾಮಾನುಜನ್ ಜನಪದ ಕಥೆಗಳ ಬಗ್ಗೆ ಕೆಲವು ಉಪನ್ಯಾಸಗಳನ್ನು ನೀಡಿದರು. ಇದರಿಂದ ಜಾನಪದ ಅಧ್ಯಯನದಲ್ಲಿ ಅವರಿಗಿರುವ ವಿದ್ವತ್ತಿನ ಪರಿಚಯವಾಯಿತು. ಈ ಸಂದರ್ಭದಲ್ಲಿ ನಾವು ,ಪ್ರಮುಖರಾದ ಕೆಲವರು ಭಾರತೀಯ ಮತ್ತು ಅಮೇರಿಕನ್ ವಿದ್ವಾಂಸರ ಸಂದರ್ಶನಗಳನ್ನು ಮಾಡಿದೆವು(ಇಂಗ್ಲಿಷ್‌ನಲ್ಲಿ). ಕಾರಣಾಂತರದಿಂದ ಪ್ರೊ.ಎ.ಕೆ ರಾಮಾನುಜನ್ ಅವರ ಸಂದರ್ಶನವನ್ನು ಮಾಡಲು ಸಾಧ್ಯವಾಗಲಿಲ್ಲ. ಆದರೆ ಮುಂದೆ ೧೯೮೦ರ ಜೂನ್ ತಿಂಗಳಲ್ಲಿ ತಮಿಳುನಾಡಿನ ಪಾಲಿಯಂಕೋಟ್‌ನ ಸೈಂಟ್ ಝೇವಿಯರ್ಸ್ ಕಾಲೇಜಿನ ಜಾನಪದ ಅಧ್ಯಯನ ಕೇಂದ್ರದವರು ಫೋರ್ಡ್ ಫೌಂಡೇಶನ್ ನೆರವಿನಿಂದ ತಮಿಳುನಾಡು ಮತ್ತು ಕೇರಳದ ಯುವ ಜಾನಪದ ವಿದ್ವಾಂಸರಿಗಾಗಿ ಕಮ್ಮಟವನ್ನು ನಡೆಸಿದರು. ಎ.ಕೆ.ರಾಮಾನುಜನ್ ಈ ಕಮ್ಮಟದಲ್ಲಿ ಉಪನ್ಯಾಸಗಳನ್ನು ನೀಡಿದರು. ನಾವು ೨೬-೬-೮೦ರಂದು ರಾಮಾನುಜನ್ ಅವರನ್ನು ಭೇಟಿಮಾಡಿ ಅವರ ಸಂದರ್ಶನ ಮಾಡಿದೆವು. ಅವರ ಸಂದರ್ಶನವನ್ನು ಇಲ್ಲಿ ಕೊಡಲಾಗಿದೆ.

ರಾಮಾನುಜನ್ ಅವರು ಜಾನಪದ ಅಧ್ಯಯನದ ಬಗ್ಗೆ ,ಕಾವ್ಯ ಮೀಮಾಂಸೆಯ ಬಗ್ಗೆ ನಮ್ಮ ಕನ್ನಡದ ವಿದ್ವಾಂಸರಿಗಿಂತ ಭಿನ್ನವಾಗಿ ಆಲೋಚನೆ ಮಾಡಿರುವುದನ್ನು , ಆ ಬಗ್ಗೆ ಅನೇಕ ಒಳನೋಟಗಳನ್ನು ನೀಡಿರುವುದನ್ನು ಈ ಸಂದರ್ಶನದಲ್ಲಿ ಕಾಣಬಹುದು. ಅವರ ಅನಿರೀಕ್ಷಿತ ನಿಧನ ಕನ್ನಡ ಭಾಷೆ ,ಸಾಹಿತ್ಯ ಮತ್ತು ಜಾನಪದ ಅಧ್ಯಯನಕ್ಕೆ ದೊಡ್ಡ ನಷ್ಟ. ಇಂಗ್ಲಿಷ್‌ನಲ್ಲಿದ್ದ ಈ ಸಂದರ್ಶನವನ್ನು ಕನ್ನಡಕ್ಕೆ ಭಾಷಾಂತರಿಸುತ್ತ ನಾನು ಎ.ಕೆ.ರಾಮಾನುಜನ್‌ರವರನ್ನು ಕೃತಜ್ಞತೆಗಳೊಂದಿಗೆ ನೆನಪಿಸಿಕೊಳ್ಳುತ್ತಿದ್ದೇನೆ.

- ಶೀ .ನಂ .ಶಂಕರನಾರಾಯಣ

ಸಾರ್ ನೀವು ಪ್ರಸಿದ್ಧ ಭಾಷಾ ವಿಜ್ಞಾನಿ ,ಕವಿ , ಮತ್ತು ಅನುವಾದಕರು .ಇಷ್ಟೆಲ್ಲದರ ನಡುವೆ ನೀವು ಜಾನಪದದಲ್ಲಿ ಆಸಕ್ತಿ ಬೆಳೆಸಿಕೊಂಡದ್ದು ಹೇಗೆ ?

ಮೊದಲನೆಯದಾಗಿ ನಾನು ಭಾಷಾವಿಜ್ಞಾನದಿಂದ ನನ್ನ ವೃತ್ತಿ ಜೀವನವನ್ನು ಆರಂಭಿಸಲಿಲ್ಲ.ನಾನು ಮಾಡಿದ್ದು ಇಂಗ್ಲಿಷ್ ಎಂ.ಎ.ಆದರೆ ನನ್ನ ಆಸಕ್ತಿ ಇದ್ದದ್ದು ದಕ್ಷಿಣ ಭಾರತದ ಭಾಷೆಗಳಲ್ಲಿ - ಕನ್ನಡ ಮತ್ತು ತಮಿಳಿನಲ್ಲಿ ನಾನು ಡಿಗ್ರಿಗಳನ್ನು ಪಡೆಯಲಿಲ್ಲ.ಆದರೆ ಇಂಗ್ಲಿಷನ್ನು ಅಭ್ಯಾಸ ಮಾಡುತ್ತಿರುವಾಗ ನಾನು ಕನ್ನಡ ಮತ್ತು ತಮಿಳು ಭಾಷೆಗಳ ಅಭ್ಯಾಸವನ್ನೂ ಮಾಡುತ್ತಿದ್ದೆ.ನಮ್ಮ ಮಾತೃಭಾಷೆಯನ್ನೂ ಕೂಡ ಪ್ರಯತ್ನಪೂರ್ವಕವಾಗಿ ರೂಢಿಸಿಕೊಳ್ಳಲೇ ಬೇಕಾಗಿದೆಯೆಂಬುದು ನನಗೆ ಬಹು ಬೇಗ ಮನವರಿಕೆಯಾಯಿತು.ವಿದೇಶೀ ಭಾಷೆಯನ್ನು ಮಾತ್ರ ಕಷ್ಟಪಟ್ಟು ಕಲಿತರೆ ಸಾಕಾಗುವುದಿಲ್ಲ.ಅದನ್ನು ಕಲಿಯಲು ಎಷ್ಟು ಪ್ರಯತ್ನ ಪಡುತ್ತೇವೆಯೋ ಎಷ್ಟು ಆಳವಾಗಿ ಕಲಿಯುತ್ತೇವೆಯೋ,ಅದಕ್ಕಾಗಿ ಎಷ್ಟು ಶ್ರಮ ಪಡುತ್ತೇವೆಯೋ ಅಷ್ಟೇ ಆಳವಾಗಿ ,ಅಷ್ಟೇ ಶ್ರಮಪಟ್ಟು ಮಾತೃಭಾಷೆಯನ್ನು ರೂಢಿಸಿಕೊಳ್ಳ ಬೇಕಾಗುತ್ತದೆ.ಹೀಗೆ ಮಾಡದಿದ್ದರೆ ಯಾರೂ ಕೂಡ ತನ್ನ ಸಂಸ್ಕೃತಿಯಲ್ಲಿ ಪೂರ್ಣವಾಗಿ ಅಭಿವ್ಯಕ್ತಿ ಪಡೆದುಕೊಳ್ಳಲು ,ತನ್ನ ಅಥವಾ ಇತರ ಸಂಸ್ಕೃತಿಗಳಲ್ಲಿ ಒಳನೋಟಗಳನ್ನು ಕಾಣಲು ಸಾಧ್ಯವಾಗುವುದಿಲ್ಲ. ಮಾತೃಭಾಷೆ ಬಾಲ್ಯದಲ್ಲಿ ಮನಸ್ಸಿನ ಆಳಕ್ಕೆ ಇಳಿಯುತ್ತದೆ ಮತ್ತು ಸಮಾಜದ ಎಲ್ಲಾ ಸ್ತರಗಳನ್ನೂ ವ್ಯಾಪಿಸುತ್ತದೆ.ಆದರೆ ಅದರ ಬದಲು ಇಂಗ್ಲಿಷಿಗೆ ಅಂಟಿಕೊಂಡರೆ ಅಭಿವ್ಯಕ್ತಿ ಸಾಮರ್ಥ್ಯ ಕೇವಲ ಶೇಕಡಾ ಒಂದಕ್ಕೆ ಸೀಮಿತವಾಗುತ್ತದೆ - ಈ ದೃಷ್ಟಿಯಿಂದ ಸಂಸ್ಕೃತ ವಾಸಿ.ಸಂಸ್ಕೃತ ಕಲಿಯುವುದರ ಮೂಲಕ ನಮ್ಮ ದೇಶದ ಪ್ರಾಚೀನ ಧರ್ಮ,ವಿವಿಧ ತಾತ್ವಿಕ ಗ್ರಂಥಗಳು ,ಭಾರತದ ವಿಜ್ಞಾನ ಮೊದಲಾದ ವಿಷಯಗಳಲ್ಲಿ ಒಳನೋಟಗಳನ್ನು ಪಡೆಯಲು ಸಾಧ್ಯವಾಗುತ್ತದೆ.ಇಂಗ್ಲಿಷ್ ಅಂತರ ರಾಷ್ಟ್ರೀಯ ವ್ಯಾಪ್ತಿಯುಳ್ಳ ಭಾಷೆ ಅದು ನಮಗೆ ಅಗತ್ಯವಾಗಿ ಬೇಕು.ಆದರೆ ನಮ್ಮ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಅದರಿಂದ ಹೆಚ್ಚು ಪ್ರಯೋಜನವಾಗುವುದಿಲ್ಲ.ಹೀಗಾಗಿ ಕನ್ನಡ ಮತ್ತು ತಮಿಳು ಭಾಷೆಗಳನ್ನು ವಿಶೇಷವಾಗಿ ರೂಢಿಸಿಕೊಳ್ಳುವುದು ಅಗತ್ಯ ಎಂದು ನನಗನ್ನಿಸಿತು.ಹೀಗೆಯೇ ಆಲೋಚನೆ ಮಾಡುತ್ತಾ ಹೋದಾಗ ಯಾವುದೋ ಒಂದು ಹಂತದಲ್ಲಿ ನನಗೆ ಹೀಗೆನ್ನಿಸಿತು :ಪ್ರತಿಯೊಬ್ಬ ಭಾರತೀಯನಿಗೂ ಸಂಸ್ಕೃತ ಮತ್ತು ಇಂಗ್ಲಿಷ್ ಪಿತೃ ಭಾಷೆಗಳಿಂದ ರೂಪುಗೊಂಡ ಸಂಸ್ಕೃತಿಯಂತೆಯೇ ಮಾತೃಭಾಷೆಗಳ ಸಂಸ್ಕೃತಿಯೂ ಒಂದಿದೆ.ಈ ಮಾತೃಭಾಷೆಗಳಿಂದ ರೂಪುಗೊಂಡ ಸಂಸ್ಕೃತಿಯಲ್ಲಿ ಶಿಷ್ಟ ಸಾಹಿತ್ಯ ಮಾತ್ರವಲ್ಲ, ಜಾನಪದವೂ ಇದೆ.ನಾನು ಈಚೆಗೆ ಬರೆದ ಒಂದು ಪ್ರಬಂಧದಲ್ಲಿ ಈ ರೀತಿ ಬರೆದೆ :ನಾವು ಮೈಸೂರಿನಲ್ಲಿ ವಾಸ ಮಾಡುತ್ತಿದ್ದ ಮನೆಯಲ್ಲಿ ಹಲವು ಅಂತಸ್ತುಗಳಿದ್ದು ,ನೆಲ ಅಂತಸ್ತಿನಲ್ಲಿ ನಾನು, ನನ್ನ ತಾಯಿ ಅಜ್ಜ ಮತ್ತು ಅಡಿಗೆಯವರು ಮೊದಲಾದವರೊಡನೆ ನನ್ನ ಮಾತೃಭಾಷೆಯಾದ ತಮಿಳಿನಲ್ಲಿ ಮಾತನಾಡುತ್ತಿದ್ದೆ. ಎರಡನೆಯ ಅಂತಸ್ತಿನಲ್ಲಿ ,ಗಣಿತಶಾಸ್ತ್ರಜ್ಞರಾಗಿದ್ದ ನಮ್ಮ ತಂದೆಯೊಡನೆ ಇಂಗ್ಲಿಷ್ ಮತ್ತು ಸಂಸ್ಕೃತದಲ್ಲಿ ಮಾತನಾಡುತ್ತಿದ್ದೆ.ಅದಕ್ಕೂ ಮೇಲಿದ್ದ ತೆರೆದ ಅಂತಸ್ತಿನಲ್ಲಿ ನಿಂತು ಆಕಾಶವನ್ನು ನೋಡುತ್ತಿದ್ದೆ.ಅಲ್ಲಿಂದ ನಿಂತು ಕೆಳಗೆ ನೋಡಿದಾಗ ನಾನು ಕಾಣುತ್ತಿದ್ದದ್ದು ಗೊಲ್ಲರಕೇರಿ.ಸಾಮಾನ್ಯವಾಗಿ ಅಲ್ಲಿ ಕನ್ನಡದಲ್ಲಿ ನಡೆಯುತ್ತಿದ್ದ ಜಗಳವನ್ನು ಕೇಳುತ್ತಿದ್ದೆ.ಅಲ್ಲಿಂದ ಕೆಳಗಿಳಿದು ಹೀಗೇ ಅದನ್ನು ಹತ್ತಿರದಲ್ಲಿಯೇ ನೋಡಬಹುದಾಗಿತ್ತು.ಹೀಗಾಗಿ ನಾನು ಚಿಕ್ಕಂದಿನಲ್ಲಿ ಬೆಳೆದ ಮನೆ ಬಹು ಸಂಸ್ಕೃತಿಯ ಪ್ರತೀಕವಾಗಿತ್ತು.ಇದು ನನಗೊಬ್ಬನಿಗೇ ವಿಶೇಷವಾದ ಸಂಸ್ಕೃತಿಯೇನೂ ಅಲ್ಲ.ಪಟ್ಟಣಗಳಲ್ಲಿ ಬೆಳೆಯುವ ಬಹಳಷ್ಟು ಜನ ಹೀಗೆಯೇ ಬೆಳೆಯುತ್ತಾರೆ.ಯಾವದೋ ಒಂದು ಹಂತದಲ್ಲಿ ನಮಗೆ ನಮ್ಮ ಸಂಸ್ಕೃತಿಯ ಬಗೆಗೆ ಎಷ್ಟೆಲ್ಲ ಸಾಧ್ಯವೋ ಅಷ್ಟನ್ನೂ ತಿಳಿದುಕೊಳ್ಳುವುದು ಮುಖ್ಯ ಎನಿಸಿತು.ವಿಶೇಷವಾಗಿ ನನ್ನ ತಾಯಿ

ಅತ್ತೆಯರು ಅಜ್ಜ ಮತ್ತು ಅಡಿಗೆಯವರು ಹೇಳುತ್ತಿದ್ದ ಅನೇಕ ಜನಪದ ಕಥೆಗಳನ್ನು ಕೇಳುತ್ತಿದ್ದೆ. ಜನಪದ ಕಥೆಗಳ ಬಗ್ಗೆ ನನ್ನ ಪ್ರೀತಿ ಆರಂಭವಾದದ್ದು ಹೀಗೆ. ಸುಮಾರು ಇಪ್ಪತ್ತನೆಯ ವಯಸ್ಸಿನಲ್ಲಿ ನಾನು ವೆರಿಯರ್ ಎಲ್ವಿನ್ ಕೃತಿಗಳನ್ನು ಓದಿ ಸಾಹಿತ್ಯವನ್ನು ಕೈಬಿಟ್ಟು ಅವರಂತೆ ಮಾನವ ವಿಜ್ಞಾನಿಯಾಗಬೇಕೆಂದು ಅಪೇಕ್ಷೆಪಟ್ಟೆ.. ಅವರ 'ಫೋಕ್‌ಟೇಲ್ಸ್ ಆಫ್ ಮಹಾಕೋಶಲ' ಮತ್ತು 'ಫೋಕ್‌ಸಾಂಗ್ಸ್ ಆಫ್ ಛತ್ತೀಸ್‌ಗಢ' ಮೊದಲಾದ ಕೃತಿಗಳನ್ನು ಓದಿ ಅವುಗಳಿಂದ ಪ್ರಭಾವಿತನಾಗಿದ್ದೆ. 'ನಾನು ನಿಮ್ಮೊಡನೆ ಬಂದು ಕೆಲಸ ಮಾಡುತ್ತೇನೆ ' ಎಂದು ಅವರಿಗೆ ಪತ್ರ ಬರೆದೆ . ಅವರು ಅದಕ್ಕೆ ಉತ್ತರ ಬರೆಯಲಿಲ್ಲ. ಆನಂತರ ನಾನು ಬೆಳಗಾವಿಗೆ ಹೋಗಿ ಲಿಂಗರಾಜ ಕಾಲೇಜಿನಲ್ಲಿ ಅಧ್ಯಾಪಕನಾಗಿ ಸೇರಿದೆ. ಆ ವೇಳೆಗಾಗಲೇ ನಾನು ಗಾದೆಗಳನ್ನು ಸಂಗ್ರಹ ಮಾಡಿದ್ದೆ. ಜಗತ್ತಿನ ವಿವಿಧ ದೇಶಗಳ ಗಾದೆಗಳಲ್ಲಿ ನನಗೆ ಆಸಕ್ತಿಯುಂಟಾಗಿತ್ತು. ವಿವಿಧ ಭಾಷೆಗಳಿಂದ ಇಂಗ್ಲಿಷ್‌ನ ಮೂಲಕ ನಾಲ್ಕೈದು ಸಾಲಿನ ಗಾದೆಗಳನ್ನು ನಾನು ಆ ವೇಳೆಗಾಗಲೇ ಸಂಗ್ರಹಿಸಿದ್ದೆ. ಅದರ ಬಗ್ಗೆ ನನಗೆ ವಿಶೇಷ ಆಸಕ್ತಿ ಇದ್ದುದರಿಂದ ಅಲ್ಲಲ್ಲಿ ಉಪನ್ಯಾಸಗಳನ್ನು ಕೊಡುತ್ತಿದ್ದೆ. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಗಾದೆಗಳ ಬಗ್ಗೆ ಪ್ರಚಾರೋಪನ್ಯಾಸವನ್ನೂ ಮಾಡಿದೆ. ನನ್ನ ಪುಟ್ಟ ಪುಸ್ತಕ 'ಗಾದೆಗಳು ' ಕರ್ನಾಟಕ ವಿಶ್ವವಿದ್ಯಾನಿಲಯ ಪ್ರಚಾರೋಪನ್ಯಾಸ ಮಾಲೆಯಲ್ಲಿ ಪ್ರಕಟವಾಯಿತು. ಆ ವಿಷಯದ ಬಗ್ಗೆ ಬರೆದ ಮೊದಲನೇ ಪುಸ್ತಕ ಅದು. ಗಾದೆಗಳಿಗೆ ಸಂಬಂಧಿಸಿದ ಸಂಗ್ರಹವೊಂದನ್ನು ಕರ್ನಾಟಕ ವಿಶ್ವವಿದ್ಯಾನಿಲಯ ಪ್ರಕಟ ಮಾಡಬೇಕೆಂಬುದು ನನ್ನ ಆಶಯವಾಗಿತ್ತು. ಆದರೆ ಆ ಹಂತದಲ್ಲಿ ಅವರು ಪ್ರಕಟಿಸುವುದರಲ್ಲಿ ಆಸಕ್ತಿ ತೋರಿಸಲಿಲ್ಲ. ಚೀನಾ, ಜಪಾನ್ ಮೊದಲಾದ ಹಲವಾರು ದೇಶಗಳ ಗಾದೆಗಳಿಂದ ಕೂಡಿದ್ದ ಆ ಸಂಕಲನವನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಜಾಗಬದಲಾಯಿಸುವಾಗ ಕಳೆದುಕೊಂಡು ಬಿಟ್ಟೆ. ಅದು ಎಲ್ಲಿ ಹೋಯಿತೋ ಗೊತ್ತಾಗಲಿಲ್ಲ. ನಾನು ಕರ್ನಾಟಕ ವಿಶ್ವವಿದ್ಯಾನಿಲಯದವರಿಗೆ - ಬೆಳಗಾಂ ಪ್ರದೇಶದ ಗಾದೆಗಳನ್ನು ಸಂಗ್ರಹಿಸಿಕೊಟ್ಟರೆ ಅದನ್ನು ಪ್ರಕಟಿಸುತ್ತೀರಾ ಎಂದು ಕೇಳಿದೆ. ಅದಕ್ಕೆ ಅವರು ಆಸಕ್ತಿ ತೋರಿಸಲಿಲ್ಲ. ಈ ಸಂದರ್ಶನದ ದೃಷ್ಟಿಯಿಂದ ಇವೇನೂ ಮುಖ್ಯವಾದ ವಿಷಯಗಳಲ್ಲ. ಆದರೆ ಆ ಕಾಲಕ್ಕೆ ನಾನು ಏನು ಕೆಲಸ ಮಾಡಬೇಕು ಎಂದಿದ್ದೆನೋ ಆ ಕೆಲಸವನ್ನು ನನಗೆ ಇಂದಿಗೂ ಮಾಡಲು ಆಗಿಲ್ಲ ಎಂದಷ್ಟೆ ನಾನು ಹೇಳುತ್ತಿರುವುದು. ನಾನು ವಾಸ್ತವವಾಗಿ ಕ್ಷೇತ್ರಕ್ಕೆ ಹೋಗಿ ಗಾದೆಗಳನ್ನು ಸಂಗ್ರಹಿಸಬೇಕು. ನಮ್ಮಲ್ಲಿ ಬಂದಿರುವ ಗಾದೆಯ ಸಂಕಲನಗಳು ಮುಖ್ಯವಾಗಿ ಜನರ ನೆನಪಿನಿಂದ ಸಂಗ್ರಹಿತವಾಗಿವೆ. ನಾವು ಕ್ಷೇತ್ರಕ್ಕೆ ಹೋದರೆ , ಗಾದೆಗಳನ್ನು ಯಾವ ಸಂದರ್ಭದಲ್ಲಿ ಹೇಳುತ್ತಾರೋ ಆ ಸಂದರ್ಭದ ವಿವರಗಳೊಂದಿಗೆ ಸಂಗ್ರಹಿಸಬೇಕು... ಇದೆಲ್ಲಾ ನಡೆದದ್ದು ೧೯೫೫ರಲ್ಲಿ.

ಜಾನಪದ ಕಥೆಗಳ ಬಗ್ಗೆ ನೀವು ಹೆಚ್ಚು ಕೆಲಸ ಮಾಡಿದ್ದೀರಿ. ಈ ಕಥೆಗಳ ಸಂಗ್ರಹಕ್ಕೆ ನಿಮಗೆ ಹೇಗೆ ಪ್ರೇರಣೆ ದೊರೆಯಿತು?

ಗಾದೆಗಳ ಸಂಗ್ರಹದ ಅನಂತರ ... ಜನಪದ ಕಥೆಗಳನ್ನು ಸಂಗ್ರಹ ಮಾಡುವುದರ ಬಗ್ಗೆ ನನಗೆ ಆಸಕ್ತಿ ಬಂದದ್ದು ಈ ಹಂತದಲ್ಲಿಯೇ. ನನ್ನ ಮನೆಯ ಜನಗಳಿಂದ ನಾನು ಜಾನಪದದ ಕಥೆಗಳನ್ನು ಸಂಗ್ರಹಿಸಿದ್ದೆ. ಬೆಳಗಾಂನಲ್ಲಿದ್ದಾಗ ಕುರುಬೇಟ ಎಂಬ ಪ್ರಾಥಮಿಕ ಶಾಲಾ ಉಪಾಧ್ಯಾಯರ ಪರಿಚಯ ನನಗಾಯಿತು. ಈಗ ನನಗೆ ಅವರ ಸಂಪರ್ಕವೇ ಇಲ್ಲದಂತಾಗಿದೆ. ಈಗ ಅವರು ಎಲ್ಲಿದ್ದಾರೋ ... ಬದುಕಿದ್ದಾರೋ ಇಲ್ಲವೋ ಎಂಬುದೂ ತಿಳಿಯದು ... ಆಗ ನನ್ನನ್ನು ನೋಡುವುದಕ್ಕೆ ಅಲ್ಲಿ ಅನೇಕರು

ಬರುತ್ತಿದ್ದರು.ನನ್ನೊಡನೆ ಮಾತನಾಡುತ್ತಿದ್ದರು. ನಾನೇನು ಮಾಡ್ತಾ ಇದ್ದೀನಿ ಅನ್ನೋದನ್ನ ತಿಳಿಯುವ ಕುತೂಹಲ ಅವರಲ್ಲಿರುತ್ತಿತ್ತು.ಅಂಥವರಲ್ಲಿ ಕುರುಬೇಟರವರು ಕೂಡ ಒಬ್ಬರು.ಏಳು ವರ್ಷದ ಹುಡುಗರು ಅವರ ವಿದ್ಯಾರ್ಥಿಗಳಾಗಿದ್ದರು.ಆ ಹುಡುಗರು ತಾವು ಕೇಳಿದ್ದ ಜನಪದ ಕಥೆಗಳನ್ನು ಅವರು ಕೇಳಿದಂತೆಯೇ ಬರೆದುಕೊಡುವಂತೆ ಮಾಡಲು ಸಾಧ್ಯವೇ ಎಂದು ಅವರನ್ನು ಕೇಳಿದ್ದೆ.ಕುರುಬೇಟ ಅವರು ಅದಕ್ಕೆ ಒಪ್ಪಿ ಅವರು ತಮ್ಮ ಕಾಂಪೋಜಿಶನ್ ಕ್ಲಾಸ್‌ನಲ್ಲಿ ಮಕ್ಕಳಿಗೆ ಅವರು ಕೇಳಿದ್ದ ಕಥೆಗಳನ್ನು ಬರೆದುಕೊಡುವಂತೆ ಹೇಳಿದರು.ಮಕ್ಕಳು ಬರೆದುಕೊಟ್ಟರು.ಅವು ಅದ್ಭುತವಾದ ಕಥೆಗಳಾಗಿದ್ದವು.ಮಕ್ಕಳು ಅವುಗಳನ್ನು ವ್ಯಾಕರಣಬದ್ಧವಾದ ಭಾಷೆಯಲ್ಲಿ ಬರೆದಿರಲಿಲ್ಲ.ಅವರು ಹೇಗೆ ಕೇಳಿಸಿಕೊಂಡಿದ್ದರೋ ಹಾಗೆಯೇ ಬರೆದು ಕೊಟ್ಟಿದ್ದರು.'ಹಂಚಿ ' ಕಥೆ ನನಗೆ ಸಿಕ್ಕದ್ದು ಹೀಗೆ.ಆ ಹಸ್ತಪ್ರತಿ ಈಗಲೂ ನನ್ನಲ್ಲಿದೆ .

ನಮ್ಮ ಜಾನಪದವನ್ನು ಕುರಿತು ಇಂಗ್ಲಿಷಿನಲ್ಲಿ ಬರೆಯುವುದಕ್ಕೆ ನಿಮಗೆ ಪ್ರೇರಣೆಯಾದದ್ದು ಹೇಗೆ?

೧೯೫೫ರಲ್ಲಿ ಎಡ್ವಿನ್ ಕಿರ್ಕ್‌ಲ್ಯಾಂಡ್ ಎಂಬುವವರು ಅಮೆರಿಕಾದ ಫ್ಲೋರಿಡಾದಿಂದ ಬೊಂಬಾಯಿಗೆ ಕಲ್ಚರಲ್ ಅಫೇರ್ಸ್ ಆಫೀಸರ್ ಆಗಿ ಬಂದರು.ಲಿಂಗರಾಜ ಕಾಲೇಜಿನಲ್ಲಿ ನಾನು ಇಂಗ್ಲಿಷ್ ಯೂನಿಯನ್ ಅಧ್ಯಕ್ಷನಾಗಿದ್ದೆ.ಚರ್ಚಾ ಸ್ಪರ್ಧೆಗಳನ್ನು ಏರ್ಪಡಿಸುತ್ತಿದ್ದೆ.ನಿಮಗೇ ಗೊತ್ತಲ್ಲಾ...ಕಾಲೇಜಿನಲ್ಲಿ ಅಧ್ಯಾಪಕರು ಈ ಕೆಲಸಗಳನ್ನೆಲ್ಲಾ ಮಾಡಬೇಕಾಗುತ್ತದೆ.ನಾನು ಕೂಡ ನಾಟಕ ಆಡಿಸುವುದು ಚರ್ಚಾಸ್ಪರ್ಧೆಯನ್ನು ಏರ್ಪಡಿಸುವುದು ಎಲ್ಲಾ ಮಾಡುತ್ತಿದ್ದೆ.ಆ ಕಾಲಕ್ಕೆ ಕಲ್ಚರಲ್ ಅಫೇರ್ಸ್ ಆಫೀಸರ್‌ಗಳು ಎಲ್ಲಾ ಕಾಲೇಜುಗಳಿಗೂ ಭೇಟಿ ನೀಡಿ ಅಮೆರಿಕನ್ ಸಾಹಿತ್ಯ ಮತ್ತು ಸಂಸ್ಕೃತಿಗಳ ಬಗ್ಗೆ ಆಸಕ್ತಿ ಮೂಡಿಸಲು ಪ್ರಯತ್ನಿಸುತ್ತಿದ್ದರು.ಆ ಕೆಲಸದ ಮೇಲೆ ಒಂದು ಸಲ ಕಿರ್ಕ್‌ಲ್ಯಾಂಡ್ ಅವರು ನಮ್ಮ ಕಾಲೇಜಿಗೆ ಬಂದರು.ನಾವು ಅವರದೊಂದು ಉಪನ್ಯಾಸ ಏರ್ಪಡಿಸಿದ್ದೆವು.ಉಪನ್ಯಾಸ ಆದಮೇಲೆ ನಾನು ಅವರು ಬಹಳ ಹೊತ್ತು ಮಾತನಾಡಿದೆವು.ಅವರು ಅಮೆರಿಕಾದ ಒಂದು ಜನಪದ ಕಥೆಯನ್ನು ಹೇಳಿದರು.ಅದಕ್ಕೆ ನಾನು ಸಂವಾದಿಯಾದ ಭಾರತದ ಒಂದು ಕಥೆಯನ್ನು ಹೇಳಿದೆ.ಇದು ಹೀಗೆಯೇ ಮುಂದುವರಿಯಿತು.ಬೆಳಗಾಂನಲ್ಲಿ ಜಾನಪದದ ಬಗ್ಗೆ ತಿಳಿದಿರುವ ವ್ಯಕ್ತಿ ಇದ್ದಾನೆ,ಕಥೆಗಳ ಬಗ್ಗೆ,ಗಾದೆಗಳ ಬಗ್ಗೆ ಇವನಿಗೆ ಆಸಕ್ತಿಯಿದೆ ಎಂಬ ವಿಷಯ ತಿಳಿದು ಅವರಿಗೆ ತುಂಬಾ ಆಶ್ಚರ್ಯವಾಯಿತು.ಅವರು ವಾಪಸ್ ಹೋದಮೇಲೆ ಸ್ಟಿತ್ ಥಾಮ್ಸನ್ ಅವರ 'ಫೋಕ್‌ಟೇಲ್' ಪುಸ್ತಕ ಕಳಿಸಿದರು.ನಾನು ಆ ಪುಸ್ತಕದ ವಿಷಯ ಕೂಡ ಕೇಳಿರಲಿಲ್ಲ.ಅದನ್ನು ಓದಿದಮೇಲೆ ನನಗೆ ಮೋಟಿಫ್,ಟೈಪ್ಸ್ ಇವುಗಳ ಪರಿಚಯವಾದದ್ದು.ಟೈಪ್ಸ್ ಮತ್ತು ಮೋಟಿಫ್‌ಗಳಿಗೆ ಅನುಗುಣವಾಗಿ ನಾನು ಕಥೆಗಳನ್ನು ,ಅದಕ್ಕೆ ಸಂಬಂಧಪಟ್ಟ ಟಿಪ್ಪಣಿಗಳನ್ನು ಮಾಡಿ ,ಇಂಗ್ಲಿಷಿಗೆ ಅನುವಾದ ಮಾಡಿಕೊಡುವುದಾದರೆ ಅದು ಪ್ರಕಟವಾಗಲು ಸಹಾಯಮಾಡುವುದಾಗಿ ಹೇಳಿದರು.ಆಗ ಫ್ಲಾರಿಡಾದಲ್ಲಿ ಅಚ್ಚಾಗುತ್ತಿದ್ದ 'ಸದರ್ನ್ ಫೋಕ್‌ಲೋರ್ ಕ್ವಾರ್ಟರ್ಲಿ' ಎಂಬ ತ್ರೈಮಾಸಿಕ ಪತ್ರಿಕೆಗೆ ಅವರು ಸಂಪಾದಕರಾಗಿದ್ದರು.ಅವರು ಹೇಳಿದಂತೆ ನಾನು ನಾಲ್ಕು ಕಥೆಗಳನ್ನು ಟೈಪ್ ಮತ್ತು ಮೋಟಿಫ್‌ಗಳ ವಿವರಗಳೊಡನೆ ಹಾಗೂ ಟಿಪ್ಪಣಿಗಳೊಂದಿಗೆ ಅನುವಾದ ಮಾಡಿ ಅವರಿಗೆ ಕಳಿಸಿಕೊಟ್ಟೆ..ಅವರು ಅದನ್ನು ಪ್ರಕಟ ಮಾಡಿದರು.'ಬಿಬ್ಲಿಯಾಗ್ರಾಫಿ ಆಫ್ ಸೌಥ್ ಏಶಿಯನ್ ಫೋಕ್‌ಲೋರ್' ಎಂಬ ಪುಸ್ತಕವನ್ನು ಈ ಎಡ್ವಿನ್ ಕಿರ್ಕ್‌ಲ್ಯಾಂಡ್ ಅವರೇ ಸಂಪಾದಿಸಿ ಪ್ರಕಟಿಸಿದರು.ಇಲ್ಲಿಂದ ಮುಂದೆ ನಾನು ಕಥೆಗಳ ಬಗ್ಗೆ ಇನ್ನೂ ಹೆಚ್ಚು ಕೆಲಸಮಾಡಲು ಆರಂಭಿಸಿದೆ.

'ಸ್ಟಾಂಡರ್ಡ್ ಡಿಕ್ಶನರಿ ಆಫ್ ಫೋಕ್‌ಲೋರ್','ಮೈಥಾಲಜಿ ಅಂಡ್ ಲೆಜೆಂಡ್' ಗ್ರಂಥವನ್ನು ಕೂಡ ಅವರೇ ಕಳಿಸಿಕೊಟ್ಟರು.ಆಮೇಲೆ ನಾನು ಗ್ರಿಮ್ ಸಹೋದರರ ಜೀವನ ಮತ್ತು ಅವರ ಜನಪದ ಕಥಾ ಸಂಕಲನವನ್ನು ಓದಿದೆ. ಮೇರಿ ಫ್ರೇರೆಯನ್ನು ಬಿಟ್ಟರೆ ಯಾರೂ ಕೂಡ ಕನ್ನಡ ಜನಪದ ಕಥೆಗಳ ಕ್ಷೇತ್ರಕ್ಕೆ ಏನೂ ಮಾಡಿಲ್ಲ ಎನ್ನಿಸಿತು.ಕನ್ನಡದಲ್ಲಿ ಆಗ ಜಾನಪದ ಕಥೆಗಳ ಯಾವ ಸಂಗ್ರಹವೂ ಪ್ರಕಟವಾಗಿರಲಿಲ್ಲ. ಹೀಗಾಗಿ ನಾನು ಹೆಚ್ಚು ಕಥೆಗಳನ್ನು ಸಂಗ್ರಹಿಸಲು ಆರಂಭ ಮಾಡಿದೆ.

ಇಲ್ಲಿಂದ ಮುಂದೆ ನಿಮಗೆ ಇದು ಒಂದು ಬೌದ್ಧಿಕವಾದ ಕೆಲಸ ಎನ್ನಿಸಿತಲ್ಲವೆ ?
ಹೌದು ,ನಾನು ಕಥೆಗಳನ್ನು ಸಂಗ್ರಹಿಸುತ್ತಲೇ ಹೋದೆ .

ನೀವು ಸುಮಾರು ಎಷ್ಟು ಕಥೆಗಳನ್ನು ಸಂಗ್ರಹಮಾಡಿದ್ದೀರಿ ?
ಸುಮಾರು ೫೦೦ರಿಂದ ೬೦೦ ಕಥೆಗಳಿರಬಹುದು.ಅವೆಲ್ಲವನ್ನೂ ಟ್ರಾನ್ಸ್‌ಲೇಟ್ ಮಾಡಿ ಫೈಲ್ ಮಾಡಿದ್ದೇನೆ.ಇವುಗಳಲ್ಲಿ ಬಹಳಷ್ಟು ಕೆಲವೇ ಕಥೆಗಳ ಭಿನ್ನರೂಪಗಳೇ ಆಗಿವೆ.ನನ್ನ ಹತ್ತಿರ ೧೨೦ರಿಂದ ೧೩೦ ಟೈಪ್‌ನ ಕಥೆಗಳಿವೆ.ಪ್ರತಿಯೊಂದು ಟೈಪ್‌ಗೂ ಐದಾರು ಭಿನ್ನ ಪಾಠಾಂತರಗಳಿವೆ.೧೯೬೩ರಲ್ಲಿ ಕಿತ್ತೂರಿನಲ್ಲಿ ನಾನು ಸಂಗ್ರಹಿಸಿದ ಈಡಿಪಸ್ ಕತೆಯ ೪೦ ಭಿನ್ನ ಪಾಠಗಳನ್ನು ಸಂಗ್ರಹಮಾಡಿದ್ದೇನೆ.ಇವನ್ನು ಸಂಗ್ರಹಿಸಲು ನಾನೊಂದು ಕೆಲಸ ಮಾಡಿದೆ.'ಸುಧಾ' ಪತ್ರಿಕೆಯಲ್ಲಿ ಈ ಕಥೆಯನ್ನು ಕೊಟ್ಟು ಅದೇ ರೀತಿಯ ಕಥೆಗಳಿದ್ದರೆ ನನಗೆ ಕಳಿಸಿಕೊಡಬೇಕೆಂದು ಕೇಳಿಕೊಂಡಿದ್ದೆ.ನಲವತ್ತು ಜನ ತಾವು ಸಂಗ್ರಹಿಸಿದ ಕಥೆ ಕೊಟ್ಟರು.ಮುಂದೆ ಸಾಧ್ಯವಾದಾಗ ಈಡಿಪಸ್ ಕಥೆಯ ಭಿನ್ನ ಪಾಠಗಳಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಕುರಿತು ಬರೆಯಬೇಕೆಂದಿದ್ದೇನೆ.

ನಿಮ್ಮ ಸೃಜನಶೀಲ ಬರವಣಿಗೆಗಳಲ್ಲಿ ನೀವು ಜಾನಪದದಿಂದ ಪ್ರಭಾವಿತರಾಗಿದ್ದೀರಾ?
ಹೌದು ...ಹಾಗೆನ್ನಿಸುತ್ತದೆ .ನನ್ನ ಕನ್ನಡ ಮತ್ತು ಇಂಗ್ಲಿಷ್ ಕವನಗಳಲ್ಲಿ ಜನಪದ ಆಶಯಗಳನ್ನು ಬಳಸಿಕೊಂಡಿದ್ದೇನೆ...

ಉದಾಹರಣೆಗಳು ...
ಉದಾಹರಣೆಗೆ ,ನನ್ನ ಸ್ಟ್ರೈಡರ್‍ಸ್ ಸಂಕಲನದಲ್ಲಿ ಒಂದು ಪದ್ಯ ಇದೆ ...ಆ ಪದ್ಯದಲ್ಲಿ ನಾನೊಂದು ಕಥೆಯನ್ನು ಬಳಸಿಕೊಂಡಿದ್ದೇನೆ.ಆ ಕಥೆ ಹೀಗಿದೆ : ಒಬ್ಬ ರಾಜ .ಅವನಿಗೆ ಅನೇಕ ಜನ ಹೆಂಡತಿಯರು. ಅವರಾರಿಗೂ ಮಕ್ಕಳಿಲ್ಲ.ಅವನು ಯಥಾ ಪ್ರಕಾರ ಕಾಡಿಗೆ ಹೋಗಿ ಒಬ್ಬ ಋಷಿಯನ್ನು ಭೇಟಿಮಾಡುತ್ತಾನೆ.ಆ ಋಷಿ ಅವನಿಗೆ ಒಂದು ಮಾವಿನ ಹಣ್ಣು ಕೊಡುತ್ತಾನೆ.ಅವನು ಅದನ್ನು ತಂದು ಉಪ್ಪರಿಗೆಯ ಮೇಲೆ ಕುಳಿತಿದ್ದ ತನ್ನ ರಾಣಿಗೆ ಕೊಟ್ಟು ಅವಳಿಗೆ ಸಿಹಿ ಭಾಗವನ್ನು ತಿಂದು ಗೊರಟನ್ನು ಎಸೆಯಲು ಹೇಳುತ್ತಾನೆ.ಅವಳು ಅದನ್ನು ಎಸೆದಾಗ ಕೆಳಗಿದ್ದ ಒಂದು ಹೆಣ್ಣು ನಾಯಿ ಆ ಗೊರಟನ್ನು ತಿಂದು ಬಸಿರಾಗುತ್ತದೆ.ರಾಣಿಯರು ಹಣ್ಣಿನ ಸಿಹಿ ಭಾಗವನ್ನೆಲ್ಲಾ ತಿಂದೂ ಬಂಜೆಯರಾಗಿ ಉಳಿದರು.ಆದರೆ ಆ ನಾಯಿ ಬಸಿರಾಯಿತು.ಈ ಉದಾಹರಣೆ ಕೊಟ್ಟು ಕವಿಗಳು ಒಂದು ರೀತಿ ಈ ನಾಯಿ ಇದ್ದಂತೆ.ಕವಿಗಳು

ಶ್ರೀಮಂತರಲ್ಲ.ಅವರು ಉಪ್ಪರಿಗೆಯ ಮೇಲೆ ಕೂತಿರುವುದಿಲ್ಲ.ಅವರು ಸಿಹಿ ಭಾಗವನ್ನೇ ತಿನ್ನಬೇಕಾಗಿಲ್ಲ. ಆದರೆ ಅವರೇನೂ ಬಂಜೆಯರಾಗಿರುವುದಿಲ್ಲ. ಇದಕ್ಕೆ ಈ ಕಥೆಯನ್ನೊಳಗೊಂಡ 'ವ್ಹಿಚ್ ರಿಮೈಂಡ್ಸ್ ಮಿ' ಎಂಬ ಕವನವೇ ಒಂದು ಒಳ್ಳೆಯ ಉದಾಹರಣೆಯಾಗಬಲ್ಲದು.

ನೀವು ಬರೋಡಾದಲ್ಲಿದ್ದಾಗ ಕಥೆಗಳನ್ನು ಸಂಗ್ರಹಿಸಿದ್ದಿರಾ?
ಇಲ್ಲ ಇಲ್ಲ...ನಾನು ಆ ಅರ್ಥದಲ್ಲಿ ಸಂಗ್ರಹಕಾರನಲ್ಲ.ಕೊನೆಗೂ ನಾವು ಸಂಗ್ರಹ ಮಾಡಬೇಕಾದದ್ದು ನಮ್ಮ ಮಾತೃಬಾಷೆಯಲ್ಲಿಯೇ. ಅದು ಬಹಳ ಮುಖ್ಯವಾದದ್ದು. ಇಲ್ಲದಿದ್ದರೆ ಏನಾಗುತ್ತಿದೆ ಎಂಬುದೇ ಗೊತ್ತಾಗುವುದಿಲ್ಲ ...

ನೀವು ದಕ್ಷಿಣ ಏಷ್ಯಾದ ಜಾನಪದದ ಬಗ್ಗೆ ವಿಶೇಷ ಗಮನ ಹರಿಸಿದ್ದು ಹೇಗೆ ...
ದಕ್ಷಿಣ ಏಷ್ಯಾದ ಜಾನಪದ ಅಲ್ಲ.ಕೇವಲ ಕನ್ನಡ ಮತ್ತು ತಮಿಳು ಮಾತ್ರ .

ದಾಟ್ಸ್ ಆಲ್... ?
ಡೊಂಟ್ ಸೇ ದಾಟ್ಸ್ ಆಲ್!ಇಟ್ ಈಸ್ ಎ ಗ್ರೇಟ್ ಡೀಲ್.ಅದು ಬಹಳ ಎಂದು ನಾನು ಹೇಳುತ್ತೇನೆ.ಯಾವದೇ ಒಂದು ಭಾಷೆಯನ್ನು ಚೆನ್ನಾಗಿ ಕಲಿತರೂ ಅದರಲ್ಲಿ ಎಷ್ಟು ಬೇಕಾದರೂ ಕೆಲಸ ಮಾಡಬಹುದು. ಯಾವುದೇ ಒಂದು ಭಾಷೆಯಲ್ಲಿಯೂ ಅನಂತವಾದ ಶ್ರೀಮಂತಿಕೆ ಇದೆ.ಅದರಿಂದಾಗಿಯೇ ನಾನು ಹೊಸ ಭಾಷೆಗಳನ್ನು ಕಲಿಯುವ ಗೋಜಿಗೇ ಹೋಗಲಿಲ್ಲ.ಕನ್ನಡ ತಮಿಳು ಮತ್ತು ಇಂಗ್ಲಿಷ್ ಭಾಷೆಗಳಲ್ಲಿಯೇ ನಾನು ನನ್ನ ಜೀವಮಾನವೆಲ್ಲಾ ಕೆಲಸಮಾಡಬಹುದು.ನಾನು ಈ ಭಾಷೆಗಳಲ್ಲಿ ಶ್ರೇಷ್ಠವಾದ ಎಷ್ಟೋ ಕೃತಿಗಳನ್ನು ಓದಿಲ್ಲ.ಜಾನಪದವನ್ನೇ ತೆಗೆದುಕೊಳ್ಳಿ.ನಾನಿಲ್ಲಿಗೆ ಬಂದಾಗಲೆಲ್ಲಾ ಮಾಡುವ ಎಷ್ಟೋ ಕೆಲಸವಿರುತ್ತದೆ.ಪ್ರತಿನಿತ್ಯವೂ ಒಂದಲ್ಲ ಒಂದು ಹೊಸ ವಿಷಯ ಕಲಿಯುತ್ತೇನೆ.ಅದು ಜಾನಪದ ಇರಬಹುದು,ಸಾಹಿತ್ಯ ಇರಬಹುದು.ಅಥವಾ ಸಂಸ್ಕೃತಿ ಇರಬಹುದು.ಒಂದು ಹೊಸ ಭಾಷೆ ಕಲಿಯುವುದು ಕೇವಲ ಸುಪರ್‌ಫಿಸಿಯಲ್ ಆಗುತ್ತದೆ.ದಕ್ಷಿಣ ಏಷ್ಯಾದ ಭಾಷೆಗಳು ಎಂದರೆ ಅದು ತುಂಬ ದೊಡ್ಡ ಕ್ಷೇತ್ರ .ನನ್ನ ಮಟ್ಟಿಗಂತೂ ತುಂಬಾ ದೊಡ್ಡದು.ನಾನು ಭಾಷಾ ವಿಜ್ಞಾನ ಅಭ್ಯಾಸ ಮಾಡಿದಾಗ ಹೊಸ ಭಾಷೆಗಳನ್ನು ಕಲಿತೆ .ಫ್ರೆಂಚ್,ಜರ್ಮನ್ ಭಾಷೆಗಳ ಪರೀಕ್ಷೆಗಳಲ್ಲಿ ಪಾಸಾದೆ.ರಷ್ಯನ್ ಮತ್ತು ಜಪಾನೀ ತರಗತಿಗಳಿಗೂ ಹೋದೆ.ಯಾವುದೇ ಒಂದು ಭಾಷೆಯಲ್ಲಿ ಏನಾದರೂ ಉಪಯುಕ್ತ ಕೆಲಸ ಮಾಡಬೇಕಾದರೂ ಕನಿಷ್ಟ ಪಕ್ಷ ತಲಾ ಇಪ್ಪತ್ತು ವರ್ಷಗಳಾದರೂ ಬೇಕಾಗುತ್ತದೆ .ಅದರಿಂದಾಗಿಯೇ ನನಗೆ ಈ ಭಾಷೆಗಳು ಬರುತ್ತವೆ ಎಂದು ಎಲ್ಲಿಯೂ ಹೇಳುವುದೇ ಇಲ್ಲ.ಈ ಭಾಷೆಗಳ ಬಗ್ಗೆಯೂ ನಾನು ತಲಾ ಆರು ತಿಂಗಳು ಕೆಲಸ ಮಾಡಿರಬಹುದು.ಪ್ರತಿಯೊಂದು ಭಾಷೆಯನ್ನು ಕಲಿಯುವುದು ಎಷ್ಟೊಂದು ಕಷ್ಟ ಎಂಬ ತಿಳುವಳಿಕೆ ನನಗೆ ಬಂತು.ಈ ಯಾವ ಭಾಷೆಯಲ್ಲಿಯೂ ನಾನು ಪ್ರಭುತ್ವ ಸಂಪಾದಿಸಲಾರೆ ಎನಿಸಿತು.ನನಗೀಗಲೇ ಗೊತ್ತಿರುವ ಭಾಷೆಗಳಲ್ಲಿಯೇ ಹೆಚ್ಚಿನ ಪ್ರಭುತ್ವ ಗಳಿಸುವುದು ಸೂಕ್ತ ಎನಿಸಿತು.

ಈ ಕಾರಣದಿಂದಲೇ ನೀವು ಅಮೆರಿಕಾದಲ್ಲಿ ಅನೇಕ ವರ್ಷಗಳು ವಾಸವಾಗಿದ್ದರೂ ಕೂಡ

ಅಮೆರಿಕನ್ ಜಾನಪದದ ಬಗ್ಗೆ ಕೆಲಸ ಮಾಡಲಿಲ್ಲ ಅಲ್ಲವೆ?

ಹೌದು.ನನಗಿದೇ ಸಾಕಾಗಿದೆ.ನನಗೆ ಸಮಯವಿಲ್ಲ.ಷಿಕಾಗೋದಲ್ಲಿ ಪ್ರತಿನಿತ್ಯ ಕನ್ನಡದ ಮತ್ತು ತಮಿಳಿನ ಪುಸ್ತಕಗಳು ದೊರೆಯುತ್ತವೆ.ನನಗೆ ಯಾವುದು ಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.ಇಂಗ್ಲಿಷ್ ಮತ್ತು ಪ್ರಕಾರಗಳನ್ನು ಹುಡುಕಲು ಹೋಗುವುದಿಲ್ಲ.ಅಮೆರಿಕನ್ ಸಾಹಿತ್ಯ ,ಅದರಲ್ಲೂ ಮತ್ತೆ ಕಾವ್ಯದ ಬಗೆಗೆ ನನಗೆ ವಿಶೇಷ ಆಸಕ್ತಿಯಿದೆ.ನನಗೆ ಸಮಯವಿದ್ದಾಗ ಅದನ್ನು ಓದುತ್ತೇನೆ.

ನೀವು ತಮಿಳು ಜಾನಪದವನ್ನು ಅರ್ಥಮಾಡಿಕೊಳ್ಳಲು 'ಅಕಂ' ಮತ್ತು 'ಪುರಂ' ಎಂಬ ಎರಡು ಪ್ರಕಾರಗಳನ್ನು ಬಳಸಿಕೊಂಡಿದ್ದೀರಿ.ಇವು ಸಾರ್ವತ್ರಿಕ ಪ್ರಕಾರಗಳೇ?

ಇಲ್ಲ.ಸಾರ್ವತ್ರಿಕ ಎಂಬ ಪದ ನನಗೆ ಇಷ್ಟವಾಗುವುದಿಲ್ಲ. ಭಾಷಾ ವಿಜ್ಞಾನದಲ್ಲಾಗಲೀ,ಸಾಂಸ್ಕೃತಿಕ ಮಾನವ ವಿಜ್ಞಾನದಲ್ಲಾಗಲೀ ಈ ಪದ ನನಗೆ ಇಷ್ಟವಾಗುವುದಿಲ್ಲ.ವಿದ್ವಾಂಸರು ಯಾವಾಗಲೂ ಈ ಸಾರ್ವತ್ರಿಕ ಅಂಶಗಳ ಕಡೆಗೇ ನೋಡುತ್ತಿರುತ್ತಾರೆ.ಅದು ನಮಗೆ ಸಿಗಲೆಂದು ನನ್ನ ಆಶೆ.ಆದರೆ ಯಾವುದೇ ಸಾರ್ವತ್ರಿಕ ಪ್ರಕಾರಗಳು ಸಿಗುವುದು ಅನುಮಾನ ಎಂದು ನನಗನಿಸುತ್ತದೆ.ಆದ್ದರಿಂದ ನಾನು ಸಾರ್ವತ್ರಿಕ ಪ್ರಕಾರಗಳನ್ನು ಹುಡುಕಲು ಹೋಗುವುದಿಲ್ಲ.

ಹಾಗಾದರೆ ಈ ಪ್ರಕಾರಗಳು ಸಂಸ್ಕೃತಿ ವಿಶಿಷ್ಟವಾದವುಗಳೇ?

ಹೌದು.ಇವು ಸಂಸ್ಕೃತಿ ವಿಶಿಷ್ಟವಾದುವು.ಅವನ್ನು ಅಭ್ಯಾಸ ಮಾಡಬೇಕು.ಎಲ್ಲಕ್ಕಿಂತ ಮೊದಲು ನನಗೆ ಕನ್ನಡ ಮತ್ತು ತಮಿಳಿನಲ್ಲಿ ಏನಿದೆ ಎಂಬುದನ್ನು ತಿಳಿಯುವುದು ಮುಖ್ಯ.ನಾನು ಈ ಸಾರ್ವತ್ರಿಕ ಪ್ರಕಾರಗಳನ್ನು ಏಕೆ ಹುಡುಕುತ್ತಿಲ್ಲ ಎಂದರೆ ವಿದ್ವಾಂಸರು ಇವನ್ನು ಬಹಳ ಬೇಗ ಹುಡುಕಲು ಅನೇಕ ಮಾರ್ಗಗಳನ್ನು ಅನುಸರಿಸುತ್ತಾರೆ.ಆದರೆ ಅವರು ಕಂಡುಹಿಡಿದ ಸತ್ಯವನ್ನು ಸಿದ್ಧ ಮಾಡಿ ತೋರಿಸುವುದು ಕಷ್ಟ.ಹೀಗೆ ಮಾಡುವುದರಿಂದ ಸ್ಥಳೀಯವಾದ ಸಾಮಗ್ರಿಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಇದು ಅಡ್ಡಿಯಾಗುತ್ತದೆ.ಈ ಸಾರ್ವತ್ರಿಕ ಪ್ರಕಾರಗಳನ್ನು ಕಂಡುಕೊಳ್ಳಲು ನಾವು ಪ್ರಯತ್ನ ಮಾಡಬೇಕು ಎಂಬುದರಲ್ಲಿ ನನಗೆ ನಂಬಿಕೆಯಿದೆ.ಆದರೆ ನಾವು ಅದನ್ನು ಸಾಧಿಸುತ್ತೇವೋ ಇಲ್ಲವೋ ಎಂಬುದು ಅನುಮಾನಾಸ್ಪದ.

' ಅಕಂ ' ಮತ್ತು 'ಪುರಂ ' ಎಂದರೇನು? ವಿವರಿಸುತ್ತೀರಾ?

'ಅಕಂ' ಮತ್ತು 'ಪುರಂ' ತಮಿಳು ಸಾಹಿತ್ಯದ ವಿಶೇಷವಾದ ಸಾಂಸ್ಕೃತಿಕ ಪರಿಕಲ್ಪನೆಗಳು ಮಾತ್ರವಲ್ಲ, ಬಹುಶಃ ಪ್ರಾಚೀನ ದ್ರಾವಿಡ ಪರಿಕಲ್ಪನೆಗಳು.ದ್ರವಿಡಿಯನ್ ಎಟಿಮಾಲಾಜಿಕಲ್ ಡಿಕ್ಶನರಿಯಲ್ಲಿ ಇವುಗಳ ಪ್ರಸ್ತಾಪವಿದೆ.ಕನ್ನಡ ತಮಿಳು ತುಳು ಮಲೆಯಾಳಂ ಮೊದಲಾದ ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಇದು ಬಳಕೆಯಲ್ಲಿದೆ.ಅಂಗೈ, ಅಂಗಾಲು,ಅಕ್ಕ ಮೊದಲಾದ ಶಬ್ದಗಳಲ್ಲಿ ಇದನ್ನು ಕಾಣಬಹುದು.ಇದು ತೋಡ ಭಾಷೆಯಲ್ಲಿ ಇದೆಯೋ ಇಲ್ಲವೋ ಹೇಳಲಾರೆ.ಈ ಪದಗಳನ್ನು ಪುನಾರಚನೆ ಮಾಡಿದರೆ ಅವು ತಮಿಳಿಗಿಂತಲೂ ಪ್ರಾಚೀನವಾದವು ಎಂದು ತಿಳಿದುಬರುತ್ತದೆ.ಇವು ಪ್ರಾಚೀನ ಸಾಂಸ್ಕೃತಿಕ ಪ್ರಕಾರಗಳೆಂದು ತೋರುತ್ತವೆ.ತಮಿಳು ಕಾವ್ಯ ಮೀಮಾಂಸೆಯಲ್ಲಿ ವಿಶೇಷವಾಗಿ ತೋಲ್‌ಕಾಪ್ಪಿಯಂನಲ್ಲಿ ಈ ಪದಗಳನ್ನು ವಿರುದ್ಧಾರ್ಥಕ ಪದಗಳಾಗಿ ರೂಪಿಸಿರುವ ರೀತಿ ನನ್ನ ಮನಸ್ಸಿಗೆ ಹಿಡಿಸಿದೆ.ಇವು ಇತರ ವಿರುದ್ಧಾರ್ಥಕ

ಪದಗಳಿಗಿಂತ ಭಿನ್ನವಾದುವು. ಇದರಲ್ಲಿಯೇ ಒಳಗೆ - ಹೊರಗೆ, ತಾನು - ಇತರರು, ಹೃದಯ - ದೇಹದ ಇತರ ಭಾಗಗಳು, ಮಾನವ ವಾಸಸ್ಥಳ - ಕಾಡು, ಭೂಮಿ - ಸಮುದ್ರ ಮೊದಲಾದ ವಿರುದ್ಧಾರ್ಥಕ ಪರಿಕಲ್ಪನೆಗಳು ಅಡಕವಾಗಿರುವುದು ಇದಕ್ಕೆ ಕಾರಣ. 'ಅಕಂ' ಕಾವ್ಯದ ಇಡೀ ಪ್ರಕಾರ ಸಾಮಾನ್ಯವಾಗಿ ಗಂಡು ಹೆಣ್ಣಿನ ಪ್ರೇಂಕಾವ್ಯವಾಗಿರುತ್ತದೆ. 'ಪುರಂ' ಪ್ರಕಾರ ಸಮಾಜ, ರಾಜಕೀಯ, ಯುದ್ಧ, ಘರ್ಷಣೆ ಇವುಗಳನ್ನು ಕುರಿತದ್ದು. ಇವೆರಡೂ ಅಪ್ಪಟ ದೇಸಿ ಪ್ರಕಾರಗಳು. ನನಗೆ ದೇಸಿ ಪ್ರಕಾರಗಳಲ್ಲಿ ಆಸಕ್ತಿ, ಉದಾಹರಣೆಗೆ, ಎಲ್ಲಾ ಭಾಷೆಗಳಲ್ಲಿಯೂ ಕಾಲದ ವರ್ಗೀಕರಣ ಇರುತ್ತದೆ ಎಂದರೆ ಸಾಕಾಗುವುದಿಲ್ಲ. ಕನ್ನಡದ ಬಗ್ಗೆ ಮಾತಾಡುವಾಗ ಕನ್ನಡದಲ್ಲಿ ಕಾಲವನ್ನು ಹೇಗೆ ವರ್ಗೀಕರಿಸಿರುತ್ತಾರೆ ಎಂಬುದನ್ನು ಪರಿಶೀಲಿಸಬೇಕು. ಇದನ್ನು ಯಾವದೇ ಒಂದು ಜನರಲ್ ಥಿಯರಿಯಿಂದ ಕಂಡುಹಿಡಿಯಲು ಸಾಧ್ಯವಿಲ್ಲ. ಇದನ್ನು ಕಂಡುಹಿಡಿಯಲು ಮಾಡಬಹುದಾದ ಒಂದೇ ಕೆಲಸ ಎಂದರೆ ಕನ್ನಡದಲ್ಲಿ ಜನರು ಕಾಲವನ್ನು ಹೇಗೆ ನಿರ್ದೇಶಿಸುತ್ತಾರೆ ಎಂಬುದನ್ನು ವಾಸ್ತವವಾಗಿ ತಿಳಿಯುವುದು. ಜಾನಪದದಲ್ಲಿಯೂ ಇಂಥದೇ ಕೆಲಸ ಮಾಡಬೇಕಾಗುತ್ತದೆ. ಪುರಾಣ ಮತ್ತು ಜನಪದ ಕಥೆ ಇವೆರಡಕ್ಕೂ ಎಲ್ಲ ಭಾಷೆಗಳಲ್ಲಿಯೂ ವ್ಯತ್ಯಾಸವಿದೆ. ಜನಪದ ಕಥೆ ಕಾಲ್ಪನಿಕ; ಪುರಾಣ ಸತ್ಯವಾದದ್ದನ್ನು ಕುರಿತಾದದ್ದು. ಜನಪದ ಕಥೆ ಲೌಕಿಕವಾದ್ದು; ಪುರಾಣ ಪವಿತ್ರವಾದದ್ದು. ಆದರೆ ಎಲ್ಲ ಭಾಷೆಗಳಲ್ಲಿಯೂ ಇವೆರಡರ ವ್ಯತ್ಯಾಸ ಇದೇ ರೀತಿ ಇರುತ್ತವೆಂದು ಭಾವಿಸಲು ಸಾಧ್ಯವಿಲ್ಲ. ಪುರಾಣ ಮತ್ತು ಜನಪದ ಕಥೆ ಭಿನ್ನ ಸ್ವರೂಪದವು ಎಂದು ಗೆರೆ ಎಳೆಯಬಹುದಾದರೂ, ಇವೆರಡಕ್ಕೂ ಇರುವ ವ್ಯತ್ಯಾಸ ಸಾಂಸ್ಕೃತಿಕ ಕೋಡಿಂಗ್‌ನಿಂದ ಕೂಡಿರುತ್ತವೆ. ಜನಪದ ಕಥೆ ಮತ್ತು ಪುರಾಣ ಕ್ರಮವಾಗಿ ಅಕಂ ಮತ್ತು ಪುರಂ ಪ್ರಕಾರಗಳೆಂದು ಹೇಳಬಹುದು. ಹೀಗೆ ಹೇಳಲು ಅನೇಕ ಕಾರಣಗಳಿವೆ. ಅಕಂ ಕಾವ್ಯ ಪ್ರಕಾರದಲ್ಲಿ ಹೆಸರುಗಳಿರುವುದಿಲ್ಲ, ಜನಪದ ಕಥೆಗಳಲ್ಲಿಯೂ ಹೆಸರುಗಳಿರುವುದಿಲ್ಲ. ಅಕಂ ಪ್ರಕಾರ ಆಂತರಿಕ ವಿಷಯಗಳಿಗೆ ಅಂದರೆ ರಕ್ತ ಸಂಬಂಧಗಳಿಗೆ, ಮದುವೆಗೆ, ಪ್ರೀತಿಗೆ ಸಂಬಂಧಿಸಿದುದು. ಆದರೆ ಪುರಂ ಸಮಾಜ, ಬ್ರಹ್ಮಾಂಡ, ಘರ್ಷಣೆ, ಯುದ್ಧ ಮೊದಲಾದ ಬಾಹ್ಯ ವಿಷಯಗಳಿಗೆ ಸಂಬಂಧಪಟ್ಟವು. ಭಾರತದ ಪುರಾಣಗಳನ್ನು ನೋಡಿ, ದೇವತೆಗಳು ಮತ್ತು ರಾಕ್ಷಸರಿಗೆ ನಡೆಯುವ ಯುದ್ಧಗಳು ಸಾಮಾನ್ಯವಾಗಿ ಎಲ್ಲಾ ಪುರುಷ ಮತ್ತು ಸ್ತ್ರೀ ದೇವತೆಗಳಿಗೆ ಸಂಬಂಧಿಸಿದ ಪುರಾಣಗಳಲ್ಲಿಯೂ ಇರುತ್ತವೆ. ವಿಷ್ಣು, ಶಿವ, ಶಕ್ತಿ ಈ ಯಾವ ದೇವತೆಯೂ ಯಾರಾದರೂ ರಾಕ್ಷಸನ ಜೊತೆ ಯುದ್ಧ ಮಾಡುತ್ತಾರೆ. ಪುರಾಣಗಳಲ್ಲಿ ಎಲ್ಲಿಯೂ ನಿಮಗೆ ಅತ್ತೆಯ ಪಾತ್ರ ಬರುವುದಿಲ್ಲ. ಜನಪದ ಕಥೆಗಳಲ್ಲಿ ಯಾವುದೇ ಒಂದು ದೊಡ್ಡ ಪ್ರಮಾಣದ ಯುದ್ಧದ ವರ್ಣನೆ ಬರುವುದಿಲ್ಲ. ಅಕಂ ಮತ್ತು ಪುರಂ ಪ್ರಕಾರಗಳಿಗೆ ವ್ಯತ್ಯಾಸ ಕಲ್ಪಿಸುವ ಇಂತಹ ಎಷ್ಟೋ ಅಂಶಗಳಿವೆ.

ಇದು ಒಂದು ಹೊಸ ವಿಚಾರವಲ್ಲವೆ?

ಆದರೆ ಜನಪದ ಕಥೆ ಮತ್ತು ಪುರಾಣಕ್ಕೆ ಈ ರೀತಿಯ ವ್ಯತ್ಯಾಸವಿದೆಯೆಂದು ನಾವು ಯೋಚನೆ ಮಾಡುವುದಿಲ್ಲ. ಅವುಗಳ ಕಾರ್ಯ ಕೂಡ ವಿಭಿನ್ನವಾದುದು. ಆದರೆ ಈ ವ್ಯತ್ಯಾಸವನ್ನು ತೀರಾ ಖಚಿತವಾಗಿ ತೆಗೆದುಕೊಳ್ಳಬಾರದು. ಇವೆರಡಕ್ಕೂ ನಡುವೆ ವ್ರತ ಕಥೆ ಬರುತ್ತದೆ. ಇದು ಜನಪದ ಕಥೆಯಂತೆ ಆರಂಭವಾಗಿ ಅನಂತರ ಪುರಾಣದ ಕೆಲಸವನ್ನು ಮಾಡುತ್ತದೆ. ಸಂದರ್ಭದ ದೃಷ್ಟಿಯಿಂದಲೂ ಈ ಪ್ರಕಾರಗಳನ್ನು ಪರಿಶೀಲಿಸಬೇಕಾಗುತ್ತದೆ. ಪುರಾಣಗಳನ್ನು ಅಜ್ಜಿಯರು ಮೊಮ್ಮಕ್ಕಳಿಗೆ ಹೇಳುವುದಿಲ್ಲ. ಆದರೆ ಜನಪದ

ಕಥೆಗಳನ್ನು ಹೇಳುತ್ತಾರೆ.

ಈ ವರ್ಗೀಕರಣದಲ್ಲಿ ಐತಿಹ್ಯಗಳನ್ನು ಎಲ್ಲಿ ಹೊಂದಿಸಬಹುದು?

ಐತಿಹ್ಯಗಳು ಸಾರ್ವಜನಿಕ ವಿಷಯಗಳಿಗೆ ಸಂಬಂಧಪಡುತ್ತವೆ. ಹೀಗಾಗಿ ನಾನು ಅವುಗಳನ್ನು ಪುರಂ ಪ್ರಕಾರಕ್ಕೆ ಸೇರಿಸುತ್ತೇನೆ. ಒಂದು ಪಟ್ಟಣಕ್ಕೆ ಇಟ್ಟಿರುವ ಹೆಸರು ಏಕೆ ಬಂತು? ಒಂದು ಬೆಟ್ಟಕ್ಕೆ ಇಟ್ಟಿರುವ ಹೆಸರು ಏಕೆ ಬಂತು? ಎಂಬುದಕ್ಕೆ ಸಂಬಂಧಿಸಿದ ಕಥೆ; ಅಥವಾ ಒಬ್ಬ ಸಾಂಸ್ಕೃತಿಕ ವೀರನ ಬಗ್ಗೆ ಕಟ್ಟುವ ಕಥೆ ಇವೆಲಾ ಐತಿಹ್ಯಗಳಾಗುತ್ತವೆ. ಸಾಮಾನ್ಯವಾಗಿ ಇವು ಕೌಟುಂಬಿಕ ವಿಷಯಗಳಿಗೆ ಸಂಬಂಧಿಸಿದವುಗಳು ಆಗಿರುವುದಿಲ್ಲ. ಆದರೆ ಜನಪದ ಕಥೆಗಳು ಹೆಚ್ಚಾಗಿ ಅತ್ತೆ ಸೊಸೆ, ತಂದೆ ಮಕ್ಕಳು, ತಾಯಿ ಮತ್ತು ಹೆಣ್ಣು ಮಕ್ಕಳು, ಸಹೋದರರು, ಸಹೋದರಿಯರು ಇವರ ಸಂಬಂಧಗಳನ್ನು ಕುರಿತದ್ದಾಗಿರುತ್ತದೆ. ಮಾನಸಿಕವಾಗಿಯೂ ಇವು ಪುರಾಣಗಳಿಗಿಂತ ಹೆಚ್ಚು ಹತ್ತಿರವಾಗುತ್ತವೆ. ಹಾಗೆ ನೋಡಿದರೆ ಪುರಾಣಗಳಿಗಿಂತಲೂ ಹೆಚ್ಚಾಗಿ ಜನಪದ ಕಥೆಗಳಲ್ಲಿಯೇ ದೇಸಿ ಮನೋವಿಶ್ಲೇಷಣೆಯನ್ನು ಮತ್ತು ಮನುಷ್ಯ ಸಂಬಂಧಗಳಲ್ಲಿರುವ ನಿಜವಾದ ಸಮಸ್ಯೆಗಳನ್ನು ಕಾಣಬಹುದು. ಈ ರೀತಿಯ ಸಂಬಂಧಗಳು ಪುರಾಣದಲ್ಲಿ ಕಂಡುಬರುವುದಿಲ್ಲ. ಈ ದೃಷ್ಟಿಯಿಂದ ಪುರಾಣಗಳನ್ನು 'ಪುರಂ' ಪ್ರಕಾರಕ್ಕೂ, ಜನಪದ ಕಥೆಗಳನ್ನು 'ಅಕಂ' ಪ್ರಕಾರಕ್ಕೂ ಸೇರಿಸಬಹುದು. ಆದರೆ ಪ್ರಾಚೀನ ತಮಿಳರು ಇಷ್ಟೆಲ್ಲಾ ಯೋಚನೆ ಮಾಡಿರಲಿಕ್ಕಿಲ್ಲ. ಕಾವ್ಯವನ್ನು ಮಾತ್ರ ಅವರು ಈ ಎರಡು ಪ್ರಕಾರಗಳನ್ನಾಗಿ ವರ್ಗೀಕರಿಸಿದ್ದರು ಅಷ್ಟೆ. ಆದರೆ ಈ ಒಂದು ವರ್ಗೀಕರಣವನ್ನು ಇತರ ಸಾಂಸ್ಕೃತಿಕ ಪ್ರಕಾರಗಳಿಗೂ ವಿಸ್ತರಿಸಬಹುದೇ ಎಂಬುದು ನನ್ನ ಆಸಕ್ತಿಯ ವಿಷಯ. ಹೀಗಾಗಿ ಇದು ಉಪಯುಕ್ತವಾದುದು ಎಂದು ನಾನು ಭಾವಿಸಿದ್ದೇನೆ. ಇದು ಬಹುಶಃ ದಕ್ಷಿಣ ಭಾರತಕ್ಕೆ ಮಾತ್ರವಲ್ಲ ಭಾರತದ ಬಹು ಭಾಗಗಳಿಗೆ ಅನ್ವಯಿಸುತ್ತದೆ. ಇದು ವಿಶ್ವವ್ಯಾಪಿ ಆದುದು ಎಂದು ನಾನು ಹೇಳಲಾರೆ. ಪಿಯರ್ ಬೋರ್ಡಿಯೋ ಎಂಬುವವರು ಆಫ್ರಿಕಾದ ಸಮಾಜಗಳ ಬಗ್ಗೆ ಬರೆದಿದ್ದಾರೆ. ಅಲ್ಲಿಯೂ ಕೂಡ ಜನಪದ ಕಥೆಗಳು ಮಾತ್ರವಲ್ಲ , ಆಟಗಳು, ಆಚರಣೆಗಳನ್ನು ಕೂಡ ಅಕಂ ಮತ್ತು ಪುರಂ ಪ್ರಕಾರಗಳಾಗಿ ವರ್ಗೀಕರಿಸಬಹುದು. ಎಷ್ಟೋ ಆಚರಣೆಗಳನ್ನು ಸಾರ್ವಜನಿಕವಾಗಿ ಮಾಡುವುದೇ ಇಲ್ಲ. ಸಂಸ್ಕೃತದಲ್ಲಿಯೂ ಇವುಗಳನ್ನು 'ಗೃಹ್ಯ' ಎಂದು ಕರೆಯುತ್ತಾರೆ. ಹಾಗೆಯೇ ವೈದಿಕ ಸಂಸ್ಕೃತಿಯಲ್ಲಿ ಬಲಿ ಕೊಡುತ್ತಿದ್ದುದು ಮನೆಯಿಂದ ಹೊರಗೆ . ಅದಕ್ಕಾಗಿಯೇ ಸಾರ್ವಜನಿಕ ಸ್ಥಳ ಕೂಡ ಇತ್ತು. ಈ ಬಗ್ಗೆ ಯೋಚನೆ ಮಾಡಿದಾಗ ಈ ಎರಡೂ ಪ್ರಕಾರಗಳನ್ನು ಇದಕ್ಕೆಲ್ಲಾ ವಿಸ್ತರಿಸಬಹುದು ಎನಿಸಿತು. ಇದು ವಿಶ್ವ ವ್ಯಾಪಿಯಾದದ್ದೇ ಅಲ್ಲವೇ ನನಗೆ ಗೊತ್ತಿಲ್ಲ . ಆದರೆ ಬಹಳಷ್ಟು ಕಡೆ ಇದು ಅನ್ವಯವಾಗುತ್ತದೆ. ಪ್ರಾಚೀನ ತಮಿಳು ಕಾವ್ಯದಲ್ಲಿಯ ಈ ಕಲ್ಪನೆಯನ್ನು ಜಾನಪದ ಸಾಮಗ್ರಿಗೂ ನಾನು ಅನ್ವಯಿಸಿದ್ದೇನೆ. ಶಿಷ್ಟ ಮತ್ತು ಜನಪದ ಇವುಗಳ ನಡುವೆ ತೀರಾ ಖಚಿತವಾದ ಗೆರೆ ಎಳೆಯುವುದು ಕಷ್ಟ. ಅವು ಒಂದಕ್ಕೊಂದು ಹಲವಾರು ರೀತಿಗಳಲ್ಲಿ ಸಂಬಂಧಪಟ್ಟಿರುತ್ತವೆ. ಇವೆರಡರ ನಡುವೆ ಸಂವಾದವಿದೆ. ಸಾಂಸ್ಕೃತಿಕ ಸಾಮಗ್ರಿಯನ್ನು ಇದು ಜಾನಪದ ಇದು ಜಾನಪದವಲ್ಲ ಎಂದು ಪ್ರತ್ಯೇಕಿಸಬಾರದು. ಇವುಗಳನ್ನು ಪ್ರತ್ಯೇಕಿಸುವುದಕ್ಕಿಂತ ಇವುಗಳಲ್ಲಿ ಒಂದಕ್ಕೂ ಇನ್ನೊಂದಕ್ಕೂ ಇರುವ ಸಂಬಂಧಗಳನ್ನು ಕುರಿತು ವಿಚಾರಮಾಡುವುದು ಸೂಕ್ತ.

ಪುರಾಣ ಮತ್ತು ಐತಿಹ್ಯಗಳಿಗೆ ಹೇಗೆ ವ್ಯತ್ಯಾಸ ಕಲ್ಪಿಸುತ್ತೀರಿ? ಒಂದು ಸಂಸ್ಕೃತಿಯಿಂದ ಇನ್ನೊಂದು

ಸಂಸ್ಕೃತಿಗೆ ಇವುಗಳ ಸಂಬಂಧ ವ್ಯತ್ಯಾಸವಾಗುತ್ತದಲ್ಲವೆ?

ಹೌದು ನನಗೂ ಹಾಗೇ ಅನಿಸುತ್ತದೆ . ಐತಿಹ್ಯಗಳ ಬಗೆಗೆ ನನಗೆ ಅಷ್ಟಾಗಿ ಗೊತ್ತಿಲ್ಲ.ನಾನು ಅದರ ಬಗ್ಗೆ ಹೆಚ್ಚು ಕೆಲಸಮಾಡಿದವನಲ್ಲ. ಆದರೆ ಐತಿಹ್ಯ ಸ್ಥಳೀಯ ಇತಿಹಾಸಕ್ಕೆ ಸಂಬಂಧಪಟ್ಟದ್ದು ಮತ್ತು ಅದರ ಸಮೀಪ ಭೂತಕಾಲಕ್ಕೆ ಸಂಬಂಧಿಸಿದ್ದು. ಆದರೆ ಪುರಾಣ ಕಾಲಾತೀತವಾದ್ದು ಅಥವಾ ದೂರ ಭವಿಷ್ಯಕ್ಕೆ ಸಂಬಂಧಿಸಿದ್ದು. ಐತಿಹ್ಯಗಳು ಐತಿಹಾಸಿಕ ವ್ಯಕ್ತಿಗಳಿಗೆ, ಪ್ರದೇಶಗಳಿಗೆ ಹತ್ತಿರವಾದದ್ದು. ಆದರೆ ಪುರಾಣಗಳು ಹಾಗಿರುವುದಿಲ್ಲ. ಇವೆರಡಕ್ಕೂ ಇರುವ ವ್ಯತ್ಯಾಸಗಳ ಬಗ್ಗೆ ನಾನು ಖಚಿತವಾಗಿ ಹೇಳಲಾರೆ. ನಾನು ಈ ಬಗ್ಗೆ ಇನ್ನೂ ಹೆಚ್ಚು ಯೋಚಿಸಬೇಕು.

ಆಕಂ ಪ್ರಕಾರದ ಜನಪದ ಕೇಗಳನ್ನು ಹೇಳುವಾಗ ಮಕ್ಕಳು ಮತ್ತು ಕುಟುಂಬದ ಸದಸ್ಯರು ಶ್ರೋತೃಗಳಾಗಿರುತ್ತಾರೆ. ಕಥೆಯನ್ನು ಕೇಳುತ್ತಾ ಹೂಂ ಗುಟ್ಟುತ್ತಾರೆ. ಆದರೆ ಸಾರ್ವಜನಿಕ ಪ್ರದರ್ಶನಗಳಲ್ಲಿ ನಾವು ಇದನ್ನು ಕಾಣುವುದಿಲ್ಲ ಅಲ್ಲವೆ?

ಸಾರ್ವಜನಿಕ ಪ್ರದರ್ಶನಗಳಲ್ಲಿ ಪ್ರದರ್ಶಕನಿಗೆ ಸಹಾಯಕನೊಬ್ಬನಿರುತ್ತಾನೆ. ಅವನು ಹೂಂಗುಟ್ಟುತ್ತಾನೆ. ಇತರ ಬಗೆಯ ಪ್ರತಿಕ್ರಿಯೆಗಳನ್ನು ತೋರಿಸುತ್ತಾನೆ. ಶ್ರೋತೃವರ್ಗದಿಂದಲೂ ಚಪ್ಪಾಳೆ ತಟ್ಟುವುದು ಮೊದಲಾದ ಪ್ರತಿಕ್ರಿಯೆಗಳೂ ಇರುತ್ತವೆ. ಉದಾಹರಣೆಗೆ ಗೊಂದಲಿಗರ ಮೇಳವನ್ನು ತೆಗೆದುಕೊಳ್ಳಿ. ಮುಖ್ಯ ಪ್ರದರ್ಶಕನ ಜೊತೆಗಿರುವ ಸಹಾಯಕ 'ಹೌದು ಗುರುವೇ', 'ಇನ್ನಷ್ಟು ಹೇಳಿ' ಎಂದು ಮುಂತಾಗಿ ಪ್ರತಿಕ್ರಿಯೆ ಸೂಚಿಸುತ್ತಾನೆ. ಅವನು ಒಂದು ರೀತಿಯಲ್ಲಿ ಪ್ರೇಕ್ಷಕರಿಗೆ ಬದಲೀ ವ್ಯಕ್ತಿಯಾಗಿ ಕೆಲಸ ಮಾಡುತ್ತಾನೆ. ಪ್ರೇಕ್ಷಕರನ್ನು ಒಳಕ್ಕೆ ತರುವ ಪ್ರಯತ್ನ ಮಾಡುತ್ತಾನೆ.

ಈ ಬಗೆಯ ಪ್ರದರ್ಶನ ಟೆಲಿವಿಜನ್‌ನಂತಹ ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಬಂದಾಗ ಏನಾಗುತ್ತದೆ?

ಭಾರತದ ಟೆಲಿವಿಜನ್‌ನಲ್ಲಿ ಹೇಗೆ ನಿಭಾಯಿಸುತ್ತಾರೋ ನನಗೆ ಗೊತ್ತಿಲ್ಲ. ಆದರೆ ಅಮೆರಿಕದ ಟಿ.ವಿ.ಯಲ್ಲಿ ನಗುವನ್ನು ಬಿತ್ತರಿಸುತ್ತಾರೆ. ಇದನ್ನು ಕ್ಯಾನ್ನಡ್ ಲಾಫ್ಟರ್ ಎಂದು ಕರೆಯುತ್ತಾರೆ. ಅಲ್ಲಿಯೂ ಕೂಡ ಪ್ರತಿಕ್ರಿಯೆ ವ್ಯಕ್ತಪಡಿಸುವುದಕ್ಕೆ ಪ್ರೇಕ್ಷಕರಿರುತ್ತಾರೆ. ಹೀಗಾಗಿ ಒಂದು ಕಾಮೆಡಿಯಲ್ಲಿ ಜೋಕನ್ನು ಹೇಳಿದಾಗ ನಗು ಇದ್ದೇ ಇರುತ್ತದೆ. ಸಾಮಾನ್ಯವಾಗಿ ಅಲ್ಲಿ ನಗುವನ್ನು ರೆಕಾರ್ಡ್‌ಮಾಡಿ ಪ್ರಸಾರ ಮಾಡುತ್ತಾರೆ.

'ಯೆಸ್ ಪ್ರೈಮ್ ಮಿನಿಸ್ಟರ್ ' ಎಂಬ ಒಂದು ಸೀರಿಯಲ್ ಬಂದಿತ್ತು . ಅದರಲ್ಲಿ ನಗು ಬಿತ್ತರಿಸುತ್ತಿದ್ದರು ..

ಇದು ಅಮೆರಿಕನ್ ಟೆಲಿವಿಜನ್‌ನಲ್ಲಿ ಮಾಮೂಲಾದ ವಿಷಯ.

ನಾನು ಕಥೆ ಹೇಳುವ ಒಬ್ಬ ಹೆಂಗಸಿಗೆ ಕಥೆ ಹೇಳುವಂತೆ ಕೇಳಿದೆ. ಆದರೆ ನಾನು ಹೂಂಗುಟ್ಟುವದಿಲ್ಲವೆಂದು ಹೇಳಿದೆ . ಇದನ್ನು ಪ್ರಯತ್ನಪೂರ್ವಕವಾಗಿ ಮಾಡಿದಾಗ ಆಕೆ ಅದು ಚೆನ್ನಾಗಿರುವುದಿಲ್ಲ ಎಂದು ಹೇಳಿದಳು. ಇದರಿಂದ ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಸಾಧ್ಯವಾಗುವುದಿಲ್ಲವೆಂದು ಹೇಳಿದಳು. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಅದು ಸರಿಯಲ್ಲ. ನೀವೊಂದು ಪುಸ್ತಕವನ್ನು ಓದುತ್ತೀರಿ ಎಂದಿಟ್ಟುಕೊಳ್ಳಿ . ಅದಕ್ಕೆ ಯಾರು ಪ್ರತಿಕ್ರಿಯೆ

ವ್ಯಕ್ತಪಡಿಸುತ್ತಿದ್ದಾರೆ ಎನ್ನುತ್ತೀರಿ? ಪುಸ್ತಕ ಒಂದು ವಿಭಿನ್ನ ಮಾಧ್ಯಮ. ನಾಗರೀಕತೆಯಿಂದಾದ ಪರಿಣಾಮ ಎಂದರೆ ಮುಖಾಮುಖಿಯಾದ ಸಾಮಾಜಿಕ ಸಂದರ್ಭದ ಬದಲು ಪ್ರದರ್ಶಕ ಮತ್ತು ಶ್ರೋತೃ ದೂರದಲ್ಲಿರುವಂತಾಗಿದೆ. ಉದಾಹರಣೆಗೆ ನೀವು ಟೆಲೆಫೋನ್‌ನಲ್ಲಿ ಮಾತನಾಡುತ್ತೀರಿ. ಆದರೆ ಅವರನ್ನು ನೀವು ನೋಡುವುದಿಲ್ಲ. ಟೆಲಿವಿಜನ್ ಪ್ರದರ್ಶನವೊಂದನ್ನು ನೋಡುತ್ತೀರಿ. ಟಿ.ವಿ. ಯಲ್ಲಿರುವವರನ್ನು ನೀವು ನೋಡಬಹುದು ಆದರೆ ಅದರಲ್ಲಿರುವವರು ನಿಮ್ಮನ್ನು ನೋಡಲಾರರು. ನೀವು ಪುಸ್ತಕ ಓದುವಾಗ ಆ ಪುಸ್ತಕದ ಕರ್ತೃ ಹತ್ತು ಸಾವಿರ ಮೈಲಿ ದೂರ ಇರಬಹುದು. ಸಾವಿರ ವರ್ಷದ ಹಿಂದೆ ಪುಸ್ತಕವನ್ನು ಬರೆದಿರಬಹುದು. ಆದರೂ ನೀವು ಆ ಪುಸ್ತಕವನ್ನು ಓದುತ್ತೀರಿ. ಇಂತಹ ಸಂದರ್ಭಗಳಲ್ಲಿ ಪ್ರೇಕ್ಷಕರನ್ನು ನಿಮ್ಮ ಮನಸ್ಸಿನ ಒಳಗೇ ಸೃಷ್ಟಿಸಿಕೊಳ್ಳುತ್ತೀರಿ. ಇದಕ್ಕೆ ಭಿನ್ನವಾದ ಪ್ರತಿಕ್ರಿಯೆಗಳನ್ನು ಪಡೆಯುತ್ತೀರಿ. ಮುಖಾಮುಖಿ ಪ್ರತಿಕ್ರಿಯೆಯೊಂದೇ ಪ್ರತಿಕ್ರಿಯೆ ಎಂದು ನಾವು ಭಾವಿಸಬಾರದು.

ಭಾರತೀಯ ಮತ್ತು ಅಮೆರಿಕನ್ ಶ್ರೋತೃಗಳು ವ್ಯಕ್ತಪಡಿಸುವ ಪ್ರತಿಕ್ರಿಯೆಗಳು ಭಿನ್ನವಾಗಿರುವುದಿಲ್ಲವೆ? ಈ ಬಗ್ಗೆ ಏನು ಹೇಳುತ್ತೀರಿ?

ಇದು ಒಂದು ರೀತಿಯ ಪಂಕ್ಚುಏಶನ್ ಕ್ರಮ ಎಂದು ಹೇಳಬಹುದು. ಇದು ಸಂಜ್ಞೆಗಳನ್ನು ಮಾಡಿದಂತೆ. ಅಥವಾ ವಾಕ್ಯವನ್ನು ಪಂಕ್ಚುಏಟ್ ಮಾಡಿದಂತೆ. ನಾನು ಸಂಜ್ಞೆಗಳನ್ನು ಮಾಡುವಾಗ ನನ್ನ ವಾಕ್ಯವನ್ನು ಪಂಕ್ಚುಏಟ್ ಮಾಡುತ್ತಿರುತ್ತೇನೆ. ನನ್ನ ಸಂಜ್ಞೆಗಳಿಗೆ ನನ್ನ ವಾಕ್ಯದ ರಚನೆಗೆ ಸಂಬಂಧವಿದೆ. ಜನರ ನಡವಳಿಕೆ ಗಮನಿಸಿ. ಅವರು ಎರಡು ರೀತಿ ಪಂಕ್ಚುಏಟ್ ಮಾಡುತ್ತಾರೆ. ಅವರ ಮಾತಿನ ನಡುವೆ ಅಲ್ಲಲ್ಲಿ ನಿಲ್ಲಿಸುವುದರ ಮೂಲಕ ಮತ್ತು ಸಂಜ್ಞೆಗಳ ಮೂಲಕ ಶ್ರೋತೃಗಳ ಪ್ರತಿಕ್ರಿಯೆ, ಇನ್ನೊಂದು ಬಗೆಯಾದ ಪಂಕ್ಚುಏಶನ್ ಎಂದು ಹೇಳಬಹುದು. ಇದೊಂದು ರೀತಿಯ ಫೀಡ್ ಬ್ಯಾಕ್. ಮುಖಾಮುಖಿ ಸಂವಹನದಲ್ಲಿ ಒಂದು ಚಕ್ರ ಪೂರ್ಣಗೊಂಡಂತಾಗುತ್ತದೆ.

ಇತರ ಸಮಾಜವಿಜ್ಞಾನಗಳಿಗೆ ಹೋಲಿಸಿದಾಗ ಜಾನಪದ ವಿಜ್ಞಾನ ತೀರ ಇತ್ತೀಚಿನದು. ಇದರ ಪ್ರಭಾವ ಇತರ ಸಮಾಜ ವಿಜ್ಞಾನಗಳ ಮೇಲೆ ಹೇಗೆ ಆಗಿದೆ?

ಹೌದು. ಜಾನಪದ ವಿಜ್ಞಾನ ತೀರಾ ಈಚಿನ ಬೆಳವಣಿಗೆ. ಭಾರತದಲ್ಲಿ ಭಾಷಾ ವಿಜ್ಞಾನ ರೂಪುಗೊಂಡ ಆರಂಭದ ದಿನಗಳಲ್ಲಿ ಭಾಷಾ ವಿಜ್ಞಾನಿಗಳು ಕ್ಷೇತ್ರ ಕಾರ್ಯ ಮಾಡುತ್ತಿದ್ದರು. ಉದಾಹರಣೆಗೆ ಗ್ರಿಯರ್‌ಸನ್ ಅವರ 'ಲಿಂಗ್ವಿಸ್ಟಿಕ್ ಸರ್ವೇ ಆಫ್ ಇಂಡಿಯಾ' ದಲ್ಲಿ ಅವರು ಸಂಗ್ರಹಿಸಿದ ಪಠ್ಯಗಳು ಜನಪದ ಪಠ್ಯಗಳೇ ಆಗಿವೆ. ಜಾನಪದ ವಿಜ್ಞಾನ ಭಾಷಾ ವಿಜ್ಞಾನದ ಮೇಲೆ ಮಾಡಿರುವ ಪರಿಣಾಮಕ್ಕಿಂತ ಭಾಷಾವಿಜ್ಞಾನ ಜಾನಪದ ವಿಜ್ಞಾನದ ಮೇಲೆ ಮಾಡಿರುವ ಪರಿಣಾಮಗಳೇ ಹೆಚ್ಚು. ಭಾಷಾವಿಜ್ಞಾನಿಗಳೇ ಜಾನಪದ ವಿಜ್ಞಾನಿಗಳ ತಿಳುವಳಿಕೆಯನ್ನು ಹೆಚ್ಚಿಸಿದ್ದಾರೆ. ಗ್ರಿಮ್ ಸಹೋದರರ ವಿಚಾರದಲ್ಲಿ ಆದದ್ದು ಹೀಗೆಯೇ. ಮ್ಯಾಕ್ಸ್‌ಮುಲ್ಲರ್ ಸ್ಪಷ್ಟವಾಗಿ ಒಬ್ಬ ಜಾನಪದ ವಿದ್ವಾಂಸರಾಗಿರಲಿಲ್ಲ. ಶ್ರೇಷ್ಠ ದ್ರಾವಿಡ ಭಾಷಾ ವಿಜ್ಞಾನಿಯಾಗಿದ್ದ ಎಂ.ಬಿ. ಎಮಿನೋ ಅವರು ತೋಡಾ ಭಾಷೆಯ ಬಗ್ಗೆ ಅಧ್ಯಯನ ಮಾಡಿದ್ದಾರೆ. ಹಲವಾರು ಪ್ರಬಂಧಗಳನ್ನು ಒಳಗೊಂಡ ಅವರ ಪುಸ್ತಕಗಳಲ್ಲಿ ಜನಪದ ಆಶಯಗಳನ್ನು ಕುರಿತು ಪ್ರಸ್ತಾಪಿಸಿದ್ದಾರೆ. ''ಕೋಟಾ ಟೆಕ್ಸ್ಟ್ಸ್'', ''ತೋಡಾ ಸಾಂಗ್ಸ್'' ಭಾರತದಲ್ಲಿ ಸಂಗ್ರಹಿಸಿದ ಅತ್ಯುತ್ತಮ

ಜಾನಪದ ಸಾಮಗ್ರಿ.'ಈ ಜಾನಪದ ಪಠ್ಯಗಳನ್ನು ಅಭ್ಯಾಸ ಮಾಡುವುದರ ಮೂಲಕ ಅವರು ಭಾಷೆಯ ಬಗ್ಗೆ ಬಹಳಷ್ಟು ವಿಷಯಗಳನ್ನು ತಿಳಿದರು ಎಂಬುದು ಸ್ಪಷ್ಟ. ವಿಷಯವನ್ನು ಸಂಗ್ರಹಿಸಲು ಇದು ಅತ್ಯುತ್ತಮವಾದ ಒಂದು ಕ್ರಮ. ಬಹಳಷ್ಟು ಜನ ಮಾನವ ವಿಜ್ಞಾನಿಗಳು ಜಾನಪದದಲ್ಲಿ ಕೆಲಸ ಮಾಡಿಲ್ಲ. ಹಾಗೇನಾದರೂ ಮಾಡಿದ್ದೇ ಆದರೆ ಮಾನವ ವಿಜ್ಞಾನ ಕ್ಷೇತ್ರದ ಸ್ವರೂಪವನ್ನೇ ಅದು ಬದಲಾಯಿಸುತ್ತದೆ. ಭಾರತದ ಮಾನವ ವಿಜ್ಞಾನಿಗಳು ಜಾನಪದ ಸಂಗ್ರಹದಲ್ಲಿ ತೊಡಗಿದರೆ, ಜಾನಪದವನ್ನು ಅಭ್ಯಾಸ ಮಾಡಿದರೆ ಅವರಿಗೆ ಅದರಿಂದ ವಿಶೇಷವಾದ ಪ್ರಯೋಜನವಿದೆ. ಆದರೆ ವಾಸ್ತವವಾಗಿ ಆ ಪರಿಸ್ಥಿತಿ ಇನ್ನೂ ಬಂದಿಲ್ಲ. ಅಂತಹ ಅಪರೂಪದ ಕೆಲವು ವ್ಯಕ್ತಿಗಳಲ್ಲಿ ಎಂ.ಎನ್. ಶ್ರೀನಿವಾಸ ಅವರು ಒಬ್ಬರು. ಪೀಟರ್ ಕ್ಲಾಸ್ ಬಹುಮಟ್ಟಿಗೆ ಸಂಪೂರ್ಣ ಜಾನಪದ ವಿದ್ವಾಂಸರೇ ಆಗಿಬಿಟ್ಟಿದ್ದಾರೆ. ತಮ್ಮ ಕ್ಷೇತ್ರದ ತಿಳುವಳಿಕೆಯ ಜೊತೆಗೆ ಜಾನಪದ ಸಾಮಗ್ರಿಯಲ್ಲಿಯೂ ಕೂಡ ಮಾನವ ವಿಜ್ಞಾನಿಗಳು ಆಸಕ್ತಿಯನ್ನು ಇಟ್ಟುಕೊಂಡಿದ್ದೇ ಆದರೆ ಬಹಳಷ್ಟನ್ನು ಕಲಿಯಬಹುದು. ಈ ಕೆಲಸ ಈಗ ಆರಂಭವಾಗಿದೆ. ಈ ಸತ್ಯಾಂಶವನ್ನು ಈಗ ಕಂಡುಕೊಳ್ಳುತ್ತಿದ್ದಾರೆ. ಜಾನಪದದ ಕಲಾತ್ಮಕ ಅಭಿವ್ಯಕ್ತಿಯ ಕಡೆಗೆ ಮಾನವ ವಿಜ್ಞಾನಿಗಳು ಕೆಲಸ ಮಾಡಿದ್ದು ಕಡಿಮೆ. ಅವರಲ್ಲಿ ಎಥ್ನೋ ಮ್ಯುಜಿಕಾಲಾಜಿಯಲ್ಲಿ ಪರಿಣತರಾದವರಿದ್ದಾರೆ. ಆದರೆ ಈ ಬಗೆಯ ವಿಶೇಷ ಪರಿಣತಿಯ ಅಡ್ಡಗೋಡೆಗಳು ಕಳಗುರುಳಿ ಅವೆಲ್ಲಾ ಒಂದಾಗಬೇಕಾದ ಕಾಲ ಬರುತ್ತದೆ.

ಜಾನಪದದಮೇಲೆ ಅಭಿಜಾತ ಸೌಂದರ್ಯ ಮೀಮಾಂಸೆಯ ಪ್ರಭಾವಗಳೇನು?

ಭಾರತದಂತಹ ದೇಶದಲ್ಲಿ ಕಾವ್ಯ ಮೀಮಾಂಸೆಯ ಬಗ್ಗೆ ಮಾತಾಡುವಾಗ ಜನಪದ ಗೀತೆ, ಜನಪದ ಕಥೆ ಜನಪದ ಮಹಾಕಾವ್ಯಗಳನ್ನು ಗಣನೆಗೆ ತೆಗೆದುಕೊಳ್ಳಲೇಬೇಕು. ಉದಾಹರಣೆಗೆ ರಸ ಸಿದ್ಧಾಂತವನ್ನೇ ತೆಗೆದುಕೊಳ್ಳಿ, ರಸಸಿದ್ಧಾಂತದಿಂದ ಭಾರತದ ಎಲ್ಲ ಸಾಹಿತ್ಯವನ್ನು ವಿವರಿಸಲು ಬಹಳಷ್ಟು ಸಾಧ್ಯವಾಗುವುದಿಲ್ಲ. ಅಥವಾ ಭಾರತದ ಬಹುಪಾಲು ಸಾಹಿತ್ಯಕ್ಕೆ ಅದು ಹೊಂದುವುದಿಲ್ಲ. ಮಹಾಭಾರತಕ್ಕೆ ಅದು ಹೊಂದುವುದು ಕಷ್ಟ. ಮಹಾಭಾರತ ಶಾಂತ ರಸವನ್ನು ಸೃಷ್ಟಿಸಿದೆ ಎಂದು ಹೇಳುವುದು ಐರಾನಿಕ್ ಆಗಿ ನನಗೆ ಕಾಣುತ್ತದೆ. ಭಯಂಕರ ಹಿಂಸೆಯ, ಕೊಲೆಯ ಈ ಕಾವ್ಯ ಗೊಂದಲದಿಂದ ಕೂಡಿದೆ. ಈ ಕಾವ್ಯ ಓದಿದ ಮೇಲೆ ನಮ್ಮ ಮನಸ್ಸು ಕಲಕಿ ಹೋಗುತ್ತದೆ. ಪರಿಸ್ಥಿತಿ ಹೀಗಿರುವಾಗ ಇದರ ಮುಖ್ಯರಸ ಶಾಂತ ರಸ ಎಂದು ಹೇಳುವುದು ನನಗೆ ತೀರಾ ಕೃತಕವೆಂದು ಕಾಣುತ್ತದೆ. ಏಕೆಂದರೆ ಇದು ವೀರ ಮತ್ತು ಶೃಂಗಾರಗಳ ಬಗ್ಗೆ ಮಾತ್ರ ವಿಚಾರಮಾಡುವುದಿಲ್ಲ. ಭೀಮ ದುಶ್ಯಾಸನನನ್ನು ಕೊಲ್ಲುವ ಸಂದರ್ಭ ಬೇರೆ ಯಾವುದೇ ರಸಕ್ಕಿಂತಲೂ ಹೆಚ್ಚಾಗಿ ಭೀಭತ್ಸ ಮತ್ತು ಭಯಾನಕ ರಸವನ್ನು ವ್ಯಕ್ತಪಡಿಸುತ್ತದೆ. ಈ ವಿಷಯ ಜನಪದ ಮಹಾಕಾವ್ಯಗಳಿಗೂ ಅನ್ವಯಿಸುತ್ತದೆ. ಉದಾಹರಣೆಗೆ ಪಾಡ್ದನಗಳನ್ನು ನೋಡಿರಿ. ಇವುಗಳಲ್ಲಿ ಕೆಲವು ಕೊಲೆಗೆ ಸಂಬಂಧಿಸಿವೆ. ಸ್ತ್ರೀ ದೇವತೆಗಳ ಪುರಾಣಗಳೂ ಹೀಗೆಯೇ. ಇವುಗಳ ಬಗ್ಗೆ ನಾವು ವಿಚಾರ ಮಾಡುತ್ತಿದ್ದೇವೆ. ಇವುಗಳು ಹಿಂಸೆ, ಮೋಸ, ಆತ್ಮಹತ್ಯೆ, ಅತ್ಯಾಚಾರ ಮತ್ತು ರಕ್ತಪಾತದಿಂದ ಕೊನೆಗೊಳ್ಳುತ್ತವೆ. ಈ ಬಗೆಯ ಕಥೆಗಳು ಭಾರತೀಯ ಸಾಹಿತ್ಯದ ಬಗ್ಗೆ ಈಗಿರುವ ಕಲ್ಪನೆಗಳನ್ನೇ ಬದಲಾಯಿಸುತ್ತವೆ. ಮೊದಲಿಗೆ ಭಾರತದ ಸಾಹಿತ್ಯವೆಲ್ಲ ಮಂಗಳಾಂತವಾದುದು, ದುರಂತವಾದುದಲ್ಲ ಎಂಬ ಅಭಿಪ್ರಾಯವಿತ್ತು. ಕೀತ್ ಮೊದಲಾದ ವಿದ್ವಾಂಸರು ಈ ಅಭಿಪ್ರಾಯ ಇಟ್ಟುಕೊಂಡಿದ್ದರು. ಇದರಿಂದಾಗಿ ಜನಪದ ಸಾಹಿತ್ಯದ ಹಿನ್ನೆಲೆಯಲ್ಲಿ ಭಾರತೀಯ ಸಾಹಿತ್ಯವನ್ನು ಹೊಸರೀತಿಯಲ್ಲಿ ಅರ್ಥೈಸಬೇಕಾಗಿದೆ. ಹಾಗೆಯೇ ದುರಂತ ನಾಟಕ ಎಂದರೇನು

ಎಂಬುದನ್ನೂ ಅರ್ಥೈಸಬೇಕಾಗುತ್ತದೆ. ಭಾರತೀಯ ದುರಂತನಾಟಕ ಅರಿಸ್ಟಾಟಲ್‌ನ ದುರಂತ ನಾಟಕದಂತೆ ಇಲ್ಲದಿರಬಹುದು. ಅದು ನಮ್ಮ ಕಲ್ಪನೆಯನ್ನು ವಿಸ್ತಾರಗೊಳಿಸುತ್ತದೆ.

ಅಂದರೆ ನಮ್ಮ ಪ್ರಕಾರಗಳ ಪರಿಮಿತಿಯನ್ನು ಮೀರಿ ನಾವು ಈ ವಿಷಯಗಳ ಬಗ್ಗೆ ವಿಚಾರಮಾಡಬೇಕಾಗುತ್ತದೆ ಅಲ್ಲವೆ?

ನಿಜ. ನಾವು ಜಾನಪದ ಸಾಮಗ್ರಿಯನ್ನು ಕುರಿತು ವಿಚಾರ ಮಾಡುವಾಗ ಸಂಸ್ಕೃತದಲ್ಲಿರುವ ಮತ್ತು ಪಾಶ್ಚಾತ್ಯರಲ್ಲಿರುವ ಕಾವ್ಯಮೀಮಾಂಸೆಯ ಸಿದ್ಧಾಂತಗಳನ್ನೂ ಮೀರಿ ವಿಚಾರ ಮಾಡಬೇಕು. ನಾವು ಮುಂದೆ ರೂಪಿಸಬೇಕಾಗಿರುವ ಕಾವ್ಯಮೀಮಾಂಸೆ ಮತ್ತು ಸೌಂದರ್ಯ ಮೀಮಾಂಸೆ ಕೇವಲ ರಸಸಿದ್ಧಾಂತ ಆಗಬಾರದು, ಅರಿಸ್ಟಾಟಲ್‌ನ ಸಿದ್ಧಾಂತ ಆಗಬಾರದು; ಅದಕ್ಕಿಂತ ಭಿನ್ನವಾಗಿರಬೇಕು.

ಸಂಸ್ಕೃತ ಕಾವ್ಯಮೀಮಾಂಸೆಯಲ್ಲಿ ಪ್ರದರ್ಶಕ ಮತ್ತು ಪ್ರೇಕ್ಷಕರ ನಡುವೆ ಅಂತರ ಇದ್ದೇ ಇರುತ್ತದೆ ಅಲ್ಲವೆ?

ನಿಜ. ರಸನಿಷ್ಪತ್ತಿ ಆಗಬೇಕಾದರೆ ಮಧ್ಯೆ ಮೂರು ನಾಲ್ಕು ಡಿಸ್‌ಜಂಕ್ಶನ್‌ಗಳಿವೆ. ರಾಮನಾಗಿ ನಟಿಸುತ್ತಿರುವವನು ರಾಮನಲ್ಲ, ಹಾಗೂ ರಾಮನ ಬಗ್ಗೆ ಬರೆಯುತ್ತಿರುವವನೂ ರಾಮನಲ್ಲ ಎಂಬುದು ಪ್ರೇಕ್ಷಕನಿಗೆ ಗೊತ್ತಿರುತ್ತದೆ. ಅಲ್ಲಿ ಪ್ರದರ್ಶಿತವಾಗುತ್ತಿರುವುದು ಆತನ ಭಾವಗಳಲ್ಲ. ಆದರೆ ರಾಮನನ್ನು ನೋಡುತ್ತಾ ಕುಳಿತ ಪ್ರೇಕ್ಷಕರು ಇದನ್ನು ಗುರುತಿಸುವುದಿಲ್ಲ. ಇದರಲ್ಲಿ ಯಾವುದೊಂದು ಛಿದ್ರಗೊಂಡರೂ ಅಲ್ಲಿ ರಸ ನಿಷ್ಪತ್ತಿಯಾಗುವುದಿಲ್ಲ. ರಸಸಿದ್ಧಾಂತದ ಪ್ರಕಾರ ಇದು ನಿಜ. ಆದರೆ ನಮ್ಮ ಕೆಲವು ಪ್ರಕಾರಗಳಲ್ಲಿ ಇದು ನಿಜವಲ್ಲ. ಭಕ್ತಿಯಲ್ಲಿ ಇದು ನಿಜವಲ್ಲ ಎನಿಸುತ್ತದೆ. ಒಬ್ಬ ಕವಿ ಕೃಷ್ಣನ ಬಗ್ಗೆ ಹಾಡುವಾಗ ಅಳುತ್ತಾನೆ. ತನ್ನನ್ನೇ ಕೃಷ್ಣನೊಂದಿಗೆ ಗುರುತಿಸಿಕೊಳ್ಳುತ್ತಾನೆ. ಒಬ್ಬ ನಟ ನರಸಿಂಹನಾಗಿ ನಟಿಸುವಾಗ ನಿಜವಾಗಿಯೂ ಆತನ ಮೇಲೆ ನರಸಿಂಹನ ಆವಾಹನೆಯಾಗಿಬಿಡುತ್ತದೆ. ನಿಜಕ್ಕೂ ಆಗಾಗ ನರಸಿಂಹನನ್ನು ಶಾಂತಗೊಳಿಸಬೇಕಾಗುತ್ತದೆ. ಹಾಗೆ ನಟಿಸುವುದನ್ನೂ ಕೆಲವೊಮ್ಮೆ ನಿಷೇಧಿಸಲಾಗಿದೆ. ನಮ್ಮೆಲ್ಲಾ ಈ ಆವಾಹನಾ ಆಚರಣೆಗಳು(ಪೊಸೆಶನ್ ರಿಚುವಲ್ಸ್) ನಮ್ಮ ಸಾಹಿತ್ಯ ಪ್ರಕಾರಗಳಿಗೆ ತುಂಬಾ ಹತ್ತಿರವಾಗಿವೆ. ಅಥವಾ ಉದಾಹರಣೆಗೆ, ಒಬ್ಬ ಪ್ರೇಕ್ಷಕ (ಭಕ್ತ) ಕೃಷ್ಣನನ್ನು ನೋಡಿದೊಡನೆ ಆತ ತನ್ನನ್ನು ಕೃಷ್ಣನೊಂದಿಗೆ ಗುರ್ತಿಸಿಕೊಳ್ಳುತ್ತಾನೆ. ತಮ್ಮ ಸ್ಥಳವನ್ನು ಗೋಕುಲ ಎಂದುಕೊಳ್ಳುತ್ತಾನೆ. ಚೈತನ್ಯಪಂಥದ ಭಕ್ತಿಯಲ್ಲಿ ಇದನ್ನು ಗುರ್ತಿಸಬಹುದು. ರಸಸಿದ್ಧಾಂತದ ಪ್ರಕಾರ ಹೀಗೆ ಗುರ್ತಿಸಿಕೊಳ್ಳಬಾರದು. ಆದರೆ ಕವಿ ವಾಸ್ತವವಾಗಿ ಕೃಷ್ಣನ ಕಥೆಯ ವಿಭಿನ್ನ ಪಾತ್ರಗಳೊಡನೆ ತನ್ನನ್ನು ತಾನು ಗುರ್ತಿಸಿಕೊಂಡು ದರಲ್ಲಿ ಸಂಪೂರ್ಣವಾಗಿ ಮಗ್ನನಾಗುತ್ತಾನೆ. ಆದುದರಿಂದ ಭಕ್ತಿಪಂಥದಲ್ಲಿ ಪ್ರೇಕ್ಷಕರು, ನಟರು, ಕಥೆಯ ವಿಷಯದಲ್ಲಿ ಸಂಪೂರ್ಣ ಮಗ್ನರಾಗಿರುತ್ತಾರೆ.

ಆದರೆ ಭಾರತೀಯ ಕಾವ್ಯಮೀಮಾಂಸೆಯಲ್ಲಿ ರಸಾನುಭವ ಮತ್ತು ಭಾವಾನುಭವ ಇವೆರಡಕ್ಕೂ ವ್ಯತ್ಯಾಸವನ್ನು ಗುರ್ತಿಸಲಾಗಿದೆಯಲ್ಲವೆ?

ಅದು ನಿಜ. ಅವೆರಡೂ ವಾಸ್ತವವಾಗಿ ಭಿನ್ನವಾದುವು. ಆದರೆ ಜನಪದ ಸೌಂದರ್ಯ ಮೀಮಾಂಸೆಯಲ್ಲಿ

ಆದರಲ್ಲಿಯೂ ಭಕ್ತಿಗೆ ಸಂಬಂಧಿಸಿದಂತೆ ಈ ಬಗ್ಗೆ ಭಿನ್ನವಾದ ರೀತಿಯಲ್ಲಿ ಆಲೋಚನೆ ಮಾಡಲೇ ಬೇಕು. ಏಕೆಂದರೆ ಈ ಸಂದರ್ಭಗಳಲ್ಲಿ ರಸ ಮತ್ತು ಭಾವ ಇವೆರಡಕ್ಕೂ ಗಡಿರೇಖೆಯನ್ನು ಎಳೆಯುವುದುಕಷ್ಟ.

ಅಂದರೆ ಕಾವ್ಯಮೀಮಾಂಸೆಯ ಅಧ್ಯಯನಕ್ಕೆ ನೀವು ಪ್ರತಿಪಾದಿಸುತ್ತಿರುವ ಈ ವಿಚಾರ ಒಂದು ಹೊಸ ಆಯಾಮವನ್ನು ಕೊಡುತ್ತದೆ ಅಲ್ಲವೆ?

ಹೌದು.ನಾನು ಭಾವದ ಮೀಮಾಂಸೆಯ ಬಗ್ಗೆ ಮಾತನಾಡುತ್ತಿದ್ದೇನೆ.ಕೇವಲ ರಸದ ಮೀಮಾಂಸೆಯ ಬಗ್ಗೆ ಮಾತ್ರ ಅಲ್ಲ.ಭಾವಕ್ಕೆ ಸಂಬಂಧಿಸಿದ ಮೀಮಾಂಸೆಯನ್ನು ನಾವು ಗಂಭೀರವಾಗಿ ಪರಿಗಣಿಸಲೇ ಬೇಕಾಗುತ್ತದೆ.ಅದರಲ್ಲಿಯೂ ಜಾನಪದ ಸಾಮಗ್ರಿಯನ್ನು ಕುರಿತು ತಮಿಳು ಭಕ್ತಿ ಸಾಹಿತ್ಯವನ್ನು ಕುರಿತು ಮಾತನಾಡುವಾಗ ಇವುಗಳಿಗಿರುವ ಸಂಬಂಧಗಳನ್ನು ಕುರಿತು ವಿಚಾರ ಮಾಡಬೇಕಾಗುತ್ತದೆ.ಭಾವ ಮತ್ತು ರಸ ಇವೆರಡಕ್ಕೂ ಗಡಿರೇಖೆಯನ್ನು ಎಳೆಯುವುದರ ಬಗ್ಗೆ ಮಾತ್ರ ನಾನು ವಿಶೇಷವಾಗಿ ಆಸಕ್ತನಾಗಿದ್ದೇನೆ ಎಂದರ್ಥವಲ್ಲ.ಒಂದು ಇನ್ನೊಂದರ ಮೇಲೆ ಯಾವ ರೀತಿಯ ಬೆಳಕನ್ನು ಚೆಲ್ಲುತ್ತದೆ ಎಂಬುದರ ಬಗ್ಗೆಯೂ ನಾನು ಆಸಕ್ತನಾಗಿದ್ದೇನೆ.ಏಕೆಂದರೆ ಒಂದು ಸಂಸ್ಕೃತಿಯ ಒಳಗೆ ಇವೆಲ್ಲಾ ವಾಟರ್ ಟೈಟ್ ಕಂಪಾರ್ಟ್‌ಮೆಂಟ್‌ಗಳಲ್ಲ.ಒಂದರೊಡನೊಂದು ಸಂವಾದ ಮಾಡುತ್ತಿರುತ್ತವೆ.ಒಂದು ಸಂಸ್ಕೃತಿಯಲ್ಲಿ ಈ ಬಗೆಯ ಅನೇಕ ಸಂವಾದಗಳ ಸರಣಿಯೇ ಇರುತ್ತದೆ.ಸಂಸ್ಕೃತಿಯ ಚಲನಶೀಲತೆ ಈ ರೀತಿ ಇರುತ್ತದೆ.ಇಲ್ಲದಿದ್ದಲ್ಲಿ ಭಾರತೀಯ ಸಂಸ್ಕೃತಿಯನ್ನು ಸ್ಥಿರವಾದ ,ಸಂಪೂರ್ಣವಾಗಿ ಚಲನರಹಿತವಾದ್ದು ಎಂದು ಭಾವಿಸಿದಂತಾಗುತ್ತದೆ .ನಾವು ಜಾನಪದದ ಬಗ್ಗೆ ಹೀಗೆಯೇ ಆಲೋಚನೆ ಮಾಡುತ್ತೇವೆ.ಅಜ್ಜ ಕಥೆಯನ್ನು ಹೇಳುವಾಗ ಪ್ರತಿಸಾರಿಯೂ ಹೊಸದಾಗಿಯೇ ಹೇಳುತ್ತಾಳೆ.ಆಕೆ ಕೇವಲ ಒಂದೇ ರೀತಿಯಲ್ಲಿ ಹೇಳುವುದಿಲ್ಲ.ಪ್ರತಿಬಾರಿಯೂ ಅದನ್ನು ಹೊಸದಾಗಿ ಪುನಃಸೃಷ್ಟಿ ಮಾಡುತ್ತಾಳೆ.

ಅಮೆರಿಕಾದಲ್ಲಿ ರೂಪಿಸಿಕೊಂಡಿರುವ ನಗರ ಜಾನಪದದ ಬಗ್ಗೆ ನಿಮ್ಮ ಅನಿಸಿಕೆಗಳು ...

ಅಮೆರಿಕಾದಲ್ಲಿರುವಂತಹ ನಗರಗಳು ನಮ್ಮಲ್ಲಿಯೂ ರೂಪುಗೊಳ್ಳುತ್ತಿವೆ.ಜಾನಪದ ಕೇವಲ ಹಳ್ಳಿಗೆ,ರೈತಾಪಿ ಜನರಿಗೆ ಮಾತ್ರ ಸೀಮಿತವಾದದ್ದಲ್ಲ.ನಮ್ಮಲ್ಲಿಯೂ ಪಟ್ಟಣಗಳಲ್ಲಿ ಹಲವಾರು ಕೈಗಾರಿಕೆಗಳು ಬೆಳೆಯುತ್ತಿವೆ.ಆದ್ದರಿಂದ ಜಾನಪದ ಕೇವಲ ರೈತ ಸಮುದಾಯಗಳಿಗೆ ಮತ್ತು ಮೂಢ ನಂಬಿಕೆಗಳಿಗೆ ಸಂಬಂಧಪಟ್ಟದ್ದು ಎಂದು ನಾವು ಭಾವಿಸುವುದು ಸರಿಯಲ್ಲ.ಅಲೆನ್ ಡೆಂಡಸ್ ಮತ್ತಿತರರು ಸರಿಯಾಗಿಯೇ ಗುರ್ತಿಸಿರುವಂತೆ ಎಲ್ಲೆಲ್ಲಿ ಜನರಿದ್ದಾರೋ ಅಲ್ಲೆಲ್ಲಾ ಜಾನಪದ ಇರುತ್ತದೆ.ಪ್ರತಿಯೊಂದು ಸಮುದಾಯದಲ್ಲಿಯೂ ಕಂಠಸ್ಥ ಸಂಪ್ರದಾಯಗಳಿರುತ್ತವೆ.ಹಾಗೆಯೇ ಶಿಷ್ಟ ಸಂಪ್ರದಾಯಗಳಿರುತ್ತವೆ.ಇವು ಎಲ್ಲವೂ ಸಾಹಿತ್ಯವಲ್ಲದೆ ಇರಬಹುದು.ಅಲೆನ್ ಡೆಡಂಸ್ ಆಫೀಸ್ ಜಾನಪದದ ಬಗ್ಗೆ ಹೇಳುತ್ತಾರೆ. ಆಫೀಸುಗಳಲ್ಲಿ ಮತ್ತು ಕೈಗಾರಿಕಾ ಕೆಲಸಗಾರರ ಸಮುದಾಯಗಳಲ್ಲಿ ಹೊಸ ಹೊಸ ಜೋಕ್‌ಗಳು ಸೃಷ್ಟಿಯಾಗುತ್ತವೆ.ಹೊಸ ಸಂಪ್ರದಾಯಗಳೂ ರೂಪುಗೊಳ್ಳುತ್ತವೆ.ಪಟ್ಟಣಗಳಲ್ಲಿ ಕಂಪ್ಯೂಟರಗಳನ್ನೂ ಆಯುಧಪೂಜೆಯ ದಿನ ಪೂಜಿಸುತ್ತಾರೆ. ಮುಂದೆ ನಾವು ಹಳೆಯ ಸಂಪ್ರದಾಯಗಳು ಹೊಸ ಸಂಪ್ರದಾಯಗಳು,ಹಳೆಯ ನಂಬಿಕೆಗಳು - ಹೊಸನಂಬಿಕೆಗಳು ಇವನ್ನೆಲ್ಲಾ ಅಭ್ಯಾಸ ಮಾಡಬೇಕಾಗಿದೆ. ಏಕೆಂದರೆ ಅವು ನಮ್ಮ ಬಗ್ಗೆ ಬಹಳಷ್ಟನ್ನು ಹೇಳುತ್ತವೆ.ಕೈಗಾರಿಕೀಕರಣಕ್ಕೆ, ನಗರೀಕರಣಕ್ಕೆ ಮತ್ತು

ಆಧುನೀಕರಣಕ್ಕೆ ನಾವು ಹೊಂದಿಕೊಳ್ಳುವ ಸಲುವಾಗಿ ನಮ್ಮ ಸಂಪ್ರದಾಯಗಳನ್ನು ಉಪಯೋಗಿಸುತ್ತಿದ್ದೇವೆ ಎಂಬುದರ ಬಗ್ಗೆ ಅವು ತಿಳುವಳಿಕೆ ನೀಡುತ್ತವೆ. ಈ ಪ್ರಕ್ರಿಯೆ ಅಮೆರಿಕಾದ ಪರಿಸ್ಥಿತಿಗಿಂತ ಭಿನ್ನವಾಗಿದೆ. ಅಮೆರಿಕಾದಲ್ಲಿ ಬೇರೆ ಬೇರೆ ದೇಶಗಳಿಂದ ಜನ ಬಂದು ನೆಲೆಸಿದ್ದಾರೆ.ಹಲವಾರು ಸಾಂಸ್ಕೃತಿಕ ವರ್ಗಗಳಿಗೆ ಅವರು ಸೇರಿದವರಾಗಿದ್ದಾರೆ.ಹಾಗೆ ಬರುವಾಗ ಅವರು ತಮ್ಮೊಂದಿಗೆ ತಮ್ಮ ಜನಪದ ಹಾಗೂ ನಂಬಿಕೆಗಳನ್ನು ತಂದಿದ್ದಾರೆ.ಅವೆಲ್ಲಾ ಅಲ್ಲಿ ಹೇಗೆ ಹೊಂದಿಕೊಳ್ಳುತ್ತವೆ.ಅವೆಲ್ಲವೂ ಹಾಗೆಯೇ ಉಳಿಯುತ್ತವೆಯೇ? ಅವರ ಮೇಲೆ ಅಲ್ಲಿಯೂ ಅವು ಪ್ರಭಾವ ಬೀರಿ ಕೆಲಸ ಮಾಡುತ್ತವೆಯೇ? ನನಗನ್ನಿಸುವುದು ಅದು ಉಳಿದೆಲ್ಲ ನಗರ ಜಾನಪದಕ್ಕಿಂತ ಬಹಳ ಭಿನ್ನವಾದುದು ಎಂದು.ಅದರಿಂದಾಗಿ ಅದನ್ನು ನಾವು ಅಧ್ಯಯನ ಮಾಡಬೇಕು.ಅದನ್ನು ಅಧ್ಯಯನ ಮಾಡುವುದು ಬಹಳ ಒಳ್ಳೆಯದು.ಅದು ಬಹಳ ಎಕ್ಸೈಟಿಂಗ್ ಕೂಡ. ಈ ಜಾನಪದದ ಜೊತೆಗೇ ನಾವು ಅಭ್ಯಾಸ ಮಾಡಬೇಕಾದ ಇನ್ನೊಂದು ಅತಿ ಮುಖ್ಯವಾದ ಅಂಶವೆಂದರೆ 'ಜನಪ್ರಿಯ ಸಂಸ್ಕೃತಿ'(ಪಾಪ್ಯುಲರ್ ಕಲ್ಚರ್) ಅಥವಾ ನಾವೀಗ ಯಾವುದನ್ನು 'ಸಾರ್ವಜನಿಕ ಸಂಸ್ಕೃತಿ' ಎಂದು ಕರೆಯಲಾರಂಭಿಸಿದ್ದೇವೆಯೋ ಆ ರೀತಿಯ ಜಾಹೀರಾತುಗಳೂ ಮದುವೆ ವೀಡಿಯೋಗಳು ಮತ್ತು ಭಿತ್ತಿಪತ್ರಗಳು ಮೊದಲಾದವನ್ನು ಅಭ್ಯಾಸ ಮಾಡಬೇಕಾಗಿದೆ.ಸಮೂಹ ಪ್ರೇಕ್ಷಕರಿಗಾಗಿ ಸಿದ್ಧಪಡಿಸಿದ 'ಮಹಾಭಾರತ'ದ ರೀತಿ ಅಲ್ಲದೆ ಕಲಾತ್ಮಕ ಚಿತ್ರಗಳು ಪಾಪ್ಯುಲರ್ ಫಿಲ್ಮ್‌ಗಳಂತೆ ಅಲ್ಲ.ಟಿ.ವಿ.ಯಲ್ಲೂ ಕೂಡ ಅಷ್ಟೆ.ಇಲ್ಲೆಲ್ಲಾ ಹೊಸ ಸಂಸ್ಕೃತಿ ಬೆಳೆದಿರುವುದನ್ನು ನಾವು ಕಾಣಬಹುದು ಮತ್ತು ಅದನ್ನು ಅಭ್ಯಾಸ ಮಾಡಬೇಕಾದ ಅವಶ್ಯಕತೆ ಕೂಡ ಇದೆ.

ಈ 'ನಗರ ಜಾನಪದ 'ದಲ್ಲಿ ಪುರಾಣಗಳಂತಹ ಕೆಲವು ಪ್ರಕಾರಗಳು ದೊರೆಯಲಾರವು ಅಲ್ಲವೆ?

ದೊರಕಲಿಕ್ಕಿಲ್ಲ.ಪ್ರತಿ ಸಂದರ್ಭವೂ ಒಂದು ರೀತಿಯ ನಿರ್ದಿಷ್ಟ ಮಾದರಿಯ ಪ್ರಕಾರಗಳನ್ನು ಹೊತ್ತಿರುತ್ತವೆ.ಆಧುನಿಕ ಸಾಹಿತ್ಯದಲ್ಲಿ ಕಾದಂಬರಿಗಳು ಪುರಾಣಗಳ ಸ್ಥಾನವನ್ನು ಆಕ್ರಮಿಸಿಕೊಂಡಿವೆ.ಆದರೆ ಎಷ್ಟು ಜನ ಹತ್ತು ಸಾವಿರ ಪುಟಗಳ ಪುರಾಣ ಬರೆಯುತ್ತಾರೆ.ಅವರು ಕೆಲವರು ಮಾತ್ರ.ಆದರೆ ಐನೂರು ಪುಟಗಳ ಕಾದಂಬರಿ ಬರೆಯುವವರು ಬಹಳ ಮಂದಿ ಇದ್ದಾರೆ.ಹಲವು ಆಧುನಿಕ ಸಂಸ್ಕೃತಿಗಳಲ್ಲಿ ಪುರಾಣಗಳನ್ನು ಬರೆಯುವವರೂ ಕೆಲವು ಮಂದಿ ಖಂಡಿತವಾಗಿಯೂ ಇದ್ದಾರೆ.ಆದರೆ ಅವರ ಸಂಖ್ಯೆ ತೀರಾ ತೀರಾ ಕಡಿಮೆ...ದೇ ಆರ್ ರಿಯಲಿ ಮಾರ್ಜಿನಲ್.

ಈ 'ಆಧುನಿಕ ಜಾನಪದ 'ದ ಪರಿಕಲ್ಪನೆ ಜಾನಪದ ವಿದ್ವಾಂಸರಿಗೆ ವೃತ್ತಿಯ ಅವಶ್ಯಕತೆಯಾಗಿತ್ತು ಎಂದು ನಿಮಗನಿಸುವುದಿಲ್ಲವೆ?

ಇರಬಹುದು.ಭಾರತಕ್ಕೆ ಮತ್ತು ಅಮೆರಿಕಕ್ಕೆ ವ್ಯತ್ಯಾಸಗಳಿವೆ.ಇಂಡಿಯಾದಲ್ಲಿ ಈಚೆಗೆ ಶೇಕಡಾ ೨೦ರಷ್ಟು ಜನ ಪಟ್ಟಣಗಳಲ್ಲಿ ವಾಸ ಮಾಡಿದರೆ ೮೦%ರಷ್ಟು ಜನ ಹಳ್ಳಿಗಳಲ್ಲಿ ವಾಸ ಮಾಡುತ್ತಾರೆ.ಆದರೆ ಅಮೆರಿಕಾದಲ್ಲಿ ೮೦%ರಷ್ಟು ಜನ ಪಟ್ಟಣಗಳಲ್ಲಿ ವಾಸ ಮಾಡುತ್ತಾರೆ ಮತ್ತು ೨೦%ರಷ್ಟು ಜನ ಹಳ್ಳಿಗಳಲ್ಲಿ ವಾಸ ಮಾಡುತ್ತಾರೆ.ಅದಕ್ಕನುಗುಣವಾಗಿ ಅಲ್ಲಿ ಜಾನಪದದ ಪರಿಕಲ್ಪನೆಯೂ ಹೊಂದಿಕೊಳ್ಳಬೇಕಾಗುತ್ತದೆ. ಅಲ್ಲಿ ಆದದ್ದು ಹೀಗೆಯೇ.ಆದರೆ ಅಮೆರಿಕಾದಲ್ಲಿ 'ವಲಸೆ ಬಂದ' ಅನೇಕ ಸಾಂಸ್ಕೃತಿಕ ಸಮುದಾಯದ ಜನರಿದ್ದಾರೆ.ಇದನ್ನು ನಾವು ಮರೆಯಬಾರದು. ಅಲ್ಲಿ ಎಲ್ಲವೂ ಜನರಿದ್ದಾರೆ.ಇದನ್ನು ನಾವು ಮರೆಯ

ಬಾರದು. ಅಲ್ಲಿ ಎಲ್ಲವೂ ಏಕರೂಪವಾಗಿಲ್ಲ. ಉದಾಹರಣೆಗೆ, ಷಿಕಾಗೋ ನಗರವನ್ನೇ ತೆಗೆದುಕೊಳ್ಳಿ, ಕೆಲವು ರಸ್ತೆಗಳಲ್ಲಿ ಗ್ರೀಕರನ್ನು ಮಾತ್ರ ಕಾಣಬಹುದು. ಕೆಲವು ಜಾಗಗಳ ಕೆಲವು ರಸ್ತೆಗಳಲ್ಲಿ ಪೋಲಂಡಿನ ಜನರನ್ನೇ ಕಾಣಬಹುದು. ಮಹಾಯುದ್ಧಗಳ ಅನಂತರ ಪೋಲಂಡಿನ ಜನ ಷಿಕಾಗೋ ನಗರದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಒಂದು ಮಿಲಿಯನ್ ಅಥವಾ ಎರಡು ಮಿಲಿಯನ್ ಪೋಲಿಷ್ ಮೂಲದ ಜನರಿದ್ದಾರೆ. ಆ ಜನ ನಿರಂತರವಾಗಿ ಬರುತ್ತಿದ್ದಾರೆ. ಅಲ್ಲಿಯೂ ಅಜ್ಜಿಯರಿದ್ದಾರೆ. ಅಲ್ಲಿಯೂ ಪೋಲಿಷ್ ಸಂಪ್ರದಾಯಗಳು, ಪೋಲಿಷ್ ಆಹಾರ, ಪೋಲಿಷ್ ಉಡುಗೆ ತೊಡುಗೆ, ನೃತ್ಯಗಳಿವೆ. ಅವರ ಮದುವೆಗಳು ವಿಶಿಷ್ಟವಾಗಿವೆ. ಅಲ್ಲಿಯೂ ವೈವಿಧ್ಯವನ್ನು ಕಾಣಬಹುದು. ಆದ್ದರಿಂದ ಅಮೆರಿಕನ್ನರು 'ನಗರ ಜಾನಪದ' ಎಂದು ಹೇಳುವಾಗ ಈ ಅಂಶಗಳನ್ನೆಲ್ಲಾ ಪರಿಗಣಿಸಬೇಕಾಗುತ್ತದೆ. ಇದು ಸಂಕೀರ್ಣವಾದದ್ದು. ಇದನ್ನು ಸರಳಗೊಳಿಸಿ ನೋಡಬಾರದು. ಇಡೀ ಅಮೆರಿಕಾ ದೇಶ ಸಂಪೂರ್ಣ ನಗರಮಯವಾದುದು ಮತ್ತು ಅಲ್ಲಿರುವುದೆಲ್ಲ 'ಆಫೀಸ್ ಜಾನಪದ' ಎಂದೇನೂ ನಾವು ಭಾವಿಸಬೇಕಾಗಿಲ್ಲ. ಹಾಗೆ ಭಾವಿಸುವುದೂ ಸರಿಯಲ್ಲ. ಉದಾಹರಣೆಗೆ ಚರ್ಚುಗಳಲ್ಲಿ ನಡೆಯುವ ಸರ್ಮನ್ನುಗಳನ್ನು ಗಮನಿಸಬಹುದು. ಕರಿಯ ಜನ ತಮ್ಮ ಧಾರ್ಮಿಕ ಗೀತೆಗಳನ್ನು ಹಾಡುವ ರೀತಿ, ಅವರು ಬೋಧನೆ ಮಾಡುವ ರೀತಿ, ಇವೆಲ್ಲಾ ಆವೇಶದ ರೀತಿ ಇರುತ್ತವೆ. ಅವರು ವಾಸ್ತವವಾಗಿ ಆವೇಶಕ್ಕೊಳಗಾಗಿರುತ್ತಾರೆ. ಅವರ ಈ ಜಾನಪದ ಸಾಮಗ್ರಿಯಲ್ಲಿ ಬಹಳಷ್ಟು ಸಾಂಸ್ಕೃತಿಕ ವೈವಿಧ್ಯವಿದೆ. ಆದರೆ ಇಂಡಿಯಾ ದೇಶ ಸಾಂಸ್ಕೃತಿಕ ವೈವಿಧ್ಯದ ಸ್ವರ್ಗವಿದ್ದಂತೆ. ಇಂಡಿಯಾದ ಯಾವದೇ ಪಟ್ಟಣದಲ್ಲಿಯೂ ಅಪಾರವಾದ ಸಾಂಸ್ಕೃತಿಕ ವೈವಿಧ್ಯವನ್ನು ಕಾಣಬಹುದು. ಒಂದೇ ಜಾತಿಯೊಳಗೆ ಇರುವ ಉಪಜಾತಿಗಳಲ್ಲಿಯೇ ಊಟ, ಉಡುಪು ಮೊದಲಾದ ವಿಷಯವಾಗಿ ಸಾಕಷ್ಟು ವ್ಯತ್ಯಾಸಗಳನ್ನು ಗುರುತಿಸಬಹುದು.

ಅಮೆರಿಕಾದ ಆವೇಶದ ಸಂಪ್ರದಾಯಗಳಲ್ಲಿ ಆವಾಹನಾ, ಉಪಾಸನಾ, ವಿಸರ್ಜನಾ ಈ ಮೂರು ಹಂತಗಳನ್ನು ಗುರುತಿಸಲು ಸಾಧ್ಯವಾಗುತ್ತದೆಯೇ?

ಬಹುಶಃ ಸಾಧ್ಯವಾಗುತ್ತದೆ. ಚಂದ್ರಶೇಖರ ಕಂಬಾರ, ನಾನು ಮತ್ತು ಇತರರು ಈ ಆವೇಶದ ಸಂಪ್ರದಾಯಗಳನ್ನು ಈ ರೀತಿ ಅರ್ಥಮಾಡಿಕೊಂಡಿದ್ದೇವೆ. ಈ ಬಗೆಯ ಆವೇಶ ಸಂಪ್ರದಾಯಗಳಿಗೆ ಒಂದು ರೀತಿಯ ಚೌಕಟ್ಟು ಇರಬೇಕಾಗುತ್ತದೆ. ಪ್ರದರ್ಶನದಲ್ಲಿ ಒಂದು ರೀತಿಯ ಫ್ರೇಮಿಂಗ್ ಇರಬೇಕಾಗುತ್ತದೆ. ಒಂದು ಆವೇಶ ಸಂಪ್ರದಾಯ, ಆವೇಶವನ್ನು ವ್ಯಕ್ತಿಗೆ ಮತ್ತು ಆ ಸಮಾಜಕ್ಕೆ ಅಪಾಯಕಾರಿಯೆಂದು ಪರಿಗಣಿಸುತ್ತದೆ. ಆದ್ದರಿಂದ ಅದನ್ನು ಎಚ್ಚರಿಕೆಯಿಂದ ಫ್ರೇಮಿಂಗ್ ಮಾಡಬೇಕಾದುದು ಅಗತ್ಯ. ಆದ್ದರಿಂದ ಒಂದು ನಿರ್ದಿಷ್ಟ ರೀತಿಯಲ್ಲಿ ಆವೇಶಕ್ಕೆ ಒಳಗಾಗಬೇಕಾಗುತ್ತದೆ. ಹಾಗೆಯೇ ಒಂದು ನಿರ್ದಿಷ್ಟ ರೀತಿಯಲ್ಲಿ ಆವೇಶದಿಂದ ಬಿಡುಗಡೆ ಪಡೆಯಬೇಕಾಗುತ್ತದೆ. ಹೀಗಾಗಿ ಈ ಮೂರು ಹಂತಗಳೂ ಅಗತ್ಯವಾಗುತ್ತವೆ. ಆವೇಶದ ಕಡೆಗೆ ಸಾಗುವ ಹಂತ, ಆವೇಶದ ಹಂತ, ಆವೇಶದ ಬಿಡುಗಡೆಯ ಹಂತ ಹೀಗೆ ಮೂರು ಹಂತಗಳಿರುತ್ತವೆ. ಸಂಸ್ಕೃತದ ರಂಗಭೂಮಿಯಲ್ಲಿಯೂ ಇದೇ ಕ್ರಮವನ್ನು ಅನುಸರಿಸಲಾಗಿದೆ. ನಾಂದಿಯಿಂದ ಆರಂಭವಾದ ನಾಟಕ, ಮಂಗಳದೊಂದಿಗೆ ಮುಕ್ತಾಯವಾಗುತ್ತದೆ. ಸಂಗೀತದ ಕಾರ್ಯಕ್ರಮಗಳಲ್ಲೂ ಹೀಗೆಯೇ ನಡೆಯುತ್ತದೆ. ನಮ್ಮ ಆಧುನಿಕ ಮೀಟಿಂಗ್‌ಗಳ ಸ್ವರೂಪವೂ ಹೀಗೆಯೇ ಇರುತ್ತದೆ. ಪ್ರಾರ್ಥನೆಯಿಂದ ಆರಂಭವಾಗಿ, ವಂದನಾರ್ಪಣೆ,

ರಾಷ್ಟ್ರಗೀತೆಗಳೊಂದಿಗೆ ಮುಕ್ತಾಯವಾಗುತ್ತದೆ.ಯಾವದೇ ರಿಚುವಲ್ ಸಂದರ್ಭಕ್ಕೂ ಕೂಡ ವಾನ್‌ಗೆನೆಪ್ ಹೇಳುವಂತೆ ರಿಚುವಲ್ ಸೆಪರೇಶನ್, ಲಿಮಿನಲ್ ಪಿರಿಯಡ್ - ಅಂದರೆ ಘಟನೆಗಳು ನಡೆಯುತ್ತಿರುವುದು ಮತ್ತು ಕೊನೆಯದಾಗಿ ರಿ - ಅಗ್ರಿಗೇಶನ್ ಈ ಮೂರು ಹಂತಗಳಿರುತ್ತವೆ. ಜನಪದ ಕಥೆಯೂ ಹೀಗೆಯೇ ಇರುತ್ತವೆ. ಒಂದಾನೊಂದು ಕಾಲದಲ್ಲಿ ...ಎಂದು ಆರಂಭವಾಗುವ ಕಥೆಯೊಳಗೆ ನಾವೂ ಸೇರಿಕೊಂಡು ಅದರೊಳಗಿನ ಭ್ರಾಮಕ ಜಗತ್ತಿನಲ್ಲಿ ನಾವೂ ಒಂದಾಗಿ ಬಾಳಿ ಕೊನೆಗೆ 'ಅವರಲ್ಲಿ,ನಾವಿಲ್ಲಿ ' ಎಂದು ಅದರಿಂದ ಬಿಡುಗಡೆ ಹೊಂದಿ ಬರುತ್ತೇವೆ.ಆದ್ದರಿಂದ ಅದಕ್ಕೂ ಈ ರಚನೆ ಇದೆ.ಈ ರಿಚುವಲ್ ಸ್ಟ್ರಕ್ಚರ್,ರಂಗಭೂಮಿಗೂ,ಆವೇಶ ಸಂಪ್ರದಾಯಕ್ಕೂ ಬಹಳಷ್ಟು ಸಾರ್ವಜನಿಕ ಪ್ರದರ್ಶನಗಳಿಗೂ ಅನ್ವಯಿಸುತ್ತದೆ.ವಾನ್ ಗೆನೆಪ್ ಹೇಳುವಂತೆ ಎಲ್ಲೆಲ್ಲಿ ಆಚರಣೆಗಳಿವೆಯೋ ಅಲ್ಲೆಲ್ಲಾ ಈ ಮೂರು ಹಂತಗಳು ಇದ್ದೇ ಇರುತ್ತವೆ.

ಜಾನಪದ ಅಧ್ಯಯನದಲ್ಲಿ ಅನೇಕ ಸಿದ್ಧಾಂತಗಳಿವೆ.ಯಾವುದಾದರೂ ಒಂದು ಸಿದ್ಧಾಂತದಿಂದಲೇ ಜಾನಪದವನ್ನು ಅರ್ಥಮಾಡಿಕೊಳ್ಳಲು ಸಾಧ್ಯವೇ?

ಅದೆಲ್ಲಾ ನೀವು ಸಿದ್ಧಾಂತ ಎಂದರೆ ಏನು ಎಂದು ಅರ್ಥಮಾಡಿಕೊಂಡಿದ್ದೀರೋ ಅದನ್ನು ಅವಲಂಬಿಸಿದೆ. ನಿಮಗೇ ಗೊತ್ತಿರುವಂತೆ ಮನೋವಿಶ್ಲೇಷಣಾತ್ಮಕ ಸಿದ್ಧಾಂತ,ಮಾರ್ಕ್ಸಿಸ್ಟ್ ಸಿದ್ಧಾಂತ ಮೊದಲಾದವು ನಿಮ್ಮ ಐಡಿಯಾಲಾಜಿಕಲ್ ಬಯಾಸ್ ಅನ್ನು ಅವಲಂಬಿಸಿರುತ್ತದೆ.ನನ್ನಂತಹ ಕೆಲವರಿಗೆ ಎಷ್ಟು ಹೆಚ್ಚು ವಿಧಾನಗಳನ್ನು ಬಳಸಲು ಸಾಧ್ಯವೋ ಅಷ್ಟರಲ್ಲಿಯೂ ಆಸಕ್ತಿ ಇರುತ್ತದೆ.ನೀವು ನನ್ನನ್ನು ಎಕ್ಲೆಕ್ಟಿಕ್ ಅಥವಾ ಮಿಸಲೇನಿಯಸ್ ಅಥವಾ ಇನ್ನೇನು ಬೇಕೋ ಹಾಗೆ ಕರೆಯಬಹುದು.ಆದರೆ ನಾನು ನನಗೆ ಇಷ್ಟವಾದರೆ,ನನಗೆ ಒಳನೋಟ(ಇನ್‌ಸೈಟ್) ಕೊಡುತ್ತದೆಯೋ ಅದು ಕವನವಾಗಲಿ,ಗಾದೆಯಾಗಲಿ, ಅಥವಾ ಜಾನಪದದ ಒಂದು ಅಂಶವಾಗಲಿ ಅದನ್ನು ನಾನು ಸ್ವೀಕರಿಸುತ್ತೇನೆ ಮತ್ತು ಬಳಸುತ್ತೇನೆ.

ನಾನು ನಿಮ್ಮ ಇಂಡಿಯನ್ ಈಡಿಪಸ್ ಲೇಖನವನ್ನು ಕುರಿತು ಹೇಳುತ್ತಿದ್ದೇನೆ...

ನನಗೆ ಮನೋವಿಶ್ಲೇಷಣೆಯಲ್ಲಿ ಆಸಕ್ತಿ ಇದೆ.ಏಕೆಂದರೆ ಜನಪದ ಕಥೆಗಳ ವಿಶ್ಲೇಷಣೆಯಲ್ಲಿ ಅದು ಹೆಚ್ಚು ಉಪಯುಕ್ತವಾಗುತ್ತದೆ. ಭಾರತೀಯ ಜನಪದ ಕಥೆಗಳು ತಂದೆ ಮಗಳನ್ನು,ತಾಯಿ ಮಗನನ್ನು ಅಕ್ಕತಂಗಿಯರನ್ನು ಕುರಿತ ಕಥೆಗಳಾಗಿವೆ.ಕುಟುಂಬದೊಳಗಣ ಸಂಬಂಧಗಳು ಮನೋವಿಶ್ಲೇಷಣೆಯ ಕೇಂದ್ರದಲ್ಲಿವೆ.ಅದರಿಂದಾಗಿಯೇ ಮನೋವಿಶ್ಲೇಷಣೆ ನನಗೆ ಹೆಚ್ಚು ಸಮಂಜಸವೆನಿಸಿದೆ.ಫ್ರಾಯ್ಡ್ ಹೇಳುವ ಎಲ್ಲವನ್ನೂ ನಾನು ಒಪ್ಪಿಕೊಳ್ಳುತ್ತೇನೆ ಎಂದಲ್ಲ.ಶೈಶವಾವಸ್ಥೆಗೆ ನಮ್ಮ ಅನೇಕ ಕ್ರಿಯೆಗಳಿಗಿರುವ ಅಪ್ರಜ್ಞೆಯ ಪ್ರಭಾವ ಹಾಗೂ ಮನಸ್ಸನ್ನು ಹಾಗೂ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಕೌಟುಂಬಿಕ ಸಂಬಂಧಗಳ ಮಹತ್ವ -ಈ ಮೂರು ಅಂಶಗಳ ಪ್ರಭಾವಗಳನ್ನು ಜನಪದ ಕಥೆಗಳಲ್ಲಿ ಸದಾ ಕಾಣಲು ಸಾಧ್ಯ ಎಂದು ತೋರಿಸಿದ್ದೇನೆ.

ನೀವು ಅಂತರ್‌ರಾಷ್ಟ್ರೀಯ ಜಾನಪದ ಅಧ್ಯಯನದ ಬಗ್ಗೆ ಆಂಧ್ರ,ಕರ್ನಾಟಕ ಹಾಗೂ ತಮಿಳುನಾಡಿನಲ್ಲಿ ಬೋಧಿಸಿದ್ದೀರಿ.ಈ ಸಂಬಂಧವಾಗಿ ನಿಮ್ಮ ಅನಿಸಿಕೆ ಅನುಭವಗಳೇನು?

ಅದನ್ನು ಹೇಗೆ ಹೇಳಬೇಕೆಂದು ನನಗೆ ಗೊತ್ತಾಗುತ್ತಿಲ್ಲ. ಏಕೆಂದರೆ ಅವು ಬೇರೆ ಬೇರೆ ಜನಗಳ ಗುಂಪುಗಳು. ಈ ಪ್ರತಿಭಾಷೆಯಲ್ಲೂ ಮಾಡತಕ್ಕ ಕೆಲಸಗಳಿವೆ ಮತ್ತು ಇದುವರೆಗೆ ನಾವು ಹೊಂದಿರದಿದ್ದ ಈ ನಾಲ್ಕು ಪ್ರಮುಖ ದ್ರಾವಿಡ ಭಾಷೆಗಳೊಳಗಿನ ಸಂಬಂಧವಾಗಲೀ, ಅದರಲ್ಲಿ ಕೆಲಸ ಮಾಡುತ್ತಿದ್ದವರ ನಡುವೆಯೇ ಆಗಲಿ ಇದುವರೆಗೂ ಇರದಿದ್ದ ಸಂಬಂಧ ಇಂದು ಇರುವುದನ್ನು ತಿಳಿಯಬಹುದಾಗಿದೆ. ಏಕೆಂದರೆ ಈ ಭಾಷೆಗಳ ನಡುವೆ ಬಹಳಷ್ಟು ಸಾಮ್ಯತೆಗಳಿವೆ ಹಾಗೂ ಅವು ಒಂದರಿಂದ ಮತ್ತೊಂದು ಕಲಿಯುವಂತಹದು ಬಹಳಷ್ಟಿದೆ. ಕನ್ನಡ - ಮಲೆಯಾಳಂ, ಕನ್ನಡ - ತಮಿಳು ಹೀಗೆ ಈ ಭಾಷೆಗಳ ಸಾಂಸ್ಕೃತಿಕ ಸಮೂಹಗಳಲ್ಲಿನ ಸಮಾನ ಅಂಶಗಳು, ವೈರುದ್ಧ್ಯಗಳು ಇತ್ಯಾದಿ ಅಂಶಗಳು ಒಂದರಿಂದ ಮತ್ತೊಂದಕ್ಕೆ ಸುಲಭವಾಗಿ ಸಾಗಿ ಬರುವಂತಹವು. ಅವು ಸಾಂಸ್ಕೃತಿಕವಾಗಿ ಶ್ರೀಮಂತವಾದವು. ಈ ರೀತಿಯ ನೆಟ್‌ವರ್ಕ್ ಕೇವಲ ತಮಿಳು ಜಾನಪದ ವಿದ್ವಾಂಸರಲ್ಲಾಗಲೀ, ಕನ್ನಡ ಜಾನಪದ ವಿದ್ವಾಂಸರಲ್ಲಾಗಲೀ ಮಾತ್ರ ಇರುವಂತಹುದಲ್ಲ. ಈ ಸೀಮಾ ರೇಖೆಗಳ ನಡುವೆ ಸೇತುವೆಗಳನ್ನು ಹುಡುಕಲು ನಾನು ನನ್ನ ಸ್ವಂತ ಜೀವನದಲ್ಲಿ ಕೂಡ ಪ್ರಯತ್ನ ಪಡುತ್ತಿದ್ದೇನೆ. ಇಲ್ಲಿ ಗಮನಿಸುವುದು ಸಾಮ್ಯತೆ, ವೈರುದ್ಧ್ಯತೆ, ಸಮಾಂತರತೆ ಇತ್ಯಾದಿ. ಆದರೆ ಕೇವಲ ಭಿನ್ನತೆ(ಕಾಂಟ್ರಾಸ್ಟ್) ಮತ್ತು ಸಾಮ್ಯತೆ(ಸಿಮಿಲಾರಿಟೀಸ್)ಗಳನ್ನು ಮಾತ್ರವೇ ಅಭ್ಯಸಿಸಿದರೆ ಸಾಲದು. ಇದುವರೆಗೂ ವಿದ್ವಾಂಸರು ಅಧ್ಯಯನ ನಡೆಸಿದ್ದು ಈ ಸಾಮ್ಯತೆಗಳನ್ನೇ. ಏಕೆಂದರೆ ಇದು ವಿಶ್ವವ್ಯಾಪಕ ಗುಣಗಳ ಕಡೆಗೆ ಒಯ್ಯುವಂತಹದು. ಆದರೆ ಇನ್ನೂ ಬೇರೆ ದಿಕ್ಕುಗಳಲ್ಲಿಯೂ ನಮಗೆ ಕೆಲಸವಿದೆ. ಪ್ರತಿಯೊಂದರ ವಿಶೇಷತೆ ಗುರುತಿಸಲು ಬೇರೆ ದಿಕ್ಕುಗಳಲ್ಲಿ ಪ್ರತಿಯೊಂದರ ಭಿನ್ನತೆಗಳನ್ನು ಗುರುತಿಸಬೇಕು. ಏಕೆಂದರೆ ಅವೆಲ್ಲವುಗಳ ರಚನೆ ಒಂದೇ ರೀತಿ ಕಂಡರೂ ಅವುಗಳ ಕೆಲಸ ಕಾರ್ಯಗಳು ಭಿನ್ನವಾಗುತ್ತಿರುತ್ತವೆ. ಹಾಗೂ ಅದನ್ನು ಮೊದಲೇ ಊಹಿಸುವುದೂ ಸಾಧ್ಯವಿಲ್ಲ.

ದಕ್ಷಿಣ ಭಾರತದ ಜಾನಪದ ಅಧ್ಯಯನದ ಮುಂದಿನ ಕೆಲಸ ಕಾರ್ಯಗಳ ಬಗ್ಗೆ ನಿಮ್ಮ ಸಲಹೆಗಳೇನು?

ಮಾಡಬೇಕಾದ ಕೆಲಸಗಳು ಅಲ್ಲಿ ಬಹಳ ಇವೆ. ಅವುಗಳಲ್ಲೊಂದು ನೆಟ್‌ವರ್ಕ್ ಆಫ್ ವರ್ಕರ್ಸ್ ಮತ್ತು ಇನ್ನೊಂದು ಅಸೋಸಿಯೇಶನ್. ಇದು ಪ್ರತಿ ಭಾಷೆಯ ಒಳಗೂ ಹಾಗೂ ಪ್ರತಿ ಭಾಷೆಗಳ ನಡುವೆ, ಹೀಗೆ ಎರಡೂ ಕಡೆಯೂ ಇರಬೇಕು. ಅಲ್ಲೆಲ್ಲಾ ವಿಪುಲವಾದ ಸಂಪರ್ಕ ಸಾಧ್ಯವಾಗಬೇಕು. ಕ್ಷೇತ್ರಕಾರ್ಯ ತುಂಬಾ ಆಗಬೇಕಾಗಿದೆ. ಅದು ಆಗುತ್ತದೆ ಎಂದು ನನಗನ್ನಿಸುತ್ತದೆ. ಆದರೆ ನಡೆದ ಕಾರ್ಯ ಬೇರೆಯವರಿಗೆ ತಿಳಿಯುವಂತಾಗಬೇಕು. ಬೇರೆ ಭಾಷೆಗಳವರಿಗೂ ಅದು ಗೊತ್ತಾಗಬೇಕು. ಭಾರತದ ವಿವಿಧ ಭಾಷಾ ವಿದ್ವಾಂಸರಿಗೂ ಅದು ನಿಧಾನವಾಗಿಯಾದರೂ ತಲುಪಬೇಕು. ನಮಗೆ ಜನಪದ ಕಥೆಗಳ ಬಗ್ಗೆ ನಮ್ಮದೇ ಆದ ಟೈಪ್ ಇಂಡೆಕ್ಸ್ ಬೇಕೆಂಬುದೇನೋ ನಿಜ. ಇದು ಪ್ರತಿ ಭಾಷೆಗೂ ಬೇಕು. ಹಾಗೆಯೇ ಈ ಎಲ್ಲಾ ಭಾಷೆಗಳನ್ನು ಸೇರಿಸಿಕೊಂಡು ಎಲ್ಲಕ್ಕೂ ಅನ್ವಯವಾಗುವಂತಹದೊಂದು ಟೈಪ್ ಇಂಡೆಕ್ಸ್ ಕೊಡಬೇಕು. ಅಂತಿಮವಾಗಿ ಅದನ್ನು ಇಂಗ್ಲೀಷಿಗೆ ತರ್ಜಮೆಗೊಳಿಸಿ ಬಿಡುವುದರಿಂದ ಎಲ್ಲಾ ಭಾಷೆಗಳವರಿಗೂ ಅದರ ಉಪಯೋಗ ಸಾಧ್ಯವಾಗುತ್ತದೆ. ಇದು ನಮಗೀಗ ಆಗಬೇಕಾಗಿರುವ ಕೆಲಸಗಳಲ್ಲಿ ಒಂದು. ಅಲ್ಲದೆ... ಮತ್ತೆ ಇನ್ನೇನು? ಕಾಲಕಾಲಕ್ಕೆ ನಡೆಯುತ್ತಿರುವ ಹೊಸ ಬೆಳವಣಿಗೆಗಳನ್ನೂ ನಮ್ಮ ಗಮನಕ್ಕೆ ತರುವಂತಹ ಜಾನಪದ ಸಂಸ್ಥೆಗಳು ಬೆಳೆಯುತ್ತವೆ. ಇನ್ನು ಮುಂದೆ ಅವು ಬೆಳೆಯಬೇಕು. ಜಾನಪದ ಸಂಸ್ಥೆಗಳು ಜಾನಪದ

ಕ್ಯಾಂಪ್‌ಗಳು ಇದ್ದರೆ ಅವು ನಮ್ಮನ್ನು ಇನ್ನಷ್ಟು ಕ್ರಿಯಾಶೀಲಗೊಳಿಸುತ್ತವೆ.ವಿವಿಧ ವಿದ್ವಾಂಸರೊಂದಿಗೆ ಸಂಪರ್ಕವನ್ನು ಒದಗಿಸುತ್ತವೆ.ನಮ್ಮಲ್ಲಿ ಒಬ್ಬರು ವಿದೇಶಕ್ಕೆ ಹೋಗುವ ಬದಲು ವಿದೇಶೀಯ ವಿದ್ವಾಂಸರೊಬ್ಬರನ್ನು ಇಲ್ಲಿಗೆ ಬರಮಾಡಿಕೊಂಡರೆ ನಮ್ಮಲ್ಲಿನ ಇಪ್ಪತ್ತು ಜನ ಅವರನ್ನು ಭೇಟಿ ಮಾಡಬಹುದು.ಅವರು ನಮ್ಮ ದೇಶದ ಎಲ್ಲಾ ಕಡೆ ಭೇಟಿ ನೀಡಬಹುದು.ಅವರ ಇಂತಹ ಒಂದು ಭೇಟಿ ಬಹಳಷ್ಟು ಪ್ರಭಾವಪೂರ್ಣವಾಗಿರಬಲ್ಲುದು.ಇದು ಒಂದು ಸಾಧ್ಯವಾಗಬಹುದಾದ ಅಂಶ.ಅಂತಹ ಪ್ರವಾಸಕ್ಕೆ,ಲೈಬ್ರರಿಗೆ ಪುಸ್ತಕಗಳನ್ನು ತರಿಸಲಿಕ್ಕೆ ಇತ್ಯಾದಿಗಳಿಗೆ ಹಣದ ಸಹಾಯವು ಒದಗಿ ಬರುತ್ತದೆಂದು ನಂಬಿದ್ದೇನೆ.ಫೋರ್ಡ್‌ನ ಹಣ ಇನ್ನೂ ಎಷ್ಟು ದಿನಗಳಲ್ಲಿ ಖರ್ಚಾಗುವುದೋ?(ಎಂದರೆ ಬಹಳ ಕಾಲ ಅದರ ಉಪಯೋಗ ಮಾಡಿಕೊಳ್ಳಲು ಸಾಧ್ಯ).ಅಲ್ಲದೆ ಕೆಲವು ಲೋಕಲ್ ಯುನಿವರ್ಸಿಟಿಗಳು ಇಂತಹ ಕೆಲಸಗಳನ್ನು ಮಾಡಲು ಸಾಧ್ಯ.ಅಲ್ಲದೆ ಜಾನಪದ ಶಾಸ್ತ್ರಜ್ಞರು ಹುಮ್ಯಾನಿಟೀಸ್ ಮತ್ತು ಸೋಶಿಯಲ್ ಸೈನ್ಸ್ ನಡುವೆ ಸಮತೋಲನವನ್ನು ಕಾಪಾಡಿಕೊಳ್ಳುವುದು ಅಗತ್ಯ.ಅದು ಬಹಳ ಒಳ್ಳೆಯ ಕೆಲಸ.ಜಾನಪದ ಈ ಎರಡೂ ವಿಭಾಗಗಳಿಗೆ ಸೇರಿದ ವಿಷಯವಾಗಿದೆ.ಒಳ್ಳೆಯ ಕ್ಷೇತ್ರಕಾರ್ಯ ಮತ್ತು ಗ್ರಂಥಾಲಯದ ಅಧ್ಯಯನದ ಕಾರ್ಯಗಳಿಂದ ಜಾನಪದವು ಉಳಿದ ಅಧ್ಯಯನ ವಿಷಯಗಳಿಗೂ(ಡಿಸಿಪ್ಲಿನ್ಸ್)ಸಾಕಷ್ಟು ಕೊಡುಗೆ ನೀಡಬಲ್ಲುದು. ಆ ವಿಷಯಗಳೆಂದರೆ ಮಾನವ ವಿಜ್ಞಾನ,ಸಾಹಿತ್ಯ ವಿಮರ್ಶೆ,ಜೇನರ್ ಥಿಯರಿ ಇತ್ಯಾದಿ .ಜಾನಪದವು ಈಗಾಗಲೇ ಈ ಕೆಲಸಗಳನ್ನು ಆರಂಭಿಸಿದೆ.

ಭಾರತದಲ್ಲಿ ಜಾನಪದ ವಿದ್ವಾಂಸರಿಗೆ ಉದ್ಯೋಗಾವಕಾಶಗಳು ಬಹಳ ಕಡಿಮೆ.ಅಮೆರಿಕ ಮತ್ತು ಇತರ ದೇಶಗಳಲ್ಲಿನ ಸಂಸ್ಕೃತಿ ಈ ವಿಷಯಗಳ ಬಗ್ಗೆ ಹೇಗಿದೆ?

ಇದೊಂದು ದೊಡ್ಡ ಸಮಸ್ಯೆಯೇ ನಿಜ .ಅಮೇರಿಕಾದಲ್ಲಿಯೂ ಹೀಗೆಯೇ.ಡಂಡೆಸ್ ನಿಮಗೆ ಹೇಳಿದಂತೆ ಅಲ್ಲಿಯೂ ಜಾನಪದಕ್ಕೆ ಸೇರಿದ ಹಲವಾರು ಕಾರ್ಯಕ್ರಮಗಳೇನೂ ಇರುವುದಿಲ್ಲ.ಅಲ್ಲಿ ನಾಲ್ಕು ಜಾನಪದ ಕಾರ್ಯಕ್ರಮಗಳಿರುತ್ತವೆ.ಅಂದರೆ ನಾವೂ ಅಲ್ಲಿಯಂತೆಯೇ ಇರುವುದರಲ್ಲಿಯೇ ತೃಪ್ತಿ ಪಡಬೇಕಾಗುತ್ತದೆ. ಇತರೆ ವಿಭಾಗಗಳಲ್ಲಿನವರು ಜಾನಪದಕ್ಕೆ ಸಂಬಂಧಿಸಿದವುಗಳ ಅಧ್ಯಯನ ಮಾಡಬೇಕು.ಹಾಗೆಯೇ ಜಾನಪದವು ಇತರೆ ವಿಷಯಗಳ ಒಂದು ಭಾಗವಾಗಬೇಕು.ಆಗ ನೀವು ಮನೋವಿಜ್ಞಾನಿಯಾಗಿದ್ದರೂ ಜಾನಪದವನ್ನು ಬೋಧಿಸಬಹುದು.ಈಗಿನಂತೆ ನೀವು ಕನ್ನಡ ವಿಭಾಗದಲ್ಲಿದ್ದೂ ಜಾನಪದವನ್ನು ಬೋಧಿಸಬಹುದು.ಈ ರೀತಿಯ ವ್ಯವಸ್ಥೆ ಸಾಧ್ಯ.ಅಮೆರಿಕಾದಲ್ಲಿ ಹೀಗೆಯೇ ಆಗುತ್ತಿದೆ.ಮಾನವ ವಿಜ್ಞಾನ ಮತ್ತು ಇಂಗ್ಲೀಷ್ ವಿಭಾಗಗಳಲ್ಲಿ ಹಾಗೂ ಕನ್ನಡ ವಿಭಾಗಗಳಲ್ಲಿ ಜಾನಪದವನ್ನು ಸೇರಿಸಲಾಗಿದೆ.ಇದು ಜಾನಪದ ಬೆಳೆಯಲು ಒಂದು ರೀತಿ ಸಹಕಾರಿಯಾಗುತ್ತದೆ ಎಂದೆನಿಸುತ್ತದೆ.ಅತಿ ಕಡಿಮೆ ಸಂಖ್ಯೆಯಲ್ಲಿ ಪೂರ್ಣ ಜಾನಪದ ಅಧ್ಯಯನದ ವಿಭಾಗಗಳಿವೆ.ಎರಡು ವಿಭಾಗಗಳಲ್ಲಿ ಕೆಲಸ ಮಾಡುವ ಜನರಿರುವ ಅನೇಕ ವಿಬಾಗಗಳಿವೆ.ಉದಾಹರಣೆಗೆ ನಾನು ಜಾನಪದ ವಿಭಾಗದಲ್ಲಿ ಕೆಲಸ ಮಾಡುತ್ತಿಲ್ಲ.ನಾನು ದಕ್ಷಿಣ ಏಷ್ಯಾ ವಿಭಾಗದಲ್ಲಿದ್ದೇನೆ.ನಾನು ಆಂಥ್ರೋಪಾಲಾಜಿ ಮತ್ತು ಲಿಂಗ್ವಿಸ್ಟಿಕ್ಸ್‌ಗೆ ಸಂಬಂಧಪಟ್ಟವನು.ಆದರೆ ಯಾವಾಗ ಜಾನಪದ ತರಗತಿಗಳನ್ನು ಅಥವಾ ಕೋರ್ಸ್‌ಗಳನ್ನು ತೆಗೆದುಕೊಳ್ಳಬೇಕೆನ್ನಿಸುವುದೋ ಆಗ ಆಂಥ್ರೋಪಾಲಾಜಿ ಡಿಪಾರ್ಟ್‌ಮೆಂಟ್‌ನಲ್ಲಿ ತೆಗೆದುಕೊಳ್ಳುತ್ತೇನೆ.ಈಗ ನಾನು ಹೇಳುವುದು ಈ ಸಮಸ್ಯೆಗೆ ಒಂದು ಪರಿಹಾರ ಅಷ್ಟೆ.ನೀವು ಪೂರ್ಣ ಪ್ರಮಾಣದ ಜಾನಪದ ವಿದ್ವಾಂಸರಾಗಿಲ್ಲದೇ ಇರಬಹುದು.

ಅಕಸ್ಮಾತ್ ಅಂತಹ ನೂರಾರು ಮಂದಿ ಇದ್ದರೆ ಅವರಿಗೆ ಕೆಲಸವೂ ಇರುತ್ತಿರಲಿಲ್ಲ. ಭಾರತದಂತಹ ದೇಶದಲ್ಲಿ ಸಾಮಾಜಿಕ, ಆರ್ಥಿಕ, ಆಹಾರ ಪದ್ಧತಿಯ, ಆರೋಗ್ಯ ಸುಧಾರಣೆಯ ಪದ್ಧತಿಗಳ ಬದಲಾವಣೆ ಬಯಸುವವರು ಜಾನಪದವನ್ನು ಅಭ್ಯಾಸ ಮಾಡಬೇಕು. ಆದರೆ ಇದೂ ಕೂಡ ಪೂರ್ಣಕಾಲಿಕ ಜಾನಪದ ವಿದ್ವಾಂಸರಿಗೆ ಸೂಕ್ತ ಕೆಲಸವಾಗುವುದಿಲ್ಲ. ಕೆಲವರು ಅಪ್ಲೈಡ್ ಫೋಕ್‌ಲೋರಿಸ್ಟ್ಸ್ -ಈ ಅನ್ವಯಿಕ ಜಾನಪದದ ಅಪಾಯವೆಂದರೆ ಸರ್ಕಾರವೇ ಕೆಲವು ಯೋಜನೆಗಳನ್ನು ಪ್ರಸ್ತುತಪಡಿಸಬಹುದು. ಇಲ್ಲಿ ಜಾನಪದ ವಿದ್ವಾಂಸರು ಹೆಚ್ಚು ಎಚ್ಚರದಿಂದ ಇರಬೇಕು. ಅವರು ಜಾನಪದ ಕಥೆಯನ್ನು ತೆಗೆದುಕೊಂಡು ಅದನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಹಲವು ಬದಲಾವಣೆಗಳನ್ನು ಮಾಡಿಬಿಡಬಹುದು. ಅದನ್ನು ಕೆಲವು ಬಾರಿ ಒಳ್ಳೆಯದಕ್ಕೆ ಬಳಸುತ್ತಾರೆ. ನಾನು ಅಂತಹ ಅಪ್ಲೈಡ್ ಫೋಕ್‌ಲೋರಿಸ್ಟ್ ಒಬ್ಬರ ಜೊತೆಗೆ ಮಾತನಾಡುತ್ತಿದ್ದೆ. ಅವರಿಗೆ ನಾನು ಸಲಹೆ ನೀಡುವಾಗ ಹೇಳಿದ್ದೇನೆಂದರೆ -ನೀವು ಒಂದು ಸಮೂಹದ ಅಥವಾ ಪಂಗಡದ ಜನರ ಜಾನಪದವನ್ನು ಬಳಸಿಕೊಂಡಲ್ಲಿ ಅದೇ ಒಂದು ರೀತಿಯಲ್ಲಿ ಒಳ್ಳೆಯ ಬೆಳವಣಿಗೆ. ಏಕೆಂದರೆ ಅವರಿಗೆ ತಮ್ಮ ಹಾಡನ್ನೋ, ಕಥೆಯನ್ನೋ, ಜೀವನಶೈಲಿಯ ಚಿತ್ರಣವನ್ನೋ ಪಟ್ಟಣದ ಕಲಿತ ಜನ ಬಳಸಿಕೊಂಡರು ಎಂದು ಸಂತೋಷವಾಗುತ್ತದೆ. ನೀವು ಕೇವಲ ವಿಧಿ, ಅದೃಷ್ಟ ಇವುಗಳಿಗೆ ಸಂಬಂಧಿಸಿದ ಹಾಡು, ಕಥೆಗಳನ್ನೇ ಬಳಸಬೇಕೆಂದೇನೂ ಇಲ್ಲ. ಪರಿಸರ ಶಿಕ್ಷಣದ ಬಗ್ಗೆ ಕಥೆಗಳಿವೆ. ಅವುಗಳಲ್ಲಿ ಸೂಕ್ತವಾದುದನ್ನು ಆಯ್ದುಕೊಳ್ಳುವುದು ಬಹು ಮುಖ್ಯ. ಆದಕ್ಕಾಗಿ ಹೊಸ ಕಥೆಯನ್ನು ಹೊಸೆಯಬೇಕಾದ ಅಗತ್ಯವಿಲ್ಲ. ಸ್ತ್ರೀಯೊಬ್ಬಳು ತನ್ನೆಲ್ಲ ಕಷ್ಟಗಳಿಗೆ ಪರಿಹಾರ ಕಂಡುಕೊಂಡ ಬಗ್ಗೆ ಕಥೆಯಿದೆ. ಬಹಳಷ್ಟು ಸ್ತ್ರೀವಾದಿ ಕಥೆಗಳು ಪ್ರಸ್ತುತ ಸ್ಥಿತಿಯನ್ನು ವಿಮರ್ಶಿಸುತ್ತವೆ. ನೀವು ಬಯಸಿದಲ್ಲಿ ಹೆಚ್ಚು ಬದಲಾವಣೆಗೊಳಪಡಿಸದೆ ಜಾನಪದದಲ್ಲಿ ಇದ್ದುದನ್ನು ಇದ್ದಂತೆಯೇ ಬಳಸಲು ಸಾಧ್ಯವಿದೆ. ಈ ಮೂಲಕ ಜನಕ್ಕೆ ಸಂದೇಶ ನೀಡಲು ಸಾಧ್ಯ. ಈ ದಿಕ್ಕಿನಲ್ಲಿ ವಿದ್ವಾಂಸರು ಹೆಚ್ಚು ಚಿಂತನೆ ನಡೆಸಿಲ್ಲ. ಏಕೆಂದರೆ ಜಾನಪದವೆಲ್ಲಾ ಕಂಜರ್ವೇಟಿವ್ ಎಂಬ ಒಂದೇ ರೀತಿಯ ಆಲೋಚನಾ ಕ್ರಮ ಪ್ರಚಲಿತವಾಗಿದೆ. ಅದು ನಿಜವಲ್ಲ. ಜಾನಪದ ನಿಜಕ್ಕೂ ಬಂಡಾಯದ ಧ್ವನಿ.

...ಟೆಲಿವಿಜನ್ ಅಥವಾ ವಿಡಿಯೋಗಳಂತಹ ವಿದ್ಯುನ್ಮಾನ ಮಾಧ್ಯಮಗಳು ಇಂಥ ಕಥೆ ಹೇಳುವ ಪರಂಪರೆಯನ್ನು ಕೊನೆಗಾಣಿಸುತ್ತವೆಯೇ? ಈ ಪ್ರಶ್ನೆಗೆ ಉತ್ತರಿಸುವುದು ತುಂಬ ಕಷ್ಟ. ನಗರಗಳಲ್ಲಿನ ಬಹುತೇಕ ಜನ ಇಂಥ ಕಲೆ ಇನ್ನೂ ಜೀವಂತವಾಗಿರುವ ವಾಸ್ತವವನ್ನು ಅರಿತುಕೊಂಡಿಲ್ಲ. ಅತ್ಯಂತ ಆಧುನಿಕ ನಗರಗಳಾದ ಮುಂಬೈ ಮದ್ರಾಸ್ ಮತ್ತು ಕಲ್ಕತ್ತೆಗಳಲ್ಲಿ ರಾಮಾನುಜನ್ ಹೇಳುವಂತೆ ಜಾನಪದ ಕೇವಲ ಉಪನಗರಗಳಷ್ಟು ದೂರದಲ್ಲಿದೆ. ಚಿಗದೊಡಪ್ಪನ ಮಗ ಇಲ್ಲವೆ ಅಜ್ಜಿಯ ಸಂಬಂಧದಷ್ಟು ಮಾತ್ರ ದೂರವಾಗಿದೆ! ಇಂಥ ಕಥಾ ಪರಂಪರೆಯು ದರಿಗಡದಂತೆ ಕಥೆ ಹೇಳುತ್ತಿರುವ ರಾಮಾನುಜನ್‌ರಿಗೆ ನಾವು ಕೃತಜ್ಞರಾಗಿರಬೇಕು. ಈ ಕಥೆಗಳು ಕಣ್ಮರೆಯಾಗಿ ಹೋಗದಂತೆ ಉಳಿಸಿದ್ದಕ್ಕಾಗಿ ಮಾತ್ರ ರಾಮಾನುಜನ್ ಅವರನ್ನು ಸ್ಮರಿಸುವುದಲ್ಲ. ಈ ಕಥೆಗಳನ್ನು ಸುಂದರವಾಗಿ ಮಾತೃವಾತ್ಸಲ್ಯ ಮತ್ತು ತಿಳುವಳಿಕೆಗಳೊಂದಿಗೆ ಮುಂದಿನವರಿಗೆ ದಾಟಿಸುತ್ತಿರುವ ಮೂಲಕ ಕಥೆ ಹೇಳುವ ಸಂಪ್ರದಾಯವನ್ನು ಮುಂದುವರಿಸುತ್ತಿರುವುದಕ್ಕಾಗಿ ರಾಮಾನುಜನ್‌ರನ್ನು ಸ್ಮರಿಸಬೇಕು.

- ಗಿರೀಶ ಕಾರ್ನಾಡ

('ಫೋಕ್ ಟೇಲ್ಸ್ ಫ್ರಾಮ್ ಇಂಡಿಯಾ' ಬಗ್ಗೆ ಬರೆಯುತ್ತಾ)

ಆರ್.ಎಂ.ಹಡಪದ್ ಅವರ ಕಲೆ : ಒಂದು ಪ್ರವೇಶ

O ಕೆ.ಎಸ್.ಶ್ರೀನಿವಾಸ ಮೂರ್ತಿ

''ಭತ್ತದ ತೆನೆಗಳು ಗಾಳಿಗೆ ಹೇಗೆ ಸುಯ್ದಾಡ್ತಿರತ್ತೆ, ನೋಡೀದೀರಿಲ್ಲೊ! ಆಗ ನಮ್ಮ ಮನಸ್ಸೂ ಅದರೊಟ್ಟಿಗೆ ತೂಗಾಡತ್ತೆ. ಒಂದು ನೀರಿನ ಕೊಳದ ಮುಂದೆ ಕುಳಿತುಕೊಳ್ಳಿ. ಮಳೆಹನಿಗಳೇನಾದ್ರೂ ಅಲ್ಲಿ ಇಲ್ಲಿ ಹನೀತಿದ್ರೆ ಅವು ಆ ಕೊಳದ ಮೇಲೆ ಬೆಳ್ಳಿ ನಕ್ಷತ್ರಗಳಂತೆ ಮಿಂಚುತ್ತಿರುತ್ತವೆ. ಹೀಗೆ ಮಿಂಚುತ್ತ ಮಿಂಚುತ್ತ ಅವು ನಮ್ಮನ್ನು ಒಟ್ಟು ಅನುಭವದಲ್ಲಿ ಹೇಗೆ ತೊಡಗಿಸಿಬಿಡ್ತವೆ ಅನ್ನೋದು ಅದ್ಭುತ. ಹೀಗೆ ಒಂದು ಬಣ್ಣ ಅಥವಾ ಆಕಾರವೂ, ಮೊಟ್ಟಮೊದಲಿಗೆ, ನಮ್ಮನ್ನು ಸಮಗ್ರವಾಗಿ ಅಟ್ಯಾಕ್ ಮಾಡತ್ತೆ. ಗಾಬರಿ, ದಿಗ್ಭ್ರಮೆಯಾದಾಗ ನೀವು ಏನು ಮಾಡ್ತೀರಿ! ಹಾಗೇ ಇಲ್ಲಿ ಆಗಿ ಹೋಗತ್ತೆ. ಹೆಚ್ಚೆಂದರೆ 'ಈ ಬಣ್ಣ ಎಷ್ಟು ಸೊಗಸಾಗಿದೆ' ಅಂತೀವಿ. ಅಷ್ಟೆ. ಬೇರೆ ವಿವರಣೆ ಸಾಧ್ಯವಿಲ್ಲ...''[೧]

ಹೀಗೆಯೇ ಒಂದು ಸಲ ಹರಟುತ್ತಿದ್ದಾಗ, ಕಲಾವಿದ ಆರ್.ಎಂ.ಹಡಪದ್(ಜನನ:೧೯೩೭), ಅವರು ಹೇಳಿದ ಮಾತುಗಳಿವು. ಇಂತಹ ಹರಟೆಯಲ್ಲಿಯೂ ಅವರ ಮನಸ್ಸಿನ ಸೂಕ್ಷ್ಮತೆ ಮತ್ತು ಎಚ್ಚರಗಳು ಎದ್ದು ಕಾಣುತ್ತವೆ. ಬದುಕಿನ ವೈವಿಧ್ಯದಲ್ಲಿ ತನ್ಮಯನಾಗಿದ್ದರೂ ಭಾವುಕನಾಗದ ಹಾಗಿರುವ ವ್ಯಕ್ತಿತ್ವ ಈ ಪ್ರಕ್ರಿಯೆಯಲ್ಲಿದೆ. ಹಡಪದ್ ಅವರ ಕಲಾಗ್ರಹಿಕೆ ಮತ್ತು ಸೃಷ್ಟಿಕ್ರಿಯೆಯ ಕೇಂದ್ರವೂ ಇದೇ ರೀತಿಯದು. ಪ್ರಕೃತಿಯಲ್ಲಿನ ವಿಸ್ಮಯಗಳಿಂದ ನಿಬ್ಬೆರಗಾಗಿದ್ದರೂ ಅವುಗಳ ಅನುಕರಣೆ, ಆದರ್ಶೀಕರಣಗಳ ದಾರಿ ಬಿಟ್ಟು ಕಲಾತ್ಮಕತೆ, ಕೌಶಲಗಳಿಗೆ ಹೆಚ್ಚಿನ ಮಹತ್ವ ಕೊಡುವುದು ಹಡಪದ್ ಅವರ ರಚನಾಕ್ರಮವಾಗಿದೆ.

ತಾರ್ಕಿಕ, ಸುಸಂಗತ ಶೈಲಿಯು ಅವರ ಮಾತು ವಿಚಾರಗಳಿಗಿಲ್ಲ. ವಿಭಿನ್ನ ಗೊಂದಲಗಳನ್ನು ಗ್ರಹಿಸಲು ಹೊರಟ ರೊಮ್ಯಾಂಟಿಕ್ ನಿಬ್ಬೆರಗು ಒಂದು ಕಡೆ. ಈಗೊಂದಲಗಳಲ್ಲಿ ಕಾಣುವ ಸೋಗಲಾಡಿತನ, ಸ್ವಾರ್ಥಗಳನ್ನು ಪ್ರಶ್ನಿಸುವ ವಾಸ್ತವ ಪ್ರಜ್ಞೆ ಇನ್ನೊಂದು ಕಡೆ. ಇವೆರಡೂ ಅವರ ಮಾತಿನಲ್ಲಿ ವೈದೃಶ್ಯ ಸ್ವ-ವಿರೋಧಗಳನ್ನು ಉಂಟುಮಾಡುತ್ತಿರುತ್ತವೆ. ಈ ರೊಮ್ಯಾಂಟಿಸಿಸಂ ಮತ್ತು ವಾಸ್ತವ ಪ್ರಜ್ಞೆಗಳು ಅವರ ಕಲೆಯ ನಿರ್ದಿಷ್ಟ ಸ್ವರೂಪವನ್ನು ನಿರ್ಣಯಿಸಿವೆ. ಹಡಪದ್ ಅವರ ಮಾತುಗಳಲ್ಲೆ ಹೇಳುವುದಾದರೆ, ಅವರ ಚಿತ್ರಗಳು ''ಎರಡು ನೆಲೆಗಳಿಂದ ಹುಟ್ಟುತ್ತವೆ : ಭಾವನಾತ್ಮಕ ಹಾಗೂ ಬೌದ್ಧಿಕ''.[೨]

O

ಹಡಪದ್ ಅವರು ಮೂರು ದಶಕಗಳಿಂದ ಕ್ರಿಯಾಶೀಲರಾಗಿರುವ ಪ್ರತಿಭಾವಂತ ಕಲಾವಿದ ಮತ್ತು ಕಲಾಶಿಕ್ಷಕ. ಈ ಅವಧಿಯಲ್ಲಿ ವಿಭಿನ್ನ ಕಲಾಪ್ರಕಾರಗಳಲ್ಲಿ, ಜೊತೆ - ಜೊತೆಯಾಗಿ ಕೃತಿ ರಚಿಸುತ್ತಾ

ಬಂದಿದ್ದಾರೆ. ಭಾವಚಿತ್ರ, ಪ್ರಕೃತಿ ಚಿತ್ರಗಳೂ ಇಲ್ಲಿವೆ. ಪರಿಚಿತ ಲೋಕದ ಆಕೃತಿ, ದೃಶ್ಯಗಳಿಂದ ದೂರವಾದ (ಕೇವಲ ರೇಖೆ, ಬಣ್ಣಗಳು ಕೊಡುವ ದೃಶ್ಯಾನುಭವಗಳನ್ನೇ ಶೋಧಿಸುವ) ಅಮೂರ್ತ ಚಿತ್ರಗಳನ್ನೂ ಅವರು ರಚಿಸಿದ್ದಾರೆ. ಅವರ ವೈಯಕ್ತಿಕ ಒಲವು ನಿಲುವುಗಳ ವ್ಯಾಪ್ತಿಯೇ ದೊಡ್ಡದು. ಅಲ್ಲಿ ಕಲಾಸೃಷ್ಟಿಗೆ ಸಂಬಂಧಿಸಿದ ಆಶಯಗಳೂ, ಶೈಕ್ಷಣಿಕ ಸಾಮಾಜಿಕ ಕಾಳಜಿಗಳೂ ಒಟ್ಟಿಗೇ ಕಾಣುತ್ತವೆ. ಅವರ ಶಿಕ್ಷಣ ಕ್ರಮದಲ್ಲೂ ಮುಕ್ತ ಮನಸ್ಸು, ಸ್ವತಂತ್ರ ರಚನಾಕ್ರಮ, ಪ್ರಯೋಗಶೀಲತೆಗಳೇ ಪ್ರಬಲವಾದವು.

ನಮ್ಮ ಕಲಾವಿಮರ್ಶೆಯು, ಹಡಪದ್ ಅವರ ಕೃತಿ ಸಮೂಹವನ್ನು ವ್ಯವಸ್ಥಿತವಾಗಿ ಚರ್ಚಿಸಿಲ್ಲ. ಅದರ ನೆಲೆ-ಬೆಲೆಗಳನ್ನು ಗುರುತಿಸಿಲ್ಲ. ಉದಾಹರಣೆಗೆ, ಅವರನ್ನು ''ಮುಕ್ತ ಮನಸ್ಸಿನ ಪ್ರಯೋಗಶೀಲರು'' ಎಂದು ಗುರುತಿಸುವುದು ಸಾಮಾನ್ಯ. ಅವರ ಅಗಾಧ ಕೃತಿ ಸಮೂಹ, ಅಲ್ಲಿ ಕಾಣುವ ವೈವಿಧ್ಯಗಳು, ವೈದೃಶ್ಯಗಳು ಇದಕ್ಕೆ ಆಧಾರಗಳು. ಆದರೂ ಕೇವಲ ಕೆಲವಷ್ಟೆ ಕಲಾಕೃತಿಗಳ ಮೂಲಕ ಅವರ ಪ್ರತಿಭೆಯ ಸ್ವರೂಪವನ್ನು ಕಂಡುಕೊಳ್ಳುವುದು ರೂಢಿಯಾಗಿಬಿಟ್ಟಿದೆ. ಹೀಗಾದಾಗ ಹಡಪದ್ ಅವರು ತೀರ ಪ್ರಜ್ಞಾಪೂರ್ವಕವಾಗಿ ರಚಿಸುತ್ತಾ ಬಂದಿರುವ ಕೆಲವು ಸಂಯೋಜನೆಗಳು, ಭಾವಚಿತ್ರಗಳು ಮಾತ್ರ ನಮ್ಮ ಗಮನದಲ್ಲಿರುತ್ತವೆ. ಅಥವಾ ಕಥೆ, ನಿರೂಪಣೆ, ಹೇಳಿಕೆ ಇಲ್ಲವೇ ಸಂದೇಶಗಳಿಗಷ್ಟೇ ಸೋತ ಅವರ ಕಲಾಕೃತಿಗಳಿಗೆ ಮಾತ್ರ ನಾವು ಸ್ಪಂದಿಸುತ್ತಿರುತ್ತೇವೆ. ಅವರ ಪ್ರತಿಭೆಯು ಯಾವ ಕಲಾಪ್ರಕಾರಗಳಲ್ಲಿ, ಎಷ್ಟರ ಮಟ್ಟಿಗೆ, ಸಾರ್ಥಕವಾಗಿ ಪ್ರಕಟವಾಗಿದೆ ಎಂಬುದನ್ನು ವಿಮರ್ಶಕರು ವಿವರವಾಗಿ, ನಿಕಟವಾಗಿ ಇನ್ನೂ ಪರಿಶೀಲಿಸಿಲ್ಲ.

ಹಡಪದ್ ಅವರ ಕೃತಿ ಸಮೂಹವನ್ನು ಯಾವುದೇ ಸೂತ್ರದ ಮೂಲಕ ಅರ್ಥ ಮಾಡಿಕೊಳ್ಳುವುದು ಕಷ್ಟ. ಯಾವ ಅವಸರದ ತೀರ್ಮಾನಗಳಿಗೂ ಅವಕಾಶವಾಗದ ಹಾಗೆ ಅವರ ಕಲಾಕೃತಿಗಳನ್ನು ನಾವು ಸ್ವೀಕರಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಅವರ ಕಲಾಪ್ರಜ್ಞೆಗೇ ಸಂಬಂಧಿಸಿದ ಕೆಲವು ವಿವರಗಳು ನಮಗೆ ಅನಿವಾರ್ಯ. ಇವು ಅವರ ಕಲಾಸೃಷ್ಟಿಯ ಸಮಗ್ರ ನೋಟವೊಂದಕ್ಕೆ ಅಗತ್ಯ ಪ್ರವೇಶವನ್ನೂ ಒದಗಿಸುತ್ತವೆ. ಇಂಥ ಕೆಲವು ವಿವರಗಳು ಈ ಲೇಖನದ ಕೇಂದ್ರ. ಈ ಮೂಲಕ ಅವರ ಕಲಾಸೃಷ್ಟಿಯ ಸ್ವರೂಪ ಮತ್ತು ಸಾಧನೆಗಳನ್ನು ಖಚಿತವಾಗಿ ಗುರುತಿಸುವುದು ಸುಲಭ.

೦

''ನನಗೆ ಕಲಾಸಕ್ತಿ ಇದೆ ಎಂದು ತಿಳುವಳಿಕೆ ಬರುವುದಕ್ಕೂ ಮೊದಲೇ ನಾನು ಚಿತ್ರ ರಚಿಸಲು ತೊಡಗಿದ್ದೆ. ನನಗಾಗ ಸುಮಾರು ಐದು ವರ್ಷ. ಇದಕ್ಕೆ ಯಾರ ಒತ್ತಡವೂ ಇರಲಿಲ್ಲ. ಅದು ನನಗೊಂದು ಸಹಜ ಪ್ರವೃತ್ತಿಯಾಗಿ ಬಂತು. ನಾನು ಹುಟ್ಟಿದ್ದು ಬಾದಾಮಿಯಲ್ಲಿ. ಬಾದಾಮಿ ಪ್ರಕೃತಿ ಸೌಂದರ್ಯದಿಂದ ತುಂಬಿ ಹೋಗಿದೆ. ಹಾಗೆಯೇ ಅಲ್ಲಿಯ ಕಲಾಕೃತಿಗಳ ಶ್ರೀಮಂತಿಕೆ ಅಗಾಧ. ಈ ಸುಂದರ ಪರಿಸರ ನನ್ನನ್ನು ಮೋಡಿ ಮಾಡಿದೆ. ಈ ವಾತಾವರಣವು ಸಹಜವಾಗಿಯೇ ಕಲಾಸಕ್ತಿಯನ್ನು ಉಂಟು ಮಾಡುತ್ತದೆ''.[೩]

ಹಡಪದ್ ಅವರ ಕಲಾಸೃಷ್ಟಿ ಮತ್ತು ಸಂವೇದನೆಗಳ ಸ್ವರೂಪದಲ್ಲಿ ಬಾದಾಮಿ, ಪಟ್ಟದಕಲ್ಲುಗಳ ಪಾರಂಪರಿಕ ಹಿನ್ನೆಲೆಯು ಅತ್ಯಂತ ಮಹತ್ವವಾದದ್ದು. ಈ ಹಿನ್ನೆಲೆ ಯಾವ ರೀತಿಯದೆಂಬುದನ್ನು ಒಂದು ಉದಾಹರಣೆಯ ಮೂಲಕ ನೋಡೋಣ. ಪಟ್ಟದಕಲ್ಲಿನ (ಪಶ್ಚಿಮ ಚಾಲುಕ್ಯರ ಕಾಲದ - ಕ್ರಿ.ಶ. ಎಂಟನೇ ಶತಮಾನದ) ವಿರೂಪಾಕ್ಷ ದೇವಸ್ಥಾನದಲ್ಲಿರುವ ದುರ್ಗಿಯ ಗುಡಿಯಲ್ಲಿ ದುರ್ಗಾ- ಮಹಿಷಾಸುರ ಮರ್ದಿನಿಯ ಶಿಲ್ಪವೊಂದಿದೆ. ಈ ಶಿಲ್ಪದ ಎರಡು ಲಕ್ಷಣಗಳು ಇಲ್ಲಿ ಪ್ರಸ್ತುತ. ಒಂದು, ಈ ಶಿಲ್ಪವು ದೃಶ್ಯ

ರೂಪದಲ್ಲಿ ಪ್ರಕಟ ಪಡಿಸುವ ಚಲನಶೀಲತೆ; ಈ ಪ್ರತಿಮೆಯಲ್ಲಿ, ಹಲವಾರು ಕೈಗಳ ನಡುವೆ ಕರ್ಷಣಕ್ಕೆ ಒಳಗಾಗಿರುವ ಎರಡು ಶಾರೀರಿಕ ಭಂಗಿಗಳ ವಿನ್ಯಾಸದ ದೃಶ್ಯ ಲಯವಿದೆ. ಈ ರೂಪಗಳು ಪರಸ್ಪರ ಪ್ರತಿಧ್ವನಿಸಿ ಒಟ್ಟು ನೋಟವನ್ನು ಜೀವಂತಗೊಳಿಸುತ್ತವೆ. ಎರಡನೆಯದಾಗಿ, ಈ ಶಿಲ್ಪದಲ್ಲಿ ಕಾಣುವ ವಾಸ್ತವ ಪ್ರಜ್ಞೆ: ದುರ್ಗಿಯ ಕತ್ತಿಯು ಮಹಿಷಾಸುರನ ಎದೆ ಹೊಕ್ಕಿರುವ ರೀತಿ, ಅವನ ಮುಖದಲ್ಲಿ ಕಾಣುವ ನೋವು ಈ ರೀತಿಯ ವಾಸ್ತವ ಪ್ರಜ್ಞೆಯನ್ನು ಶಿಲ್ಪವು ನೇರವಾಗಿ ಪ್ರಕಟಿಸುತ್ತದೆ. ಈ ದೃಶ್ಯವನ್ನು ಹಡಪದ್ ಚಿತ್ರವೊಂದರ ಮೂಲಕ ಪುನರ್ರಚಿಸಿದ್ದಾರೆ. ಈ ಪುನರ್ರಚನೆಯಲ್ಲಿಯೂ ಎದ್ದು ಕಾಣುವ ಅಂಶವೆಂದರೆ ಪರಸ್ಪರ ಪ್ರತಿಧ್ವನಿಸುವ ರೂಪಾಂಶಗಳು ಮತ್ತು ಪ್ರಜ್ಞಾಪೂರ್ವಕ ನಾಟಕೀಯ ವೈದೃಶ್ಯಗಳು. ಶರೀರದ ವಿವಿಧ ಅಂಗಗಳ ಬಾಗು-ಬಳುಕು, ಅಂಕು-ಡೊಂಕುಗಳನ್ನು ಇವುಗಳನ್ನು ಒಂದಕ್ಕೊಂದು ಸಮಾನಾಂತರವಾಗಿ ಮತ್ತು ವಿರುದ್ಧವಾಗಿ ಹಿಡಿದಿಡುವುದು ಇಲ್ಲಿನ ಚಿತ್ರಣದ ಕ್ರಮ. ಈ ವಿವರವು ಹಡಪದ್ ಅವರ ಕಲೆಯಲ್ಲಿ ಕಾಣುವ ನಿರ್ದಿಷ್ಟ ವಾಸ್ತವ ಪ್ರಜ್ಞೆಯೂ ಆಗಿದೆ. ಹಡಪದ್ ಅವರ ಹಲವಾರು ಚಿತ್ರಗಳಲ್ಲಿ ಈ ಪಟ್ಟದಕಲ್ಲಿನ ಶಿಲ್ಪ ಕಲಾಕೃತಿಗಳ ಪ್ರೇರಣೆ ಪ್ರಬಲವೂ ಆಗಿದೆ ಮತ್ತು ನೇರವಾದುದೂ ಆಗಿದೆ. ಉದಾಹರಣೆಗೆ ಅವರ ಕೆಲವು ರೇಖಾಚಿತ್ರಗಳನ್ನು ಗಮನಿಸಬಹುದು. ಈ ರೇಖಾಚಿತ್ರಗಳಲ್ಲಿ ಕಾಣುವ ವಕ್ರ ರೇಖೆಗಳು ಸಮಾನಾಂತರವಾಗಿಯೂ, ತದ್ವಿರುದ್ಧವಾಗಿಯೂ ಇವೆ. ಹೀಗಿರುವುದರ ಮೂಲಕ ಈ ರೇಖೆಗಳ ಮೂಲಕ ಪರಸ್ಪರ ಪ್ರತಿಧ್ವನಿಯ ಧಾಟಿಯೊಂದು ಉಂಟಾಗಿ, ಒಂದು ರೇಖೆ ಅಥವಾ ಆಕೃತಿಯಿಂದ ಮತ್ತೊಂದರ ಕಡೆಗೆ ನಮ್ಮ ದೃಷ್ಟಿ ವೇಗವಾಗಿ, ಸಹಜವಾಗಿ ಸಾಗುತ್ತದೆ. ಶರೀರದ ವಿವಿಧ ಅಂಗಗಳ ಬಾಗು-ಬಳುಕುಗಳು, ಅಂಕುಡೊಂಕುಗಳು ಒಂದಕ್ಕೊಂದು ಸಮಾನಾಂತರವಾಗಿ ಅಥವಾ ಎದುರು-ಬದುರಾಗುತ್ತ ನಾಟಕೀಯ ವೈದೃಶ್ಯಗಳಿಗೆ ಕಾರಣವಾಗುತ್ತವೆ. ಈ ರೀತಿಯ ಚಲನಶೀಲ ಗುಣವನ್ನೇ ನಾನು ದೃಶ್ಯ ಲಯ ಎನ್ನುತ್ತಿದ್ದೇನೆ. ಹಡಪದ್ ಅವರ ಈ ರೇಖಾಚಿತ್ರಗಳು 'ಶೈಲೀಕೃತ'ವಾಗಿವೆ. ಅಂದರೆ ಅವುಗಳ ಮೂಲ ಪ್ರೇರಣೆಗಳು ಏನೇ ಆಗಿದ್ದರೂ, ವೈಯಕ್ತಿಕ ನೆಲೆಯಲ್ಲಿ ಪೂರ್ವಸಿದ್ಧವಾಗಿ ರೂಪಿಸಿಕೊಂಡ ರಚನಾಶೈಲಿಗೆ ಸರಿಯಾಗಿ ಈ ಆಕೃತಿಗಳು ಮೂಡಿಬರುತ್ತವೆ. ಆ ಅರ್ಥದಲ್ಲಿ ಈ ರೇಖಾಚಿತ್ರಗಳು ಏಕ ಪ್ರಕಾರವಾದವು. ಆದರೆ, ಹೀಗೆ ಶೈಲೀಕೃತಗೊಂಡ ಚಿತ್ರಗಳಲ್ಲೂ ಶರೀರದ ಸಹಜ ವಿನ್ಯಾಸದ ಬಗ್ಗೆ ಪ್ರಕಟವಾಗುವ ಹಡಪದ್ ಅವರ ಅರಿವು ವಿಶೇಷವಾದದ್ದು. ಸಣ್ಣ ಸಣ್ಣ ವಿವರದಲ್ಲೂ ಹಡಪದ್ ಅವರ ಕಲಾಸೃಷ್ಟಿಗೆ ಸಂಬಂಧಿಸಿದ ಹಲವಾರು ಒಳನೋಟಗಳು ಸಿಗುತ್ತವೆ. ಪಾರಂಪರಿಕ ಕಲೆಯ ಯಾವ ಯಾವ ಅಂಶಗಳು ಹಡಪದ್ ಅವರ ಕಲಾಗ್ರಹಿಕೆಯನ್ನು ರೂಪಿಸಿದವು ಮತ್ತು ಅವರ ಈ ಗ್ರಹಿಕೆಗೆ ಪ್ರೇರಣೆಯಾದ, 'ಆಧುನಿಕ'ವೆಂದು ಕರೆಯಲಾಗಿರುವ ಸಂವೇದನೆಯ ಸ್ವರೂಪವೇನು ಎಂಬುದರ ಬಗೆಗಿನ ಎರಡು ಮುಖ್ಯ ಒಳನೋಟಗಳನ್ನು ಇಲ್ಲಿ ಗಮನಿಸಬಹುದು.'

೦

ಹಡಪದ್ ಅವರ ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳ ಚಿತ್ರಗಳಲ್ಲಿ, ಅಲ್ಲಿನ ವಾಸ್ತು, ಶಿಲ್ಪಗಳಲ್ಲಿ ಕಾಣಿಸುವ ಪಾರಂಪರಿಕ ಪ್ರತಿಭೆಯು ಕುತೂಹಲಕಾರಿಯಾಗಿ ಕೆಲಸ ಮಾಡಿದೆ. ಪರಂಪರೆಯು ಹೇಗೆ ಏಕಾಕಾರವಲ್ಲ ಎಂಬುದಕ್ಕೆ ಈ ಕಲಾಕೃತಿಗಳು ಅದ್ಭುತವಾದ ಉದಾಹರಣೆಗಳು. ಬಾದಾಮಿಯ (ಚಾಲುಕ್ಯಪೂರ್ವ, ಕ್ರಿ.ಶ.೬ನೇ ಶತಮಾನ) ಎರಡನೆಯ ಗುಹೆಯನ್ನು ಪ್ರವೇಶಿಸುತ್ತಿದ್ದ ಹಾಗೆ ಬಲಕ್ಕೆ ಕಾಣುವ ವಿಷ್ಣು ತ್ರಿವಿಕ್ರಮನ ಉಬ್ಬುಗೆತ್ತನೆಯನ್ನು ಇಲ್ಲಿ ನೋಡಬಹುದು. ಮೇಲು ನೋಟಕ್ಕೆ ಈ

ಭಿತ್ತಿಗೊಂದು ಚೌಕಟ್ಟಿದ್ದ ಹಾಗೆ ಕಾಣುತ್ತದೆ.ಇದರ ಎಲ್ಲಾ ದೃಶ್ಯ ಪ್ರತಿಮೆಗಳ ಅರ್ಥವ್ಯಾಪ್ತಿಯೂ ನಮ್ಮ ಎದುರು ನೋಟಕ್ಕೆ ದಕ್ಕಿಬಿಡುವ ಹಾಗೆ ಅನ್ನಿಸುತ್ತದೆ. ಆದರೆ, ಈ ನಿರ್ದಿಷ್ಟ ಹಿನ್ನೆಲೆಯ ಅಳತೆ, ಆಕಾರಗಳಿಗೆ ಸರಿಯಾಗಿ ಈ ಕೆತ್ತನೆಯೊಳಗಿನ ಸಣ್ಣ-ಪುಟ್ಟ ಆಕೃತಿಗಳೂ ಮಾರ್ಪಾಡಾಗಿವೆ.ಇಂಥ ಆಕೃತಿಗಳಲ್ಲಿ ತ್ರಿವಿಕ್ರಮನ ಎಡಭಾಗದಲ್ಲಿ ಮೈ ಚಾಚಿಕೊಂಡಿರುವ ಯೋಧ ಕುತೂಹಲಕಾರಿ. ಹಿನ್ನೆಲೆಯ ಗೋಡೆಯು ಪೊಳ್ಳಾಗಿದ್ದು, ಅದರ ಅಂಚುಗಳು ನಮ್ಮ ಕಡೆ ಹೇಗೆ ಸರಿಯುತ್ತವೋ ಅದಕ್ಕೆ ಸಮಾನಾಂತರವಾಗಿಯೇ ಈ ಯೋಧನ ಶರೀರವೂ, ಅಸಹಜವಾಗಿ ತಿರುಚಿಕೊಂಡಿದೆ.ಸಂಯೋಜನೆಯಲ್ಲಿನ ತೆರಪನ್ನು ಈ ಕಲಾವಿದರು ಬಳಸಿಕೊಂಡಿರುವ ಇಂಥ ರೀತಿಯಲ್ಲಿ ಕಾಣುವ ವೈವಿಧ್ಯತೆ ,ಮುಕ್ತ ಮನಸ್ಸುಗಳು ಇಲ್ಲಿ ಮುಖ್ಯ.

ಕಲಾ ಪರಂಪರೆಯನ್ನು ಹಡಪದ್ ಅವರು ಗ್ರಹಿಸಿರುವ ರೀತಿಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಮುಕ್ತತೆಗಳಿಗೆ ವಿಶೇಷ ಸ್ಥಾನವಿದೆ.ಈ ಅಂಶವನ್ನು ಹೀಗೆ ವಿವರಿಸಬಹುದು :ಅವರ ಕಲೆಯಲ್ಲಿ, ಪಾರಂಪರಿಕ ಕಲಾಕೃತಿಗಳ ದೃಶ್ಯಸಂಬಂಧೀ ಲಕ್ಷಣಗಳಿಗೆ ಇರುವ ಪ್ರಾಮುಖ್ಯ ಆಯಾ ಕೃತಿಗಳ ಶೈಲಿಗೆ ಇಲ್ಲ.ಶಾಸ್ತ್ರಗ್ರಂಥಗಳ ಸೂತ್ರಗಳಿಗೆ ಅವರ ಕಲೆಯಲ್ಲಿ ಅವಕಾಶವಿಲ್ಲ.ಪಾರಂಪರಿಕ ಕಲೆಯನ್ನು ಪೂರ್ವಸಿದ್ಧ ಶೈಲಿಯಾಗಿ ಸ್ವೀಕರಿಸುವ ಕಲಾವಿದರೇ ನಮ್ಮಲ್ಲಿ ಹೆಚ್ಚು .ಬದಲಾಗಿ ಅದರ ಮೂಲವಿನ್ಯಾಸ,ಅದಕ್ಕೆ ಕಾರಣವಾಗಿರಬಹುದಾದ ಸ್ವತಂತ್ರ ಅಭಿವ್ಯಕ್ತಿ ಕ್ರಮ ಇತ್ಯಾದಿಗಳಿಗೆ ಹಡಪದ್ ಮಾರು ಹೋಗಿರುವುದು ಅವರ ಪ್ರತಿಭೆಯ ವೈಶಿಷ್ಟ್ಯವನ್ನು ಸೂಚಿಸುತ್ತದೆ.ಸಂಕ್ಷಿಪ್ತವಾಗಿ,ಈ ವೈಶಿಷ್ಟ್ಯವನ್ನು 'ಕಲಾತ್ಮಕ ವಿನ್ಯಾಸ' ಎಂದು ಕರೆಯಬಹುದು.ಈ ಕಲಾತ್ಮಕ ವಿನ್ಯಾಸದ ಸ್ವರೂಪವನ್ನು ಒಂದು ಉದಾಹರಣೆಯ ಮೂಲಕ ವಿವರವಾಗಿ ಗಮನಿಸಬಹುದು.

ಹಡಪದ್ ಅವರ ''ಪುರುಷ'' ತೈಲ ಚಿತ್ರವನ್ನು ಇಲ್ಲಿ ಗಮನಿಸಬಹುದು.ಈ ಚಿತ್ರದಲ್ಲಿ ಚಲ-ಅಚಲಗಳ ವೈದೃಶ್ಯವೊಂದು ನಿರ್ಮಾಣವಾಗಿದೆ.ಪುರುಷಾಕೃತಿಯೊಂದು ಲಂಬವಾಗಿ ನಮ್ಮ ಎಡಕ್ಕೆ ಅಚಲತೆಯ ಸಾಕಾರವಾಗಿದೆ.ಈ ಆಕೃತಿಯ ಶಾರೀರಿಕ ನಿಲುವು,ಭಂಗಿಗಳು ಈ ರೀತಿಯ ಭಾವನೆಗೆ ಕಾರಣವಾಗುತ್ತವೆ.ಪುರುಷ ಆಕೃತಿಯ ಪಕ್ಕದಲ್ಲಿ ಕನಸಿನ ಅರಮನೆಯೊಂದಿದೆ .ಈ ಭವ್ಯ ಕಟ್ಟಡದ ಮುಂದೆ ಇರುವ ಕೊಳದಲ್ಲಿ ಮೀನುಗಳು ಈಜಾಡುತ್ತಿವೆ.ನೀರು, ಮೀನು ಮತ್ತು ಈಜಾಟದ ಕ್ರಿಯೆಗಳಲ್ಲಿ ಸಹಜವಾಗಿ ಚಲನಶೀಲತೆಯ ಸೂಚನೆಗಳು ಸ್ಪಷ್ಟಗೊಳ್ಳುತ್ತ ಸೃಷ್ಟಿಗೊಳ್ಳುವ ಒಟ್ಟು ನೋಟದಲ್ಲಿ ಕಾಣುವ ವ್ಯವಸ್ಥೆ ಹೀಗಿದೆ:ಲಂಬಾಕೃತಿಗಳು ಇಲ್ಲಿ ಪ್ರಬಲ.ನಿಂತಿರುವ ಮನುಷ್ಯಾಕೃತಿಯ ಜೊತೆಗೆ ಕೊಳದ ನೀರನ್ನೂ ಅದು ಮೇಲಿನಿಂದ ನಮಗೆ ಹೇಗೆ ಕಾಣುತ್ತದೋ, ಹಾಗೆ, ಆ ರೀತಿಯಲ್ಲಿ ಲಂಬವಾಗಿ ಚಿತ್ರಿಸಲಾಗಿದೆ.ಇಲ್ಲಿ ಬರುವ ವಿವಿಧ ಬಣ್ಣ,ಆಕಾರ,ರೇಖೆಗಳು ಹಲವಾರು ಬಗೆಗಳಲ್ಲಿ ಪುನರಾವೃತ್ತಿಗೊಳ್ಳುತ್ತಾ ಒಂದನ್ನೊಂದು ಪ್ರತಿಧ್ವನಿಸುತ್ತವೆ.ಮನುಷ್ಯಾಕೃತಿಯ ವಕ್ರ ರೇಖೆಗಳು,ಅರಮನೆಯ ಕಮಾನುಗಳ ವಕ್ರರೇಖೆಗಳಲ್ಲಿ ಪರಸ್ಪರ ಪ್ರತಿಧ್ವನಿಸುತ್ತಿರುವಂತಿವೆ.ಇದಲ್ಲದೆ ನೀಲಿ,ಕಡು ನೀಲಿ ಮತ್ತು ಕೆಂಪು ಬಣ್ಣಗಳ ಮೂಲಕ ವೈದೃಶ್ಯದ ಅನುಭವವನ್ನು ತರುವ ಪ್ರಯತ್ನವಿದೆ .ಇದಿಷ್ಟೂ ಈ ಕೃತಿಯಲ್ಲಿ ಗೋಚರವಾಗುವ ವಿನ್ಯಾಸ.'ಪುರುಷ' ಕೃತಿಯು ನಮ್ಮನ್ನು ತಟ್ಟುವುದು ಅದು ಸಾಧಿಸುವ ಸಾಂಕೇತಿಕತೆಯಿಂದ .ಈ ಚಿತ್ರದಲ್ಲಿ ಬರುವ ಪ್ರತಿ ಆಕೃತಿಗೂ ಒಂದೊಂದು ಸಾಂಕೇತಿಕ ಅರ್ಥದ ಸಾಧ್ಯತೆಯಿದೆ.ಪುರುಷ,ಪ್ರಕೃತಿ, ಸ್ಥಾವರ,ಜಂಗಮ ಇತ್ಯಾದಿ ಅಂಶಗಳು ಇಲ್ಲಿ ನೇರವಾಗಿಯೇ ಇವೆ.ಈ ಕಲಾಕೃತಿಯ ಆಶಯವನ್ನು ಗಮನಿಸಬೇಕು.ವೈದೃಶ್ಯಗಳಿಂದ ಜಟಿಲವಾಗಿರುವ,ಪರಸ್ಪರ ದೂರೀಕರಿಸುವ ಆದರೆ ತನ್ನದೇ ವಿಶಿಷ್ಟ ಜೀವಂತಿಕೆ ಮತ್ತು ನಿರಂತರತೆಗಳಿಂದ

ಮೋಹಗೊಳಿಸಿ ಸೆಳೆಯುವ ಬದುಕಿನ ಸಂಕೀರ್ಣ ಆಯಾಮಗಳನ್ನುಅನಾವರಣಗೊಳಿಸುವುದೇ ಈ ಚಿತ್ರದ ಆಶಯ. ಆದರೆ ಇಂಥ ಕಾಳಜಿಗಳ ಅಭಿವ್ಯಕ್ತಿಯ ಮಾರ್ಗವು ಮಾತ್ರ ಹಡಪದ್ ಅವರ ಕೃತಿಗಳಲ್ಲಿ ಹೆಚ್ಚು-ಹೆಚ್ಚು ರೂಪನಿಷ್ಠವೇ ಆಗುತ್ತಾ ಬಂದಿದೆ. ಹೀಗಾಗುವುದಕ್ಕೆ ಕೆಲವು ಐತಿಹಾಸಿಕ ಕಾರಣಗಳೂ ಇವೆ.[೫] ಹಡಪದ್ ಅವರ ಪೀಳಿಗೆಗೆ ಪಾರಂಪರಿಕ ಪ್ರತಿಭೆಯ ಕೆಲವು ಅಂಶಗಳು ಮಹತ್ವವಾದವು. ಅವುಗಳನ್ನು ಸಮಕಾಲೀನ ಆಧುನಿಕ ಕಲಾ ಸನ್ನಿವೇಶದ ನೆಲೆಯಲ್ಲಿ ಸ್ವೀಕರಿಸುವಾಗ ಸಹಜವಾಗಿಯೇ ಈ ಕಲಾವಿದರಿಗೆ ಕೆಲವು ಸವಾಲುಗಳು, ದ್ವಂದ್ವಗಳುಕಾಣಿಸಿಕೊಂಡವು. ಈ ದ್ವಂದ್ವಗಳನ್ನು ಸ್ಥೂಲವಾಗಿ ಹೀಗೆ ವಿವರಿಸಬಹುದು:

೧. ಕಲೆಯ ಉದ್ದೇಶವು ನೇರ ಸಂದೇಶವಲ್ಲ ಎಂಬ ಭಾವನೆ ಹಡಪದ್ ಮತ್ತು ಅವರ ಸಮಕಾಲೀನರಲ್ಲಿ ಎದ್ದು ಕಾಣುತ್ತದೆ. ಆದರೆ ಭಾರತೀಯ ಸಂವೇದನೆಯಲ್ಲಿಯೇ, ಪಾರಂಪರಿಕವಾಗಿ, ಕಥೆ, ಕಥಾನಕಗಳು ಭದ್ರವಾಗಿ ನೆಲೆಯೂರಿವೆ. ಈ ಪಾರಂಪರಿಕ ಒಲವು ತಮ್ಮ ಕಲಾತ್ಮಕ ಪ್ರತಿಭೆ, ಕೌಶಲಗಳಿಗೆ ಮತ್ತು ರಚನಾ ಸ್ವಾತಂತ್ರ್ಯಕ್ಕೆ ಅಡ್ಡಿಯಾಗುವುದೋ ಎಂಬ ಆತಂಕವೊಂದು ಈ ಕಲಾವಿದರ ವಿಶಿಷ್ಟ ವಿನ್ಯಾಸ ಪ್ರಜ್ಞೆಗೆ ಕಾರಣ.

೨. ಕಲೆಗಿರುವ ಸಾಮಾಜಿಕ, ಸಾಮೂಹಿಕ ಮಹತ್ವದಲ್ಲಿ ವಿಶೇಷ ನಂಬಿಕೆ, ನೋಡುಗ ವರ್ಗವನ್ನು ವಿಸ್ತಾರಗೊಳಿಸುವ, ಹೆಚ್ಚು ಜನರಿಗೆ ಕಲೆಯು ಹತ್ತಿರವಾಗಲೆಂಬ ಆಶಯವೇ ಇವರಲ್ಲಿದೆ . ಆದರೆ ಈ ಪ್ರಕ್ರಿಯೆಯಲ್ಲಿ ತನ್ನ ಕೃತಿಗಳು ಕೇವಲ ಪೂರಕ ಚಿತ್ರಗಳಾಗಬಾರದೆಂಬ, ಕೇವಲ ಸಂದೇಶಾತ್ಮಕ ಆಗಬಾರದೆನ್ನುವ ಆಶಯವು ಆಗಾಗ ಹಡಪದ್ ಮತ್ತು ಅವರ ಸಮಕಾಲೀನರಲ್ಲಿ ಅವರ ಕೃತಿಗಳ ರೂಪ ಮತ್ತು ವಿಷಯಗಳ ನಡುವೆ ಕರ್ಷಣವನ್ನು ತಂದಿದೆ. ಐತಿಹಾಸಿಕ ವಿವರಗಳ ಹಿನ್ನೆಲೆಯಲ್ಲಿ ಈ ಸವಾಲು ಮತ್ತು ದ್ವಂದ್ವಗಳು ನಮಗೆ ಇನ್ನಷ್ಟು ಖಚಿತವಾಗುತ್ತವೆ. ಈ ದ್ವಂದ್ವಗಳು ಐವತ್ತರ ದಶಕದ ರಾಷ್ಟ್ರಮಟ್ಟದ ಕಲಾಸಂವೇದನೆಗೆ ಸೇರಿದಂಥವುಗಳು ಕೂಡ ಆಗಿವೆ .[೬]

ಈ ರೀತಿಯಾಗಿ ಉಂಟಾದ ಸವಾಲುಗಳನ್ನು ಹಡಪದ್ ತಮ್ಮ ಅಮೂರ್ತ ಚಿತ್ರಗಳಲ್ಲಿ ಅಪಾರ ಪ್ರತಿಭೆಯಿಂದ ಎದುರಿಸಿದ್ದಾರೆ. ಅವರ ಪ್ರತಿಭೆಯು ಮೂಲಭೂತವಾಗಿ ರೂಪನಿಷ್ಠವೇ ಆದದ್ದು.[೭] ಅವರ ಅಮೂರ್ತ ಚಿತ್ರಗಳು ಇಂಥ ಪ್ರತಿಭೆಯ ಮಹತ್ವದ ಸಾಧನೆಗಳು. ಈ ಅಮೂರ್ತ ಚಿತ್ರಗಳ ಯಶಸ್ಸಿಗೆ ಮುಖ್ಯವಾಗಿ ಎರಡು ಕಾರಣಗಳಿವೆ. ಒಂದು, ಈ ಕೃತಿಗಳು ಭಾವಗೀತೆಯ ಹಾಗೆ ಹಿಡಿದಿಡುವ ನಿರ್ದಿಷ್ಟ ದೃಶ್ಯಾನುಭವ. ಅಂದರೆ, ಒಂದು ಕೇಂದ್ರಭಾವ ಮತ್ತು ಅದಕ್ಕಿರುವ ವ್ಯಕ್ತಿಗತ ಸ್ವರೂಪ, ಇವು ಪಡೆದುಕೊಳ್ಳುವ ಅಭಿವ್ಯಕ್ತಿಯ ಸ್ವರೂಪದಿಂದ ಇವು ಭಾವಗೀತೆಯ ಪ್ರಕಾರವನ್ನು ನೆನಪಿಗೆ ತರುತ್ತವೆ. ಇನ್ನೊಂದು, 'ಪುರುಷ'ದಂಥ ಕೃತಿಗಳಲ್ಲಿ ಕಾಣದ ಭಾಷೆ ಮತ್ತು ಭಾವಗಳ ಅರ್ಥಪೂರ್ಣ ಸಹಯೋಗವು ಈ ಅಮೂರ್ತ ಚಿತ್ರಗಳಲ್ಲಿದೆ. ಈ ಕೃತಿಗಳಲ್ಲಿ ಹಡಪದ್ ಅವರ ದೃಶ್ಯ ಪ್ರತಿಭೆಯು ಪ್ರಕಟಗೊಳಿಸುವ ನಿರ್ಭಿಡೆ ಮತ್ತು ಅಪಾರ ಆತ್ಮ ವಿಶ್ವಾಸಗಳು ಅದ್ಭುತವಾದವು. ●

ಆಕರಗಳು/ಟಿಪ್ಪಣಿಗಳು

೧:ಶ್ರೀನಿವಾಸ ಮೂರ್ತಿ,ಕೆ.ಎಸ್.೧೯೯೩,ನವೆಂಬರ್ ೧೦;ಸಂವಾದ..೨ ,೩:ನಾಗರಾಜ,ಕೀ.ರಂ.೧೯೮೧.''ಕಲಾವಿದ ಹಡಪದ್'' ಸಂದರ್ಶನ ಲೇಖನ.ರುಜುವಾತು (ಜುಲೈ-ಸೆಪ್ಟೆಂಬರ್) ;೪ ,೫ ಮತ್ತು ೬:ಶ್ರೀನಿವಾಸ ಮೂರ್ತಿ,ಕೆ.ಎಸ್. ''ಆಧುನಿಕ ಕಲೆ ಮತ್ತು ಹಡಪದ್''.ಸಾಹಿತ್ಯ ಸಂವಾದ-೪೨; ೭.ಶ್ರೀನಿವಾಸ ಮೂರ್ತಿ,ಕೆ.ಎಸ್.''ಹಡಪದ್ ಅವರಕಲಾಸೃಷ್ಟಿ''. ಆರ್.ಎಂ.ಹಡಪದ್:ಜೀವನ ಮತ್ತು ಕಲೆಯನ್ನು ಕುರಿತ ಲೇಖನಗಳು. ಎನ್.ಮರಿಶಾಮಾಚಾರ್(ಗೌ.ಸಂ.), ಬೆಂಗಳೂರು :ಸಂಯೋಜಿತ. ಪು . ೭-೧೬.

ಶಂಕರಾಚಾರ್ಯರ 'ಮನೀಷಾ ಪಂಚಕ'

○ ಪ್ರೊ. ಬಿ.ವಿ.ವೀರಭದ್ರಪ್ಪ

ಭಾರತೀಯ ದಾರ್ಶನಿಕ ಇತಿಹಾಸದಲ್ಲಿ ಶಂಕರಾಚಾರ್ಯರಿಗೆ (ಕ್ರಿ.ಶ.೭೮೮-೮೨೦) ವಿಶಿಷ್ಟ ಸ್ಥಾನವಿದೆ.ನಶಿಸಿ ಹೋಗುತ್ತಿದ್ದ ಹಿಂದು ಧರ್ಮವನ್ನು ಪುನರುತ್ಥಾನ ಮಾಡಿದ ಧೀರ ಸನ್ಯಾಸಿ ಎಂದು ಅವರನ್ನು ಸ್ತುತಿಸಲಾಗುತ್ತದೆ.ಪ್ರಸ್ಥಾನ ತ್ರಯಗಳೆಂದು ಕರೆಯಲ್ಪಡುವ ಬ್ರಹ್ಮ ಸೂತ್ರ, ಉಪನಿಷತ್ತುಗಳು ಮತ್ತು ಗೀತೆಯನ್ನು ಕುರಿತ ಅವರ ಭಾಷ್ಯಗಳು ಅವರ ಮೇರು ಕೃತಿಗಳಾಗಿವೆ.ಶಂಕರರು ಒಟ್ಟು ಇನ್ನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ ಎಂದು ಅವರ ಜೀವನ ಚರಿತ್ರೆಗಳು ಸಾರುತ್ತವೆ.ಅವುಗಳಲ್ಲಿ ಕೆಲವು ಶಂಕರರಿಂದ ರಚಿತವಾದ ಬಗ್ಗೆ ಸಂದೇಹವಿದ್ದರೂ ಉಳಿದವು ನಿಸ್ಸಂದೇಹವಾಗಿ ಶಂಕರರಿಂದಲೇ ರಚಿತವಾದುವೆಂದು ಶಂಕರ ಮಠಗಳ ಪರಂಪರೆಯ ವಿದ್ವಾಂಸರೇ ಅಭಿಪ್ರಾಯಪಡುತ್ತಾರೆ.'ಮನೀಷಾ ಪಂಚಕ' ಎಂಬ ಕೃತಿಯು ನಿಸ್ಸಂದೇಹವಾಗಿಯೂ ಶಂಕರಾಚಾರ್ಯರು ರಚಿಸಿದುದೇ ಎಂದು ಶೃಂಗೇರಿ ಪೀಠ ಪ್ರಕಟಿಸಿರುವ ಮಾಧವೀಯ 'ಶಂಕರ ವಿಜಯ'ದಿಂದ ತಿಳಿದುಬರುತ್ತದೆ. 'ಮನೀಷಾ ಪಂಚಕ' ಸ್ತೋತ್ರವನ್ನು ರಚಿಸಿದ ಸಂದರ್ಭವು ಗಮನಾರ್ಹವಾಗಿದೆ.

ಪರಶಿವನೇ ತನ್ನ ಮಾಯೆಯಿಂದ ಕೇರಳದ ಒಂದು ನಂಬೂದರಿ ಬ್ರಾಹ್ಮಣ ಕುಟುಂಬದಲ್ಲಿ ಶಂಕರನಾಗಿ ಜನಿಸಿದರೆಂಬ ನಂಬಿಕೆ ಅವರ ಅನುಯಾಯಿಗಳಲ್ಲಿದೆ.ಅವರು ತಮ್ಮ ಐದನೆಯ ವಯಸ್ಸಿನಲ್ಲಿಯೇ ನಾಲ್ಕು ವೇದಗಳನ್ನು ಮತ್ತು ಷಡಂಗಗಳನ್ನು ಕಲಿತು ಪಂಡಿತರನ್ನು ಬೆರಗುಗೊಳಿಸಿದರೆಂದೂ,ಎಂಟನೇ ವಯಸ್ಸಿನಲ್ಲಿ ಸನ್ಯಾಸ ಸ್ವೀಕರಿಸಿದ ಶಂಕರರು ಬ್ರಹ್ಮಜ್ಞಾನಿಯಾದ ಗುರುವನ್ನು ಹುಡುಕುತ್ತಾ ಹೊರಟಾಗ ನರ್ಮದಾ ನದಿಯ ತೀರದ ಒಂದು ಗುಹೆಯಲ್ಲಿ ತಪಸ್ಸು ಮಾಡುತ್ತಾ ಕುಳಿತಿದ್ದ ಗೋವಿಂದ ಭಗವತ್ಪಾದರನ್ನು ಸಂಧಿಸಿದರೆಂದೂ ಹೇಳಲಾಗುತ್ತದೆ.ಪ್ರತಿಭಾವಂತನಾದ ಶಿಷ್ಯನ ಆಗಮನದಿಂದ ಹರ್ಷಿತರಾದ ಗೋವಿಂದ ಗುರುಗಳು ಶಂಕರರಿಗೆ ಮೂರು ವರ್ಷಗಳ ಕಾಲ ಅದ್ವೈತ ವೇದಾಂತವನ್ನು ಧಾರೆ ಎರೆದು ಅವರನ್ನು ಅದ್ವೈತ ಶಿಖಾಮಣಿಯನ್ನಾಗಿ ಮಾಡಿದರಂತೆ .

ಅನಂತರ ಶಂಕರರು ಕಾಶಿಯತ್ತ ಪ್ರಯಾಣ ಮಾಡಿದರು. ಅಲ್ಲಿ ಒಂದು ದಿನ ಗಂಗೆಯಲ್ಲಿ ಮಿಂದು ಹಿಂದಿರುಗುತ್ತಿದ್ದಾಗ ನಾಲ್ಕು ನಾಯಿಗಳ ಜೊತೆಗೆ ಒಬ್ಬ ಚಂಡಾಲ ಅವರಿಗೆ ಎದುರಾದ.ಆ ಚಂಡಾಲನು ಮತ್ತಾರೂ ಆಗಿರದೆ ಸಾಕ್ಷಾತ್ ಪರಮೇಶ್ವರನೇ ಚಂಡಾಲ ವೇಷಧಾರಿಯಾಗಿದ್ದನೆಂದೂ,ನಾಲ್ಕು ವೇದಗಳು ನಾಲ್ಕು ನಾಯಿಗಳಾಗಿ ರೂಪಾಂತರ ಹೊಂದಿದ್ದುವೆಂದೂ 'ಶಂಕರ ವಿಜಯ'ಗಳು ಸಾರುತ್ತವೆ.ಅಂದರೆ ಶಿವನಿಗೆ ಚಾಂಡಾಲವೇಷ ಅತ್ಯಂತ ಪ್ರಿಯವಾದುದಾಗಿರಬೇಕು! ಆದರೆ ಸಾಕ್ಷಾತ್ ಪರಶಿವನೇ ಶಂಕರನಾಗಿ

ಅವತರಿಸಿರುವಾಗ ಆತನಿಗೆ ಎದುರಾಗಿ ಮತ್ತೊಬ್ಬ ಪರಶಿವ ಎಲ್ಲಿಂದ ಬಂದನೋ ತಿಳಿಯದು! ಆ ಚಂಡಾಲನನ್ನು ನೋಡಿ ಶಂಕರರು 'ದೂರ ಸರಿ, ದೂರಸರಿ' ಎಂದರಂತೆ. ಆಗ ಚಂಡಾಲ ಈ ರೀತಿ ಪ್ರಶ್ನಿಸಿದನಂತೆ :

೧. ಅನ್ನಮಯಾದನ್ನಮಯ ಮಥವಾ ಚೈತನ್ಯಮೇವ ಚೈತನ್ಯಾತ್
ದ್ವಿಜವರ ದೂರೀಕರ್ತುಂ ವಾಂಛಸಿ ಕಿಂ ಬ್ರೂಹಿ ಗಚ್ಛಗಚ್ಛೇತಿ ||

೨. ಕಿಂ ಗಂಗಾಂಬುನಿ ಬಿಂಬಿತೋಂ ಬುರುಮಣೌ ಚಂಡಾಲ ವಾಟಿ ಪಯಃ
ಪೂರೇ ಚಾಂತರಮಸ್ತಿ ಕಾಂಚನಘಟೀ ಮೃತ್ಕುಂಭಯೋರ್ವಾಂಬರೇ ||

೩. ಪ್ರತ್ಯಗ್ವಸ್ತುನಿ ನಿಸ್ತರಂಗ ಸಹಜಾ ನಂದಾವ ಬೋಧಾಂಬುಧೌ
ವಿಪ್ರೋಽಯಂಸ್ವಪಚೋಽ ಯಮಿತ್ಯಪಿ ಮಹಾನ್ ಕೋಽಯಂ ವಿಭೇದ ಭ್ರಮಃ||

''ಓ ದ್ವಿಜವರಾ, 'ದೂರಸರಿ, ದೂರಸರಿ' ಎಂದು ನೀನು ಅನ್ನಮಯ ಶರೀರದಿಂದ ಅನ್ನಮಯ ಶರೀರವನ್ನು ದೂರಮಾಡಬೇಕೆಂದುಕೊಳ್ಳುತ್ತಿದ್ದೀಯೋ ಇಲ್ಲವೇ ಚೈತನ್ಯದಿಂದ ಚೈತನ್ಯವನ್ನು ದೂರಮಾಡಬೇಕೆಂದಿರುವೆಯೋ? ಗಂಗಾಜಲದಲ್ಲಿ ಮತ್ತು ಚಂಡಾಲಕೇರಿಯ ನೀರಿನಲ್ಲಿ ಸೂರ್ಯ ಬಿಂಬ ಬೇರೆ-ಬೇರೆಯಾಗಿರುತ್ತದೆಯೇ? ಚಿನ್ನದ ಪಾತ್ರೆಯಲ್ಲಿ ಮತ್ತು ಮಣ್ಣಿನ ಮಡಿಕೆಯಲ್ಲಿ ಇರುವ ಖಾಲಿ ಪ್ರದೇಶ ಬೇರೆ-ಬೇರೆಯಾಗಿರುತ್ತದೆಯೇ? ನಿಸ್ತರಂಗವೂ, ಸಹಜಾನಂದ ರೂಪವೂ, ಜ್ಞಾನಸಾಗರವೂ ಆದ ಪ್ರತ್ಯಗಾತ್ಮದಲ್ಲಿ ಇವನು ಇವನು ಹೊಲೆಯ ಎಂಬ ಭೇದ ಭಾವನೆ ನಿನಗೆ ಹೇಗೆ ಉಂಟಾಯಿತು?''

ಇದರಿಂದ ಶಂಕರರ ತಲೆ ಗಿರಗಿರನೆ ತಿರುಗಿತಂತೆ. ಅಲ್ಲಿಯವರೆಗೆ ತಾನು ಬೋಧಿಸುತ್ತಿದ್ದ ಅದ್ವೈತ ತನಗೇ ಅರ್ಥವಾಗದಿರಲು ಆ ಪ್ರಶ್ನೆ ಮನಸ್ಸಿನಲ್ಲಿ ಬಲವಾಗಿ ನಾಟಿತು. ಅದ್ವೈತ ಸಿದ್ಧಾಂತ ಬೋಧನೆಗೂ, ವರ್ಣ ವ್ಯವಸ್ಥೆಯ ಆಚರಣೆಗೂ ಮಧ್ಯೆ ಇರುವ ವೈರುಧ್ಯ ಆಗ ಶಂಕರರಿಗೆ ಮನವರಿಕೆಯಾಗಿರಬೇಕು. ಕೂಡಲೆ ಅವರು ಚಂಡಾಲನ ಕಾಲ ಮೇಲೆ ಬಿದ್ದು 'ಮನೀಷಾ ಪಂಚಕ' ಎಂದು ಪ್ರಸಿದ್ಧವಾದ ಐದು ಶ್ಲೋಕಗಳನ್ನು ಹೇಳಿದರಂತೆ. ಅವುಗಳಿಗೆ ಪಾಠಾಂತರಗಳಿವೆ ಎಂದು ಹೇಳುತ್ತಾರೆ. ಅವುಗಳಲ್ಲಿ ಒಂದು ಪಾಠ ಹೀಗಿದೆ :

೧. ಜಾಗ್ರತ್ಸ್ವಪ್ನ ಸುಷುಪ್ತಿಷು ಸ್ಫುಟತರಾ ಯಾ ಸಂವಿದುಜ್ಜೃಂಭತೇ
ಯಾ ಬ್ರಹ್ಮಾದಿ ಪಿಪೀಲಿಕಾಂತ ತನುಷು ಪ್ರೋತಾ ಜಗತ್ಸಾಕ್ಷಿಣೀ
ಸೈವಾಹಂ ನಚ ದೃಶ್ಯವಸ್ತ್ವಿತಿ ದೃಢಪ್ರತಿಜ್ಞಾಪಿಪಿ ಯಸ್ಯಾಸ್ತಿಚೇತ್
ಚಂಡಾಲೋಽಸ್ತು ಸತು ದ್ವಿಜೋಽಸ್ತು ಗುರುರಿತ್ಯೇಷಾ ಮನೀಷಾಮಮ||

೨. ಬ್ರಹ್ಮೈವಾಹ ಮಿದಂ ಜಗಚ್ಚ ಸಕಲಂ ಚಿನ್ಮಾತ್ರ ವಿಸ್ತಾರಿತಂ
ಸರ್ವಂಚೈತ ದವಿದ್ಯಯಾತ್ರಿಗುಣಯಾಽಶೇಷಂ ಮಯಾಕಲ್ಪಿತಂ
ಇತ್ಥಂ ಯಸ್ಯ ದೃಢಾಮತಿಃ ಸುಖತರೇ ವಿಕ್ಷೇಪರೇ ನಿರ್ಮಲೇ
ಚಂಡಾಲೋಽಸ್ತು ಸತುದ್ವಿಜೋಽಸ್ತು ಗುರುರಿತ್ಯೇಷಾ ಮನೀಷಾಮಮ||

೩. ಶಶ್ವನ್ನಶ್ವರಮೇವ ವಿಶ್ವಮಖಿಲಂ ನಿಶ್ಚಿತ್ಯ ವಾಚಾಗುರೋ
ರ್ನಿತ್ಯಂ ಬ್ರಹ್ಮ ನಿರಂತರಂ ವಿಮೃಶತಾ ನಿರ್ವ್ಯಾಜ ಶಾಂತಾತ್ಮನಾ
ಭೂತಂ ಭಾವಿಚ ದುಷ್ಕೃತಂ ಪ್ರದಹತಾ ಸಂ ವಿನ್ಮಯೇ ಪಾವಕೇ
ಪ್ರಾರಬ್ಧಾಯ ಸಮರ್ಪಿತಂ ಸ್ವವಪುರಿತ್ಯೇಷಾ ಮನೀಷಾಮಮ||

೪. ಯಾ ತಿರ್ಯಜ್ಞರದೇವತಾಭಿ ರಹಮ ನ್ತಃ ತಸ್ಪುಟಾಗೃಹ್ಯತೇ
ಯಭ್ಯಾಸಾ ಹೃದಯಾಕ್ಷ ದೇಹವಿಷಯಾ ಭಾನ್ತಿಸ್ವತೋಽಚೇತನಾಃ
ತಾಂ ಭಾಸ್ಕೈಃ ಪಿಹಿತಾರ್ಕ ಮಂಡಲನಿಭಾಂ ಸ್ಫೂರ್ತಿಂ ಸದಾ ಭಾವಯನ್
ಯೋಗಿ ನಿರ್ವೃತಮಾನಸೋಹಿ ಗುರುರಿತ್ಯೇಷಾ ಮನೀಷಾಮಮ//

೫. ಯತ್ಸೌಖ್ಯಾಂಬುದಿ ಲೇಶಲೇಶತ ಇಮೇ ಶಕ್ರಾದಯಾ ನಿರ್ವೃತಾಃ
ಯಚ್ಚಿತ್ತೇ ನಿತರಾಂ ಪ್ರಶಾಂತ ಕಲನೇ ಲಬ್ಧ್ವಾಮುನಿರ್ನಿರ್ವೃತಃ
ಯಸ್ಮಿನ್ನಿತ್ಯ ಸುಧಾಂಬುಧೌ ಗಲಿತದೀರ್ಬ್ರಹ್ಮೈವ ನ ಬ್ರಹ್ಮವಿದ್
ಯಃ ಕಶ್ಚಿತ್ ಸ ಸುರೇಂದ್ರ ವಂದಿತಪದೋ ನೂನಂ ಮನೀಷಾಮಮ//

''ಎಲ್ಲೆಲ್ಲೂ ವ್ಯಾಪಿಸಿರುವ ಚೈತನ್ಯ ಸ್ವರೂಪವನ್ನು ತಾನೇ ಎಂದು ಯಾರು ಭಾವಿಸುತ್ತಾನೋ ಅವನು ಚಂಡಾಲನಾದರೂ ದ್ವಿಜನಾದರೂ ಅವನೇ ನನ್ನ ಗುರು. ಈ ಜಗತ್ತೆಲ್ಲಾ ಚಿನ್ಮಾತ್ರದಿಂದ ವಿಸ್ತರಿಸುತ್ತದೆ ಎಂಬ ವಿಶ್ವಾಸವುಳ್ಳವನು ಚಂಡಾಲನಾದರೂ ದ್ವಿಜನಾದರೂ ನನಗೆ ಗುರು. ವಿಶ್ವ ಅನಿತ್ಯ ಬ್ರಹ್ಮ ಸತ್ಯ ಎಂದು ತಿಳಿದು ಚಿದಗ್ನಿಯಲ್ಲಿ ಈ ಶರೀರವನ್ನು ಹೋಮ ಮಾಡುವುದು ನನ್ನ ದೃಢ ನಿಶ್ಚಯವಾಗಿದೆ. ಅಹಂ ಎಂಬುದನ್ನು ಯಾರು ಅರಿತಿರುವನೋ ಅವನೇ ನನ್ನ ಗುರು. ಆನಂದ ಬ್ರಹ್ಮನಿಗೆ ದೇವೇಂದ್ರನಾದರೂ ನಮಸ್ಕರಿಸುತ್ತಾನೆ.''

ಶಂಕರ ದಿಗ್ವಿಜಯಗಳ ಪ್ರಕಾರ 'ಮನೀಷಾ ಪಂಚಕ'ವನ್ನು ರಚಿಸಿದ ನಂತರವೇ ಶಂಕರಾಚಾರ್ಯರು ಪ್ರಸ್ಥಾನ ತ್ರಯಗಳಿಗೆ ಭಾಷ್ಯಗಳನ್ನು ರಚಿಸಿದಂತೆ ತಿಳಿದು ಬರುತ್ತದೆ. ಆ ಭಾಷ್ಯಗಳಲ್ಲಿ 'ಸರ್ವಂ ಖಲ್ವಿದಂ ಬ್ರಹ್ಮಾ'-ಎಲ್ಲಾ ಬ್ರಹ್ಮನಿಂದ ಆವರಿಸಿದೆ, 'ಪ್ರಜ್ಞಾನ ಬ್ರಹ್ಮಾ'-ಶುದ್ಧ ಚೈತನ್ಯವೇ ಬ್ರಹ್ಮ, 'ಅಹಂ ಬ್ರಹ್ಮಾಸ್ಮಿ'-ನಾನು ಬ್ರಹ್ಮ ಸ್ವರೂಪಿ, 'ತತ್ವಮಸಿ'-ಅದು ನೀನೇ ಆಗಿದ್ದೀಯ, 'ಅಯಮಾತ್ಮಾ ಬ್ರಹ್ಮ'-ಈ ಆತ್ಮವೇ ಬ್ರಹ್ಮ ಇತ್ಯಾದಿ ಉಪನಿಷತ್ ವಾಕ್ಯಗಳನ್ನು ಮೇಲಿಂದ ಮೇಲೆ ಉಲ್ಲೇಖಿಸುತ್ತಾ ತಮ್ಮ ಅದ್ವೈತ ಸರಣಿಯನ್ನು ಮುಂದುವರಿಸುತ್ತಾರೆ. ಜೊತೆಗೆ ವಸಿಷ್ಟ ಸ್ಮೃತಿ,ಮನು ಸ್ಮೃತಿ ಮತ್ತು ಗೌತಮ ಧರ್ಮಶಾಸ್ತ್ರಗಳಿಂದಲೂ ಉಲ್ಲೇಖ ಮಾಡುತ್ತಾರೆ. ''ಶೂದ್ರನಿಗೆ ಜ್ಞಾನದ ಹಕ್ಕು ಇಲ್ಲವೆನ್ನಲು ಕಾರಣವಿದೆ. ವೇದಗಳನ್ನು ಕೇಳುವುದನ್ನು, ಪಠನ ಮಾಡುದನ್ನು ಮತ್ತು ಅರ್ಥ ಮಾಡಿಕೊಳ್ಳುವುದನ್ನು ಸ್ಮೃತಿಗಳು ಶೂದ್ರನಿಗೆ ನಿಷೇಧಿಸಿವೆ. ಅಷ್ಟೇ ಅಲ್ಲ, ಶೂದ್ರನು ವೇದಗಳನ್ನು ಉಚ್ಚರಿಸಿದರೆ ಅವನ ನಾಲಗೆಯನ್ನು ಕತ್ತರಿಸಬೇಕು, ಆದ್ದರಿಂದ ವೇದಾರ್ಥವನ್ನು ಗ್ರಹಿಸುವುದು ಮತ್ತು ಆ ಪ್ರಕಾರ ಆಚರಿಸುವುದು ಅವನಿಗೆ ನಿಷಿದ್ಧ.'' ಇವು ಬ್ರಹ್ಮ ಸೂತ್ರ (೧.೩.೩೮)ಕ್ಕೆ ಭಾಷ್ಯ ಬರೆಯುತ್ತ ಸ್ವತಃ ಶಂಕರರೇ ಹೇಳಿದ ಮಾತುಗಳು.

ಶಂಕರರು ಚಾಂಡಾಲನನ್ನು ತಮ್ಮ ಗುರುವೆಂದು ಕರೆದುದನ್ನು ಮತ್ತು ತಾವು ಪ್ರತಿಪಾದಿಸುತ್ತಿರುವ ಅದ್ವೈತ ಸಿದ್ಧಾಂತವನ್ನು ಆಚರಣೆಯಲ್ಲಿ ತರುವುದನ್ನು ಮರೆತು ವರ್ಣವ್ಯವಸ್ಥೆಯನ್ನು ಪುನರುದ್ಧರಿಸಲು ಕಂಕಣ ಬದ್ಧರಾಗುತ್ತಾರೆ. ಭರತ ಭೂಮಿಯನ್ನು ನಾಲ್ಕು ಭಾಗವಾಗಿ ವಿಭಾಗಿಸಿ ಪ್ರತಿಯೊಂದು ಭಾಗಕ್ಕೂ ಒಂದೊಂದು ಪೀಠವನ್ನು ಸ್ಥಾಪಿಸಿ, ಒಂದೊಂದು ಪೀಠಕ್ಕೆ ಒಬ್ಬೊಬ್ಬ ಆಚಾರ್ಯರನ್ನು ನೇಮಿಸುತ್ತಾರೆ. ಅವರವರ ವಿಭಾಗಗಳಲ್ಲಿ ಅವರು ವರ್ಣಾಶ್ರಮಗಳ ಆಚರಣೆಗಳನ್ನು ಸಂರಕ್ಷಿಸಲು ಏರ್ಪಾಟು ಮಾಡುತ್ತಾರೆ. ಈ ಕಟ್ಟುಪಾಡನ್ನೇ 'ಮಹಾನುಶಾಸನ' ಎಂದು ಕರೆದಿದ್ದಾರೆ. ೨೬ ಶ್ಲೋಕಗಳುಳ್ಳ

ಆ 'ಮಹಾನುಶಾಸನ ' ಕೃತಿಯಲ್ಲಿ ಈ ಕೆಳಗಿನ ಅಂಶಗಳು ಗಮನಾರ್ಹವಾಗಿವೆ :

೧. ವರ್ಣಾಶ್ರಮಾ ಸದಾಚಾರಾ ಅಸ್ಮಾಭಿರ್ಯೇ ಪ್ರಸಾದಿತಾಃ
ರಕ್ಷಣೀಯಾಸ್ತು ಏವೈತೇ ಸ್ವೇ ಸ್ವೇಭಾಗೇ ಯಥಾ ವಿಧಿ//೫//

೨. ಸುಧನ್ವಾಹಿ ಮಹಾರಾಜಸ್ತದನ್ಯೇ ಚ ನರೇಶ್ವರಾಃ
ಧರ್ಮ ಪಾರಂಪರೀಮೇತಾಂ ಪಾಲಯಂತು ನಿರಂತರಮ್//೧೭//

೩. ಚಾತುರ್ವಣ್ಯ ಯಥಾ ಯೋಗ್ಯಂ ವಾಙ್ಮನಃ ಕಾರ್ಯಕರ್ಮಭಿ
ಗುರೋಃ ಪೀಠಂ ಸಮರ್ಚೇತ ವಿಭಾಗಾನುಕ್ರಮೇಣ ವೈ//೧೮//

೪. ಆಚಾರ್ಯಾಕ್ಷಿಪ್ತ ದಂಡಾಸ್ತು ಕೃತ್ವಾ ಪಾಪಾನಿ ಮಾನವಾಃ
ನಿರ್ಮಲಾಃ ಸ್ವರ್ಗಮಾಯಂತಿ ಸಂತಃ ಸುಕೃತಿನೋ ಯಥಾ//೨೨//

೫. ಧರ್ಮಸ್ಯ ಪದ್ಧತಿರ್ಹ್ಯೇಷಾ ಜಗತಃ ಸಿದ್ಧಿ ಹೇತವೇ
ಸರ್ವಂ ವರ್ಣಾಶ್ರಮಾಣಾಂ ಹಿ ಯಥಾ ಶಾಸ್ತ್ರಂ ವಿಧೀಯತೇ//೨೫//

''ಆಯಾ ಮಠಾಚಾರ್ಯರು ತಮ್ಮ-ತಮ್ಮ ಭಾಗಗಳಲ್ಲಿ ವರ್ಣಾಶ್ರಮ ಧರ್ಮವನ್ನು ಸರಿಯಾಗಿ ಸಂರಕ್ಷಿಸಬೇಕು. ರಾಜ ಸುಧನ್ವ ಮತ್ತು ಇತರ ರಾಜರು ಆ ಧರ್ಮ ರಕ್ಷಣೆಯಲ್ಲಿ ಪಾಲ್ಗೊಳ್ಳಬೇಕು. ನಾಲ್ಕು ವರ್ಣಗಳ ಪ್ರಜೆಗಳು ತ್ರಿಕರಣಪೂರ್ವಕವಾಗಿ ಗುರುಪೀಠಗಳನ್ನು ಪೂಜಿಸಬೇಕು. ಆಚಾರ್ಯರು ವಿಧಿಸುವ ದಂಡನೆಗಳನ್ನು ಅನುಭವಿಸಿದ ಪಾಪಿಯೂ ಸಹ ಪರಿಶುದ್ಧನಾಗುತ್ತಾನೆ. ಧರ್ಮನಿರ್ವಹಣೆಯಲ್ಲಿ ಆಚಾರ್ಯರಿಗೆ ಯಾರೂ ಅಡ್ಡಿಯನ್ನುಂಟುಮಾಡಬಾರದು. ಸರ್ವ ವರ್ಣೀಯರೂ ಶಾಸ್ತ್ರ ನಿರ್ದೇಶಿಸಿದ ಆಚಾರ ಧರ್ಮಗಳನ್ನು ಪಾಲಿಸುವಂತೆ ನೋಡಿಕೊಳ್ಳುವ ಬಾಧ್ಯತೆ ರಾಜ ಮತ್ತು ಆಚಾರ್ಯರ ಮೇಲಿರುತ್ತದೆ''. ಇದು ಶಂಕರರ ಅದ್ವೈತ ಮಹಾನುಶಾಸನ.

ಉಪನಿಷತ್ತುಗಳಿಂದ ಶಂಕರರು ವ್ಯಾಖ್ಯಾನಿಸಲು ಆರಿಸಿಕೊಂಡ ಮೊದಲಿನ 'ಮಹಾವಾಕ್ಯ'ಗಳ ಹಾಗೂ 'ಮನೀಷಾ ಪಂಚಕ ' ವಾಕ್ಯಗಳಿಗೂ ಮತ್ತು ನಂತರದ 'ಮಹಾನುಶಾಸನ 'ಕ್ಕೂ ಇರುವ ವೈರುಧ್ಯಗಳು ಗಮನಾರ್ಹವಾಗಿವೆ. ಇವುಗಳನ್ನು ಸಮಂಜಸವಾಗಿ ಒಟ್ಟುಗೂಡಿಸುವುದು ಹೇಗೆ ಎಂಬ ಸಮಸ್ಯೆ ಯಾರಿಗಾದರೂ ಉದ್ಭವಿಸದೇ ಇರದು.

ಶಂಕರಾಚಾರ್ಯರು ಅದ್ವೈತ ಸಿದ್ಧಾಂತದ ಮಹಾ ಪ್ರತಿಪಾದಕರೆಂದು ಪ್ರಖ್ಯಾತರಾಗಿದ್ದರೂ ಅವರ ಮುಖ್ಯ ಕೃತಿಗಳೆಲ್ಲ ಭಾಷ್ಯಗಳೇ ಹೊರತು ಸ್ವಂತ ಕೃತಿಗಳಲ್ಲ. ಉಪನಿಷತ್ತುಗಳಲ್ಲಿ ಬೀಜರೂಪದಲ್ಲಿದ್ದ ಅದ್ವೈತ ಸಿದ್ಧಾಂತವನ್ನು ಶಂಕರರು ತಮ್ಮ ತರ್ಕ, ಪಾಂಡಿತ್ಯ ಮತ್ತು ಕಾವ್ಯ ಶೈಲಿಯಿಂದ ಮನಮೋಹಕವಾದ ರೀತಿಯಲ್ಲಿ ಪ್ರತಿಪಾದನೆ ಮಾಡಿದರೇ ಹೊರತು ಅದನ್ನು ಜೀವನದಲ್ಲಿ ಆಚರಣೆಗೆ ತರುವ ಬಗ್ಗೆ ಕೊನೆಯ ಗಳಿಗೆಯವರೆಗೂ ಅವರಿಗೆ ಯಾವ ಆಸಕ್ತಿಯೂ ಇದ್ದಂತೆ ಕಾಣಲಿಲ್ಲ. ಅದಕ್ಕೆ ಬದಲಾಗಿ ಬೌದ್ಧ ಧರ್ಮದ ಉಚ್ಛ್ರಾಯ ಸ್ಥಿತಿಯ ಎದುರು ಕುಸಿದು ಬಿದ್ದಿದ್ದ ವೈದಿಕ ಧರ್ಮವನ್ನು ಪುನರುದ್ಧರಿಸುವಲ್ಲಿ ಮತ್ತು ವರ್ಣಾಶ್ರಮ ಧರ್ಮ ವ್ಯವಸ್ಥೆಯನ್ನು ಎತ್ತಿ ಹಿಡಿಯುವಲ್ಲಿ ಅವರಿಗೆ ವಿಶೇಷ ಆಸಕ್ತಿ ಇದ್ದಂತೆ ಕಾಣುತ್ತದೆ. ಹಾಗಾದರೆ ಶಂಕರರು 'ಮನೀಷಾ ಪಂಚಕ 'ವನ್ನು ಅವರ ಜೀವನದ ಯಾವ ಹಂತದಲ್ಲಿ ರಚಿಸಿದರು? ಈ ಪ್ರಶ್ನೆಗೆ ಒಂದು ಸಮಾಧಾನಕರ ವಿವರಣೆ ಸಾಧ್ಯವಿದೆ.

ಈಗ 'ಶಂಕರ ವಿಜಯ'ಗಳು ನಿರೂಪಿಸುವಂತೆ 'ಮನೀಷಾ ಪಂಚಕ 'ವನ್ನು ರಚಿಸಿದ ನಂತರ

ಶಂಕರರು ಪ್ರಸ್ಥಾನತ್ರಯಗಳಿಗೆ ಭಾಷ್ಯಗಳನ್ನು ರಚಿಸಿರದೇ, ಭಾಷ್ಯಗಳನ್ನು ರಚಿಸಿದ ನಂತರ ತಮ್ಮ ಜೀವನದ ಅಂತ್ಯಕಾಲದಲ್ಲಿ 'ಮನೀಷಾ ಪಂಚಕ'ವನ್ನು ರಚಿಸಿರಬೇಕು. ಚಂಡಾಲನೊಬ್ಬನನ್ನು ತಮ್ಮ ಗುರುವೆಂದು ಕೊಂಡಾಡುವ ಆಚಾರ್ಯರನ್ನು ಕಂಡು ಆ ವೇಳೆಗಾಗಲೇ ಶಂಕರರಿಂದಲೇ ಸ್ಥಾಪಿತವಾದ ನಾಲ್ಕು ಮಠಗಳ ಆಚಾರ್ಯರಿಗೆ ಮತ್ತು ಸಂಪ್ರದಾಯ ಪ್ರಿಯರಿಗೆ ಸಹಿಸುವುದು ಕಷ್ಟವಾಗಿರಬಹುದಲ್ಲವೆ? ಆಚಾರ್ಯರ ಮಾತನ್ನು ಗೌರವಿಸುವುದಾದರೆ ತಮ್ಮ ಅಸ್ತಿತ್ವಕ್ಕೇ ಬಲವಾದ ಕೊಡಲಿ ಪೆಟ್ಟು ಬಿದ್ದೀತೆಂಬ ಭೀತಿ ಅವರನ್ನು ಆವರಿಸಿರಬಹುದೆ? ಆದ್ದರಿಂದಲೇ 'ಮಾಯಾವಾದ ಅಸಚ್ಛಾಸ್ತ್ರಂ, ಪ್ರಚ್ಛನ್ನಂ ಬೌದ್ಧಮೇವಚ ' ಎಂದು ಅವರನ್ನು ಪ್ರಚ್ಛನ್ನ ಬೌದ್ಧನಾಸ್ತಿಕ ಎಂಬ ಆರೋಪಕ್ಕೆ ಗುರಿಪಡಿಸಿದಂತೆ ಕಾಣುತ್ತದೆ. ವಾಸ್ತವವಾಗಿ ಎಂ.ಎನ್.ರಾಯ್ ಹೇಳುವಂತೆ ಶಂಕರರ ಅದ್ವೈತವಾದ ಹಿಂದು ಮುಂದಾದ ಭೌತಿಕವಾದವೇ ಆಗಿದೆ. ಶಂಕರರಲ್ಲಿ ಜ್ಞಾನೋದಯವಾದುದನ್ನು ಕುರಿತು ಹೇಳುವ ಈ ಅಂತಿಮ ಘಟನೆಯಿಂದ ಅದಕ್ಕೆ ಮುಂಚೆ ಅವರು ಸಾಧಿಸಿದ ದಿಗ್ವಿಜಯಗಳೆಂದು ಹೇಳಲಾದವುಗಳೆಲ್ಲಾ ಅಪಜಯಗಳೆಂದೇ ತಿಳಿಯಬೇಕಾಗುತ್ತದೆ. ಆದರೆ ಈ ಘಟನೆಯು ಅವರ ಪ್ರಾಣಕ್ಕೇ ಸಂಚಕಾರವನ್ನು ತಂದಿರಬಹುದೇ? ಜ್ಞಾನೋದಯ ಪೂರ್ವದಲ್ಲಿ ಬರೀ ಪಂಡಿತರಾದ ಶಂಕರರು ಬೌದ್ಧಾದಿ ನಾಸ್ತಿಕರನ್ನು ಹೆದರಿಸಿ ಬೆದರಿಸಿ , ಓಡಿಸಿ ವರ್ಣವ್ಯವಸ್ಥೆಯನ್ನು ಗಟ್ಟಿ ಬುನಾದಿಯ ಮೇಲೆ ನೆಲೆ ನಿಲ್ಲಿಸಿದಂತೆ; ನಂತರ ಜ್ಞಾನೋದಯ ಹೊಂದಿದ ಶಂಕರರು ತಿರುಗಿ ಆ ವ್ಯವಸ್ಥೆಯನ್ನು ಸಮೂಲವಾಗಿ ನಾಶ ಮಾಡಲಾರರೇ ಎಂಬ ಸಂಶಯ ಆ ಮಠಗಳ ಸಂಪ್ರದಾಯವಾದೀ ಅನುಯಾಯಿಗಳಿಗೆ ಬಂದಿರಬಹುದೇ?

ಈ ಸಾಧ್ಯತೆಯನ್ನು ದುರುದ್ದೇಶಪೂರ್ವಕವಾದ ಊಹೆಯೆಂದು ತಳ್ಳಿಹಾಕಲಾಗದೇನೋ! ಏಕೆಂದರೆ ಜನನದ ಬಗ್ಗೆ ಇರುವಂತೆಯೇ ನಿಧನದ ಬಗ್ಗೆ ಸಹ ಶಂಕರಮಠಗಳಲ್ಲಿಯೇ ವಾದವಿವಾದಗಳಿವೆ. ಪ್ರಸ್ತುತ ಅವರ ಜನನ ಸಮಾಚಾರವನ್ನು ಬದಿಗೆ ಸರಿಸಿ, ಅವರ ಅಂತ್ಯ ಹೇಗೆ ಸಂಭವಿಸಿತು ಎಂಬ ಬಗ್ಗೆ ಶಂಕರ ಮಠಗಳು ಏನು ಹೇಳುತ್ತವೆ ಎಂಬುದನ್ನು ನೋಡೋಣ.

ಚಿದ್ವಿಲಾಸ ಯತಿಯ 'ಶಂಕರ ವಿಜಯ'ದ ಪ್ರಕಾರ 'ದತ್ತಾತ್ರೇಯ ಗುಹಾ ದ್ವಾರಾತ್ ಕೈಲಾಸ ಗಮನಂ ಗುರೋಃ' ಅಂದರೆ ಶಂಕರರು ಬದರಿಕಾಶ್ರಮದೊಳಗಿನ ದತ್ತಾತ್ರೇಯ ಗುಹೋ ದ್ವಾರವನ್ನು ಪ್ರವೇಶಿಸಿ ಅಲ್ಲಿಂದ ಕೈಲಾಸಕ್ಕೆ ಹೋದರು. ಸದಾನಂದ ವ್ಯಾಸರ 'ಶಂಕರ ವಿಜಯ ಸಾರ'ದಲ್ಲಿ ಶಂಕರರು ಶಿವನ ವಾಹನ ನಂದಿಯನ್ನೇರಿ ತಮ್ಮ ಸ್ವಸ್ಥಾನವಾದ ಕೈಲಾಸಕ್ಕೆ ತೆರಳಿದರೆಂದು ಹೇಳಲಾಗಿದೆ. ಮಾಧವೀಯ 'ಶಂಕರ ವಿಜಯ'ದಲ್ಲಿ ಶಂಕರರು ಶಿಷ್ಯರನ್ನು ಕೂಡಿಕೊಂಡು ಬದರಿಗೆ ಹೋಗಿ ಅಲ್ಲಿಂದ ಎಂಭತ್ತು ಮೈಲಿ ದೂರದಲ್ಲಿರುವ ಕೇದಾರ ಕ್ಷೇತ್ರದ ಮಾರ್ಗವಾಗಿ ಕೈಲಾಸ ಸೇರಿದರೆಂದು ಹೇಳಿದೆ.

ಶೃಂಗೇರಿ ಗುರು ಪರಂಪರೆಯನ್ನು ಹೇಳುವ ಲಕ್ಷ್ಮಣಾಚಾರ್ಯರ 'ಗುರು ವಂಶ ಕಾವ್ಯ' ಮೇಲಿನ ಕಥೆಗಳಿಗಿಂತ ಭಿನ್ನವಾದ ಮತ್ತೊಂದು ಕಥೆಯನ್ನು ಹೇಳುತ್ತದೆ. ಕೊನೆಯ ದಿನಗಳಲ್ಲಿ ಶಂಕರಾಚಾರ್ಯರು ನೇಪಾಳದ ಸಿದ್ಧೇಶ್ವರದಿಂದ ದತ್ತಾತ್ರೇಯ ಆಶ್ರಮಕ್ಕೆ ಹೋಗಿ ಅಲ್ಲಿ ದಂಡ ಕಮಂಡಲಗಳನ್ನು ತ್ಯಜಿಸಲಾಗಿ ದಂಡವು ಮರವಾಗಿಯೂ, ಕಮಂಡಲವು ಕೆರೆಯಾಗಿಯೂ ಮಾರ್ಪಟ್ಟಿತಂತೆ. ಅವರು ಮರಾಠವಾಡದ ಮಾಹುರಿಪುರಿಯಲ್ಲಿ ದತ್ತಾತ್ರೇಯ ಆಶ್ರಮದಲ್ಲಿ ದತ್ತಾತ್ರೇಯನೊಡನೆ ಕುಳಿತು ಚರ್ಚೆಯಲ್ಲಿ ತೊಡಗಿದ್ದಾರಂತೆ. ಅಂದರೆ ಆ ಚರ್ಚೆ ಇನ್ನೂ ನಡೆಯುತ್ತಲೇ ಇದೆ ಎಂದಾಯಿತು!

ಗೋವಿಂದನಾಥನ 'ಶಂಕರಾಚಾರ್ಯ ಚರಿತ' ಅಥವಾ 'ಕೇರಳೀಯ ಶಂಕರ ವಿಜಯ' ಇನ್ನೊಂದು

ಕಥೆಯನ್ನು ಹೇಳುತ್ತದೆ.ಶಂಕರರು ತಿರುಚೂರಿನ ವೃಷಾಚಲದ ಮೇಲಿಂದ ದೇವಾಲಯದ ಗರ್ಭಗುಡಿಯ ಛಾವಣಿಯಲ್ಲಿ ತೂತು ಕೊರೆದು ಸೂರ್ಯಮಂಡಳವನ್ನು ಪ್ರವೇಶಿದರಂತೆ.

ಇನ್ನು ಕಂಚಿ ಕಾಮಕೋಟಿ ಪೀಠದವರು ಉತ್ತರಾದಿಯವರದೆಲ್ಲಾ ಮೋಸ,ಅವರ ಕಥೆಗಳೆಲ್ಲಾ ಕಟ್ಟುಕಥೆಗಳು ಎನ್ನುತ್ತಾರೆ.ಶಂಕರರ ಸಮಾಧಿ ಕಂಚಿಯಲ್ಲೇ ಇದೆ ಅನ್ನುವುದನ್ನು ರುಜುವಾತು ಪಡಿಸಲು ಗ್ರಂಥಗಳನ್ನು ಬರೆಸುತ್ತಲೇ ಇದ್ದಾರೆ.ಈ ಕೆಲಸವನ್ನು ಎಲ್ಲ ಪೀಠದವರು ಮಾಡಿದರೂ ಕಂಚಿಯವರ ಉತ್ಸಾಹ ಉಳಿದವರಲ್ಲಿಲ್ಲ.ತಮ್ಮದೇ ಆದಿ ಪೀಠವೆಂದು ಕಂಚಿಯವರ ವಾದ.ಮಠಾಮ್ನಾಯದ ಪ್ರಕಾರ ಅದು ಪೀಠವೇ ಅಲ್ಲ,ಅವರಿಗೆ ಮಹಾನುಶಾಸನವೂ ಅನ್ವಯಿಸುವುದಿಲ್ಲ ಎಂದು ಉಳಿದ ಮಠಗಳ ನಿಲುವು.ಬಹಳ ವಿಷಯಗಳಲ್ಲಿ ಕಂಚಿ ಪೀಠ ಶೃಂಗೇರಿ ಪೀಠದವರಿಗೆ ಪ್ರತಿಸ್ಪರ್ಧಿಯಂತೆ ಕಾಣಿಸುತ್ತದೆ.ಶಂಕರರ ಮರಣ ವಿಷಯದಲ್ಲಿ ಕಂಚಿ ಪೀಠದವರು ಆನಂದಗಿರಿಯ 'ಶಂಕರ ವಿಜಯ'ವನ್ನು ಪ್ರಮಾಣವಾಗಿ ತೆಗೆದುಕೊಳ್ಳಬೇಕೆನ್ನುತ್ತಾರೆ.ಅದರ ಪ್ರಕಾರ ಶಂಕರರು ಕಂಚಿಯಲ್ಲೇ ದೇಹತ್ಯಾಗ ಮಾಡಿದ್ದಾರೆ.ಅದಕ್ಕೆ ಆಧಾರವಾಗಿ ಅವರು ಕಂಚಿಯ ಕಾಮಾಕ್ಷಿ ದೇವಾಲಯದೊಳಗಿನ ಶಂಕರರ ವ್ಯಕ್ತಿಗಾತ್ರದ ಶಿಲಾ ವಿಗ್ರಹವನ್ನು ತೋರಿಸುತ್ತಾರೆ.ಅದು ಪದ್ಮಾಸನದಲ್ಲಿರುವ ಮೂರ್ತಿಯಾದದ್ದರಿಂದ ಬುದ್ಧನ ವಿಗ್ರಹವಿರಬೇಕೆಂದೂ,ಶಂಕರರ ವಿಗ್ರಹವಾಗಿತ್ತೆಂದರೆ ಯೋಗ ಪದ್ಮಾಸನ ಭಂಗಿಯಲ್ಲಿರುತ್ತಿತ್ತೆಂದೂ,ಆದ್ದರಿಂದ ಅದು ಶಂಕರರ ವಿಗ್ರಹವಲ್ಲವೆಂದೂ ಇತರ ಪೀಠಗಳವರ ವಾದ. ಆ ದೇವಾಲಯದ ಪ್ರಾಂಗಣದಲ್ಲಿ ಇನ್ನೂ ಅನೇಕ ಬೌದ್ಧ ವಿಗ್ರಹಗಳು ದೊರಕಿವೆ.ಅಲ್ಲಿ ಇದ್ದ ಬೌದ್ಧ ಸ್ತೂಪವನ್ನು ಧ್ವಂಸ ಮಾಡಿ ಅದರ ಮೇಲೆ ದೇವಾಲಯವನ್ನು ನಿರ್ಮಿಸಿರಬಹುದು!ಶಂಕರ ಪ್ರೇರಿತ ದಾಳಿಗಳಿಗೆ ಗುರಿಯಾಗುವ ಮೊದಲು ಕಂಚಿ ಒಂದು ಪ್ರಸಿದ್ಧಿ ಹೊಂದಿದ ಬೌದ್ಧ ಕ್ಷೇತ್ರವಾಗಿತ್ತು ಎಂದು ತಿಳಿದು ಬರುತ್ತದೆ.

ಹೀಗೆ ಪ್ರತಿ ಶಂಕರ ಪೀಠದವರೂ ತಮ್ಮ ವಾದವೇ ಸರಿ ಎಂದು ಉಳಿದ ಮಠಗಳೊಡನೆ ವಿವಾದಗಳಲ್ಲಿ ತೊಡಗಿದ್ದಾರೆ.ವಾಸ್ತವವಾಗಿ ಶಂಕರರು ಸ್ವಾಭಾವಿಕ ಸಾವಿಗಿಡಾಗಿದ್ದರೆ ಈ ಗೊಂದಲ ಉಂಟಾಗುತ್ತಿರಲಿಲ್ಲ.ಅವರು ಆಪ್ತ ಶತ್ರುಗಳಿಗೇ ಬಲಿಯಾಗಿರಬಹುದೆಂಬ ಅನುಮಾನವನ್ನು ಇವು ಬಲಗೊಳಿಸುತ್ತವೆ.ಹಂತಕರು ಎಂದಾದರೂ ತಾವು ಹತ್ಯೆ ಮಾಡಿದೆವು ಎಂದು ಒಪ್ಪಿಕೊಳ್ಳುತ್ತಾರೆಯೇ?ಶಂಕರ ಪೀಠಗಳನ್ನು ಸ್ಥಾಪಿಸಿದವರು ಶಂಕರರೇ ಎಂದು ಎಲ್ಲ ಪೀಠದವರು ಒಪ್ಪಿಕೊಳ್ಳುತ್ತಾರೆ.ಅವುಗಳಿಗೆ ಮೊದಲ ಪೀಠಾಧಿಪತಿಗಳನ್ನು ಸಹ ಶಂಕರರೇ ನೇಮಿಸಿದರೆಂದು ಹೇಳುತ್ತಾರೆ.ಶಂಕರರ ಕಾಲದಿಂದ ಇಂದಿನವರೆಗೂ ಶಂಕರ ಮಠಗಳೂ,ಪೀಠಗಳೂ ಕಾರ್ಯ ನಿರ್ವಹಿಸುತ್ತಲೇ ಇವೆ ಎಂದು ಸಹ ಅವರೇ ಹೇಳುತ್ತಾರೆ. ಪಾರಂಪರ್ಯವಾಗಿ ಪೀಠಾಧಿಪತಿಗಳ ನೇಮಕ ನಡೆಯುತ್ತಲೇ ಇದೆ ಎನ್ನುತ್ತಾರೆ.ಇದೆಲ್ಲಾ ನಿಜವಾದರೆ ಅವರು ಎಲ್ಲಿ ,ಯಾವಾಗ,ಹೇಗೆ ನಿಧನರಾದರು ಎಂಬ ಬಗ್ಗೆ ಇಷ್ಟು ವೈರುಧ್ಯಗಳು ಉಂಟಾಗಲು ಹೇಗೆ ಸಾಧ್ಯ?

ಅದೇನೇ ಇರಲಿ, ಜ್ಞಾನಿ ಶಂಕರರ 'ಮನೀಷಾ ಪಂಚಕ'ವನ್ನು ಸರಿಯಾಗಿ ಗ್ರಹಿಸಿ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಶಂಕರಾಚಾರ್ಯರ ಅದ್ವೈತ ವೇದಾಂತ ಇಂದಿಗೂ ಪ್ರಸ್ತುತವಾಗುತ್ತದೆ. ಇಲ್ಲವಾದಲ್ಲಿ ಅದೊಂದು ಕೇವಲ ಉಪಾಯ ವೇದಾಂತವಾಗಿಯೇ ಉಳಿಯುತ್ತದೆ. ●

ಇನ್ನಷ್ಟು ಕವಿತೆಗಳು

ರಿಕ್ವಿಯಂ

ಸುತ್ತುತ್ತಿದೆ ಸದ್ದು ಜಿಗ್ಗಲ್ಲಿ ಹುಡುಕಾಡುತ್ತ ಬಿಡಿವಿರದೆ
ಬೆಳಕಿನ ಕಣ್ಣು ರೆಪ್ಪೆ ಬಿಡಿಸಿದಾಗಿನಿಂದ. ತಡವಿನೋಡಿ ಮಗ್ಗುಲ
ಅತ್ತ ಇತ್ತ ಕಾಣದೆ ಕಂಗಾಲಾದ ಕರುಳಿಗೆಷ್ಟೊಂದು ಕಾಲು
ಒಮ್ಮೆ ಬಲದಿಂದೆಡಕ್ಕೆ ಹತ್ತಿರವಾಗಿ, ದೂರಸಾಗಿ ಮತ್ತೆ ಮರಳಿದ
ದಾರಿಯಾಕಾರ ಚಚ್ಚೌಕ ; ವರ್ತುಲ; ಸದ್ದಿಗೊದಗಿದ ಜ್ಯಾಮಿತಿಯ ಸ್ವರೂಪ.

ಮರ್ತ್ಯನಂತೆ ಹುಷಾರಾಗಿ ಹಿಂಬಾಲಿಸಿತು ಮನದ ಮಾಯಾ ಖಗ
ಇಲ್ಲೊಂದು ಸಲ ಕೂಗಿ ಕೂಗಿಗೂ ಮೊದಲೇ ತಾವು ಸೇರಿ ತನ್ನ ಕೊರಳಿಗೆ
ತಾನೇ ಕೇಳುಗನಾದ ಬಗೆ, ಕಳೆದುದನ್ನು ಅರಸುವುದು ಮಾಯಲ ಮುರಾರಿಯ
ಆತ್ಮದೊಳಗೆ.

ಬಂದೂಕಿಗೆ ಸಿಡಿಮದ್ದು ತುಂಬಿ ಸದ್ದನ್ನೊಮ್ಮೆಗೇ ಹುಡಿಹಾರಿಸುವ
ಹುನ್ನಾರಲ್ಲಿ ಹಿಂಬಾಲಿಸಿದರೂ ಜಾಗರೂಕತೆಗೇ ದಿಕ್ಕೂ ತಪ್ಪಿದ ಹಾಗೆ
ಖಚಿತ ಪುರಾವೆಗೆ ದಣಿದ ಕಾಲತ್ತ ನೋಡಾ, ಸೋತುಹೋಗಲಿ ಹಾಗೇ. ಶಾಪವಿತ್ತೆ?
ಅನಿಮಿಷತ್ವ ಸಿದ್ಧಿಸಿದ ಹಾಗೆ ಕಣ್ಣಾಲಿ.ಹಕ್ಕಿ ಬಂತೇನು ನೋಟಕ್ಕೆ? ಆ ಕತೆ ಬೇರೆ

ಒಪ್ಪಂದಗಳಿಗೆ ಮೈ ಮನವೆರಡೂ ಮುಚ್ಚಿಕೊಂಡಿವೆ. ಹಿಡಿಹಿಡಿ ಕಲ್ಲು ಮುಕ್ಕಿ
ಒಡಲ ತುಂಬ ಹಾರಿ, ನಭಕ್ಕೇರಿ ಬೀಳುತ್ತಿದೆ : ಸತ್ತಿತೇನು ವಿರಹಿ ಭಾರದ್ವಾಜ ಪಕ್ಷಿ.

-ಆರ್. ವಿಜಯರಾಘವನ್

ದಿಡ್ಡಿ

ನಾನು ಅಹಲ್ಯೆಯೂ ಅಲ್ಲ
ನೀನು ರಾಮನೂ ಅಲ್ಲ
ರಾಮಸ್ಪರ್ಶದಿಂದ ಧನ್ಯಳಾಗಿ,
ಕಣ್ಣೀರ ಹನಿಯಲಿ ಪುಲಕಗೊಂಡು,
'ರಾಮಾ ರಾಮಾ ' ಎಂದು ಆರ್ತಳಾಗುವುದು
ಈ ಜಾಯಮಾನಕ್ಕೆ ಒಗ್ಗಿದ್ದೇ ಅಲ್ಲ.
ಸಾವಿರ ಕಣ್ಣಾಗಿ ಶಾಪ ಅರಳಿನಿಂತರೂ
ಪಾಪ ಪ್ರಜ್ಞೆ ನಿವೇದಿಸುವುದಿಲ್ಲ.

ಇಲ್ಲ
ನನಗೆ ನೀನು ಹೇಳುವ ಯಾವ
ಸಾಕ್ಷೀಪ್ರಜ್ಞೆಯೂ ಬಾಧಿಸುತ್ತಿಲ್ಲ.
ಸೀರೆ ಮುಸುಕಿಟ್ಟು
ಒಳಗೇ ಭುಗಿಲೆನ್ನುವ ಬೆಂಕಿಯ
ತಣಿಸುವುದಿಲ್ಲ ಇನ್ನು.

ಬಂದಿದೆ ಕಾಲವೀಗ ;
ಲಕ್ಷ್ಮಣರೇಖೆಗಳ ದಾಟಲು
ಕಂಡಾಪಟ್ಟೆ ಹಾರಲಿ ಕನಸು
ಸಿಕ್ಕ ಸಿಕ್ಕ ಹೂವಿಗೆ ಮುತ್ತಿಟ್ಟು
ದುಂಬಿ ಹಾಡುವ ಹಾಡಾಗುವೆ
ಈ ಭೂಮಿ ಬಸಿರೊಡೆದು ನಿಂತ
ಉದ್ದಾನುದ್ದ ಮರದಂತೆ

ಈ ನೆಲದ ಪ್ರೀತಿ ಹೀರುವೆ
ಬಿಡು ನನ್ನ, ನನ್ನ ಪಾಡಿಗೆ

- ಆರ್.ತಾರಿಣಿ ಶುಭದಾಯಿನಿ

ಕಂಬಳಿ ಹುಳು ಮತ್ತು ಅದರ ಕೋಟು

ಒಮ್ಮೆ ಕಂಬಳಿ ಹುಳ ಹರಿಯುತ್ತಾ
ತೆವಳುತ್ತಾ
ತಲೆ ಹೊರಳಿಸಿ ತನ್ನ ಮೈ ಮುಖ
ಕೈಕಾಲು ಕಂಡು
ತಲೆ ಕೊಡಹಿತು
ಛೇ ! ಇದೇನು ನನ್ನ ರೂಪ !
ಮೈ ಮುಳ್ಳು , ಕಣ್ಣು ಸಣ್ಣ
ಪುಟ್ಟ ಪುಟ್ಟ ಹತ್ತಾರು ಕಾಲು
ಉದ್ದ ಚಾಚಿ
ನಡೆದರೂ ವೇಗವಿಲ್ಲ !

ಬೇಕಿತ್ತಲ್ಲ ನನಗೊಂದು
ಚೆಂದದ ಕೋಟು
ಅಂಥಿಂಥದ್ದಲ್ಲ
ಮಾಯದ ಕೋಟು !

ಹರಡಿ ಆಡಿಸಿದರೆ
ಹಾರಲು ಬರಬೇಕು
ಮತ್ತೆ ಬೇಕಿತ್ತು
ಉದ್ದನೆ ಕಾಲು
ಕೋಟು ಹಾಕಿದ
ನಾ ಎತ್ತರದಲಿ
ಎಲ್ಲರಿಗೆ ಕಾಣಲು !

ಇದು ಸಾಧ್ಯವೆ ?
ಆಗಬಾರದೇಕೆ
ಇಟ್ಟಿರುವೆನಲ್ಲ ಪ್ರಥಮ ಪಾದ !

೨

ಈಗ ಹುಳು ತೆವಳುತ್ತಿಲ್ಲ
ಆ ಎಲೆ ಈ ಎಲೆ ಕಚ್ಚಿ
ಅದು
ಯೋಚನಾಗ್ರಸ್ತ !
'ಕೋಟೊಂದ ನೇಯುತ್ತಿರುವೆ
ಅದಾಗಬೇಕು
ಅಂದದ ಬಣ್ಣದ ಕೋಟು
ದಾರ ಸಾಲಬಹುದೆ ?'

ಹೆಣೆಯುತ್ತಾ ಹೆಣೆಯುತ್ತಾ
ನಿದ್ರಾಧೀನ ಹುಳ
ಕನಸಲ್ಲಿ ಕಂಡಿದ್ದು
ಬಣ್ಣ ಬಣ್ಣದ
ಕೋಟುಗಳು !

ಕರಿಯದು , ಬಿಳಿಯದು
ಜರತಾರಿಯದು
ಕಾವಿಯದು
ಅಪ್ಪಟ ಖಾದಿಯ
ನೆಹರು ಕ್ಲೋಸ್ ಕಾಲರ್
ಕೋಟು !
ಇವುಗಳಲ್ಲಾವುದು ನನ್ನ
ರೂಪ ಪ್ರಖರತೆಗೆ?
ಮತ್ತೆ
ಹಾರಾಡಲು ಸಹಕರಿಸುವುದಕೆ ?
....
ಉಸಿರುಗಟ್ಟಿಸತೊಡಗಿದರೆ ?
ಬದುಕಬಲ್ಲೆನೆ?
ಭಯವೇಕೆ ?
ಎರಡನೆ ಹೆಜ್ಜೆ ಇಟ್ಟಾಗಿದೆಯಲ್ಲಾ !

೨

ಹುಳ, ಅಲ್ಲ, ಹುಳವೆನ್ನ ಬಹುದೆ
ಇದನು
ಸ್ವಪ್ನ ಕೋಶದ ಬಸಿರ
ಒಡೆದು ಬಂದಿದೆ
ಚಿಟ್ಟೆ, ಪಾತರಗಿತ್ತಿ.
ಹೆಸರು ಹತ್ತಾರು !
ನಾನೀಗ ಚಿಟ್ಟೆ
ಅಂದದ ಕೋಟು
ನೀಳ ಕಾಲು
ಸಿಕ್ಕಿವೆಯಲ್ಲ !
ಬಾಯಲಿ ಹೀರು ಕೊಳವೆಯೂ
ಇದೆ ಗೊತ್ತೆ ?!
ನಾನಿದ ಕನಸಿದ್ದೆನೆ ?
ಏನೋ?
ಸ್ವಪ್ನ ಹಲವೊಮ್ಮೆ
ಅಸ್ಪಷ್ಟ
ಅನಿರ್ದಿಷ್ಟ
ಕೋಶಾವಸ್ಥೆಯ ಕಷ್ಟ
ನಿಮಗೆ ತಿಳಿಯದು !

ಅಲ್ಲ
ಇದು ತೃತೀಯ ಪಾದವೆ?

ಚಿಟ್ಟೆಯ ಕಣ್ಣ
ದೃಷ್ಟಿ ಶಕ್ತಿ
ಹೆಚ್ಚಿದೆ
ಹಿಂದೆ ಬೆನ್ನಿಗೊಪ್ಪಿದೆ ಕೋಟು
ಕಾಣುತ್ತಿಲ್ಲ
ಆದರೂ
ಅದರ ಬಗ್ಗೆ ಗರ್ವವಿದೆ

ಹೀರುವ ಕೊಳವೆಯ
ಬಗೆಗಂತೂ
ಅಮಿತಾನಂದ
ಮುಂದೆ ವರ್ಣಮಯ
ಕನಸು
ಈಗಲೂ ಬೀಳುತ್ತಿವೆ.
ಎಳೆ ಬಿಸಿಲಲ್ಲಿ ಹೊಳೆವ
ಹೂಗಳೆಲ್ಲ ಕಂಡಿವೆ.
ಕರೆದಿವೆ
ಹಾಗೇ
ಪೂರ್ವಾಶ್ರಮದ
ಪಳೆಯುಳಿಕೆಗಳೂ !

ಗುಟ್ಟು ಗೊತ್ತೇ?
ಹುಳ ಅಲಿಯಾಸ್ ಚಿಟ್ಟೆಗೆ
ಮೂರನೇ ಹೆಜ್ಜೆ
ಇಡಲು
ಎಡೆಯಿಲ್ಲ

ಭುವಿಯಲ್ಲೂ ಇಲ್ಲ
ಆಗಸದಲ್ಲೂ ಇಲ್ಲ !

-ಯಶಸ್ವಿನಿ ಹೆಗಡೆ

ಒತ್ತಿ ಹಣ್ಣ ಮಾಡಿದರೆ ಅದೆತ್ತಣ ರುಚಿಯಪ್ಪುದೊ
ಕಾಮಿಸಿ ಕಲ್ಪಿಸಿ ಭಾವಿಸಿದೆಡೆ ಅದೆ ಭಂಗ
ಭಾವಿಸುವ ಭಾವನೆಗಿಂತ
ಸಾವುದೆ ಲೇಸು ಕಾಣಾ ಗುಹೇಶ್ವರಾ

- ಅಲ್ಲಮ

ಸಮಕಾಲೀನ ಕನ್ನಡ ಸಾಹಿತ್ಯ : ಒಂದಿಷ್ಟು ಟಿಪ್ಪಣಿಗಳು

○ ಡಾ. ಸಂತೋಷ ಚೊಕ್ಕಾಡಿ

ನವೋದಯ, ನವ್ಯ, ದಲಿತ -ಬಂಡಾಯ ಹೀಗೆ ಹಲವಾರು ಸಾಹಿತ್ಯ ಮಜಲುಗಳನ್ನು ದಾಟಬಂದ ಈ ಶತಮಾತದ ಕನ್ನಡ ಸಾಹಿತ್ಯ ಈಗ ಯಾಕೋ ಸುಸ್ತಾಗಿ ನಿಂತು ಉಸಿರು ಬಿಡುತ್ತಿದೆ. ಇದಕ್ಕೆ ಯಾವುದೋ ದಿಗ್ಭ್ರಮೆ ಆವರಿಸಿರುವಂತಿದೆ. ಯಾಕೆಂದರೆ ಸಮಕಾಲೀನ ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಕನ್ನಡ ಸಾಹಿತ್ಯದ ಸ್ಥಿತಿ ಆಶಾದಾಯಕವಾಗಿಯೇನೂ ಇಲ್ಲ. ಇದಕ್ಕೆ ಕಾರಣಗಳು ಹಲವಾರು. ನವ್ಯದ ವ್ಯಂಗ್ಯ, ಪ್ರತಿಮೆ, ಸಂಕೇತಗಳ ತಾಂತ್ರಿಕತೆಯಾಗಲೀ, ದಲಿತ-ಬಂಡಾಯ ಕಾವ್ಯದ ಸಾಮಾಜಿಕ ಪ್ರಜ್ಞೆಯ ರೂಪವಾಗಲೀ ಇಂದು ಅರ್ಥ ಕಳೆದುಕೊಂಡಿವೆ. ಆ ಪಂಥಗಳೆಲ್ಲ ಅವಸಾನದ ಅಂಚಿನಲ್ಲಿವೆ. ಸಾಹಿತಿಯೊಬ್ಬನ ಮೌಲ್ಯ ಪ್ರಜ್ಞೆಯಾಗಲೀ, ಸೈದ್ಧಾಂತಿಕ ನಿಲುವುಗಳಾಗಲೀ ಇಂದು ಅರ್ಥಪೂರ್ಣವಾದ ಸಂವಾದವೊಂದನ್ನು ಹುಟ್ಟುಹಾಕುತ್ತಿಲ್ಲ. ಈ ಮೂಲಕ ಸೃಜನಶೀಲತೆ ನಿರ್ದಿಷ್ಟ ದಿಕ್ಕಿನಲ್ಲಿ ಬೆಳೆಯುವಂತಹ ವಾತಾವರಣವನ್ನು ನಿರ್ಮಾಣ ಮಾಡುತ್ತಿಲ್ಲ. ಇನ್ನೂ ಕೆಲವರ ಹುಡುಕಾಟ ಅಥವಾ ಪ್ರಯೋಗಗಳು ಕೇವಲ ಅನುಕರಣೆಯಲ್ಲೋ ಅಥವಾ ಸೈದ್ಧಾಂತಿಕ ಗಟ್ಟಿತನವಿಲ್ಲದ ಅಪಕ್ವ ಪ್ರಯೋಗಗಳಾಗಿಯೋ ಮುಕ್ತಾಯವಾಗುತ್ತಿವೆಯೇ ವಿನಾ ಹಿಂದಿನ ಸಾಹಿತ್ಯ ಪ್ರಕಾರಗಳು ಆಯಾಯ ಕಾಲ ಘಟ್ಟದಲ್ಲಿ ಸೃಷ್ಟಿಸಿದ ಒಂದು ಯುಗದ ಪ್ರಜ್ಞೆಯನ್ನು ಕಾಣಿಸುವಷ್ಟು ದಿವ್ಯದರ್ಶನವಾಗಿ ಅರಳುತ್ತಿಲ್ಲವೇಕೆ ಎಂಬ ಪ್ರಶ್ನೆ ಕಾಡುತ್ತದೆ.

ಕಾಲ ಬದಲಾಗಿದೆ. ಕಾಲಕ್ಕೆ ತಕ್ಕಂತೆ ಮೌಲ್ಯಗಳು ಬದಲಾಗಿವೆ. ಇಂದು ಮಾನವ ಜನಾಂಗ ಅತ್ಯಂತ ಸಂಕಟದ ಕ್ಷಣಗಳನ್ನು ಎದುರಿಸುತ್ತಿದೆ. ಆಧುನಿಕ ಜಗತ್ತು ಮನುಷ್ಯನ ಮಾನಸಿಕ ಸ್ಥಿತಿಯ ಮೇಲೆಯೇ ದಾಳಿ ಮಾಡುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನೂ ಕಸಿದುಕೊಳ್ಳುತ್ತಿದೆ. ಜಾತ್ಯಾತೀತ ರಾಷ್ಟ್ರವೆಂಬ ಹೆಸರು ಗಳಿಸಿಕೊಂಡ ನಮ್ಮ ದೇಶದಲ್ಲಿ ಇಂದು ಜಾತಿ, ಧರ್ಮಗಳ ರಾಜಕೀಯ ದುರ್ಬಳಕೆಯ ಬಗ್ಗೆ ಮಾತನಾಡಲಾಗದಂತಹ ವಾತಾವರಣ ನಿರ್ಮಾಣವಾಗಿದೆ. 'ಧರ್ಮಕಾರಣ' ಕಾದಂಬರಿಗಾದ ಗತಿಯನ್ನೇ ತೆಗೆದುಕೊಳ್ಳಿ. ಒಂದು ಕಾದಂಬರಿಯ ಮೇಲೆ ಸರಕಾರ ತೆಗೆದುಕೊಂಡ ಕ್ರಮ ಸಾಹಿತಿಗಳ ನೈತಿಕ ಸ್ಥೈರ್ಯವನ್ನೇ ಅಲುಗಾಡಿಸಿಬಿಟ್ಟಿದೆ. ಇನ್ನೂ ವಿಚಿತ್ರವೆಂದರೆ ಇದರ ವಿರುದ್ಧ ಪ್ರತಿಭಟಿಸುವ, ಒಂದು ಚಳುವಳಿಯನ್ನು ಹುಟ್ಟುಹಾಕುವ ಮನೋಭಾವವೂ ನಮ್ಮಲ್ಲಿ ಕಾಣಿಸಲಿಲ್ಲ. ಇದೆಲ್ಲ ವ್ಯರ್ಥವೆಂಬಂತೆ ಕೈ ಚೆಲ್ಲಿ ಕುಳಿತಿದ್ದೇವೆ. ಜಾತಿ -ಧರ್ಮಗಳ ಬಗ್ಗೆ ಮಾತನಾಡುವ, ಅಥವಾ ಬರೆಯುವ ಸಂದರ್ಭದಲ್ಲಿ ಯಾವ

ದಿಕ್ಕಿನಲ್ಲಿ ವ್ಯವಹರಿಸಿದರೆ ತಾನು ಸುರಕ್ಷಿತನಾಗಿ ಉಳಿಯಬಲ್ಲೆ ಎಂದು ಸಾಹಿತಿಗಳೆಲ್ಲ ಯೋಚಿಸುವಂತೆ ಆಗಿದೆ.

ಮನುಷ್ಯನ ಸ್ವಾತಂತ್ರ್ಯದ ಮೇಲೆ ದಾಳಿ ಮಾಡುತ್ತಿರುವ ಇನ್ನೊಂದು ಸಂಗತಿಯೆಂದರೆ ಆಧುನಿಕತೆ.ನವವಸಾಹತುಶಾಹಿಯ ರೂಪಗಳು ಇವತ್ತು ಎಲ್ಲ ಕ್ಷೇತ್ರಗಳನ್ನೂ ಆವರಿಸಿಕೊಂಡಿದೆ.ಹೆಚ್ಚು ಹೆಚ್ಚು ವಿದೇಶೀ ಬಂಡವಾಳ ಹೂಡಿಕೆದಾರರು ನಮ್ಮ ದೇಶವನ್ನು ಆಕ್ರಮಿಸಿಕೊಳ್ಳುತ್ತಿದ್ದಾರೆ.ಮುಕ್ತ ಆರ್ಥಿಕತೆಯ ನೆಪದಲ್ಲಿ ನಮ್ಮ ವ್ಯವಸ್ಥೆ ಅವರ ಕೈ ಕುಲುಕುವ ಕೆಲಸದಲ್ಲಿ ತೊಡಗಿದೆ.ಅಲ್ಲಲ್ಲಿ ಕೈಗಾರಿಕೆಗಳ ಸ್ಥಾಪನೆಯಾಗುವ ಮೂಲಕ ಭಾರತೀಯತೆಯನ್ನು ಪ್ರತಿನಿಧಿಸುವ ಹಳ್ಳಿಗಳೂ ಕೂಡಾ ಮೂಲರೂಪವನ್ನು ಕಳೆದುಕೊಳ್ಳುತ್ತಿವೆ.ಮನುಷ್ಯನ ಸಹಜ ಬದುಕಿನ ಉಸಿರಾದ ಪರಿಸರ ಮನುಷ್ಯನ ಉಪಭೋಗದ ವಸ್ತುವಾಗುತ್ತಿದೆ.ಪ್ರಗತಿಯ ಭ್ರಮೆಯಲ್ಲಿ ನಮ್ಮ ಸಾಂಸ್ಕೃತಿಕ ಕ್ಷೇತ್ರದ ಮೇಲೆ ನಡೆಯುತ್ತಿರುವ ಆಕ್ರಮಣ ಮನುಷ್ಯನ ಸ್ಥಿತಿ ಮುಟ್ಟುತ್ತಿರುವ ಅಧಃಪತನವನ್ನು ಸೂಚಿಸುವಂತಿದೆ.

ಈ ಆಧುನಿಕ ಜಗತ್ತು ಅಥವಾ ಆಧುನಿಕ ವ್ಯವಸ್ಥೆ ಉಂಟುಮಾಡಿರುವ, ಉಂಟುಮಾಡುತ್ತಿರುವ ಕ್ಷೋಭೆಗಳು ಎಲ್ಲರಿಗೂ ಗೊತ್ತು.ಆದರೂ ಅದು ಒಡ್ಡುತ್ತಿರುವ ಆಮಿಷಗಳು,ಅದು ನೀಡುತ್ತಿರುವ ಬಳುವಳಿಗಳು ನಮ್ಮ ಬುದ್ಧಿಗೆ ಮಂಕು ಕವಿಸಿಬಿಟ್ಟಿವೆ.ಇದನ್ನು ಎದುರಿಸಬೇಕೆನ್ನುವ ಮನೋಭಾವವೇ ನಮ್ಮಲ್ಲಿ ಹುಟ್ಟಿಬರುತ್ತಿಲ್ಲ.ಯಾಕೆಂದರೆ ಆಧುನಿಕತೆ ನಮಗೆ ಮಾನಸಿಕವಾಗಿ ಬೇಕು.ಅದು ಕೊಡುವ ಸೌಕರ್ಯಗಳು ನಮಗೆ ಬೇಕು.ಆದರೆ ಸಾಮಾಜಿಕವಾಗಿ ಅದರ ವಿನಾಶದ ಮುಖ,ಅದರ ಕ್ರೌರ್ಯದ ಮುಖ ನಮಗೆ ಬೇಡ.ಸಾಹಿತಿಗಳೂ ಈ ದೌರ್ಬಲ್ಯಗಳಿಂದ ಹೊರತಾಗಿಲ್ಲ.ಇಂತಹ ಮನಸ್ಸು ಏನನ್ನು ಹೇಳುತ್ತದೆ ? ಏನನ್ನು ಸೃಷ್ಟಿಸುತ್ತದೆ ?

ಹೀಗೆ ವರ್ತಮಾನದ ಭೀಕರ ಸ್ಥಿತಿಯಲ್ಲಿ ನಾವಿಂದು ಬದುಕುತ್ತಿದ್ದೇವೆ.ಜಾತಿ, ಧರ್ಮ, ಆಧುನಿಕತೆ ಇವೆಲ್ಲವೂ ರಾಕ್ಷಸರ ಹಾಗೆ ಒಂದೊಂದು ಕಡೆ ನಿಂತು ನಮ್ಮ ಸೃಜನಶೀಲತೆಯನ್ನೂ, ಕ್ರಿಯಾಶೀಲತೆಯನ್ನೂ ನಿಯಂತ್ರಿಸುತ್ತಿರುವ ಸಂದರ್ಭದಲ್ಲಿ ತನ್ನ ತೊಳಲಾಟಗಳನ್ನು,ಸೃಜನಶೀಲತೆಯನ್ನು ಯಾವ ರೀತಿಯಲ್ಲಿ ವ್ಯಕ್ತಪಡಿಸಲಿ ಎಂಬ ಚಿಂತೆ ಸಾಹಿತಿಗಳನ್ನು ಕಾಡಿದೆ.ಬಾಹ್ಯ ಒತ್ತಡಗಳು ಅಧಿಕವಾಗುತ್ತ ಹೋದ ಹಾಗೆ ಮನುಷ್ಯ ಅಂತರ್ಮುಖಿಯಾಗುವುದು ಹೆಚ್ಚು.ಸಮಕಾಲೀನ ಸಾಹಿತ್ಯವೂ ಈ ದಿಕ್ಕಿನಲ್ಲಿಯೇ ಚಲಿಸುತ್ತಿರುವಂತೆ ಕಾಣುತ್ತಿದೆ.ಸಾಹಿತ್ಯ ಸಮಾಜ ಮುಖಿಯಾಗುವ ಬದಲು ಅಂತರ್ಮುಖೀ ಸಂವೇದನೆಯ ಕಡೆಗೆ ಚಲಿಸುತ್ತಿರುವಂತೆ ತೋರುತ್ತಿದೆ.ಎಪ್ಪತ್ತರ ದಶಕದಿಂದೀಚೆಗೆ ಬಂದ ಕಾವ್ಯಪಂಥಗಳೆಲ್ಲವೂ ವಿಭಿನ್ನ ದೃಷ್ಟಿಕೋನವಿಟ್ಟುಕೊಂಡು ಸಮಾಜಮುಖಿಯಾಗಿ ಬೆಳೆದಿದ್ದವು.ಸಮಾಜದ ಮೌಲ್ಯಗಳನ್ನು ಪ್ರಶ್ನಿಸುವ, ಚಿಂತಿಸುವ ಮತ್ತೆ ಹೊಸದನ್ನು ರೂಪಿಸುವ ಹೀಗೆ ಸಾಮಾಜಿಕ ನೆಲೆಯಲ್ಲಿ ಅರ್ಥಪೂರ್ಣ ಬದುಕನ್ನು ಶೋಧಿಸುವ ಪ್ರಕ್ರಿಯೆ ಅಲ್ಲಿ ಕಂಡುಬಂದಿದ್ದವು. ಆದರೆ ಪ್ರಸ್ತುತ ಕನ್ನಡ ಸಾಹಿತ್ಯ ಇದರ ವಿರುದ್ಧ ದಿಕ್ಕಿನಲ್ಲಿ ಹೋಗುತ್ತಿದೆ. ಅಂತರ್ಮುಖಿಧಾರೆಯ ಮೂಲಕ ತನ್ನ ತೊಳಲಾಟಗಳನ್ನು ಹೇಳುವ, ತನ್ನ ಸಂವೇದನೆಗಳನ್ನು ವ್ಯಕ್ತಪಡಿಸುವ ಆ ಮೂಲಕ ತನ್ನ ಸ್ವಂತಿಕೆಯನ್ನು ಶೋಧಿಸುವ ದೃಷ್ಟಿಕೋನ ಇಂದು ಕಂಡುಬರುತ್ತಿದೆ.

ಕಳೆದುಕೊಂಡ ಮೌಲ್ಯಗಳ,ಸಂಸ್ಕೃತಿಯ ಹುಡುಕಾಟ,ಆ ಮೂಲಕ ತನ್ನ ಸ್ವಂತಿಕೆಯ, ಭಾರತೀಯತೆಯ ಹುಡುಕಾಟ ಸಮಕಾಲೀನ ಕನ್ನಡ ಸಾಹಿತ್ಯದ ವೈಚಾರಿಕ ನೆಲೆಯೂ ಆಗಿದೆ. ಅಂತರ್ಮುಖಿ ಧಾರೆಯ ಮೂಲಕ ಇದನ್ನು ಹುಡುಕುವ ಕೆಲಸ ಇಂದು ಶುರುವಾಗಿದೆ.ಈ ಹುಡುಕಾಟ ವರ್ತಮಾನದ

ಮೂಲಕವಲ್ಲ.ಬದಲಾಗಿ ಭೂತಕಾಲಕ್ಕೆ ಹೋಗುವ ಮೂಲಕ.ತಮ್ಮ ಭೂತಕ್ಕೆ ಹೋಗುವ ಮೂಲಕ ತಮ್ಮ Identity ಯ ಶೋಧನೆ ಮಾಡುವ ಕೆಲಸದಲ್ಲಿ ಕೆಲವು ಸಾಹಿತಿಗಳು ಇಂದು ಗಂಭೀರವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.ಹಳೆಯ ಮೌಲ್ಯಗಳನ್ನು ಪ್ರೀತಿಸುವುದು, ಆರಾಧಿಸುವುದು, ಪುನರ್‌ಸೃಷ್ಟಿಸುವುದು ಇಲ್ಲಿ ಕಾಣುವ ಮುಖ್ಯ ಅಂಶವಾಗಿದೆ.ಈ ಭೂತಕ್ಕೆ ಹೋಗುವ ಕ್ರಮ ಆಧುನಿಕತೆಯಿಂದ,ಆಧುನಿಕ ಜಗತ್ತಿನ ವಿಧ್ವಂಸಕ ನೆಲೆಯಿಂದ ಪಾರಾಗುವ ಕ್ರಮವೂ ಹೌದು.ಆಧುನಿಕತೆಗೆ ಮುಖಾಮುಖಿಯಾಗಿ ಈ ರೀತಿಯ ಹುಡುಕಾಟ ನಡೆಯುತ್ತಿಲ್ಲ.ಯಾಕೆಂದರೆ ಆಧುನಿಕತೆಯನ್ನು ದಿಟ್ಟತನದಿಂದ ಎದುರಿಸಬಲ್ಲ ಧೈರ್ಯವನ್ನಾಗಲೀ,ನೈತಿಕತೆಯನ್ನಾಗಲೀ ನಾವಿಂದು ಉಳಿಸಿಕೊಂಡಿಲ್ಲ. ಆದರೆ ಇದರ ವಿನಾಶದ ನೆಪದಲ್ಲಿ ನಮಗೆ ನಮ್ಮ ಭೂತ ಬೇಕಾಗಿದೆ.ಸದ್ಯದ ಸಾಮಾಜಿಕ ಬಂಧನಗಳಿಂದ ಪಾರಾಗಲು ನಮಗೆ ನಮ್ಮ ಭೂತ ಬೇಕಾಗಿದೆ.ಇಂತಹ ಮನಸ್ಥಿತಿಯಲ್ಲಿಯೇ ಸಮಕಾಲೀನ ಸೃಜನಶೀಲತೆ ತೊಡಗಿಕೊಳ್ಳುತ್ತದೆ.ಇಲ್ಲವಾಗಿದ್ದಲ್ಲಿ ದೂರದರ್ಶನದಂತಹ ಜಾಲದಲ್ಲಿ ಪುರಾಣಸಂಬಂಧಿ ಧಾರಾವಾಹಿಗಳು ಜನಪ್ರಿಯಗೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಭೂತವನ್ನು ಮತ್ತೆ ಮತ್ತೆ ನೋಡುವ, ಹೊಸದರ್ಶನವನ್ನು ಕಾಣುವ, ಆ ಮೂಲಕ ತನ್ನ ಭಾರತೀಯವಾದ ವ್ಯಕ್ತಿತ್ವವೊಂದನ್ನು ಶೋಧಿಸಿಕೊಳ್ಳುವುದು ಸಮಕಾಲೀನ ಜಗತ್ತಿಗೆ ಅನಿವಾರ್ಯವಾದ ಸಂಗತಿ ಆಗಿದೆ.ಕಳೆದುಹೋಗಿರುವ ಸಂಸ್ಕೃತಿಯಲ್ಲಿದ್ದ ಚಲನಶೀಲತೆಯನ್ನು ಮತ್ತು ಚೈತನ್ಯಶೀಲತೆಯನ್ನು ಮತ್ತೆ ವೈಭವೀಕರಿಸುವ ಮೂಲಕ ನಮ್ಮನ್ನು ನಾವು ಕಂಡುಕೊಳ್ಳುವ ತುರ್ತು ಸಾಹಿತ್ಯದಲ್ಲಿ ಕಂಡು ಬರುತ್ತಿದೆ.ಇದು ಯಾವ ರೀತಿಯಲ್ಲಿ ಬಂದಿದೆ ಎಂಬುದನ್ನು ಕೆಲವು ಸಾಹಿತಿಗಳ ಉದಾಹರಣೆಯ ಮೂಲಕ ವಿವರಿಸಬಹುದು.

ಈ ಭೂತಕ್ಕೆ ಹೋಗುವ ಕ್ರಿಯೆಯಲ್ಲಿ ಮುಖ್ಯವಾಗಿ ಎರಡು ರೀತಿಯಾಗಿಕಾಣುತ್ತೇವೆ. ವಿಶ್ಲೇಷಣೆಯ ಅನುಕೂಲದ ದೃಷ್ಟಿಯಿಂದ ಈ ಎರಡು ರೀತಿಗಳನ್ನು ಗುರುತಿಸಲಾಗಿದೆ.

೧. ನಾವು ಮೂಢನಂಬಿಕೆಗಳೆಂದು ನಿರಾಕರಿಸಿದ ನಮ್ಮ ದೈನಂದಿನ ಬದುಕಿನಲ್ಲಿ ಕಂಡ ಹಲವಾರು ಸಂಗತಿಗಳಿಗೆ ಮತ್ತೆ ಜೀವಕೊಡುವುದು.ಪರಿಸರದ ಒಡಲೊಳಗೆ ಕಾಣುವ,ಕಂಡ ವಿಸ್ಮಯಗಳಲ್ಲಿ ಹೊಸ ದರ್ಶನವನ್ನು ಕಾಣುವುದು.ಇಲ್ಲಿ ಪರಿಸರ ಕೇವಲ ಪ್ರಾಕೃತಿಕ ಪರಿಸರ ಆಗಿರದೆ ನಾವು ಬೆಳೆದುಬಂದ ಪರಿಸರವೂ ಆಗಬಹುದು.ಅಲ್ಲಿ ಕಂಡ ನಂಬಿಕೆಗಳು,ಆಚರಣೆಗಳು,ಮೌಲ್ಯಗಳು ಇವುಗಳನ್ನು ಮತ್ತೆ ವಿಶ್ಲೇಷಣೆಗೆ ಒಳಪಡಿಸುವುದು.

೨. ಅವೈದಿಕ ಧಾರೆಯಲ್ಲಿ ಅಡಗಿರುವ ಅನೇಕ ಮಿತ್‌ಗಳಿಗೆ ಹೋಗುವುದು. ಪ್ರೀತಿ, ಮುಗ್ಧತೆ, ಆರಾಧನೆಯ ಗುಣ,ಅಸಾಮಾನ್ಯ ವ್ಯಕ್ತಿತ್ವ ಕಲಾಸಕ್ತಿ,ಇವೆಲ್ಲ ಈ ಮಿತ್‌ನಲ್ಲಿ ಕಾಣುವ ಮುಖ್ಯ ಗುಣಗಳು. ಇವನ್ನು ಪುನರ್‌ಸೃಷ್ಟಿಸುವ ಮೂಲಕ ಈ ಮೌಲ್ಯಗಳನ್ನು ವೈಭವೀಕರಿಸುವುದು ಮತ್ತು ಆ ಮೂಲಕ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುವುದು.

ಇಲ್ಲಿ ಗುರುತಿಸಲಾದ ಮೊದಲನೆಯ ದಾರಿಯಲ್ಲಿ ತೇಜಸ್ವಿ, ಅನಂತಮೂರ್ತಿ, ಲಂಕೇಶ್, ಯಶವಂತ ಚಿತ್ತಾಲ,ಜಯಂತ ಕಾಯ್ಕಿಣಿ ಮೊದಲಾದವರು ಕಾಣಿಸುತ್ತಾರೆ.ಇವರ ಬರಹಗಳಲ್ಲಿ ಈ ಗುಣವನ್ನು ಕಾಣಬಹುದಾಗಿದೆ. ಆಧುನಿಕತೆಯಿಂದ ನಾಶವಾಗಿರುವ ಪರಿಸರ, ಅಷ್ಟೇ ಮನುಷ್ಯನ ವ್ಯಕ್ತಿತ್ವ ಇವುಗಳನ್ನು ವಿವರಿಸುವ ಮೂಲಕ ಭೂತದಲ್ಲಿ ಭಾರತೀಯವಾದ ,ಮಾನವನ ಶುದ್ಧರೂಪದ ವ್ಯಕ್ತಿತ್ವವನ್ನು ದಾರ್ಶನೀಕರಿಸುವ ಶೋಧನೆ ಇವರ ಕತೆಗಳಲ್ಲಿ ಕಂಡುಬರುತ್ತದೆ . ಆಧುನಿಕತೆಯಿಂದಾಗಿ

ಏನನ್ನೋ ಕಳೆದುಕೊಂಡಿದ್ದೇವೆ. ಅದು ಬಹಳ ಮುಖ್ಯವಾದದ್ದು ಎಂಬ ದೃಷ್ಟಿಕೋನ ಕತೆಗಳಲ್ಲಿ ಬೆಳೆಯುತ್ತಾ ಹೋಗುತ್ತದೆ. ಇದಕ್ಕೆ ತೇಜಸ್ವಿಯವರ 'ಪರಿಸರದ ಕತೆ' ಪುಸ್ತಕ ಮುಖ್ಯ ಉದಾಹರಣೆಯಾಗಿದೆ. ತಾವು ತಮ್ಮ ಬಾಲ್ಯದಲ್ಲಿ ಪರಿಸರದ ಒಡಲೊಳಗೆ ಕಂಡ ಅನೇಕ ವಿಸ್ಮಯಕರವಾದ ಘಟನೆಗಳಿಗೆ ತೇಜಸ್ವಿ ಇಲ್ಲ ಹೊಸದರ್ಶನವನ್ನು ಕೊಟ್ಟಿದ್ದಾರೆ. ಬಾಲ್ಯದಲ್ಲಿ ಕಂಡ ವಿಸ್ಮಯಗಳು, ಕೇಳಿದ ವಿಚಾರಗಳು, ನೋಡಿದ ಘಟನೆಗಳು ಇವೆಲ್ಲವೂ ಲೇಖಕರ ತಾರ್ಕಿಕ ಪ್ರಪಂಚವನ್ನು ಮುರಿದು ಬಿಡುವಂತಿವೆ. ಈ ಪುಸ್ತಕದಲ್ಲಿ ಬರುವ 'ಎಂಗ್ಟನ ಪುಂಗಿ' ಮತ್ತು 'ಮೂಲಿಕೆ ಬಳ್ಳಿಯ ಸುತ್ತ' ಕತೆಗಳನ್ನು ಇಲ್ಲಿ ಮುಖ್ಯವಾಗಿಟ್ಟುಕೊಂಡು ಚರ್ಚಿಸಬಯಸುತ್ತೇನೆ. 'ಎಂಗ್ಟನ ಪುಂಗಿ'ಯಲ್ಲಿ ಎಂಗ್ಟ ಪುಂಗಿ ಊದಿ ಹಾವು ಹಿಡಿಯುವುದು, ಲೇಖಕರ ವೈಚಾರಿಕ ಪ್ರಜ್ಞೆಗೆ ಸುಳ್ಳೆಂದು ಅನಿಸಿದರೂ, ಮೂಢನಂಬಿಕೆಯೆಂದು ಭಾಸವಾದರೂ ಆತ ಅದಕ್ಕೆ ಕೊಡುವ ವಿಶ್ಲೇಷಣೆ ಲೇಖಕರ ತರ್ಕವನ್ನು ಮೀರಿನಿಲ್ಲುತ್ತದೆ. ಒಂದು ಕಡೆ " ಅಲ್ಲಾ ಸ್ವಾಮಿ ನಮ್ಮಂಗೆ ಕಿವಿ ಇಲ್ದಿದ್ರೆ ಶಬ್ದಾನೆ ಕೇಳಿಸೋಲ್ವ ಹಾವಿಗೆ? ಹಂಗಾರೆ, ನಮ್ಮಂಗೆ ಕಾಲಿಲ್ಲ ಹಾಗಂತ ಓಡಾಡೋಕೆ ಬರೋದಿಲ್ವ ಹಾವಿಗೆ? ಅದೆಲ್ಲಾ ಆ ಸ್ವಾಮಿ ಮಾಡಿರೋ ಇಚಿತ್ರ ಸ್ವಾಮಿ. ಇಷ್ಟೊಂದು ತಿಳಿದೋರು, ಓದಿದೋರು, ಹಳ್ಳಿ ಜನಗಳ ಹಂಗೆ ಮಾತಾಡಿದರೆ ಹೇಗೆ ಸ್ವಾಮಿ" ಎಂದು ಎಂಗ್ಟ ಹೇಳುತ್ತಾನೆ. ಹೀಗೆ ತನ್ನ ಪ್ರತಿಯೊಂದು ಕ್ರಿಯೆಗೂ ತರ್ಕಬದ್ಧ ಮಂಡನೆ ಮಾಡುತ್ತಾ ಹೋಗುವ ಎಂಗ್ಟ ಲೇಖಕರ ಮನಸ್ಸನ್ನು ಆವರಿಸುತ್ತಾ ಹೋಗುತ್ತಾನೆ. ಲೇಖಕರು ಒಂದು ಕಡೆಗೆ ಹೇಳುವ ಈ ಮಾತುಗಳು ಎಂಗ್ಟನ ವ್ಯಕ್ತಿತ್ವವನ್ನು ಸಕಾರಾತ್ಮಕವಾಗಿ ಕಾಣಬಯಸುತ್ತವೆ -" ನಾಗರೀಕತೆ ಮುಂದುವರಿಯುತ್ತಾ ಎಂಗ್ಟನ ಕುಲಕಸುಬುಗಳು, ಕೈ ಚಳಕಗಳು ನಿಧಾನವಾಗಿ ನಿರುಪಯುಕ್ತವಾಗುತ್ತಿದ್ದವು. ಸರ್ಕಾರ ಹಾವಿನ ಚರ್ಮವನ್ನು ನಿಷೇಧಿಸಿದ ಮೇಲೆ ಅವನ ಚರ್ಮಗಳಿಗೆ ದುಡ್ಡು ಸಿಗುತ್ತಿರಲಿಲ್ಲ. ಅವನ ಚಕ್ರಾಣಿ ಬೇರು, ಚಿತ್ರಮೂಲದ ಬೇರು, ಸರ್ಪಗಂಧಿ, ಅಳಲೇಕಾಯಿಗಳೂ ವಿಲಾಯತಿ ಔಷಧದ ಎದುರು ಗಿರಾಕಿ ಕಳೆದುಕೊಂಡಿದ್ದವು" ಎನ್ನುವ ಮಾತುಗಳಾಗಲೀ, "ಭಾರತದ ಕಾಡುಗಳೂ ಮೃಗ ಪಕ್ಷಿಗಳೂ ನದಿ ಝರಿಗಳೂ ತಾಳ್ಮೆಯಿಂದ ತಮ್ಮ ಅವಸಾನವನ್ನು ಕಾಯುತ್ತಿರುವಂತೆಯೇ ಎಂಗ್ಟನೂ ಕಾಯುತ್ತಿದ್ದ" ಎನ್ನುವ ಮಾತುಗಳಲ್ಲಾಗಲೀ, ಕಳೆದು ಹೋಗುತ್ತಿರುವ ಭಾರತೀಯತೆಯ ಸತ್ವಗಳ ಬಗ್ಗೆ ಲೇಖಕರ ವಿಷಾದವನ್ನು ಕಾಣಬಹುದಾಗಿದೆ. ಲೇಖಕರ ಮೇಲಿನ ಮಾತುಗಳು ಭಾರತದ ಒಟ್ಟು ಪರಿಸ್ಥಿತಿಯನ್ನು ತೋರಿಸುತ್ತವೆ. ಇಂದು ಅನೇಕ ಕುಲಕಸುಬುಗಳು ಆಧುನಿಕತೆಯಿಂದಾಗಿ ಮರೆಯಾಗಿವೆ ಮತ್ತು ಕೆಲವು ವೈಚಾರಿಕ ದೃಷ್ಟಿಕೋನದಿಂದಾಗಿ ಅಲಕ್ಷ್ಯಕ್ಕೂ ಒಳಗಾಗಿವೆ. ಇದರಿಂದಾಗಿ ಅದನ್ನು ನಂಬಿ ಜೀವಿಸುತ್ತಿದ್ದ ವ್ಯಕ್ತಿಗಳ ಬದುಕು ಬೀದಿಪಾಲಾಗಿದೆ. ಇಂದು ಇಂತಹ ಕುಲಕಸುಬುಗಳನ್ನು ನಾವು ಕಾಣಲಾರೆವು. ಆದರೆ ಅವುಗಳೂ ಕೂಡ ವಿಶ್ಲೇಷಣೆಗೆ ಅರ್ಹವಾದುವು ಎಂಬ ನಂಬಿಕೆ ಇಲ್ಲಿ ಕಾಣಬಹುದಾಗಿದೆ. ಇದೇ ರೀತಿಯ ದೃಷ್ಟಿಕೋನ 'ಮೂಲಿಕೆ ಬಳ್ಳಿಯ ಸುತ್ತ'ಎಂಬ ಲೇಖನದಲ್ಲಿಯೂ ಇದೆ. ಇದರ ಬಗ್ಗೆ ಲೇಖಕರು ಒಂದು ಕಡೆ -"ಇವತ್ತು ಈ ಕಾಡುಗಳೂ ನಾಶವಾಗುತ್ತಿವೆ. ಇದರ ವಿಷಯ ತಿಳಿದವರೂ ಒಬ್ಬೊಬ್ಬರಾಗಿ ನಿರ್ಗಮಿಸುತ್ತಿದ್ದಾರೆ. ಇವೆರಡರಲ್ಲಿ ಯಾರೊಬ್ಬರು ಇಲ್ಲವಾದರೂ ಇನ್ನೊಂದು ನಿರುಪಯುಕ್ತವಾಗುತ್ತೆ. ಈ ವಿಷಯಗಳನ್ನೆಲ್ಲ ಯಾರಿಗಾದರೂ ತಿಳಿಸುವುದು ಒಳ್ಳೆಯದೆಂದು ನನಗೆ ತವಕ. ಈ ಮೂಲಿಕೆಗಳ ಅಸಾಧಾರಣ ಗುಣಗಳ ಬಗ್ಗೆ ನನ್ನ ವೈದ್ಯ ಮಿತ್ರರೊಂದಿಗೆ ಪ್ರಸ್ತಾಪಿಸಿದಾಗೆಲ್ಲ ಅವರು ಕೋಪಿಸಿಕೊಂಡು ನನ್ನನ್ನು ಅಜ್ಞಾನಿ ಎಂದು ಜರೆದು ಜಗಳವನ್ನೆ ಆಡುತ್ತಾರೆ. ನಾಟವೈದ್ಯರೂ ಸಹ ಈ ವಿಜ್ಞಾನಿ ವೈದ್ಯರುಗಳ ಬಗ್ಗೆ ಅಷ್ಟೇ ತಿರಸ್ಕಾರದ ಮಾತುಗಳನ್ನಾಡುತ್ತಾರೆ.

ತಮ್ಮ ತಿಳುವಳಿಕೆಯನ್ನು ತಮ್ಮೊಂದಿಗೆ ಗೋರಿಗೆ ತೆಗೆದುಕೊಂಡು ಹೋಗಲು ಅವರು ಎಂದೋ ತಯ್ಯಾರಾಗಿದ್ದಾರೆ.ಅನೇಕರು ಅದ್ಭುತ ಔಷಧಿಗಳು ಗೊತ್ತಿದ್ದೂ ಬೇಕೆಂದೇ ಯಾರಿಗೂ ಹೇಳದೆ ಸತ್ತೇ ಹೋಗಿದ್ದಾರೆ.ಈವತ್ತಿಗೂ ಮನುಕುಲವನ್ನು ಕಾಡುತ್ತಿರುವ ಅನೇಕ ಮರಣಾಂತಿಕ ರೋಗಗಳಿಗೆ ಇದ್ದ ಔಷಧಿಗಳು ಹೀಗೆ ಕಣ್ಮರೆಯಾಗಿ ಅಪಾರ ನಷ್ಟವಾಗಿದೆಯೆಂದು ನಾನು ದೃಢವಾಗಿ ನಂಬಿದ್ದೇನೆ.ಮನುಷ್ಯ ಚಂದ್ರಮಂಡಲಕ್ಕೆ ಹೋಗಿಬಂದರೂ,ಕ್ಷುದ್ರಬುದ್ಧಿ, ಅಂಧಶ್ರದ್ಧೆಗಳನ್ನು ಮೀರಲು ಸಾಧ್ಯವಾಗಿಲ್ಲ'' ಎಂದು ಹೇಳುವ ಮಾತುಗಳಲ್ಲಾಗಲೀ, ಇನ್ನೊಂದು ಕಡೆ ಹೇಳುವ ''ಈ ನಾಟಿವೈದ್ಯರ ಬಲವಾದ ಒಂದು ನಂಬಿಕೆ ಎಂದರೆ ಔಷಧಿ ಯಾವುದೆಂದು ಹೇಳಿಬಿಟ್ಟರೆ ಔಷಧದ ಗುಣ ನಷ್ಟವಾಗಿಬಿಡುತ್ತೆ ಎನ್ನುವುದು. ಈ ನಂಬುಗೆಯ ದೆಸೆಯಿಂದ ಇಂದು ಭಾರತದ ನಾಟಿವೈದ್ಯ ಪದ್ಧತಿಯೇ ನಾಶವಾಗುವುದರಲ್ಲಿದೆ'' ಎಂಬ ಮಾತುಗಳಲ್ಲಾಗಲೀ ಕಳೆದುಹೋಗುತ್ತಿರುವ ಮೌಲ್ಯಗಳ ಬಗ್ಗೆ ವಿಷಾದವನ್ನು ಕಾಣಬಹುದಾಗಿದೆ.

ತೇಜಸ್ವಿಯವರ ಈ ದೃಷ್ಟಿಕೋನವೂ ಕೂಡಾ ಕೆಲವೊಮ್ಮೆ ಅತಿರೇಕಕ್ಕೆ ಹೋದಂತೆ ತೋರುತ್ತದೆ. ಆಧುನಿಕತೆಯ ವಿನಾಶಕಾರಿ ಸ್ವರೂಪವನ್ನಷ್ಟೇ ವರ್ಣಿಸ ಹೊರಟಾಗೆಲ್ಲ ತೇಜಸ್ವಿ ಸಿನಿಕರಂತೆ ತೋರುತ್ತಾರೆ. ಆಧುನಿಕ ಜಗತ್ತು ವಿನಾಶಕಾರಿಯದದ್ದು ಇದರಿಂದ ಏನೂ ಪ್ರಯೋಜನವಿಲ್ಲ ಎಂಬ ಸಿನಿಕತೆ ಇಲ್ಲಿ ಕಾಣಿಸುತ್ತದೆ.ಅವರ 'ಕಿರಗೂರಿನ ಗಯ್ಯಾಳಿಗಳು' ಕತೆಯಲ್ಲಿಯೂ,'ಜುಗಾರಿಕ್ರಾಸ್' ಕಾದಂಬರಿಯಲ್ಲಿಯೂ ಈ ತೊಂದರೆಗಳಿವೆ.ಆಧುನಿಕತೆಯು ವಿನಾಶಕಾರಿಯಾದದ್ದು ಎಂಬ ಭಯವನ್ನು ಸೃಷ್ಟಿಸುವ ತೇಜಸ್ವಿಯವರಿಗೆ ಅದರ ಭಯಾನಕ ಸ್ವರೂಪವನ್ನು ಪರಿಣಾಮಕಾರಿಯಾಗಿ ಮೂಡಿಸಲು ಸಾಧ್ಯವಾಗಿಲ್ಲ.'ಜುಗಾರಿ ಕ್ರಾಸ್' ಕಾದಂಬರಿಯ ಆರಂಭದ ಮುನ್ನುಡಿಯಲ್ಲಿ ಲೇಖಕರು ಭಾರತದಲ್ಲಿ ನಾಶವಾಗುತ್ತಿರುವ ಕಾಡಿನ ಬಗ್ಗೆ, ಮರಗಳ ಕಳ್ಳಸಾಗಾಣಿಕೆಯ ಬಗ್ಗೆ, ಇದಕ್ಕೆ ಬೆಂಬಲವಾಗಿರುವ ವ್ಯವಸ್ಥೆಯ ಬಗ್ಗೆ,ಜನೋಪಯೋಗಿ ಕೆಲಸಗಳ ಹಿಂದೆ ನಡೆಯುವ ವ್ಯಾಪಕ ಭ್ರಷ್ಟಾಚಾರದ ಬಗ್ಗೆ ಹೇಳಿದ್ದಾರೆ.ಇದು ಈ ಕಾದಂಬರಿಯ ವಸ್ತು ಕೂಡಾ ಆಗಿದೆ.ಒಂದು ಪುಟ್ಟ ಹಳ್ಳಿಯಲ್ಲಿ ನಡೆಯುವ ಕಳ್ಳವ್ಯವಹಾರ ಮತ್ತು ಅದಕ್ಕೆ ಹಿನ್ನೆಲೆಯಾಗಿ ಇರುವ ಅಂತರರಾಷ್ಟ್ರೀಯ ಜಾಲ,ಇವು ಸಮಾಜದಲ್ಲಿ ಉಂಟುಮಾಡುವ ಆತಂಕದ ಒಟ್ಟು ಪರಿಸ್ಥಿತಿ ಕಾದಂಬರಿಯ ನೆಲೆಯಾಗಿದೆ.'ಜುಗಾರಿಕ್ರಾಸ್' ಬೆಲೆಬಾಳುವ ಹರಳುಗಳ ಕಳ್ಳಸಾಗಣೆಯ ಕೇಂದ್ರ ಬಿಂದುವಾಗಿದೆ .ಇದರ ರಹಸ್ಯ ಅಡಗಿರುವುದು ಗುರುರಾಜ ಕವಿಯ 'ದ್ವಿಸಂಧಾನ ಕಾವ್ಯಂ' ಎಂಬ ಕಾವ್ಯದಲ್ಲಿ.ಈ ರಹಸ್ಯವನ್ನು ಭೇದಿಸಹೊರಟ ನಾಯಕನಿಗೆ ಇದರ ಹಿಂದಿನ ಭಯಾನಕಸ್ವರೂಪದ ಅರಿವಾಗುತ್ತಾ ಹೋಗುತ್ತದೆ.ಇದು ಕೇವಲ ಜುಗಾರಿಕ್ರಾಸ್ ನಲ್ಲಿ ನಡೆಯುವ ಕತೆಯಲ್ಲ.ಭಾರತದ ಪ್ರತಿಯೊಂದು ಹಳ್ಳಿಗಳ ದುರಂತವೂ ಹೌದು ಎಂಬ ಸತ್ಯವನ್ನು ಕಾದಂಬರಿಯಲ್ಲಿ ಕಾಣಿಸಲಾಗಿದೆ.ಆದರೆ ಇಲ್ಲಿ ಆಧುನಿಕತೆಯನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಾಗದೆ ಭಯಾನಕ ಸ್ವರೂಪ ಹೆಚ್ಚು ಪರಿಣಾಮಕಾರಿಯಾಗಿ ಮೂಡುವುದಿಲ್ಲ. ಭೂತಕ್ಕೆ ಹೋದಾಗ ಕಾಣಿಸುವ ಬೆರಗಿನ ದಿವ್ಯದರ್ಶನ ಇಲ್ಲಿ ಕಾಣಿಸುವುದಿಲ್ಲ.

ಭೂತಕ್ಕೆ ಹೋಗುವ ಕ್ರಮ ಅನಂತಮೂರ್ತಿಯವರ ಕತೆಗಳಲ್ಲೂ ಕಾಣಿಸುತ್ತದೆ.ಆದರೆ ಇದು ತೇಜಸ್ವಿಯವರಿಗಿಂತ ಸ್ವಲ್ಪ ಮಟ್ಟಿಗೆ ಭಿನ್ನ.ತಾವು ಹಿಂದೆ ನಿರಾಕರಿಸಿದ ವೈದಿಕ ಸಾಂಪ್ರದಾಯಿಕ ಜಗತ್ತು ವರ್ತಮಾನದಲ್ಲಿ ಅನಂತಮೂರ್ತಿಯವರಿಗೆ ಅಪ್ಯಾಯಮಾನವಾಗಿ ಕಾಣುತ್ತಿದೆ.ಆಧುನಿಕತೆಯಿಂದಾಗಿ ಕಳೆದುಕೊಂಡ ವ್ಯವಸ್ಥೆಯ ಬಗ್ಗೆ ಲೇಖಕರಿಗೆ ವಿಷಾದವಿದೆ.ಇದನ್ನು ಅವರ 'ಸೂರ್ಯನ ಕುದುರೆ' ಕತೆಯಲ್ಲಿ

ಕಾಣಬಹುದಾಗಿದೆ. ಈ ಕತೆಯ ನಾಯಕ ಹಡೆ ವೆಂಕಟ ಸಾಂಪ್ರದಾಯಿಕ ಮನೆತನದಲ್ಲಿ ಬೆಳೆದವನು. ಮಾನವೀಯತೆ, ಕರುಣೆ, ಪ್ರೀತಿ, ಆರ್ದ್ರತೆ, ಪರಿಸರ ಪ್ರೇಮ, ಸಾಂಪ್ರದಾಯಿಕತೆ, ಮುಗ್ಧ ನಡುವಳಿಕೆ ಇವೆಲ್ಲವೂ ಆತನ ಗುಣಗಳು. ಹಾಗೆಯೇ ಈತನಿಗೆ ಇನ್ನೊಂದು ಮುಖವೂ ಇದೆ. ಯಾವುದೇ ವಿಷಯವನ್ನಾದರೂ ಗಂಭೀರವಾಗಿ ತೆಗೆದುಕೊಳ್ಳದೇ ಇರುವ ಉಡಾಫೆಯ ಗುಣ ಈತನಲ್ಲಿದೆ. ಈತನ ಮಗ ಸುಬ್ಬ ಇವನಿಗಿಂತ ವಿರುದ್ಧವಾದ ವ್ಯಕ್ತಿತ್ವವನ್ನು ಹೊಂದಿದವನು. ಸಿಟ್ಟು, ಕ್ರೌರ್ಯ, ಸಿಡುಕುತನ ಈತನ ಮುಖ್ಯ ಗುಣಗಳು. ಕತೆಯ ನಿರೂಪಕ ಸಾಂಪ್ರದಾಯಿಕ ಮನೆತನದಲ್ಲಿ ಬೆಳೆದವನಾದರೂ ಅದರಿಂದ ಬೇರಿಯಾಗಿ ವೈಚಾರಿಕ ದೃಷ್ಟಿಕೋನವನ್ನು ಬೆಳೆಸಿಕೊಂಡವನು. ಇಲ್ಲಿ ಲೇಖಕರಿಗೆ ಕೊನೆಗೂ ಮುಖ್ಯವಾಗುವುದು ಹಡೆವೆಂಕಟನ ವ್ಯಕ್ತಿತ್ವವೇ. ಆತನ ವ್ಯಕ್ತಿತ್ವ ಲೇಖಕರ ಮನಸನ್ನು ಗೆಲ್ಲುತ್ತದೆ. ವೆಂಕಟನ ಉದಾತ್ತತೆ, ಉಡಾಫೆಗುಣದ ಬಗ್ಗೆ ಇಲ್ಲಿ ಟೀಕೆಯಿದ್ದರೂ ಲೇಖಕರಿಗೆ ಅದು ದೌರ್ಬಲ್ಯವಾಗಿ ಕಾಣದೇ ಆತನ ಮುಗ್ಧತೆ, ಆರ್ದ್ರತೆ, ಪ್ರೀತಿ, ಚೈತನ್ಯಶೀಲತೆ, ಇವೇ ಮೊದಲಾದ ಗುಣಗಳೇ ಮುಖ್ಯವಾಗುತ್ತವೆ. ವೆಂಕಟನ ಸಾಂಪ್ರದಾಯಿಕ ವ್ಯಕ್ತಿತ್ವದಲ್ಲಿ ಲೇಖಕರು ಚೈತನ್ಯಶೀಲತೆಯನ್ನು ಕಾಣುತ್ತಾರೆ. ವೈಚಾರಿಕತೆಯಿಂದ ತಿರಸ್ಕರಿಸಲ್ಪಟ್ಟ ಸಾಂಪ್ರದಾಯಕ ಭೂತದಲ್ಲಿ ಅನಂತಮೂರ್ತಿಯವರು ಬದುಕಿನ ಅರ್ಥಪೂರ್ಣತೆಯನ್ನು ಕಾಣುತ್ತಾರೆ. ಹಾಗೆಯೇ 'ಜರಾತ್ಕಾರು' ಎಂಬ ಕತೆಯಲ್ಲಿಯೂ ಕಟ್ಟುಪಾಡುಗಳಿದ್ದರೂ ಗೃಹಸ್ಥಾಶ್ರಮ ಧರ್ಮ ಮನುಷ್ಯನ ಬದುಕನ್ನು ಕಾಪಾಡುತ್ತದೆ ಎಂಬ ನಂಬಿಕೆ ಇದೆ.

'ಭವ ' ಕಾದಂಬರಿ ಅನಂತಮೂರ್ತಿಯವರ ಮೇಲಿನ ಹುಡುಕಾಟದ ಮುಂದುವರಿದ ರೂಪದಂತೆ ಕಂಡರೂ 'ಸೂರ್ಯನ ಕುದುರೆ' ಕೊಡುವ ಗಾಢವಾದ ದರ್ಶನವನ್ನು ನೀಡುವುದಿಲ್ಲ. ಅಲ್ಲಿ ಕಾಣಿಸುವ ಕಲೆಗಾರಿಕೆ ಇಲ್ಲಿ ಕಾಣಿಸುವುದಿಲ್ಲ. 'ಸೂರ್ಯನ ಕುದುರೆ' ಕತೆಯಲ್ಲಿ ಸಾಂಪ್ರದಾಯಿಕ ಕುಟುಂಬದಲ್ಲಿ ಬೆಳೆದ ಹಡೆ ವೆಂಕಟನ ವ್ಯಕ್ತಿತ್ವ ತನ್ನೆಲ್ಲ ಲವಲವಿಕೆಯಲ್ಲಿ ನಮ್ಮನ್ನು ಆವರಿಸುತ್ತಾ ಹೋದರೆ ಇಲ್ಲಿನ ಪ್ರತಿಯೊಂದು ಪಾತ್ರ ತನ್ನ ದಿನಚರಿಯ ಪುಟಗಳನ್ನೂ ತಿರುವಿ ಹಾಕುತ್ತಾ ಹೋದಂತೆ ಪೊಳ್ಳಾಗುತ್ತಾ ಹೋಗುತ್ತವೆ. ನಮಗೆ ಅಸಹ್ಯವಾಗಿ ಕಾಣಿಸುತ್ತವೆ. ತನ್ನ ರಾಡಿಯಾದ ಹಳೆಯ ಬದುಕಿನ ಬಗ್ಗೆ ಪಶ್ಚಾತ್ತಾಪವನ್ನು ಅನುಭವಿಸುತ್ತಾ ಯಾತ್ರೆ ಹೊರಟ ವಿಶ್ವನಾಥ ಶಾಸ್ತ್ರಿ ಮತ್ತು ತನ್ನ ಬದುಕಿನ ಬೇರುಗಳನ್ನು ಹುಡುಕ ಹೊರಟ ದಿನಕರ ಇಬ್ಬರೂ ಭೇಟಿಯಾಗುವುದು ರೈಲಿನಲ್ಲಿ. ದಿನಕರನನ್ನು ರೈಲಿನಲ್ಲಿ ನೋಡಿದೊಡನೆ 'ಇವನು ಯಾರಿಗೆ ಹುಟ್ಟಿರಬಹುದು ' ಎಂಬ ಪ್ರಶ್ನೆ ಶಾಸ್ತ್ರಿಯನ್ನು ಕಾಡುತ್ತದೆ ! ತನಗೆ ಕೈಕೊಟ್ಟು ಕೇರಳದ ಕರುಣಾಕರ ಪಂಡಿತನೊಂದಿಗೆ ಓಡಿಹೋದ ತನ್ನ ಪತ್ನಿ ಸರೋಜಳ ಹೊಟ್ಟೆಯಲ್ಲಿ ಹುಟ್ಟಿರಬಹುದೆ ಎಂದು ಶಾಸ್ತ್ರಿ ಪ್ರಶ್ನಿಸಿಕೊಳ್ಳುತ್ತಾನೆ. ಇವನಿಗೆ ಮುಖಾಮುಖಿಯಾಗುವ ಶಬರಿಮಲೆಗೆ ಯಾತ್ರೆ ಹೊರಟ ದಿನಕರನೂ ಸ್ವಚ್ಛ ವ್ಯಕ್ತಿತ್ವವನ್ನು ಹೊಂದಿದವನಲ್ಲ. ಅವನೂ ತನ್ನ ಬೇರುಗಳನ್ನು ಅರಸುತ್ತಾ ಹೊರಟಿರುತ್ತಾನೆ. ಇಬ್ಬರೂ ಕಾಮದ ಕೊಚ್ಚೆಯಲ್ಲಿ ಮುಳುಗಿ ಮುಕ್ತಿ ಕಾಣದವರು. ದಿನಕರನನ್ನು ಕಾಡುವ ಹುಟ್ಟಿನ ಸಮಸ್ಯೆ ಇಲ್ಲಿಗೆ ನಿಲ್ಲದೆ ಮುಂದುವರಿದು ನಾರಾಯಣ ತಂತ್ರಿ ಎಂಬವನ ಮನೆಯಲ್ಲಿ ಮುಂದುವರಿಯುತ್ತದೆ. ಅಲ್ಲಿರುವ ಗಂಗೂಬಾಯಿಯ ಮಗ ಪ್ರಸಾದ ಯಾರಿಗೆ ಹುಟ್ಟಿರಬಹುದು ಎಂಬ ಗೊಂದಲ ಶುರುವಾಗಿ ಆತ ಸನ್ಯಾಸಿಯಾಗುವ ಮನೋಧರ್ಮವನ್ನು ಪ್ರಕಟಿಸುವುದರೊಂದಿಗೆ ಮುಕ್ತಾಯವಾಗುತ್ತದೆ ! ಭೂತದ ಬೇರುಗಳು ಗಟ್ಟಿಯಾಗಿಲ್ಲದ ಕಾರಣ ಶಾಸ್ತ್ರಿ ಮತ್ತು ದಿನಕರ ಇಬ್ಬರೂ ಮುಕ್ತಿಯನ್ನು ಕಾಣುವುದಿಲ್ಲ. ಅವರಿಗೆ ಭವದ ಬದುಕು ಬಂಧನವಾಗಿದೆ. ಅಂಥವರು ಪ್ರಸಾದನ ಮೂಲಕ

ಅರಿವನ್ನು ಪಡೆಯುತ್ತಾರೆ.ಅತಿಯಾದ ಲೈಂಗಿಕತೆಯಿಲ್ಲದ ಹದವಾದ ಪ್ರೇಮ ಮತ್ತು ಪಾರಮಾರ್ಥಿಕ ಕ್ರಿಯೆಗಳಿಂದ ಜೀನ್ಮುಕ್ತಿಯನ್ನು ಪಡೆಯಬಹುದು ಎಂಬ ಧೋರಣೆಯನ್ನು ಲೇಖಕರು ಇಲ್ಲಿ ವ್ಯಕ್ತಪಡಿಸಿದ್ದಾರೆ. ಭವದೊಳಗಿದ್ದೂ ಭವದ ಎಗ್ಗಿಲ್ಲದಂತೆ ಇರುವ ಪ್ರಸಾದನ ಗುಣ ಆಧುನಿಕತೆಯ ವಿರುದ್ಧ ದಿಕ್ಕಿನಲ್ಲಿ ಬೆಳೆಯುವುದನ್ನು ಸೂಚಿಸುವಂತಿದೆ.ಮತ್ತೆ ಭೂತದ ಸಾಂಪ್ರದಾಯಿಕ ಬೇರುಗಳೇ ಗಟ್ಟಿಯಾದದ್ದು ಎಂಬ ಧೋರಣೆಯನ್ನು ಇಲ್ಲಿ ಕಾಣಬಹುದಾಗಿದೆ.ಪ್ರಸಾದ ಯೋಗಸ್ಥಿತಿಯನ್ನು ಪಡೆಯುವುದು ಇದಕ್ಕೆ ಸಾಕ್ಷಿಯಾಗಿದೆ.

ಭೂತಕ್ಕೆ ಹೋಗುವ ಪ್ರಯತ್ನ ಯಶವಂತ ಚಿತ್ತಾಲರಲ್ಲಿಯೂ ಇದೆ.ಅವರ ಬರಹಗಳಲ್ಲಿಯೂ ಭೂತಕಾಲದ ಅನೇಕ ಅಸಂಗತವೆನಿಸುವ ಸಾಮಾನ್ಯ ಘಟನೆಗಳು ತಿರುವನ್ನು ಪಡೆದುಕೊಂಡು ಹೊಸ ದರ್ಶನವನ್ನು ನೀಡುತ್ತದೆ.ಈಚೆಗೆ ಬಂದ 'ಕುಮಟೆಗೆ ಬಂದಾ ಕಿಂದರಿಜೋಗಿ' ಕಥಾಸಂಕಲನದಲ್ಲಿ ಈ ಗುಣವಿದೆ.ಭೂತಕಾಲದ ಯಾವುದೋ ಸಂಗತಿಗಳು ಲೇಖಕರ ಮನಸ್ಸಿನಲ್ಲಿ ಕಾಡುವ ಪುರಾಣರೂಪವನ್ನು ಪಡೆದುಕೊಳ್ಳುತ್ತವೆ. ಉದಾಹರಣೆಗೆ ' ಕುಮಟೆಗೆ ಬಂದಾ ಕಿಂದರಿಜೋಗಿ ' ಕತೆಯಲ್ಲಿ ಅಮೇರಿಕಾದಲ್ಲಿ ಬೆಳಕಿನ ಸ್ವರೂಪದ ಬಗ್ಗೆ ಸಂಶೋಧನೆ ಮಾಡಿದ ಡಾ.ಕೆ.ಜಿ.ವರ್ಮಾ ಹಾಗೂ ಡಾ.ಕೆ.ವಿ.ವರ್ಮಾ ಎಂಬುವರಿಬ್ಬರು ಹನ್ನೆರಡುವರ್ಷದ ಹಿಂದೆ ಓಡಿಹೋದ ಕುಮಟೆಯ ಹತ್ತಿರದ ವಿಷ್ಣು ಮತ್ತುಗೋವಿಂದರೆಂಬ ಹುಡುಗರು ಎಂಬ ತಿರುವನ್ನು ಪಡೆದುಕೊಳ್ಳುತ್ತದೆ.ಇದಕ್ಕೆ ಕಾರಣನಾದ ಜ್ಯೋತಿಷಿ ಚಿತ್ರಿಗಿಯ ಜಟ್ಟಾ ದೇವರು ಎಂಬ ನಂಬಿಕೆ ಇಲ್ಲಿ ಬೆಳೆಯುತ್ತದೆ.ಹಾಗೆಯೇ 'ಗೋದಾವರಿ ಪದಾ ಹೇಳೆ' ಎಂಬ ಕತೆಯಲ್ಲಿ ಈ ಹೆಸರಿನವಳೊಬ್ಬಳು ಭೇಟಿಯಾದಾಗ ಆಕೆಗೆ ಇಪ್ಪತ್ತೆರಡು ವರ್ಷಗಳ ಹಿಂದೆ ನೀರಹಲಸಿನ ಮರದ ಬಳಿ ಮುತ್ತು ಕೊಟ್ಟ ಘಟನೆ ನೆನಪಿಗೆ ಬಂದು ಆ ಮರಕ್ಕೆ ಅಲೌಕಿಕ ಎನ್ನಬಹುದಾದ ಪ್ರಭೆ ಬರುತ್ತದೆ. ಆದರೆ ಚಿತ್ತಾಲರು ಭೂತವನ್ನು ಅರಸಿಕೊಂಡು ಹೋದರೂ ಅವರದು ಲೌಕಿಕ ನೆಲೆಯನ್ನು ಮೀರಿದ ಕಲೆಗಾರಿಕೆಯಾಗಿ,ಅದು ಒಂದು ದರ್ಶನವಾಗಿ ಪ್ರಕಟಗೊಳ್ಳುವುದಿಲ್ಲ.ಲೇಖಕರ ಬೌದ್ಧಿಕ ಕಸರತ್ತುಗಳು ನಿರೀಕ್ಷಿತ ನಡೆಗಳು ಕತೆಯ ಸಾಧ್ಯತೆಗಳನ್ನು ಹಿಗ್ಗಿಸದ ಕಾರಣ ತೀವ್ರ ಶೋಧನೆಯಾಗಿ ಕಾಣಿಸುವುದಿಲ್ಲ.

ಆಧುನಿಕತೆಯಿಂದ ಪಾರಾಗಿ ಭೂತಕ್ಕೆ ಹೋಗುವ ಇನ್ನೊಂದು ದಾರಿ ಇದೆ.ಇದು ಮೊದಲನೆಯ ದಾರಿಗಿಂತ ಸ್ವಲ್ಪ ಭಿನ್ನ.ಅದೆಂದರೆ ವೈದಿಕ ಜಗತ್ತು ಮರೆಮಾಚಿದ ಅವೈದಿಕ ಜಗತ್ತಿನ ಮಿತ್‌ಗಳಿಗೆ ಹೋಗುವುದು.ಪ್ರೀತಿ,ಹುಡುಕಾಟ,ಅನ್ವೇಷಣಾ ಪ್ರವೃತ್ತಿ,ಮುಗ್ಧತೆ,ಆರಾಧನಾಭಾವ ಇವೆಲ್ಲವೂ ಈ ಮಿತ್‌ರೂಪದಲ್ಲಿ ಕಾಣಿಸುವ ಮುಖ್ಯ ಗುಣಗಳಾಗಿವೆ.ಇವುಗಳನ್ನು ಪುನರ್‌ಸೃಷ್ಟಿಸುವ ಮೂಲಕ,ಮತ್ತು ಇವು ಪ್ರತಿಪಾದಿಸುವ ಮೌಲ್ಯಗಳನ್ನು ವೈಭವೀಕರಿಸುವ ಮೂಲಕ ಬದುಕಿನಲ್ಲಿ ಚೈತನ್ಯಶೀಲತೆಯನ್ನು ಕಾಣಿಸುವ ಪ್ರಯತ್ನವನ್ನೂ ಕೆಲವರು ಮಾಡುತ್ತಿದ್ದಾರೆ.ಈ ನೆಲೆಯ ಬರವಣಿಗೆಯ ಹಿಂದೆ ಒಂದು ಆಧ್ಯಾತ್ಮಿಕ ತುಡಿತ ಇದೆ.ಸಾಹಿತ್ಯವಿಮರ್ಶೆಯಲ್ಲಿ ಡಾ.ಡಿ.ಆರ್.ನಾಗರಾಜ್,ರಹಮತ್‌ತರೀಕೆರೆ, ಸೃಜನಶೀಲ ಸಾಹಿತ್ಯದಲ್ಲಿ ಚಂದ್ರಶೇಖರ ಕಂಬಾರ,ಎಚ್.ಎಸ್.ಶಿವಪ್ರಕಾಶ್,ದೇವನೂರು ಮಹಾದೇವ,ಮೊಗಳ್ಳಿ ಗಣೇಶ್ ಮೊದಲಾದವರು ಈ ದಾರಿಯಲ್ಲಿ ನಡೆಯುತ್ತಿರುವವರಲ್ಲಿ ಪ್ರಮುಖರು.ವಸಾಹತುಶಾಹಿ ಸಂಸ್ಕೃತಿ ಕನ್ನಡ ಸಂಸ್ಕೃತಿಗೆ ಸೇರಿದ ಅವೈದಿಕ ಧಾರೆಗಳ ಬಗ್ಗೆ ವಿಸ್ಮೃತಿಯನ್ನುಂಟುಮಾಡಿದೆ ಎಂಬ ಚರ್ಚೆಯನ್ನು ಡಿ.ಆರ್.ಅವರು ಶುರುಮಾಡಿದ್ದರು ; ಪಶ್ಚಿಮದ ದಾಳಿ ಮತ್ತು ಹಿಂದೂ ಮತಾಂಧತೆಯ

ವಿರುದ್ಧ ನಮ್ಮ ವೈಚಾರಿಕತೆ ರೂಪಿಸಿಕೊಳ್ಳುವ ಅಗತ್ಯವಿದೆ ಎಂಬ ಭಾವವನ್ನು ವ್ಯಕ್ತಪಡಿಸಿದ್ದರು.ವೈದಿಕ ಧಾರೆಯ ಸೌಂದರ್ಯಾತ್ಮಕ ಮತ್ತು ತಾತ್ತ್ವಿಕ ನೆಲೆಗಟ್ಟು ಮತ್ತು ಅವೈದಿಕ ಧಾರೆ ಒಳಗೊಂಡಿರುವ ಪ್ರಗತಿಪರವಾದ,ಜಾತ್ಯಾತೀತವಾದ ನೆಲೆಗಟ್ಟು ಇವುಗಳ ಸಮನ್ವಯದಲ್ಲಿ ಡಿ.ಆರ್.ನಾಗರಾಜ್ ಸಾಹಿತ್ಯ ವಿಮರ್ಶೆಯಲ್ಲಿ ಹೊಸತೊಂದು ಪರಿಭಾಷೆಯನ್ನು ರೂಪಿಸುತ್ತಿರುವಂತೆ ಕಾಣಿಸಿದ್ದರು.ಬೌದ್ಧರ ತಾತ್ತ್ವಿಕ ನೆಲೆಗಳ ಕಡೆಗಿನ ಅವರ ಆಸಕ್ತಿ,'ನಾಗಾರ್ಜುನ'ನ ಬಗೆಗಿನ ಅವರ ಅಧ್ಯಯನ,'ತೋಂಡಿ ಸಂಪ್ರದಾಯ' ಎಂಬ ಲೇಖನ ಇವು ಈ ದಿಕ್ಕಿನಲ್ಲಿ ಅವರು ಇಟ್ಟ ಪ್ರಮುಖ ಹೆಜ್ಜೆಗಳಾಗಿದ್ದವು.

ಭೂತ ಕಾಲದಲ್ಲಿ ಹುದುಗಿರುವ ಅವೈದಿಕ ಧಾರೆಯ ಕಡೆಗೆ ಹೋಗುವ ಮೂಲಕ ತಮ್ಮ Identity ಯನ್ನು ಶೋಧಿಸುತ್ತಿರುವವರಲ್ಲಿ ಚಂದ್ರಶೇಖರ ಕಂಬಾರ ಮತ್ತು ಶಿವಪ್ರಕಾಶ್ ಪ್ರಮುಖರು.ಇವರ ಹುಡುಕಾಟದಲ್ಲಿ ಆಧ್ಯಾತ್ಮಿಕ ತುಡಿತ ಮುಖ್ಯವಾಗಿ ಕಾಣಿಸುತ್ತದೆ.ಹಾಗಾಗಿ ಇವು ತೀವ್ರ ತುರ್ತಿನಲ್ಲಿ ಪ್ರಕಟಗೊಳ್ಳುತ್ತವೆ.ಕಂಬಾರರ ಮಹಾಕಾವ್ಯ'ಚಕೋರಿ',ಶಿವಪ್ರಕಾಶರ'ಸೂರ್ಯಜಲ ಕವನಸಂಕಲನಗಳು ಈ ಧೋರಣೆಯನ್ನು ಪ್ರಕಟಪಡಿಸುವ ನೆಲೆಯಲ್ಲಿವೆ.ಆಧುನಿಕತೆಯ ಸಂದರ್ಭದಲ್ಲಿ ಕಳೆದುಕೊಂಡ ಗುಣಗಳನ್ನೆಲ್ಲ ಭೂತದಲ್ಲಿ ಕಾಣುವ ದೃಷ್ಟಿಕೋನಕ್ಕೆ 'ಚಕೋರಿ' ಒಂದು ಮುಖ್ಯ ಉದಾಹರಣೆಯಾಗಿದೆ.ಇಲ್ಲಿನ ನಾಯಕನಾದ ಚಂದಮುತ್ತನ ಮುಗ್ಧತೆ,ಪ್ರೀತಿ,ಸಂಗೀತಾಸಕ್ತಿ, ಅನ್ವೇಷಣಾಪ್ರವೃತ್ತಿ, ಅಸಾಮಾನ್ಯ ವ್ಯಕ್ತಿತ್ವ, ಆರಾಧನೆಯ ಗುಣ, ಆತ ಪ್ರೀತಿಗಾಗಿ ಮಾಡುವ ತ್ಯಾಗ, ಬಲಿದಾನ ಇವು ಕಾವ್ಯದಲ್ಲಿ ವೈಭವೀಕರಿಸಲ್ಪಟ್ಟಿವೆ.ಇಲ್ಲಿ ಚಂದಮುತ್ತ ಚಂದ್ರ ಸಂಸ್ಕೃತಿಯ ಪ್ರತೀಕವಾಗಿದ್ದಾನೆ.ಚಂದ್ರನದು ಸೂರ್ಯನಂತೆ ಉರಿಯುವ ಗುಣವಲ್ಲ.ಬದಲಾಗಿ ಭೂಮಿಗೆ ಬೆಳದಿಂಗಳನ್ನು ಹರಿಸುವ ಮೂಲಕ ತಂಪನ್ನು ನೀಡುವಂತಹುದು.ಜನರಲ್ಲಿ ಚೈತನ್ಯವನ್ನು ಉಕ್ಕಿಸುವಂತಹುದು.ಆತನ ಲೋಕದಲ್ಲಿ ಅನೇಕ ನಿಗೂಢಗಳು ಹುದುಗಿಕೊಂಡಿವೆ.ಅದೇ ರೀತಿ ಅವೈದಿಕ ಧಾರೆಗೆ ಸೇರಿದ ಜನಪದ ಲೋಕ ಕೂಡಾ ಅನೇಕ ನಿಗೂಢತೆಗಳನ್ನು ಬಚ್ಚಿಟ್ಟುಕೊಂಡಿದೆ.ಆ ಮೌಲ್ಯಗಳು ಚಂದಮುತ್ತನ ಮೂಲಕ ಪ್ರಕಟಗೊಳ್ಳುತ್ತದೆ.ಇಲ್ಲಿ ಚಂದಮುತ್ತ ಯಾವುದೋ ಸಂದರ್ಭದಲ್ಲಿ ಯಕ್ಷಿಯ ಶಿಲೆಗೆ ತಾಳಿಕಟ್ಟುತ್ತಾನೆ.ಆಮೇಲೆ ಯಕ್ಷಿಯನ್ನರಸುತ್ತಾ ಹೋಗುತ್ತಾನೆ.ಈ ಯಕ್ಷಿ ಸಂಗೀತ ಕುಲದೇವತೆ. ಅನೇಕ ಸಂಗೀತದ ರಾಗಗಳನ್ನು ನುಡಿಸುವ ಪ್ರಾವೀಣ್ಯತೆ ಇದ್ದರೂ ಚಂದಮುತ್ತನಿಗೆ ಯಕ್ಷಿ ಸುಲಭವಾಗಿ ಒಲಿಯುವುದಿಲ್ಲ.ಒಮ್ಮೆ ಮುದಿಜೋಗಿತಿಯೊಬ್ಬಳು ಬಂದು ಚಂದಮುತ್ತನಿಗೆ ತನ್ನ ಸಂಗೀತಜ್ಞಾನದ ಬಗ್ಗೆ ಇದ್ದ ಅಹಂಕಾರವನ್ನು ಮುರಿದು ಸವಾಲಾಗುವ ಮೂಲಕ ಆತನ ಅನ್ವೇಷಣಾಕಾರ್ಯಕ್ಕೆ ಪರೋಕ್ಷವಾಗಿ ಕಾರಣಳಾಗುತ್ತಾಳೆ.ಆಕೆಯಿಂದ ಆತನಿಗೆ ತಾನಿನ್ನೂ ಸಂಗೀತದಲ್ಲಿ ಪರಿಣತನಾಗಿಲ್ಲ, ಅದು ದಕ್ಕದ ಹೊರತು ಯಕ್ಷಿ ಒಲಿಯಲಾರಳು ಎಂಬ ಸತ್ಯ ಗೊತ್ತಾಗುತ್ತದೆ.ಮುಂದೆ ತನಗೊಲಿಯದ ರಾಗದ ಅನ್ವೇಷಣೆಯಲ್ಲಿ ಚಂದಮುತ್ತ ಹೊರಡುತ್ತಾನೆ.ಆ ಸಂದರ್ಭದಲ್ಲಿ ಆತ ಪಡುವ ಕಷ್ಟಗಳು,ಎದುರಿಸುವ ಸವಾಲುಗಳು, ಮಹಾನುಭಾವನೊಬ್ಬನ ಮಂತ್ರವಿದ್ಯೆಯಿಂದಾಗಿ ಕಲ್ಲಾದ ಯಕ್ಷಿಗೆ ಜೀವ ಕೊಡುವುದಕ್ಕಾಗಿ ಮಾಡುವ ತ್ಯಾಗ ಇವುಗಳನ್ನು ವರ್ಣಿಸಲಾಗಿದೆ.ರಾಗಗಳನ್ನು ಶುದ್ಧ ರೂಪದಲ್ಲಿ ಹಾಡುವ ಮೂಲಕ ತನ್ನ ಅಹಂಕಾರ, ಭ್ರಮೆಯ ಆವರಣಗಳನ್ನು ಕಳಚಿಕೊಂಡು ಪ್ರೀತಿಯನ್ನು ಗೆಲ್ಲುವ ಚಂದಮುತ್ತನ ಅಸಾಮಾನ್ಯ ವ್ಯಕ್ತಿತ್ವ 'ಚಕೋರಿ' ಕಾವ್ಯದಲ್ಲಿ ವೈಭವೀಕರಿಸಲ್ಪಟ್ಟಿದೆ.ಈ ಮೌಲ್ಯಗಳ ಮೂಲಕ ಕಂಬಾರರು ಭೂತದ ಮಿತ್‌ನಲ್ಲಿ ಭಾರತೀಯತೆಯ, ಭಾರತೀಯವಾದ ವ್ಯಕ್ತಿತ್ವವೊಂದರ ಶೋಧನೆ ಮಾಡುತ್ತಾರೆ.

ಕಂಬಾರರಂತೆ ಅಧ್ಯಾತ್ಮಿಕ ತುಡಿತದ ಮೂಲಕ ವ್ಯಕ್ತಿತ್ವವೊಂದರ ಹುಡುಕಾಟ, ಆ ಮೂಲಕ ತನ್ನ Identityಯನ್ನು ಕಂಡುಕೊಳ್ಳುವ ಪ್ರಯತ್ನ ಶಿವಪ್ರಕಾಶರ ಕಾವ್ಯದಲ್ಲಿಯೂ ಕಾಣಬಹುದಾಗಿದೆ. ಅವರ 'ಸೂರ್ಯಜಲ' ಕವನಸಂಕಲನದ ಆರಂಭದಲ್ಲಿಯೇ ಅವರು ವ್ಯಕ್ತಪಡಿಸುವ ಅಭಿಪ್ರಾಯಗಳು ಹೀಗಿವೆ - ''ಮಾತು ಬರೀ ಮಾತಾಗದೆ ಚಾರಿತ್ರಿಕ ಮತ್ತು ರಾಜಕೀಯ ಕ್ರಿಯೆಯಾಗಿ ಆ ಮೂಲಕ ಪ್ರಕೃತಿಯ ಶಕ್ತಿಗಳೊಡನೆ ನುಡಿಯುವ, ಮಿಡಿಯುವ ಭಾಷಿಕ ಕ್ರಿಯಾ ವಿಧಿಯೂ ಆಗಲೇಬೇಕೆಂಬ ಮಹತ್ತಿನ ಅಣುರೂಪೀ ಬಯಕೆ ಈ ಕವಿತೆಗಳಲ್ಲಿ ಸಂಚರಿಸಿದೆ '' ಎಂಬ ಈ ಮಾತುಗಳು ಅವರ ಕಾವ್ಯ ಯಾವ ದಾರಿಯಲ್ಲಿದೆ ಎಂಬುದನ್ನು ಸೂಚಿಸುತ್ತದೆ. 'ಅವಲೋಕಿತೇಶ್ವರಾ! ತ್ರೈಲೋಕೇಶ್ವರಾ !', 'ತುಕಾನ ಅಭಂಗಗಳು' ಮೊದಲಾದ ಕವನಗಳಲ್ಲಿ ಈ ಅಂಶವನ್ನು ಕಾಣಬಹುದು. ಚಾರಿತ್ರಿಕ ಮತ್ತು ಜನಪದ ಮಿತ್‌ಗಳ ಮೂಲಕ ಶಿವಪ್ರಕಾಶ್ ವರ್ತಮಾನದ ಒಟ್ಟು ಅನುಭವವನ್ನು ಪ್ರಕೃತಿಯ ಜತೆಗೆ ತಾದಾತ್ಮ್ಯಗೊಳಿಸಲು ನೋಡುತ್ತಿದ್ದಾರೆ. ತನ್ನ ಸಂಕಟಗಳನ್ನು, ಆತಂಕದ ಕ್ಷಣಗಳನ್ನು ಪ್ರಕೃತಿಯ ಒಟ್ಟು ಕ್ಷಣಗಳಲ್ಲಿ ಒಂದಾಗಿಸುವ ಮೂಲಕ ಹೊಸ ದರ್ಶನವೊಂದನ್ನು ಕಾಣಿಸುವ ಹುಡುಕಾಟದಲ್ಲಿ ಶಿವಪ್ರಕಾಶ್ ಅವರು ತೊಡಗಿದ್ದಾರೆ.

ಕಂಬಾರ, ಶಿವಪ್ರಕಾಶ್ ಅವರಂತೆ ಅಧ್ಯಾತ್ಮಿಕ ತುಡಿತದ ಮೂಲಕ ಹೊಸದರ್ಶನವನ್ನು ನೀಡುವ ರಾಘವೇಂದ್ರ ಪಾಟೀಲರ 'ಲಯ' ಎನ್ನುವ ಕತೆ ಆಧುನಿಕತೆಯ ತಲ್ಲಣದ ಕ್ಷಣಗಳಲ್ಲಿ ಮನುಷ್ಯ ನಡೆಯಬೇಕಾದ ದಾರಿಯನ್ನು ಸೂಚಿಸುವಂತಿದೆ. ಈ ಕತೆ ಇದುವರೆಗೆ ವಿಶ್ಲೇಷಿಸಿದ ಎಲ್ಲ ಲೇಖಕರ ಹುಡುಕಾಟಕ್ಕೆ ಉತ್ತರ ರೂಪದಲ್ಲಿರುವಂತಿದೆ. ಪ್ರಕೃತಿ ಸಹಜವಾದ ಲಯ, ಬದುಕಿನ ಲಯವಾಗಬೇಕು; ನಿಸರ್ಗದ ಲಯ ಮತ್ತು ಮನುಷ್ಯನ ಲಯ ಒಂದಾಗಬೇಕು ಎಂಬ ದೃಷ್ಟಿಕೋನ ಈ ಕತೆಯಲ್ಲಿದೆ. ಈ ಕತೆಯ ತಾತ್ತ್ವಿಕತೆ ಕೂಡಾ ಕಂಬಾರರ 'ಚಕೋರಿ'ಯಲ್ಲಿ ಕಾಣಿಸುವ ರಾಗದ ಆಲಾಪನೆಯಂತೆ ವಿಸ್ತಾರಗೊಂಡು ರೂಪ ಪಡೆಯುತ್ತದೆ. ನಾಡಿಗೆ ಬರಗಾಲ ಬಂದು ನಾಡಿಗೆ ನಾಡೇ ದಿಕ್ಕೆಟ್ಟು ಕೂತಿದ್ದ ಸಂದರ್ಭದಲ್ಲಿ ಸೊಗಲದ ಸಿದ್ದರು -''ಮಳೀ ಬೇಕಂದರs- ಬೆಳೀ ಬೇಕಂದರs ಮದಲು ಎದಿಯೊಳಗಿನ ಬೆಂಕಿ ಆರಿಸಿಕೋರಿ... ಹಾಳಗೆಟ್ಟ ಬಾಳೇದ ನಡಿಗಿನ್ನs ಛಂದಸ್ಸನ್ನ ಬದಲ ಮಾಡಿಕೋರಿ'' ಎಂದು ಉಪದೇಶಿಸುತ್ತಾರೆ. ಹಾಗೆಯೇ ಲಂಗಟದ ಸ್ವಾಮಿಗಳು -''ಹೊಸಾ ನಡಿಗೀ -ಹೊಸಾ ಲಯಾ ಕಟ್ಟಿಕೋಬೇಕು...ತೆಂಕಣಕ್ಕ ಹೋದರ ತುಂಗಭದ್ರಾ ಐತಿ. ಬಡಗಣಕ್ಕ ಹೋದರ ಹಿರಿಹೋಳಿ ಐತಿ. ಇವು ಅಡ್ಡ ಬರತಾವು. ಆದಕ್ಕs ಪಡೂದಿಕ್ಕಿಗೆ ಹೋಗರಿ. ಅಲ್ಲಿ ಈ ಹೋಳಿಗೋಳು ಹುಟ್ಟಿದ ಅರ್‍ಯಾಣ ಐತಿ . ಅರ್‍ಯಾಣ ಅಂದರs- ನಾನಾ ನಮೂನಿಯ ನಡಿಗಿಯ -ನಾನಾ ನಮೂನಿಯ ಹಾರಾಟದ... ನಾನಾ ನಮೂನಿಯ ಹರಿಯುವ ಬಿರಿಯುವ ಛಂದದ ಕಾಡು...ಹುಡುಕಿದಷ್ಟೂ ಹೊಸಾದು ಹೊಸಾದು ಸಿಗುವ ಬೀಡು. ಪಡೂದಿಕ್ಕಿಗೆ ಹೊಂಡರಿ...ಅರ್‍ಯಾಣದೊಳಗಿನ ಪುಷ್ಪಗೋಳ ವಾಸನೀಲೆ ನಿಮ್ಮ ಎದಿ ತೊಳಕೋರಿ. ಜುಳು ಜುಳೂ...ಅಂತ ಹರಿಯುವ ಸರಗೋಳ ಗುಂಟs ಅಡ್ಯಾಡಿ ಹೊಸಾ ನಡಿಗೀ ಕಲಕೋರಿ... ಮಗ್ಗಲದಾಗಿಂದನ್ನ ಕೊಲ್ಲದs ಸಹಜ ಬೆಳಿಯೂದನ್ನ ...ಬೆಳದು ನೆಳ್ಳ ಕೊಡೂದನ್ನ...ಬೆಳದು ಬ್ಯಾರೇ ಆಗದ ಒಟ್ಟು ಛಂದದೊಳಗಿನ ಒಂದು ಎಳೀ ಆಗೂದನ್ನ ಕಲಕೋರಿ...''ಎಂದು ಹೇಳುತ್ತಾರೆ. ಇಲ್ಲಿ 'ಲಯ' ಎಂಬ ಪದವೇ ಬೇರೆ ಬೇರೆ ಅರ್ಥವ್ಯಾಪ್ತಿಯನ್ನು ಪಡೆದುಕೊಂಡು ಹೊಸ ಸಾಧ್ಯತೆಗಳ ಕಡೆಗೆ ನಮ್ಮ ಮನಸನ್ನ ಕೊಂಡೊಯ್ಯುತ್ತದೆ . ನಿಸರ್ಗದ ಲಯ, ಹಾಡಿನ ಲಯ, ಹದ ತಪ್ಪಿದ ಬದುಕಿನ ಲಯ

ಹಾಗೆಯೇ ಜೀವವಿರೋಧಿಯಾದ ಲಯವನ್ನ ಲಯ - ನಾಶ - ಗೊಳಿಸಿ ನಿಸರ್ಗವನ್ನು ಪ್ರೀತಿಸುವ ಹೊಸ ಲಯವುಳ್ಳ ಬದುಕನ್ನು ಕಟ್ಟಿಕೊಳ್ಳಬೇಕೆಂಬ ಹಂಬಲ ...ಇವೆಲ್ಲ ಒಂದು ಸಮತೋಲದಲ್ಲಿ ಸೇರಿ ಈ ಕತೆ ರೂಪುಗೊಂಡಿದೆ.ಇದರ ಹಿಂದೆ ಆಧ್ಯಾತ್ಮಿಕ ತುಡಿತವಿದೆ.ಅದು ಯಾವುದೆಂದರೆ ವ್ಯಕ್ತಿ ಕೇಂದ್ರಿತವಾದ ಮನುಷ್ಯನ ಅಹಂಕಾರನಿಷ್ಠವಾದ ಬದುಕಿನ ಲಯ ಕರಗಿ,ನಿಸರ್ಗದ ಒಟ್ಟು ಲಯದಲ್ಲಿ ಐಕ್ಯವನ್ನು ಸಾಧಿಸಬೇಕೆಂಬ ಹಂಬಲ ಕತೆಯ ಮುಖ್ಯ ಧೋರಣೆಯಾಗಿದೆ.

ಹೀಗೆ ಸಮಕಾಲೀನ ಸಾಹಿತ್ಯ ಒಂದು ವಿಶಿಷ್ಟ ದಾರಿಯಲ್ಲಿ ಚಲಿಸುತ್ತಿದೆ.ಸಮಾಜಮುಖಿಯಾಗಿ ಹೋಗುವುದಕ್ಕೆ ಬದಲಾಗಿ ಅಂತರ್ಮುಖಿಯಾಗಿ ಭೂತಕ್ಕೆ ಹೋಗುವ ಮೂಲಕ ತನ್ನ Identity ಯನ್ನು ಹುಡುಕಿಕೊಳ್ಳಲು ನೋಡುತ್ತಿದೆ. ಭೂತದ ಜಾನಪದ ಮಿತ್‌ಗಳಲ್ಲಿರುವ ಅಸಾಮಾನ್ಯ ಗುಣಗಳನ್ನು ಆರಾಧಿಸುವ ಮೂಲಕ ಭಾರತೀಯವಾದ ವ್ಯಕ್ತಿತ್ವವೊಂದನ್ನು ಪುನರ್ ಸೃಷ್ಟಿಸುವ ಪ್ರಕ್ರಿಯೆಯಲ್ಲಿ ತೊಡಗಿದೆ. ಇದರ ಹಿಂದೆ ಇರುವ ಆಧ್ಯಾತ್ಮಿಕ ತುಡಿತವೇ ಮನುಷ್ಯನಿಗೂ, ಪ್ರಕೃತಿಗೂ ತಪ್ಪಿಹೋಗಿರುವ ಸಂಬಂಧವನ್ನು ಕಲ್ಪಿಸಲು ನೆರವಾಗಿದೆ. ಆಧುನಿಕತೆಯಿಂದಾಗಿ ಹೆಚ್ಚಿರುವ ಮನುಷ್ಯನ ಅಹಂಕಾರವನ್ನು ತಗ್ಗಿಸಿ ಕಳೆದುಕೊಂಡ ಪ್ರಕೃತಿಯನ್ನು ಹತ್ತಿರ ತರುವ,ಅದರ ಜತೆಗೆ ತಾದಾತ್ಮ್ಯ ಸಂಬಂಧವನ್ನು ಏರ್ಪಡಿಸುವ ಭಾವನಾತ್ಮಕ ನೆಲೆಯನ್ನು ಹಾಕಿಕೊಟ್ಟಿದೆ.ತನ್ನ ಅಂತರ್ಮುಖಿ ಚಿಂತನೆಯಲ್ಲಿ ಇದನ್ನು ಕಂಡುಕೊಳ್ಳುವ ಪ್ರಯತ್ನ ಕಂಡುಬರುತ್ತಿದೆ.ಪ್ರಕೃತಿಯ ವಿರಾಟ್ ಸ್ವರೂಪದೆದುರು,ಪ್ರಕೃತಿಯ ಭವ್ಯತೆಯೆದುರು ಮನುಷ್ಯನದು ಅತಿ ನಿಕೃಷ್ಟವಾದ ಅಸ್ತಿತ್ವ. ಮನುಷ್ಯನ ಚೈತನ್ಯಶೀಲತೆ ಇರುವುದು ಪ್ರಕೃತಿಯಲ್ಲಿ ಎಂಬ ದೃಷ್ಟಿಕೋನ ಇಲ್ಲಿದೆ. ಇದನ್ನು ನಾವು ಕಳೆದುಕೊಂಡಿರುವ ಕಾರಣ ಭೂತದಲ್ಲಿ ಕಾಣುವ ಪ್ರಯತ್ನ ನಡೆಯುತ್ತಿದೆ.ಹೀಗಾಗಿ ಸಮಕಾಲೀನ ಕನ್ನಡ ಸಾಹಿತ್ಯ ಒಂದು ದೃಢವಾದ ಹೆಜ್ಜೆ ಇಟ್ಟಿದೆ.ಇದರಿಂದ ಮುಂದೆ ಬರುವ ಸಾಹಿತ್ಯ ಹೊಸ ದಾರಿಯಲ್ಲಿ ಬೆಳೆಯಬಹುದು.ರ್‍ಯಾಡಿಕಲ್ ಬದಲಾವಣೆಗಳು ಆಗುವುದಕ್ಕೆ ಬದಲಾಗಿ ಮೌಲ್ಯಗಳು ಸ್ಥಿರೀಕರಣಗೊಳ್ಳಬಹುದು.ಆದರೆ ಆಧುನಿಕತೆಯನ್ನು ನೇರವಾಗಿ ಎದುರಿಸದೆ ಅದರ ವಿರುದ್ಧ ದಿಕ್ಕಿನಲ್ಲಿರುವ ಈ ನಡಿಗೆ ತಾತ್ತ್ವಿಕ ನೆಲೆಯಲ್ಲಿ, ಸಂವೇದನೆಯ ನೆಲೆಯಲ್ಲಿ, ಶೋಧನೆಯ ಕಾವ್ಯವಾಗಿ ಅದ್ಭುತವನ್ನು ಸಾಧಿಸಬಲ್ಲುದಾದರೂ ಇದರ ಸಾಮಾಜಿಕ ಸ್ಥಾನ ಮತ್ತು ಚಾರಿತ್ರಿಕ ಮಹತ್ತ್ವ ಏನು ಎಂಬ ಪ್ರಶ್ನೆ ಮಾತ್ರ ಉಳಿದೇ ಉಳಿಯುತ್ತದೆ.

ಸತ್ಯವೇ ದೇವರೆಂದು ತಿಳಿದವನು ಸತತವಾಗಿ ಶೋಧನಾತ್ಮಕವಾದ ಮನಸ್ಸಿನವನಾಗಬೇಕಾಗುತ್ತದೆ. ಅವನಿಗೆ ತನ್ನ ಪೂರ್ವಜರಿಂದ ಪಡೆದ ಶಾಸ್ತ್ರ ಮಾತ್ರ ಸಾಲದಾಗುತ್ತದೆ. ತನ್ನ ಸದ್ಯದ ಅನುಭವವು ಶಾಸ್ತ್ರದಷ್ಟೇ ಮುಖ್ಯವಾಗುತ್ತದೆ. ಶಾಸ್ತ್ರದ ಕಣ್ಣಿನಿಂದ ತನ್ನ ಸದ್ಯವನ್ನು ಪರಿಶೀಲಿಸುತ್ತಿದ್ದಂತೆಯೇ ಸದ್ಯದ ಅನುಭವದಿಂದ ಶಾಸ್ತ್ರದ ಅಧಿಕೃತತ್ವವನ್ನು ಪ್ರಶ್ನಿಸುತ್ತಲೇ ಇರಬೇಕಾಗುತ್ತದೆ. ಹೀಗೆ ಒಂದು ಇನ್ನೊಂದಕ್ಕೆ ಎದುರಾಗಿ, ಸತತವಾದ ನೆಲೆಯ ಹುಡುಕಾಟದಲ್ಲಿ ಅಂಥ ಮನಸ್ಸು ತೊಡಗಿರುತ್ತದೆ .ಗಾಂಧಿವರದ್ದು ಅಂಥ ಮನಸ್ಸಾದ್ದರಿಂದಲೇ ಅವರು ರಾಜಾರಾಮ್ ಮೋಹನ್ ರಾಯ್‌ರನ್ನು ಕುಬ್ಜರೆನ್ನುತ್ತಲೇ ,ಉದಾರ ಭಾವನೆಯವರಾದ ಗೋಖಲೆಯವರನ್ನು ತನ್ನ ಗುರುವೆಂದು ಕರೆದು, ತಿಲಕರ ಅತಿರೇಕವನ್ನು ತನ್ನ ಕಾರ್ಯವಿಧಾನದಲ್ಲಿ ಕೈಬಿಟ್ಟದ್ದು.

-ಯು.ಆರ್.ಅನಂತಮೂರ್ತಿ

"ಆ ಕೊಳ್ಳಕ್ಕೊಬ್ಬ ಬರೆಹಗಾರ ಬೇಕಿದ್ದಿತು ...":
ಅರುಂಧತಿ ರಾಯ್‌ರೊಂದಿಗೆ ಸಂದರ್ಶನ

O ಸಂದರ್ಶಕರು : **ಲೈಲಾ ಬಾವದಮ್**

ಲೈಲಾ : ನಿಮ್ಮ ರ್‍ಯಾಲಿಯು ನಿಜವಾಗಿಯೂ ನರ್ಮದಾ ನದಿಯುದ್ದಕ್ಕೂ ಕಟ್ಟುತ್ತಿರುವ ದೊಡ್ಡ ಅಣೆಕಟ್ಟುಗಳ ಬಗೆಗಿನ ವಿಷಯವನ್ನು ಸಾರ್ವಜನಿಕರ ಗಮನಕ್ಕೆ ತಂದು ನರ್ಮದಾ ಬಚಾವೋ ಆಂದೋಲನಕ್ಕೆ ಧೈರ್ಯ ತುಂಬಿದೆ. ಆದರೆ ಈ ವಿಷಯದ ಬಗ್ಗೆ ನಿಮ್ಮ ಬದ್ಧತೆಯ ಪ್ರಮಾಣವೇನು? ನಿಮ್ಮ ಈ ತೊಡಗುವಿಕೆಯು ದೀರ್ಘಾವಧಿಯಲ್ಲಿ ಪಡೆದುಕೊಳ್ಳಬಹುದಾದ ಸ್ವರೂಪವೇನು?

ಅರುಂಧತಿ : ಯಾರಾದರೂ ತಮ್ಮ ಬದ್ಧತೆಯ ಮೊತ್ತವನ್ನು ಪರಿಮಾಣದಲ್ಲಿ ಹೇಗೆ ಹೇಳುತ್ತಾರೋ ... ಗೊತ್ತಿಲ್ಲ...(ಬಹಳ , ಇನ್ನೂ ಬಹಳ , ಅತ್ಯಂತವಾದದ್ದು?) ಹಾಗೆಯೇ ನರ್ಮದಾ ಕೊಳ್ಳದಲ್ಲಿ ನಡೆದ ಹೋರಾಟವನ್ನು ಒಂದು 'ವಿಷಯ'ವೆಂದು ನಾನು ಯೋಚಿಸಲಾರೆ...ವಿಷಯವೆನ್ನುವುದು ತುಂಬ ಅಲ್ಪತಮವಾದ ಶಬ್ದ ...ಸರ್ವನಾಶವನ್ನು ಒಂದು 'ವಿಷಯ'ವೆನ್ನುವ ಶಬ್ದದ ಮೂಲಕ ಹೇಳಲಾದೀತೆ? ನನಗನ್ನಿಸುವುದೆಂದರೆ, ಪ್ರತಿಭಟನೆಯೊಂದು ಅಣ್ವಸ್ತ್ರಗಳ ಬಗೆಗಿನದಾಗಲಿ, ಅಥವಾ ನರ್ಮದಾ ನದಿಯುದ್ದಕ್ಕೆ ಕಟ್ಟುತ್ತಿರುವ ದೊಡ್ಡ ದೊಡ್ಡ ಆಣೆಕಟ್ಟುಗಳ ಬಗೆಗಿನದಾಗಲಿ, ಅದು ಮೂಲಭೂತವಾಗಿ ಲೋಕದೃಷ್ಟಿಯೊಂದರ ಸ್ಥಾಪನೆಗಾಗಿನ ಹೋರಾಟವಾಗಿರುತ್ತದೆ. ಅದು ನಮ್ಮ ಕಾಣುವಿಕೆಯನ್ನು ಕುರಿತಾದ ಹೋರಾಟವಾಗಿರುತ್ತದೆ. ಅಷ್ಟೇಕೆ ನನ್ನ ಕಾದಂಬರಿ 'ಗಾಡ್ ಆಫ್ ಸ್ಮಾಲ್ ಥಿಂಗ್ಸ್' ಅದೂ ಲೋಕದೃಷ್ಟಿಯ ಆಕಾಂಕ್ಷೆಯೇ! ಈ ಎಲ್ಲ ಕೃತಿಗಳಲ್ಲಿರುವ ಸಾಮಾನ್ಯವಾದ ಆಸಕ್ತಿಯೆಂದರೆ ... ಅವು ಬಲ ಮತ್ತು ಬಲಹೀನತೆಯ ಕುರಿತ ವಿಶ್ಲೇಷಣೆಗಳಾಗಿರುತ್ತವೆ. ಆದ್ದರಿಂದ ...ನನ್ನ ಬದ್ಧತೆಯ ಬಗೆಗಿನ ಪ್ರಶ್ನೆಯನ್ನು ಕುರಿತು ಹೇಳುವುದಾದರೆ, ನಾನು ಬೇರೆ ರೀತಿಯಿಂದ ಇದನ್ನು ನೋಡಲು ಸಾಧ್ಯವಿಲ್ಲ- ಭಾವನಾತ್ಮಕವಾಗಿ, ಬುದ್ಧಿಪೂರ್ವಕವಾಗಿ, ಪ್ರಾಕೃತಪ್ರವೃತ್ತಿಯ ಮೂಲಕವಾಗಿ ಅಥವಾ ರಾಜಕೀಯವಾಗಿ ಇದನ್ನು ನೋಡಲಾರೆ. ನಾನು ನೋಡುವುದೇನಿದ್ದರೂ ಲೋಕದೃಷ್ಟಿಯ ನೆಲೆಯಲ್ಲಿ.

ಇನ್ನು , ದೀರ್ಘಾವಧಿಯಲ್ಲಿ ನನ್ನ ಈ ತೊಡಗುವಿಕೆಯು ಪಡೆದುಕೊಳ್ಳುವ ಸ್ವರೂಪವೇನು ಎನ್ನುವ ಬಗ್ಗೆ ...ನಿಜವಾಗಿಯೂ ನನಗದು ಗೊತ್ತಿಲ್ಲ... ಆದರೆ ನನಗನಿಸುವುದೆಂದರೆ ...ನನಗೆ ಅತ್ಯಂತ ಪರಿಣಾಮಕಾರಿಯಾಗಿ ಕಾಣುವುದು ಬರೆಹವೇ!...ನನ್ನ ಬದ್ಧತೆಯೇನೋ ಸಂಪೂರ್ಣವಾದುದೇ ಹೌದು. ಆದರೆ ನಾನು ಪರಿಣಾಮಕಾರಿಯೆನ್ನಿಸಬೇಕು. ಇಲ್ಲವಾದರೆ ಅದು ನಿರರ್ಥಕವಾದದ್ದಾಗಿಬಿಡುತ್ತದೆ.

ಲೈಲಾ : ನರ್ಮದಾ ಕೊಳ್ಳದ ಬಗೆಗಿನ ಹೋರಾಟವು ಮೊದಲಿಗೆ ನಿಮ್ಮ ಗಮನವನ್ನು ಸೆಳೆದದ್ದು ಹೇಗೆ?

ಅರುಂಧತಿ : ಪ್ರಾಮಾಣಿಕವಾಗಿ ಹೇಳುವುದಾದರೆ ನಾನು ನರ್ಮದಾ ಕೊಳ್ಳದಲ್ಲಿ ನಡೆಯುತ್ತಿದ್ದ ಹೋರಾಟದ ಸೂಕ್ಷ್ಮವಾದ ವಿವರಗಳನ್ನು ಅರಿತುಕೊಂಡಿರಲಿಲ್ಲ. ಬಹುತೇಕ ಸಾರ್ವಜನಿಕರಂತೆ ನಾನು ತಿಳಿದುಕೊಂಡದ್ದು -ನರ್ಮದಾ ನದಿಯಗುಂಟ ಕೆಲವು ಆಣೆಕಟ್ಟುಗಳನ್ನು ಕಟ್ಟುತ್ತಿದ್ದಾರೆ (೩೨೦೦ ಡ್ಯಾಮುಗಳೆಂದು ಗೊತ್ತಿರಲಿಲ್ಲ), ಇದರಿಂದ ಬಹಳಷ್ಟು ಜನರನ್ನು ಅಲ್ಲಿಂದ ಒಕ್ಕಲೆಬ್ಬಿಸಲಾಗುತ್ತಿದೆ, ಮತ್ತು ಅವರ ಪುನರ್ವಸತಿಯ ಯೋಜನೆಯು ಅತ್ಯಂತ ಕೆಟ್ಟದಾಗಿ -ನಿಜವಾದ ಸರ್ಕಾರೀ ರೀತಿಯಲ್ಲಿ ನಡೆಯುತ್ತಿದೆ ಎಂದಿಷ್ಟು ಮಾತ್ರ. ೧೯೯೩ರಲ್ಲಿ ಜಾಗತಿಕ ಬ್ಯಾಂಕ್ ನರ್ಮದಾ ಕೊಳ್ಳದ ಯೋಜನೆಯ ಅನುದಾನವನ್ನು ಹಿಂತೆಗೆದುಕೊಂಡಾಗ ಮತ್ತು ೧೯೯೪ರಲ್ಲಿ ಭಾರತದ ವರಿಷ್ಠ ನ್ಯಾಯಾಲಯ ಇದಕ್ಕೆ ತಡೆಯಾಜ್ಞೆ ನೀಡಿದಾಗ, ಇನ್ನೇನು ಈ ಹೋರಾಟಕ್ಕೆ ಬಹುತೇಕ ಜಯ ಸಿಕ್ಕಂತೆಯೇ ಎಂದು ನಾನು ಯೋಚಿಸಿದೆ. ನ್ಯಾಯಾಲಯವು ಇಡೀ ಯೋಜನೆಯ ಪುನರ್‌ಪರಿಶೀಲನೆ ಮಾಡುತ್ತಿದೆ ಎಂದು ನಾನು ಅಂದುಕೊಂಡಿದ್ದೆ. ಆದರೆ ಈ ವರ್ಷದ ಫೆಬ್ರುವರಿಯಲ್ಲಿ ತಡೆಯಾಜ್ಞೆ ತೆರವುಗೊಂಡಿತೆಂದಾಗ ಈ ಬಗೆಗೆ ತಿಳಿದುಕೊಳ್ಳಬೇಕೆನ್ನುವ ನನ್ನ ಗ್ರಹಿಕೆಯ ಅಂಗ ಚುರುಕಾಯಿತು. ನಾನು ಅಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ತಿಳಿದುಕೊಳ್ಳಲು ಓದತೊಡಗಿದಂತೆ ನಿಜ ಸಂಗತಿಗಳನ್ನು ತಿಳಿದು ಭಯಗ್ರಸ್ತಳಾದೆ ! ಪುನರ್ವಸತಿಯ ಸಮಸ್ಯೆಯು ಸಾವು ಬದುಕಿನಷ್ಟು ಮುಖ್ಯವಾದ ಅನೇಕ ವಿಷಯಗಳಲ್ಲಿ ಕೇವಲ ಒಂದೆನ್ನುವುದು ನನಗೆ ತಿಳಿಯಿತು. ನಾನು ಓದುತ್ತ ಹೋದಂತೆ ನನಗನ್ನಿಸಿದ್ದೆಂದರೆ, ಇಡೀ ಸಂಗತಿಯು ಆಸಕ್ತ ಸಾರ್ವಜನಿಕರಿಗೆ ತಿಳಿಯುತ್ತಿಲ್ಲ ಎನ್ನುವುದು. ಸಾರ್ವಜನಿಕರಿಗೆ ತಿಳಿಯಪಡಿಸಿದ್ದು ಕೇವಲ ನಿಜ ಸಂಗತಿಯ ತುಂಡುಗಳನ್ನು ಮಾತ್ರ... ಜನರನ್ನು ತೆರವುಗೊಳಿಸುವ ಸಮಸ್ಯೆ, ಪುನರ್ವಸತಿಯ ಸಮಸ್ಯೆ, ನೀರಾವರಿಯ ವಿಷಯಗಳು, ಯಾರಿಗೆ ಲಾಭ ದೊರೆಯುತ್ತದೆನ್ನುವ ರಾಜಕೀಯ... ಇವೆಲ್ಲವೂ ಹೇಗೋ ಒಂದರಿಂದ ಒಂದು ಬೇರ್ಪಟ್ಟು ತುಂಡು ತುಂಡುಗಳಾಗಿದ್ದವು. ಹೀಗಾಗಲು ಸರಳವೂ ಸುಸ್ಪಷ್ಟವಾದದ್ದೂ ಆದ ಕಾರಣವೆಂದರೆ - ಈ ಸಂಗತಿಯು ಅತ್ಯಂತ ಸಂಕೀರ್ಣವಾದದ್ದಾಗಿದ್ದು ಪತ್ರಕರ್ತರು ಈ ಸಂಕೀರ್ಣ ಸಂಗತಿಯ ಒಂದೊಂದು ಅಂಶದ ತಿಳುವಳಿಕೆ ಒದಗಿಸಲೂ ಪತ್ರಿಕೆಯಲ್ಲಿ ಸಾಕಷ್ಟು ಸ್ಥಳವನ್ನು ಪಡೆದುಕೊಂಡು ಬರೆಯಬೇಕಾಗುತ್ತದೆ. ಆಗ ನಿಜವಾಗಿಯೂ ನನಗೆ ಅನ್ನಿಸಿದ್ದು... ನರ್ಮದಾ ಕೊಳ್ಳಕ್ಕೊಬ್ಬ ಬರೆಹಗಾರ ಬೇಕಾಗಿದೆ ಎಂದು... ಆಗ ನಾನು 'ದ ಗ್ರೇಟರ್ ಕಾಮನ್ ಗುಡ್' ಲೇಖನ ಬರೆದೆ.

ಲೈಲಾ : ನೀವು ಒಮ್ಮೆಲೆ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಿಕೊಂಡಿರೆಂತಲೂ ಮತ್ತು ನಿಮ್ಮ ಈ ಹೊಸ ಸಾಮಾಜಿಕ ಪ್ರಜ್ಞೆಯನ್ನು ಕೊಂಡೊಯ್ಯಲು ನರ್ಮದಾ ಬಚಾವೋ ಆಂದೋಲನವು ಅನುಕೂಲವಾದ ಮಾರ್ಗವಾಗಿ ಒದಗಿ ಬಂದಿತೆಂದು ನಿಮ್ಮ ವಿಮರ್ಶಕರು ಟೀಕಿಸುತ್ತಾರೆ. ಈ ಟೀಕೆಗೆ ನೀವೇನು ಹೇಳುತ್ತೀರಿ?

ಅರುಂಧತಿ: ಅವರು ಸರಿಯಿದ್ದರೂ ಇರಬಹುದು. ಇದು ಒಂದು ರೀತಿಯಲ್ಲಿ ಖುಶಿ ಕೊಡುವ ಆರೋಪ! ಒಮ್ಮೆಲೇ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದು ಒಂದು ಅಪರಾಧವೇ? ವಯಸ್ಸಿನ ಮಿತಿ ಅನ್ನುವುದೇನಾದರೂ ಇದಕ್ಕೆ ಇದೆಯೇ... ಒಂದು ವಯಸ್ಸಿನ ನಂತರ ಸಾಮಾಜಿಕ ಪ್ರಜ್ಞೆಯೆನ್ನುವುದನ್ನು ನಿವಾರಿಸಿಕೊಳ್ಳಬೇಕೆಂದು ಏನಾದರೂ ಇದೆಯೆ? ಆದರೆ ನೀವು ಉಲ್ಲೇಖಿಸುವ ವಿಮರ್ಶಕರು ಬಹುಶಃ ನನ್ನ ಈ ಮೊದಲಿನ ಕೃತಿಗಳನ್ನು ಗಮನಿಸುವುದರಿಂದ ಆರಂಭಿಸಬೇಕು.... ಉದಾಹರಣೆಗೆ ... ನನ್ನ

'ದ ಗಾಡ್ ಆಫ್ ಸ್ಮಾಲ್ ಥಿಂಗ್ಸ್' ಅಥವಾ ಸ್ಕೂಲ್ ಆಫ್ ಆರ್ಕಿಟೆಕ್ಚರ್‌ಗೆ ಹೋಗಿ ನಾನು ಬಿ.ಆರ್ಕ್‌ಗಾಗಿ ಬರೆದ ನನ್ನ ಥೀಸಿಸ್‌ನ್ನು ಓದಬೇಕು.ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಅರ್ಬನ್ ಅಫೇರ್ಸ್‌ನವರು ಪ್ರಕಟಿಸುತ್ತಿರುವ ಅರ್ಬನ್ ಇಂಡಿಯಾ ಪತ್ರಿಕೆಯ ಹಳೆಯ ಸಂಚಿಕೆಗಳನ್ನು ತೆಗೆದು ನೋಡಲಿ.ನಾನು ಲೇಖಕಿಯಾಗಿ 'ಪ್ರಸಿದ್ಧ'ಳಾಗುವ ಮೊದಲು ಸಂಡೇಪತ್ರಿಕೆಯಲ್ಲಿ ಪ್ರಕಟಿಸಿರುವ ಮೂರು ಪ್ರಬಂಧಗಳನ್ನು ಗಮನಿಸಲಿ.ಹಿಂದೆ, ಲೇಖಕಿಯಾಗಿ ಯಶಸ್ವಿಯಾಗದ್ದರಿಂದ ನಾನು ಇಂತಹ ಲೇಖನಗಳನ್ನು ಬರೆಯುತ್ತೇನೆಂದು ಟೀಕಿಸುತ್ತಿದ್ದರು.ಇಂದು ನಾನು 'ಯಶಸ್ವೀ' ಲೇಖಕಿಯಾಗಿರುವೆನೆನ್ನುವ ಕಾರಣದಿಂದ ಟೀಕಿಸುತ್ತಾರೆ !

ನರ್ಮದಾ ಬಚಾವೋ ಆಂದೋಲನವು ನನಗೆ ಅನುಕೂಲವಾಗಿ ಒದಗಿ ಬಂದಿತೆನ್ನುವ ಟೀಕೆಯ ಬಗ್ಗೆ ಹೇಳುವುದಾದರೆ...ಇಲ್ಲಿ ತನ್ನದೇ ರೀತಿಯದಾದ ಒಂದು ಹೋರಾಟವಿದೆ.ಒಂದು ನದಿಯ ಕೊಳ್ಳದ ಬಗೆಗೆ ಇಡೀ ಪ್ರಪಂಚದಲ್ಲಿ ಇಂಥ ಗಮನ ಸೆಳೆಯುವಂತಹ ಚಳುವಳಿ ಎಲ್ಲಿಯೂ ಏರ್ಪಟ್ಟಿಲ್ಲ.ಒಬ್ಬ ಲೇಖಕಿಯಾಗಿ ನಾನು ಈ ಹೋರಾಟವನ್ನು ಬೆಂಬಲಿಸಿ ಬರೆದಿದ್ದೇನೆ.ಅದನ್ನು ತಿರುಚಿ ಅದು ಅಸಹ್ಯವಾಗಿ ಕಾಣಿಸುವಂತೆ ಮಾಡಿದರೆ ಅದಕ್ಕೆ ನಾನೇನು ಹೇಳಲಿ? ಸರಳವಾಗಿ ಹೇಳಿಬಿಡಬೇಕೆನ್ನುವುದಾದರೆ -ನಾನು ನರ್ಮದಾ ಕೊಳ್ಳದ ರಕ್ಷಣೆಗಾಗಿನ ಈ ಚಳುವಳಿಯನ್ನು ಬೆಂಬಲಿಸುತ್ತೇನೆ.ಇಲ್ಲಿನ ಮುಖ್ಯ ಸಂಗತಿ ಇದಕ್ಕೆ ನಾನು ತೋರುತ್ತಿರುವ ಬೆಂಬಲದ ಬಗೆಗಿನ ಉದ್ದೇಶಗಳಲ್ಲ -ಹೋರಾಟವು ಇಲ್ಲಿನ ಮುಖ್ಯ ಸಂಗತಿ . ಬಿಚ್ಚಿಕೊಳ್ಳುತ್ತಿರುವ ಮಾನವತೆ ಮತ್ತು ಪರಿಸರದ ದುರಂತ ಇಲ್ಲಿನ ಮುಖ್ಯ ಸಂಗತಿ ...

ಲೈಲಾ : ಗೆಯ್ಲ್ ಓಮ್ವೆದ್ ಒಂದು ಲೇಖನ ಬರೆದು ನಿಮ್ಮ ಲೇಖನದ ಖಂಡನೆ ಮಾಡಿದ್ದಾಳೆ.ಆ ಲೇಖನದಲ್ಲಿ,ನಿಮ್ಮ ಪ್ರಬಂಧವನ್ನು ರೆಟಾರಿಕ್(ಅಲಂಕಾರ ಚಾತುರ್ಯ) ಎಂದು ಕರೆದಿದ್ದಾಳೆ.ದೊಡ್ಡ ಅಣೆಕಟ್ಟುಗಳು ಮತ್ತು ಬಾಂಬುಗಳು ಸಾರ್ವತ್ರಿಕವಾಗಿ ವಿನಾಶಕಾರಿಯಾದವು ಎನ್ನುವ ನಿಮ್ಮ ಹೇಳಿಕೆಯನ್ನು 'ಉಡಾಫೆ ' ಎಂದು ತಳ್ಳಿಹಾಕುತ್ತಾಳೆ.ದೊಡ್ಡ ಡ್ಯಾಮುಗಳ ಬಗೆಗಿನ ವಿರೋಧವನ್ನು 'ಪಾರಿಸರಿಕ ಭಾವೋದ್ರೇಕ '(ಎಕೋರೋಮಾಂಟಿಸಿಸ್ಮ್) ಎಂದು ಖಂಡಿಸುತ್ತಾಳೆ.ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

ಅರುಂಧತಿ :ನಾನು ಗೆಯ್ಲ್ ಓಮ್ವೆದ್‌ರವರು ದೊಡ್ಡ ಡ್ಯಾಮಿಗೆ ವಿರುದ್ಧವಾಗಿರುವವರನ್ನೆಲ್ಲ ಅಸಭ್ಯವೆನ್ನಿಸುವಂತೆ ಬೈದಾಡುತ್ತ ತಿರಸ್ಕರಿಸದೇ ಪ್ರತಿವಾದವೊಂದನ್ನು ಮಂಡಿಸಿರುವುದಕ್ಕಾಗಿ ನಾನು ವಿನಯಶೀಲಳಾಗಿ ಧನ್ಯವಾದಗಳನ್ನರ್ಪಿಸುತ್ತೇನೆ.ಅವರ ಲೇಖನವು ,ನನ್ನ ಲೇಖನದ ಬಗೆಗಿನ ಖಂಡನೆಗಿಂತ ಬಹುಮುಖ್ಯವಾಗಿ 'ನರ್ಮದಾ ಬಚಾವೋ ಆಂದೋಲನ್'ದ ಖಂಡನೆಯಾಗಿದೆ(ಅವರು ಎನ್‌ಬಿಎಯನ್ನು ಇಷ್ಟಪಡದಿರುವುದು ಸುಸ್ಪಷ್ಟವಿದೆ).ನನ್ನ ' ದ ಗ್ರೇಟರ್ ಕಾಮನ್ ಗುಡ್' ಪ್ರಬಂಧದಲ್ಲಿ ಅನೇಕ ಸತ್ಯ ಸಂಗತಿಗಳು ಮತ್ತು ಅಂಕಿಸಂಖ್ಯೆಗಳು ಇರುವುದರಿಂದ ಅದನ್ನು ಕೇವಲ ಅಲಂಕಾರಿಕವಾದದ್ದು ಮತ್ತು ಪಾರಿಸರಿಕ ಭಾವೋದ್ರೇಕ ಎಂದು ತೆಗೆದುಹಾಕಲು ಹೇಗೆ ಸಾಧ್ಯ?ನನಗೆ ಹಾಗೆನ್ನಿಸುವುದಿಲ್ಲ.ಗೇಲ್ ಓಮ್ವೆದ್‌ಳು ಪಾರಂಪರಿಕವಾದ 'ಹಸಿರು ಕ್ರಾಂತಿ ' ವಿಚಾರವಾದವನ್ನು ಒಪ್ಪಿಕೊಂಡವಳಾಗಿದ್ದು,ಪರಿಸರದ ಮೇಲೆ ಎಂತಹದೇ ಪರಿಣಾಮಗಳಾಗಲಿ, ಅವನ್ನು ಲೆಕ್ಕಿಸದೇ ಕಡಿಮೆ ಅವಧಿಯಲ್ಲಿ ಹೆಚ್ಚು ಉತ್ಪಾದನೆ ಮಾಡಬೇಕೆನ್ನುವ ವಿಚಾರದವಳು.ದೀರ್ಘ ಕಾಲದವರೆಗೆ ಬಾಳುವಿಕೆಯ ಪ್ರಶ್ನೆಯನ್ನೂ ಅವರು ಪರಿಗಣಿಸುವುದಿಲ್ಲ. ಆ ವಿಚಾರದ ಅನುಸಾರ ಸಾಗಿದ್ದರಿಂದ ಸಹಸ್ರಗಟ್ಟಲೆ ಹೆಕ್ಟೇರ್ ಭೂಮಿಯು ಜೌಗು ಹಿಡಿದಿದ್ದು ಇನ್ನಷ್ಟು ಜಮೀನು ಸೌಳುಹಿಡಿದಿದೆ.ಇದು ಸ್ಟಿರಾಯ್ಡ್ ಬಳಕೆಯಿಂದುಂಟಾದ ರೋಗವಿದ್ದಂತೆ!

ಬಳಕೆಯನ್ನು ಬಿಡುವುದು ಭಾವೋದ್ರೇಕದ ಕ್ರಿಯೆ ಎನ್ನುವುದಾದರೆ ಆಗ ಬಹುಶಃ ನಾನು ಭಾವೋದ್ರೇಕದವಳೇ ಹೌದು.ಗೇಲ್‌ಳು ಪ್ಯಾಟ್ರಿಕ್ ಮ್ಯಾಕ್‌ಕಲಿ ಬರೆದ 'ಸೈಲೆನ್ಸ್‌ಡ್ ರಿವರ್ಸ್' ಪುಸ್ತಕ ಓದಬೇಕು.ಅವರ ಪ್ರಶ್ನೆಗಳಿಗೆ ಬಹುಶಃ ಆ ಪುಸ್ತಕವು ಸಮರ್ಪಕವಾದ ಉತ್ತರಗಳನ್ನು ಹೇಳುತ್ತದೆ.ದೊಡ್ಡ ಆಣೆಕಟ್ಟುಗಳು ದೊಡ್ಡ ಪ್ರಮಾಣದ ವಿನಾಶವನ್ನು ತರುವ ಉಪಕರಣಗಳಾಗಿವೆ ಎಂದು ಹೇಳುವುದು ಉಡಾಫೆಯ ಮಾತಲ್ಲ.ಆಕೆಯ ವಿಚಾರಗಳ ಬಗೆಗೆ ನನ್ನಿಂದ,ಯಾರದೋ ಜೊತೆಗೆ ಮಾತಾಡುವಾಗ ಕುಂತಿಗೆ ತಕ್ಕ ಬೊಂತೆ ರೀತಿಯದಕ್ಕಿಂತ ಹೆಚ್ಚಿನ ಪ್ರತಿಕ್ರಿಯೆಯ ಅವಶ್ಯಕತೆ ಇದೆ.ನಾನು ಕುಳಿತುಕೊಂಡು ಆ ಬಗ್ಗೆ ಬರೆಯುತ್ತೇನೆ.ಈಗ ಸದ್ಯಕ್ಕೆ ಸರಳವಾಗಿ ನಾನು ಹೇಳಬಯಸುವುದಿಷ್ಟೇ - ಭಾರತದ ಸಮಸ್ಯೆಗಳಿಗೆ ದೊಡ್ಡ ಡ್ಯಾಮುಗಳು ಪರಿಹಾರವೆಂದು ಯಾರಾದರೂ ನನಗೆ ಮನನ ಮಾಡಿಕೊಡಲು ಸಾಧ್ಯವಾಗಲೆಂದು ಬಯಸುತ್ತೇನೆ.ಗೇಲ್‌ಳಿಗೆ ನನ್ನ ಮನಃಪರಿವರ್ತನೆಯನ್ನು ಸಾಧಿಸಲು ಆಗಿಲ್ಲ.ಆಕೆ ಅಲ್ಲಿ ಆ ನದಿಯ ಕೊಳ್ಳಕ್ಕೆ ಬರಲು ಸಾಧ್ಯವಾದರೆ ...ಎಂದು ನಾನು ತೀವ್ರವಾಗಿ ಬಯಸುತ್ತೇನೆ.ಒಂದು ಜನಾಂಗದ ನಾಗರೀಕತೆಯನ್ನು ಮುಳುಗಿಸಿ ಹಾಕಿದ್ದನ್ನು ನೀವು ಹೇಗೆ ಸರಿಪಡಿಸುತ್ತೀರಿ? ಅವರ ಪುನರ್ವಸತಿ ಸಾಧ್ಯವಿದೆ ಎಂದು ನಟಿಸುವುದನ್ನು ನಾವು ನಿಲ್ಲಿಸಬೇಕು.ಅದು ಸಾಧ್ಯವಿಲ್ಲ.ಕಳೆದ ಹದಿನೈದು ವರ್ಷಗಳಲ್ಲಿ ಟ್ರಿಬ್ಯೂನಲ್ಲಿನ ಆಜ್ಞೆಗೆ ಅನುಗುಣವಾಗಿ ಮುಳುಗಡೆಯಾಗುವ ಪ್ರದೇಶದಲ್ಲಿನ ಒಂದಾದರೂ ಹಳ್ಳಿಯ ಪುನರ್ವಸತಿ ಸಾಧ್ಯವಾಗಿಲ್ಲ.ಕಳೆದ ಐವತ್ತು ವರ್ಷಗಳ ಕಾಲದಲ್ಲಿ ಈ ದೊಡ್ಡ ಡ್ಯಾಮುಗಳ ಜಲಾಗಾರಗಳಿಂದ ೩೩ ಮತ್ತು ೪೦ ಮಿಲಿಯನ್ ಜನರು ತಮ್ಮ ಬೇರು ಕಳೆದುಕೊಂಡಿದ್ದಾರೆ.ಸ್ಟಾಲಿನ್‌ನ ರೀತಿಯ ಇಂಥ ಕ್ರಮಗಳನ್ನು ಬೆಂಬಲಿಸುವ ನಾವು ಈ ಜನಕ್ಕೆ ಪುನರ್ವಸತಿ ದೊರೆತಿಲ್ಲವೆನ್ನುವುದು ಗೊತ್ತಾದಾಗಲಾದರೂ ಅವರನ್ನು ಬೆಂಲಿಸುವಷ್ಟು ಪ್ರಾಮಾಣಿಕರಾಗಿರಬೇಕು.ನಾಟೋದ ಬಾಂಬುಗಳ ಸ್ಫೋಟದಿಂದ ಭಯಗ್ರಸ್ತವಾದ ಹುಲಿಗಳಂತೆ,ನಮ್ಮ ಅಂಗಗಳನ್ನು ನಾವೇ ಊನಗೊಳಿಸಿಕೊಳ್ಳುತ್ತಿದ್ದೇವೆ ಎನ್ನುವುದನ್ನು ಒಪ್ಪಿಕೊಳ್ಳುವಷ್ಟಾದರೂ ನಾವು ಪ್ರಾಮಾಣಿಕರಾಗಿರಬೇಕು...

ಲೈಲಾ : ನಿಮ್ಮ ರ್‍ಯಾಲಿ ಫಾರ್ ವ್ಯಾಲಿಗೆ ಗುಜರಾತಿನಲ್ಲಿ ಸಾಕಷ್ಟು ವಿರೋಧವಿದ್ದಿತು,ಮತ್ತು ಸ್ಥಳೀಯ ಪತ್ರಕರ್ತರು ಬಹಿರಂಗವಾಗಿ ವಿರೋಧ ವ್ಯಕ್ತಪಡಿಸುತ್ತಿದ್ದರು.ಅಲ್ಲಿ ಏನು ನಡೆಯಿತೆಂದು ಹೇಳುತ್ತೀರಾ?

ಅರುಂಧತಿ : ಗುಜರಾತ ಸರ್ಕಾರವು ಕೆವಾಡಿಯಾ ಕಾಲನಿ ಮತ್ತು ಡ್ಯಾಮ್ ಸೈಟನ್ನು ಪೋಲೀಸರಿಂದ ತುಂಬಿದ್ದಿತು.ಅವರು ಸೆಕ್ಶನ್ ೧೪೪ನ್ನು ಘೋಷಿಸಿದರು.ಅವರು ಕವಾಂತ್‌ನಲ್ಲಿಯ ಸಂತೆಯನ್ನು ನಿಷೇಧಿಸಿದರು.ಅವರು ರ್‍ಯಾಲಿಗೆ ವಡೋದರಾದ ಮೂಲಕ ಬರುವವರನ್ನೆಲ್ಲ ತಡೆಹಾಕಿ ಬರದಂತೆ ಮಾಡಿದರು.ಕೆಲವು ವೃತ್ತಪತ್ರಿಕೆಗಳು ವಿಜಯೋನ್ಮಾದದಲ್ಲಿ,ರ್‍ಯಾಲಿಯು ಗುಜರಾತನ್ನು ರಾತ್ರಿಯಲ್ಲಿ ಪ್ರವೇಶಿಸಲು ಪ್ರಯತ್ನಿಸಿತೆಂದೂ ಮತ್ತು ಅದನ್ನು ಹಿಮ್ಮೆಟ್ಟಿಸಲಾಯಿತೆಂದೂ ಬರೆದವು. ಇದು ಗುಜರಾತಿನ ನೈತಿಕ ವಿಜಯವೆಂದು ಆ ಪತ್ರಿಕೆಗಳು ಬರೆದವು.ಸುಳ್ಳುಗಳನ್ನು ಹರಡಲು ಅವರು ಮಾಡಿದ ಪ್ರಯತ್ನಗಳು ವಿಚಿತ್ರವಾದವುಗಳು! ಇದಕ್ಕೂ ಮೊದಲು ಬಿಜೆಪಿ ಮತ್ತು ಕಾಂಗ್ರೆಸ್ ಗೂಂಡಾಗಳು ನನ್ನ ಪುಸ್ತಕ ಸುಡುವ ಹುರುಡು ತೋರಿಸಿದ್ದರು.ನನ್ನನ್ನು ಮಾತನಾಡಲು ಆಮಂತ್ರಿಸಿದ್ದ ಅಹಮದಾಬಾದ್‌ನ ಸಭೆಯಲ್ಲಿ ಗೊಂದಲ ಮಾಡುವುದಾಗಿ ಹೆದರಿಸಿದ್ದರಿಂದ ನನಗೆ ನೀಡಿದ ಆಮಂತ್ರಣವನ್ನು ಹಿಂತೆಗೆದುಕೊಳ್ಳಲಾಯಿತು.ಯೋಜನಾ ವೆಚ್ಚವೆಂದು ಲೆಕ್ಕ ಹಾಕಲಾಗಿರುವ ೪೪೦೦೦ ಕೋಟಿ ರೂಪಾಯಿಗಳ ದೊಡ್ಡ ಮೊತ್ತವನ್ನು ಬಿಟ್ಟುಕೊಡಲು ಯಾವ ರಾಜಕೀಯ ಪಕ್ಷ ಸಿದ್ಧವಾದೀತು! ಇಂಥ

ದುಡ್ಡಿನಿಂದ ಚುನಾವಣೆಗಳ ಪ್ರಚಾರಕಾರ್ಯ ಹಮ್ಮಿಕೊಳ್ಳಬೇಕಾಗುತ್ತದೆನ್ನುವ ಅನಿವಾರ್ಯತೆಯನ್ನು ಕಲ್ಪಿಸಿಕೊಳ್ಳಿರಿ.

ಇಂದೋರ್‌ನಲ್ಲಿ ಸಹಿತ, ಎಸ್.ಕುಮಾರ್ ಅವರ ಅಥವಾ ನಿಗಾವ್ ಅವರು ನಿಯಮಿಸಿದವರೆನ್ನುವ ಸಂಶಯಕ್ಕೆ ಈಡಾದ ಪತ್ರಕರ್ತರಲ್ಲಿನ ಕೆಲವರು, ಮತ್ತೆ ಮತ್ತೆ ಟೆಲಿವಿಜನ್ ಕ್ಯಾಮರಾಗಳನ್ನು ಒಮ್ಮೆಲೆ ಸುರುಮಾಡುತ್ತ, ನನ್ನನ್ನು ಪರದೇಶದ ಏಜೆಂಟ್ ಎಂದು ಜರೆಯುತ್ತಿದ್ದರು. ಈ ಎಲ್ಲ ಉಚಾವಣೆಯಿಂದ ಆದ ಪರಿಣಾಮವೆಂದರೆ ಗುಜರಾತಿನ ಜನತೆಯನ್ನು ಮೋಸಗೊಳಿಸಲಾಯಿತು. ಮತ್ತು ಅವರಿಗೆ ಸತ್ಯ ಸಂಗತಿಯು ತಿಳಿಯದಂತೆ ನೋಡಿಕೊಳ್ಳಲಾಯಿತು. ಕುತೂಹಲದ ವಿಷಯವೆಂದರೆ ಅಂಚೆಯ ಮೂಲಕ ನನ್ನ '*ಗ್ರೇಟರ್ ಕಾಮನ್ ಗುಡ್* ಪುಸ್ತಕಕ್ಕೆ ಹೆಚ್ಚಿನ ಬೇಡಿಕೆ ಬಂದಿದ್ದು ಗುಜರಾತಿನಿಂದಲೇ! ಅವರ ಮೂಗಿಗೆ ಸತ್ತ ಇಲಿಯ ವಾಸನೆ ತಲುಪಲು ಆರಂಭಿಸಿದೆ ಎನ್ನಿಸುತ್ತದೆ. ಎಷ್ಟಾದರೂ ಹಳೆಯ ಡೈನೋಸಾರ್‌ನಂತಹ ಈ ದೊಡ್ಡ ಡ್ಯಾಮನ್ನು ಸೃಷ್ಟಿಸಲು ಬಳಕೆಯಾಗುವುದು ಅವರ ದುಡ್ಡೇ ಅಲ್ಲವೆ ! ಮತ್ತು ಇದರಿಂದ ಅವರಲ್ಲಿ ಹೆಚ್ಚಿನವರಿಗೆ ಏನೂ ದಕ್ಕುವುದಿಲ್ಲ. ಎಲ್ಲ ಕಾಲದಲ್ಲಿಯೂ ಎಲ್ಲ ಜನರನ್ನು ಮೂರ್ಖರನ್ನಾಗಿಸುವುದು ಸಾಧ್ಯವಿಲ್ಲ. ಇಂದಿಲ್ಲ ನಾಳೆ ನಿಜವು ಸೋಸಿ ತಲುಪಿಯೇ ತಲುಪುತ್ತದೆ ...ಆಗ ನಿಜವಾದ ನರಕದ ಕಲ್ಪನೆ ಬಂದೇ ಬರುತ್ತದೆ.

ಲೈಲಾ : ರ್‍ಯಾಲಿಯ ಒಂದಿಷ್ಟು ಕ್ಷಣಗಳಲ್ಲಿ ಸತತವಾದ ಸಾರ್ವಜನಿಕರ ಆಕರ್ಷಣೆಯ ಕೇಂದ್ರವಾದದ್ದಕ್ಕೆ ಹೊಂದಿಕೊಳ್ಳುವುದು ನಿಮಗೆ ಸಾಧ್ಯವಾಗಲಿಲ್ಲವೆನಿಸುತ್ತದೆ ...ಸಂಪೂರ್ಣ ಬಳಲಿ ಹೋದಂತಹ ರೀತಿ, ಅದನ್ನೇ ಅದನ್ನೇ ಪುರಾವರ್ತಿಸುವುದು ಮತ್ತು ರ್‍ಯಾಲಿಗೆ ವಿರುದ್ಧವಾಗಿದ್ದ ಆಕ್ರಮಣಶೀಲರಾದ ಪತ್ರಕರ್ತರನ್ನು ನಿಭಾಯಿಸುವಲ್ಲಿ ಕಷ್ಟವಾಗುತ್ತಿದ್ದಂತಿತ್ತು. ಒಂದಿಷ್ಟು ಕ್ಷಣಗಳವರೆಗಾದರೂ ಸಾರ್ವಜನಿಕ ವ್ಯಕ್ತಿಯಾಗಿರುವುದು ಕಷ್ಟವೆನಿಸುತ್ತದೆಯೇ?

ಅರುಂಧತಿ : ಹೌದು. ಹಾಗನಿಸಿದ್ದು ನಿಜ .ಸಾರ್ವಜನಿಕ ಭಾಷಣಗಳ ಬಗೆಗಾಗಲೀ ಅಥವಾ ದೊಡ್ಡ ಸಂಖ್ಯೆಯ ಜನಸಾಗರವನ್ನು ಎದುರಿಸುವುದರಲ್ಲಾಗಲೀ ನನ್ನ ಜೀವ ತುಡಿಯುವುದಿಲ್ಲ. ಅದರಲ್ಲಿಯೂ ನನ್ನನ್ನು ತೀವ್ರವಾದ ಬಳಲಿಕೆಗೆ ಈಡು ಮಾಡಿದಂಥ ಸಂಗತಿಯೆಂದರೆ ಕೆಲವು ಪತ್ರಕರ್ತರು ತೋರಿದ ವಿನಾಕಾರಣವಾದ, ತಮ್ಮ ಮೂಗಿನ ನೇರಕ್ಕೆ ಸರಿಹೊಂದುವ ಪರಿಣಾಮವನ್ನು ಸಾಧಿಸಲು ನಡೆಸುತ್ತಿದ್ದ ಆಕ್ರಮಕವಾದ ಉತಾವಳಿಗಳು. ಅವರು ಭಯೋತ್ಪಾದಕರಾಗಿದ್ದರು... ಅವರನ್ನು ಪತ್ರಕರ್ತರೆನ್ನುವುದಕ್ಕಿಂತ ಠಕ್ಕರೆನ್ನುವುದೇ ಹೆಚ್ಚು ಸರಿಯಾದದ್ದು. ಬಾಡಿಗೆ ಗೂಂಡಾಗಳು!... ಈ ಸುಳ್ಳುಗಳು, ಬೇಕೆಂತಲೇ ತಪ್ಪು ಮಾಹಿತಿಗಳನ್ನು ನೀಡುವುದು...ಇದು ಒಂದು ರೀತಿಯಾದ ಬ್ಲಾಕ್‌ಮೇಲ್ ಇದ್ದಂತೆ ...ಇದು ನಿಜವಾಗಿಯೂ ದೊಡ್ಡ ಸಮಸ್ಯೆ. ಈ ವಿಷಯದ ಬಗ್ಗೆ ಏನು ಹೇಳಬೇಕೆಂದು ...ಹೇಗೆ ಹೇಳಬೇಕೆಂಬುದು ನನಗೇ ತಿಳಿಯುತ್ತಿಲ್ಲ. ಯಾಕೆಂದರೆ ಇದು ಅಸಹ್ಯದ ಅನೈತಿಕತೆಯ ಮೊಟ್ಟೆ.. ಆ ಕಡೆಗೆ ಏನೋ ದುಷ್ಟವಾದ ಕೊಳಕಿನ ವ್ಯವಸ್ಥೆ ಏರ್ಪಡುತ್ತಿದೆ...ಇಂಥದ್ದರಲ್ಲಿ ಸಾರ್ವಜನಿಕ ವ್ಯಕ್ತಿಯಾಗುವುದೆಂದರೆ ಕಷ್ಟಕರವಾದದ್ದಲ್ಲವೆ? ಇದೆಲ್ಲ ಇರಲಿ ...ನಾನು ಈ ರ್‍ಯಾಲಿಯಲ್ಲಿ ತೊಡಗಿಕೊಳ್ಳುವುದಕ್ಕೆ ಮುಖ್ಯ ಕಾರಣವೇನೆಂದರೆ ನನ್ನ ಜೊತೆಗೆ ಬರುವ ಜನರು ಕೊಳ್ಳದಲ್ಲಿನ ಜನರೊಂದಿಗೆ ತಮ್ಮ ತಮ್ಮ ಸ್ವತಂತ್ರವಾದ ಸ್ನೇಹವನ್ನು ,ಸಂಬಂಧವನ್ನು ಸಾಧಿಸುತ್ತಾರೆ ...ಹಾಗೆಯೇ ಅವರು ಇಲ್ಲಿನ ಜನರ ಕಷ್ಟಗಳ ನಿವಾರಣೆಗೆ ತುಡಿಯುವ ಹೋರಾಟಗಾರರೂ ಆದಾರು ಎನ್ನುವ ಕಾರಣಕ್ಕಾಗಿ. ಒಂದಿಷ್ಟು ಕಾಲಾವಧಿಗಾದರೂ ನಾನು

ಸಾರ್ವಜನಿಕ ವ್ಯಕ್ತಿಯಾಗಿರಲು ಸಾಧ್ಯವಾಗುವುದಿಲ್ಲವೆಂದು ಒಪ್ಪಿಕೊಳ್ಳುತ್ತಲೇ ...ಭವಿಷ್ಯತ್ತಿನಲ್ಲಿ ನನ್ನ ಬರೆಹವಾದರೂ ಸಾರ್ವಜನಿಕ ವ್ಯಕ್ತಿತ್ವ ಪಡೆದುಕೊಳ್ಳುತ್ತದೆನ್ನುವುದನ್ನು ನೋಡಲು ಹಾರೈಸುತ್ತೇನೆ...ಆದರೆ ನನ್ನ ಜೀವನವು ಸಂಪೂರ್ಣವಾಗಿ ನನ್ನದು,ಖಾಸಗಿಯಾದದ್ದು ...ಅಂದರೆ ಇನ್ನುಮುಂದೆ ಯಾವ ರ್‍ಯಾಲಿಗಳೂ ಇಲ್ಲ ...ಯಾವ ಪತ್ರಿಕಾಗೋಷ್ಠಿಗಳೂ ಇಲ್ಲ ...

ಲೈಲಾ : ನಿಮಗೆ ಜನ ತೋರಿದ ಪ್ರತಿಕ್ರಿಯೆ ಅದ್ಭುತವಾದುದಾಗಿತ್ತು.ನಿಮ್ಮನ್ನು ಸ್ವಾಗತಿಸಲು ಕಾಯುತ್ತಿದ್ದ ಜನತೆ ನಿಮ್ಮನ್ನು ದೇವತೆಯ ಪಟ್ಟಕ್ಕೇರಿಸಿದ್ದರು.ಅವರಲ್ಲಿ ಒಂದಿಷ್ಟು ಜನ ಮಾತ್ರ ನಿಮ್ಮನ್ನು ಮೊದಲು ಭೇಟಿಯಾದವರು ,ನಿಮಗೆ ಮೊದಲೇ ಪರಿಚಯವಿದ್ದವರು.ಉಳಿದ ಬಹುತೇಕ ಜನಸಮೂಹಕ್ಕೆ ನೀವು ಸಂಪೂರ್ಣವಾಗಿ ಅಪರಿಚಿತರು .ಹೀಗಿರುವಾಗ ಜನರಿಂದ ಇಂಥ ಭಾವನೆ ವ್ಯಕ್ತವಾದದ್ದು ಹೇಗೆ?

ಅರುಂಧತಿ: ನಾನು ಇದನ್ನು ಹೇಗೆ ವಿವರಿಸಬೇಕೆನ್ನುವುದು ನನಗೇ ತಿಳಿಯುತ್ತಿಲ್ಲ...ನನಗೆ ಹೀಗನಿಸತ್ತೆ... ಏನಂದರೆ ರ್‍ಯಾಲಿಗೆ ಬಂದ ಪ್ರತಿಯೊಬ್ಬರಿಗೂ ಅವರದೇ ಆದ ಸಿದ್ಧಾಂತ -ವೈಚಾರಿಕತೆಗಳಿದ್ದವು.ನನ್ನ ವಿಚಾರ ಸರಣಿಯೆಂದರೆ ...ಕಳೆದ ಫೆಬ್ರುವರಿಯಿಂದ (ಸುಪ್ರೀಮ್ ಕೋರ್ಟು ತಾನು ನೀಡಿದ ತಡೆಯಾಜ್ಞೆಯನ್ನು ಹಿಂತೆಗೆದುಕೊಂಡ ಮೇಲೆ) ಕೊಳ್ಳದಲ್ಲಿ ವಾಸಿಸುವ ಜನರ ಸ್ಥಿತಿಯು ಅಧ್ವಾನಗೊಳ್ಳುತ್ತ ಹೋಯಿತು.ರಾಷ್ಟ್ರದ ಸಂಸ್ಥೆಗಳೆಲ್ಲವೂ ಅವರ ಕೈಬಿಟ್ಟಂತಾಗಿ ಅವರು ನಿಸ್ಸಹಾಯಕರಾಗಿ ಬಿಟ್ಟರು.ಮಳೆಯು ಆರಂಭವಾಯಿತು.ಅವರ ಮನೆ ಮಠ ಹೊಲ ಗದ್ದೆಗಳು ಮುಳುಗಿ ಹೋಗುತ್ತವೆ ...ಅವರದೆನ್ನುವ ತಾಣವಾವುದೂ ಇಲ್ಲ.ಕಳೆದ ನಾಲ್ಕು ವರ್ಷಗಳಿಂದ ಕೋರ್ಟಿನ ತಡೆಯಾಜ್ಞೆಯ ಮೂಲಕ ಹೋರಾಟವು ನಿಷ್ಕ್ರಿಯಗೊಂಡಿದ್ದಿತು.ಈಗ ಒಮ್ಮೆಲೆ ಜನತೆ ಒಗ್ಗೂಡಿ ತಮ್ಮ ಬಲವನ್ನು ಕ್ರೋಢೀಕರಿಸಿಕೊಳ್ಳುವ ಅಗತ್ಯ ಉಂಟಾಯಿತು.ಅವರು ತಮ್ಮ ಹೋರಾಟದ ಬಲವನ್ನು ತೋರಿಸಬೇಕಾಗಿದೆ.ಇದಕ್ಕಾಗಿ ಅವಕಾಶ ಸೃಷ್ಟಿಯಾಗಬೇಕಿದ್ದಿತು.ನಾನು ಅಂಥ ಒಂದು ಅವಕಾಶವಾದೆನೆನ್ನಿಸುತ್ತದೆ...ಬಹುಶಃ ಯಾರಾದರೂ... ಪ್ರಸಿದ್ಧರಾದವರು ಅವರಲ್ಲಿಗೆ ಬಂದು ಸ್ಪಷ್ಟವಾಗಿ,ನಿಃಸಂದಿಗ್ಧವಾಗಿ 'ನಾನು ನಿಮ್ಮೊಂದಿಗಿದ್ದೇನೆ ' ಎಂದು ಹೇಳಬೇಕಾಗಿದ್ದಿತು.ಬಹುಶಃ ನಾನು ಅದನ್ನು ಮಾಡಿರಬಹುದು...ಆದರೆ ನಾನೊಬ್ಬಳೇ ಅಲ್ಲ.ಅವರಿಗೆ ಈ 'ರ್‍ಯಾಲಿ ಫಾರ್ ವ್ಯಾಲೀ'ಯಲ್ಲಿ ೫೦೦ರಷ್ಟು ಜನರಿರುವುದು ಗೊತ್ತಿದ್ದಿತು.ಅವರಲ್ಲಿ ಅನೇಕರು ಪತ್ರಕರ್ತರೆನ್ನುವುದೂ ಗೊತ್ತಿದ್ದಿತು.ಕೊಳ್ಳವು ಮೈಮುರಿದು ಎದ್ದು ತನ್ನ ಬಲವನ್ನು ತೋರಿಸಿತಲ್ಲವೆ. ಹೇಗೆನ್ನುತ್ತೀರಿ!

ಲೈಲಾ : ನೀವು ಮೇಧಾ ಪಾಟ್ಕರ್ ಅವರೊಂದಿಗೆ ಚರ್ಚಿಸಿದಿರಲ್ಲವೆ? ಅವರು ನಿಮ್ಮಿಂದ ಏನನ್ನು ಅಪೇಕ್ಷಿಸುತ್ತಾರೆ?

ಅರುಂಧತಿ: ನಾನು ಅವರೊಂದಿಗೆ ಹೆಚ್ಚು ಸಮಯ ಜೊತೆಯಾಗಿರಲು ಸಾಧ್ಯವಾಗಿಲ್ಲ.ಆದರೆ ಅವರೊಬ್ಬ ಅಪರೂಪದ ಮಹಿಳೆ ಎನ್ನುವುದನ್ನು ಇದ್ದಷ್ಟು ಕಾಲದಲ್ಲಿಯೇ ತಿಳಿದುಕೊಂಡಿದ್ದೇನೆ...ಅವರು ನನ್ನಿಂದ ಏನನ್ನು ಅಪೇಕ್ಷಿಸುತ್ತಾರೆ ...ಹಾಂ .ಇದನ್ನು ನೀವು ಅವರನ್ನು ಕೇಳಬೇಕಲ್ಲವೆ?ನನಗನಿಸುವುದೆಂದರೆ ... ಅವರು ಬಯಸುವುದೆಂದರೆ ...ಕೊಳ್ಳದಲ್ಲಿರುವ ಎಲ್ಲರೂ ಬಯಸುವುದನ್ನೇ ಅವರೂ ಅಪೇಕ್ಷಿಸುತ್ತಿರಬೇಕು.ಏನೆಂದರೆ ,ನನ್ನ ಬೆಂಬಲ ,ಲೇಖಕಿಯಾಗಿ ನನ್ನ ಬೆಂಬಲ...ಮನುಷ್ಯಳಾಗಿ ನನ್ನ ಬೆಂಬಲ ...

ಲೈಲಾ :ಹಮ್ ತುಮ್ಹಾರೆ ಸಾಥ ಹೈ (ನಾವು ನಿಮ್ಮೊಂದಿಗಿದ್ದೇವೆ) ಎಂದು ನೀವು ಘೋಷಣೆ ಕೂಗುತ್ತ

ಇರುವಾಗ ನೀವು ಅದನ್ನು ಹೇಗೆ ಅರ್ಥೈಸಿಕೊಳ್ಳುತ್ತೀರಿ ...ಅಂದರೆ ಯಾವ ರೀತಿಯಲ್ಲಿ ನೀವು ಇಲ್ಲಿನ ಜನರೊಂದಿಗಿರುತ್ತೀರಿ?

ಅರುಂಧತಿ : 'ನಾನು ನಿಮ್ಮೊಂದಿಗಿದ್ದೇನೆ' ಎನ್ನುವುದನ್ನು ಅಕ್ಷರಶಹ ಭಾವಿಸಿ ಹೇಳಿದ್ದು.ಇಡೀ ರ್‍ಯಾಲಿ ಫಾರ್ ವ್ಯಾಲಿಯ ಮೂಲ ಉದ್ದೇಶ ಸಂಬಂಧಗಳನ್ನು ಸ್ಥಾಪಿಸುವುದಾಗಿತ್ತು...ನಗರ - ಹಳ್ಳಿ, ಲೇಖಕ- ರೈತ, ಸಂಗೀತಕಲಾವಿದ - ಮೀನುಗಾರ ...ಮೂಲ ಚಿಂತನೆಯೇನೆಂದರೆ, ನಾವೆಲ್ಲರೂ ಈ ಭೂಮಿಯ ನಾಗರಿಕರು...ನಾವು ನರ್ಮದಾ ಕೊಳ್ಳದ ಹೋರಾಟವನ್ನು ನಮ್ಮೆಲ್ಲರ ಸಾಮಾನ್ಯ ಆಸಕ್ತಿಯನ್ನಾಗಿಸಿಕೊಳ್ಳಬೇಕೆನ್ನುವುದು.ನನಗೆ ಈ ಭಿನ್ನಭಿಪ್ರಾಯದ ರಾಜಕೀಯ ಕುರಿತಂತೆ ಇರುವ ಚರ್ಚೆಯ ಬಗ್ಗೆ ಬಹಳ ಆಸಕ್ತಿ ಇದೆ...ಮುಖ ಕಹಿ ಮಾಡಿಕೊಂಡು ಬಹಳಷ್ಟು ಜನರು ಇಲ್ಲಿನ ಹೋರಾಟವನ್ನು ಕಾನೂನು ಬಾಹಿರವಾದುದೆಂದು ಸಾಧಿಸಲು ಪ್ರಯತ್ನಿಸುವುದರ ಬಗ್ಗೆ ನನಗೆ ಕುತೂಹಲವಿದೆ...ಎನ್‌ಬಿಎಯನ್ನು ಇವರು ನಗರದ ತಂಟೆಕೋರರೆಂದು ತಿರಸ್ಕರಿಸುತ್ತಾರೆ;ಅರುಂಧತಿ ರಾಯ್ ದಂತಗೋಪುರದಲ್ಲಿರುವ ಲೇಖಕಿ ಎನ್ನುತ್ತಾರೆ;ರ್‍ಯಾಲಿಯಲ್ಲಿ ಪಾಲ್ಗೊಂಡ ಕಾರ್ಯಕರ್ತರನ್ನು ಹೊರದೇಶಗಳ ಏಜೆಂಟರೆನ್ನುತ್ತಾರೆ...ಅವರು ಹೇಳುವುದೆಂದರೆ ಸ್ಥಳೀಯ ಜನತೆಯದೇ ನಿಜವಾದ ಪ್ರತಿಭಟನೆ, ಅದರಲ್ಲಿಯೂ ಆದಿವಾಸಿಗಳ ಮತ್ತು ದಲಿತರ ಪ್ರತಿಭಟನೆ ನಿಜವಾದದ್ದೆನ್ನುತ್ತಾರೆ. ಒಂದೊಮ್ಮೆ ಇವರನ್ನು ಉಳಿದ ಸಂಘಟನೆಗಳು ಮತ್ತು ಬೆಂಬಲಿಗರಿಂದ ಬೇರ್ಪಡಿಸಲು ಸಾಧ್ಯವಾದರೆ, ಅವರು ಇವರನ್ನು ತಿಗಣೆಗಳನ್ನು ಹೊಸಕಿ ಹಾಕಿದಂತೆ ಹೊಸಕಿ ಹಾಕುತ್ತಾರೆ ಮತ್ತು ಅಲ್ಲಿಗೆ ಈ ಹೋರಾಟವು ಕೊನೆಗೊಂಡುಹೋಗುತ್ತದೆ. ಅತ್ಯಂತ ಕುತೂಹಲದ ಸಂಗತಿಯೆಂದರೆ ,ಸ್ಥಳೀಯ ಹೋರಾಟಗಾರರ ಹೋರಾಟ ಮಾತ್ರ ನಿಜವಾದದ್ದೆನ್ನುವ ಈ ಜನರು ಸಂಪೂರ್ಣವಾಗಿ ನಗರಗಳ ಇಂಜನಿಯರುಗಳು, ಮತ್ತು ಯೋಜನಾಕರ್ತರು ಸಿದ್ಧಪಡಿಸಿದ ಯೋಜನೆಗಳನ್ನು ಅವುಗಳ ಪ್ರಯೋಜನಶೀಲತೆಯ ಬಗ್ಗೆ ಒಂದಿಷ್ಟೂ ಪ್ರಶ್ನಿಸದೆ ಒಪ್ಪಿಕೊಳ್ಳುವ ಇವರಿಗೆ ಇವರ ಕೃತ್ಯಗಳ ಬಗೆಗಿನ ವಿಮರ್ಶೆ ಮಾತ್ರ ಕೇವಲ ಸ್ಥಳೀಯ ಹಳ್ಳಿಗರಿಂದಲೇ ಆಗಬೇಕಂತೆ ! ನರ್ಮದಾ ಕೊಳ್ಳದ ಬಗೆಗಿನ ಹೋರಾಟದ ದೊಡ್ಡ ಬಲವೆಂದರೆ ಎಲ್ಲ ಮೂಲಗಳಿಂದಲೂ ಈ ಯೋಜನೆಯ ಬಗೆಗೆ ಖಂಡನೆ ವ್ಯಕ್ತವಾಗುತ್ತಿರುವುದು. ಆದಿವಾಸಿಗಳಿಂದ, ದಲಿತರಿಂದ, ನಿಮಾರ ಬಯಲಿನ ಪಾತಿದಾರರಿಂದ, ಐಐಟಿ ಇಂಜನಿಯರುಗಳಿಂದ, ಲೇಖಕರಿಂದ, ಚಿತ್ರಕಲಾವಿದರಿಂದ, ಗೃಹ ನಿರ್ಮಾಣ ಶಿಲ್ಪ ತಂತ್ರಜ್ಞರಿಂದ, ಚಲನಚಿತ್ರ ನಿರ್ಮಾಪಕರಿಂದ ಮತ್ತು ಇಡೀ ನಾಗರಿಕ ಸಮಾಜದಿಂದ ಈ ಯೋಜನೆಯ ಬಗೆಗೆ ಖಂಡನೆ ವ್ಯಕ್ತವಾಗುತ್ತಿದೆ. ಇದು ವಿಪುಲ ವಿಸ್ತಾರವನ್ನು ಪಡೆದುಕೊಂಡಿದೆ, ಹಾಗಿರುವುದರಿಂದಲೇ ಇದಕ್ಕೆ ಬಲ ಮತ್ತು ಸೌಂದರ್ಯಗಳು ಲಭ್ಯವಾಗಿವೆ. ಆದ್ದರಿಂದಲೇ ನಾನು ಹೇಳಿದ್ದು 'ಹಮ್ ತುಮ್ಹಾರೆ ಸಾಥ ಹೈ' ಎಂದು. ●

(ಕೃಪೆ : **ಫ್ರಂಟ್ ಲೈನ್** ; ಅನುವಾದ : **ರಾಘವೇಂದ್ರ ಪಾಟೀಲ**)

ಅರಣ್ಯವೆಂದರೆ ವಿಶಿಷ್ಟ ಜೀವಕೋಶ. ಅದು ತನಗಾಗಿ ಏನನ್ನೂ ಬೇಡದೆ ,ಬೇಡಿಬಂದ ಎಲ್ಲರಿಗೂ ತನ್ನ ಅಸ್ತಿತ್ವವನ್ನೇ ಧಾರೆ ಎರೆಯುತ್ತದೆ. ಎಲ್ಲ ಜೀವಿಗಳಿಗೂ ಆಶ್ರಯ ನೀಡುತ್ತದೆ. ತನ್ನನ್ನು ಕಡಿಯಲು ಕೊಡಲಿ ತಂದವನಿಗೂ ನೆರಳು ನೀಡುತ್ತದೆ.

-ಬುದ್ಧ

ಹೊಸ ಓದು

ಸಮಗ್ರ ವ್ಯಕ್ತಿ ಚಿತ್ರಗಳು (ಸಂಪುಟ -೧)
ಮತ್ತು
ಸಮಗ್ರ ವಿಚಾರ ವಿಮರ್ಶೆ (ಸಂಪುಟ -೨)
ಲೇ:ಹರಿಹರ ಪ್ರಿಯ

ಪ್ರ:ಇಳಾ ಪ್ರಕಾಶನ ಬೆಂಗಳೂರು ಬೆಲೆ :ಸಂಪುಟ -೧ :ರೂ.೨೦೦/; ಸಂಪುಟ -೨:ರೂ.೨೫೦/

ಸಂಕ್ರಮಣ ೨೫೫ (೧೯೯೪)ರಲ್ಲಿ ಹರಿಹರಪ್ರಿಯ ಅವರ 'ಬಂಡಾಯ ಮನೋಧರ್ಮ' ಎಂಬ ಕಿರು ವಿಮರ್ಶಾ ಗ್ರಂಥವನ್ನು ಸಮೀಕ್ಷಿಸುತ್ತಾ ನಾನು ಈ ಗ್ರಂಥದಲ್ಲಿ ವಿಮರ್ಶಕನಿಗಿಂತ ಹೆಚ್ಚಾಗಿ 'ಮಾತುಗಾರ,ವೈಚಾರಿಕ ಹರಟೆಕೋರ' ಕಾಣಿಸಿಕೊಳ್ಳುತ್ತಿದ್ದಾನೆ ಎಂಬರ್ಥದ ಮಾತನ್ನು ಆಡಿದ್ದೆ.ಹರಿಹರಪ್ರಿಯರ ವಿಮರ್ಶೆಯ ಬಗ್ಗೆ ನಂತರ ಅದೇ ಪತ್ರಿಕೆಯ ಸಂಚಿಕೆ ಸಂ.೨೮೮ (೧೯೯೬)ರಲ್ಲಿ ಬರೆದ ಡಾ.ಶಿವಾನಂದ್ ಅವರು ಪ್ರಾಸ್ತಾವಿಕವಾಗಿ ನನ್ನ ಅಭಿಪ್ರಾಯವನ್ನು ಆಕ್ಷೇಪಿಸಿದರಾದರೂ ಹರಿಹರಪ್ರಿಯರ ವಿಮರ್ಶೆ 'ಶುದ್ಧ ಸಾಹಿತ್ಯ ವಿಮರ್ಶೆ ಅಲ್ಲ ;ಸಂಸ್ಕೃತಿ ವಿಮರ್ಶೆ' ಎಂಬುದಾಗಿ ತೀರ್ಮಾನಿಸಿದರು.

ಇತ್ತೀಚೆಗೆ 'ಸಂಸ್ಕೃತಿ'ಯ ಕುರಿತು ತುಂಬಾ ಚರ್ಚೆಯಾಗುತ್ತಿದೆ.ಬಂಡಾಯ ಸಾಹಿತ್ಯ ಸಂಘಟನೆಯ ವಾರ್ಷಿಕಾಧಿವೇಶನದಲ್ಲಿ ಲೇಖಕರೊಬ್ಬರು ಸಂಘಟನೆಯ ಹೆಸರನ್ನು 'ಬಂಡಾಯ ಸಾಂಸ್ಕೃತಿಕ ಸಂಘಟನೆ' ಎಂಬುದಾಗಿ ಮಾರ್ಪಡಿಸಬೇಕೆಂದು ಕರೆಯಿತ್ತಿದ್ದರು.ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ರೂಪುಗೊಂಡ ಮೇಲಂತೂ ಅಲ್ಲಿನ ವಿದ್ವಾಂಸರು ಒಂದೇ ಸವನೆ 'ದೇಸಿ ಸಂಸ್ಕೃತಿ' 'ಸಂಸ್ಕೃತಿ ವಿಮರ್ಶೆ' ಮುಂತಾಗಿ ಬಡಬಡಿಸುವುದನ್ನು ಮನಗಾಣಬಹುದು.

'ಸಾಹಿತ್ಯ ವಿಮರ್ಶೆ'ಯನ್ನು 'ಸಂಸ್ಕೃತಿ ವಿಮರ್ಶೆ' ಎಂದು ಕರೆಯುವವರು ಎರಡು ಮುಖ್ಯ ಸಂಗತಿಗಳನ್ನು ಗಮನಿಸಬೇಕು.ಒಂದು :ಸಂಸ್ಕೃತಿಯ ಕುರಿತು ಮಾತಾಡುವುದು ಸಾಹಿತಿಗಳಿಗೆ ಮಾತ್ರ ಸೀಮಿತವಾದ ಹೊಣೆಗಾರಿಕೆ ಅಲ್ಲ; ಅಲ್ಲದೆ,ಸಾಹಿತ್ಯ ಕೃತಿಯೊಂದರಲ್ಲಿ ನಿರೂಪಿತವಾಗಿರುವುದು ಒಂದು ನಿರ್ದಿಷ್ಟ ಕಾಲದ,ಸಮಾಜದ ಸಂಸ್ಕೃತಿಯ ಒಂದು ತುಣುಕಷ್ಟೇ ವಿನಾ ಸಮಗ್ರ ಸಂಸ್ಕೃತಿಯ ಪ್ರಮಾಣಭೂತ ಚಿತ್ರಣವಲ್ಲ.ಆ ಮಿತಿಯಲ್ಲಿ ಕೂಡ ಚಿತ್ರಣದ ಅನನ್ಯತೆಯನ್ನು ಕುರಿತು ಮಾತಾಡುವುದು ವಿಮರ್ಶಕನ ಕೆಲಸವಾಗಬೇಕು.ಎರಡು:'ಸಂಸ್ಕೃತಿ' ಎಂದು ಮತ್ತೆ-ಮತ್ತೆ ಉದ್ಘೋಷಿಸುವವರು ಸಂಸ್ಕೃತಿಯನ್ನು ಒಂದು ದೇಶ ಕಾಲಾತೀತ ಸ್ಥಾವರ ಕಲ್ಪನೆಯನ್ನಾಗಿ,ಏಕಶಿಲ್ಪಾತ್ಮಕವಾದ ಪರಿಕಲ್ಪನೆಯಾಗಿ ಪರಿಗಣಿಸುವ ಅಪಾಯವಿದೆ.ಹೀಗೆ ಸೆರಗಿನ ಮೇಲೆ ಬಡಕೊಳ್ಳುವ ಧಾಟಿಯ ವಿಮರ್ಶಕರನ್ನೂ,ವಿದ್ವಾಂಸರನ್ನೂ,'ನಮ್ಮ ಸಂಸ್ಕೃತಿ ಅಪಾಯದಲ್ಲಿದೆ' ಎಂದು ಬೊಬ್ಬಿಡುವ,'ಹಿಂದೂ ಸಂಸ್ಕೃತಿ'ಯ ಬಗ್ಗೆ ಅರಚಾಡುವ ವರ್ಗದಿಂದ

ಬೇರ್ಪಡಿಸುವುದು ಹೇಗೆ ಎಂಬ ಪ್ರಶ್ನೆ.

ಇಷ್ಟೆಲ್ಲ ಪ್ರಾಸ್ತಾವಿಕ ಮಾತುಗಳೊಂದಿಗೆ ಗೆಳೆಯ ಹರಿಹರಪ್ರಿಯ(ಸಾತವಲ್ಲಿ ವೆಂಕಟವಿಶ್ವನಾಥ)ರ ಬರವಣಿಗೆಯನ್ನು ಪರೀಕ್ಷಿಸಬಹುದು ಅನಿಸುತ್ತದೆ.

೩೬ ಗ್ರಂಥಗಳ ಲೇಖಕ,'ಪುಸ್ತಕಮನೆ'ಯ ರೂವಾರಿ,ಹತ್ತಾರು ಸಾಮಾಜಿಕ-ಸಾಂಸ್ಕೃತಿಕ ಸಂಘಟನೆಗಳು-ಆಂದೋಲನಗಳ ಭಾಗೀದಾರಿ,ಹರಿಹರಪ್ರಿಯ ಕರ್ನಾಟಕ ಸಂಸ್ಕೃತಿಯ ಶೋಧನೆ ಮತ್ತು ಮೌಲ್ಯೀಕರಣ ಮತ್ತು ಮರು ಮೌಲ್ಯೀಕರಣಕ್ಕೆ ಗಾಢವಾಗಿ ಹಾಗೂ ಭಾವುಕವಾಗಿ ತೆತ್ತುಕೊಂಡ ಜೀವ. ಈಚೆಗೆ ಬೆಂಗಳೂರಿನ ಇಳಾ ಪ್ರಕಾಶನ ಇವರ ಸಮಗ್ರ ಬರಹಗಳ ಈ ಎರಡು ಸಂಪುಟಗಳನ್ನು ಸುಂದರವಾಗಿ ಹೊರತಂದಿದೆ.

ಮೊದಲ ಸಂಪುಟ 'ಸಮಗ್ರ ವ್ಯಕ್ತಿ ಚಿತ್ರಗಳು' ಒಟ್ಟು ೫೨ ಸಮಕಾಲೀನ,ಗತಕಾಲೀನ ಸಾಂಸ್ಕೃತಿಕ ವ್ಯಕ್ತಿಗಳ ಕುರಿತ ಪರಿಚಯ ಮಾಡಿಸುತ್ತದೆ.ಇಲ್ಲಿನ ಲೇಖನಗಳು ಈಗಾಗಲೇ ನಾಡಿನ ದೈನಿಕಗಳಲ್ಲಿ ಪ್ರಕಟವಾಗಿರುವವು.ಇವು ಹೆಚ್ಚಾಗಿ ಆಯಾ ವ್ಯಕ್ತಿಗಳ ಕಿರು ಪರಿಚಯ ಮಾಡಿಸುವವಾಗಿದ್ದರೂ, ವ್ಯಕ್ತಿತ್ವ-ಸ್ಥಾನನಿರ್ದೇಶನದಲ್ಲಿ ಸಮತೂಕ,ಪ್ರಗತಿಪರ ದೃಷ್ಟಿಕೋನ,ಜಿಜ್ಞಾಸೆ ಎದ್ದು ಕಾಣುತ್ತದೆ.ಬಸವಣ್ಣ, ಕನಕ, ಬೆಂಗಳೂರು ಪುಟ್ಟಯ್ಯ,ಗೋವಿಂದ ಪೈ,ಚದುರಂಗ,ಅಡಿಗ ಮುಂತಾದವರ ವ್ಯಕ್ತಿತ್ವ-ಸಾಹಿತ್ಯ ಮತ್ತು ಸಾಂಸ್ಕೃತಿಕ ಸಾಧನೆಗಳನ್ನು ಬೆಲೆಗಟ್ಟುವಲ್ಲಿ ಹರಿಹರ ಪ್ರಿಯರ ಸದಭಿರುಚಿ,ಸಂಗ್ರಹ ಪ್ರವೃತ್ತಿ,ಔಚಿತ್ಯ ಪ್ರಜ್ಞೆ, ಕೆಲಸ ಮಾಡಿವೆ.ಅದಕ್ಕಿಂತ ಹೆಚ್ಚಾಗಿ ಲೇಖಕರು ಅಲ್ಲಲ್ಲಿ ತನಗೆ ತಾನೇ ಎಂಬಂತೆ ಹಾಕಿಕೊಳ್ಳುವ ಪ್ರಶ್ನೆಗಳು,ನೀಡುವ ತೀರ್ಮಾನಗಳು ನಮ್ಮನ್ನು ಚಿಂತನೆಗೆ ಹಚ್ಚುವುದರಿಂದ ಮುಖ್ಯವೆನಿಸುತ್ತವೆ.ಏಕೆಂದರೆ, ಈ ಬಗೆಯಲ್ಲಿ ಎತ್ತುವ ಪ್ರಶ್ನೆಗಳೇ ನಮ್ಮ ಸಂಸ್ಕೃತಿಯ ಸಮರ್ಪಕ ಅರಿವಿಗೆ ಮತ್ತು ಅದರ ಜನಮುಖೀ ಬೆಳವಣಿಗೆಗೆ ಪೂರ್ವಸಾಮಗ್ರಿಯಾಗಬಲ್ಲವು.ಉದಾ :ಗೋವಿಂದ ಪೈಗಳ ಕುರಿತು 'ವಿಮರ್ಶನ ಕ್ಷೇತ್ರವನ್ನು ಅಷ್ಟಾಗಿ ಕೈ ಹಿಡಿಯದೇ ಇದ್ದರೂ,ನಿಜವಾದ ವಿಮರ್ಶೆಯ ಪೂರ್ವರಂಗವನ್ನು ಅಣಿಗೊಳಿಸಿದರೆಂಬ ಸಂಗತಿ ಕೂಡಾ ಕಡಿಮೆಯಾದ್ದೇನಲ್ಲ' (ಪು.೩೨) ;'ಇಡೀ ತಮ್ಮ ಸೃಷ್ಟಿಯನ್ನೇ ಮುಂದಕ್ಕಿಟ್ಟು ಇವತ್ತಿಗೂ ಸವಾಲಾಗುವಂಥ ಕೃತಿ ರಚನೆಯನ್ನು ಮಾಡಿದ ಪುಟ್ಟಪ್ಪನವರ ಬಗ್ಗೆ,ಅವರನ್ನು ಜಮಾ ಮಾಡುವ ನವೋದಯ ಮಾರ್ಗದ ಬಗ್ಗೆ,ಅವರೆಗೆ ಬಂದ ವಿಮರ್ಶಕರ ಹೇಳಿಕೆಗಳ ಬಗ್ಗೆ ಏನನ್ನೋಣ? ಹೋಗಲಿ, ಪುಟ್ಟಪ್ಪನವರ ಈ ಕೃತಿಗೆ ಸವಾಲಾಗುವಂಥ ಕೃತಿ ನವ್ಯದವರಿಂದ ಈವರೆಗೆ ಬಂತೇ?' (ಪು.೧೦೦).

ನನ್ನ ಮಟ್ಟಿಗೆ ಹೆಚ್ಚು ಇಷ್ಟವಾದ ಸಂಪುಟ ಎರಡನೆಯದು.ಇಲ್ಲಿನ ಲೇಖನಗಳಲ್ಲಿ ಹರಿಹರಪ್ರಿಯ,ಇವೊತ್ತಿಗೆ ತೀರಾ ಜ್ವಲಂತವೆನಿಸುವ ಅನೇಕ ಸಾಂಸ್ಕೃತಿಕ ಪ್ರಶ್ನೆಗಳನ್ನು ಎತ್ತುತ್ತಾರೆ; ಅಕಾಡೆಮಿಕ್ ವಲಯದ ಮೋಸದ ಬಗ್ಗೆ ಕಿಡಿ ಕಾರುತ್ತಾರೆ.ಕೆಲವೊಮ್ಮೆ ಅರ್ಹತೆಗಾಗಿರುವ ಅನ್ಯಾಯದ ವಿರುದ್ಧ ರೊಚ್ಚಿನಿಂದ ಬರೆಯುತ್ತಾರೆ.ಕೆಲವೊಮ್ಮೆ ವಿವರಣೆ,ಸ್ಪಷ್ಟೀಕರಣ,ನಿದರ್ಶನಗಳ ಉಲ್ಲೇಖ ಅಗತ್ಯವೆನಿಸುವಂತಿರುತ್ತದೆಯಾದರೂ,ಅವರ ನಿರ್ಭಿಡೆಯ ಟೀಕೆ,ರೊಚ್ಚುಗಳ ಹಿಂದೆ ಸಾತ್ವಿಕ ಹೋರಾಟಗಾರನ ಜೀವಂತ ಮನಸ್ಸಿನ ತುಡಿತ-ಕಾಳಜಿಗಳಿರುವುದನ್ನು ಮರೆಯುವ ಹಾಗಿಲ್ಲ. 'ಪರ್ಯಾಯ ಸಂಸ್ಕೃತಿ','ಸಾಹಿತ್ಯ ಮತ್ತು ಪರ್ಯಾಯಸಂಸ್ಕೃತಿ ನಿರ್ಮಾಣ', 'ಮಾರ್ಕ್ಸ್,ಲೋಹಿಯಾ,ಅಂಬೇಡ್ಕರ್ ಹಿನ್ನೆಲೆಯಲ್ಲಿ ಬಂಡಾಯ ಮನೋಧರ್ಮ','ಕರ್ನಾಟಕದ ಸಾಮಾಜಿಕಚಳುವಳಿಗಳು'ಮುಂತಾದವು ಇಲ್ಲಿನ ಮಹತ್ವದ ಲೇಖನಗಳು.ಅನೇಕ ಪ್ರತಿಷ್ಠಿತ ಲೇಖಕರನ್ನೂ

ಪರಿಕಲ್ಪನೆಗಳನ್ನೂ, ಚಳುವಳಿಗಳನ್ನೂ ಯಾವ ಭಿಡೆಯಿಲ್ಲದೆ, ಪ್ರಶ್ನಾಧಾರಿತವಾಗಿ ಖಂಡಿಸುತ್ತ ಹೋಗುವ ಅವರ ದಿಟ್ಟತನ ಮೆಚ್ಚುವಂಥವು. ಇದನ್ನು ಯಾಕೆ ಮೆಚ್ಚಬೇಕಾಗಿದೆಯೆಂದರೆ ಹರಿಹರಪ್ರಿಯರಿಗೆ ಯಾವ ಸಂಘ-ಸಂಸ್ಥೆಗಳ ಆಲಂಬನವಿಲ್ಲದಿದ್ದರೂ, ಸ್ವತಂತ್ರ ವೃತ್ತಿಯಿಲ್ಲದಿದ್ದರೂ ಈ ಧೀರೋದಾತ್ತ ಗುಣಗಳನ್ನು ಅವರು ಬೆಳೆಸಿಕೊಂಡಿರುವುದಕ್ಕೆ. ಬಹುಶಃ ನನ್ನ ಈ ಮೆಚ್ಚುಗೆಯ ಹಿಂದೆ ಗಣ್ಯಪರ ವಲಯದ ಸ್ವಾರ್ಥ, ಆತ್ಮವಂಚನೆ, ಹುಸಿ ಪ್ರತಿಷ್ಠೆಗಳ ನಿಲುವಿನಿಂದ ವಿಮರ್ಶೆಗಾಗಿರುವ ಘೋರ ಹಾನಿಯ ಅರಿವೂ ಕೆಲಸ ಮಾಡುತ್ತಿದೆ.

ಬರಗೂರು ರಾಮಚಂದ್ರಪ್ಪ ಅವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟವಾದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಉಪಸಂಸ್ಕೃತಿ ಅಧ್ಯಯನ ಮಾಲಿಕೆ (ಈ ಬಗೆಯ ಬರೆಹಗಳು 'ಮೇಲುವರ್ಗದವರ ಅವಗಾಹನೆಗೆ ಒಪ್ಪಿಸಿದ ಬಿನ್ನವತ್ತಳೆಗಳಾಗಿವೆ', ಪು. ೨೧-೨೨, ಎಂದು ವಿವರಿಸಿರುವುದರಲ್ಲಿ ಅರ್ಥವಿದೆ), ಹಂಪಿ ವಿವಿಯ ಈಗಿನ ಸ್ಥಿತಿ, ಅನಂತ ಮೂರ್ತಿಯ ದ್ವಂದ್ವ, ಡಿ ಆರ್. ಹಗರಣ, ಲಂಕೇಶರ ಜಾಣತನದ ಮುಖವಾಡ ...ಹೀಗೆ ಹತ್ತಾರು ಪ್ರಸಂಗಗಳ ಕುರಿತು ಅವರು ನೀಡುವ ತೀರ್ಮಾನಗಳು ಮತ್ತೆ-ಮತ್ತೆ ಚರ್ಚಿತವಾಗಬೇಕಾದುವೆನಿಸುತ್ತವೆ. ಪ್ರಶಸ್ತಿಗಳ ಕುರಿತೂ ಅಷ್ಟೆ. ಶಾಂತಿನಾಥ ದೇಸಾಯಿ, ಚದುರಂಗ, ಶಾಂತರಸರಂಥವರಿಗೆ ಪ್ರಶಸ್ತಿ ಬರಲಿಲ್ಲವೇಕೆ? ಅನರ್ಹರಿಗೇಕೆ ಬಂತು?-ಎಂಬ ಪ್ರಶ್ನೆಯ ಹಿಂದೆ ಗುಣ ಪಕ್ಷಪಾತವಿದೆ. ಆದರೆ, ಹಾಗೆ ಕ್ರುದ್ಧವಾಗಿ ಬರೆಯುವಾಗ ಹರಿಹರಪ್ರಿಯ ಪ್ರಶಸ್ತಿ ಎಂಬ ಸಂಸ್ಥೆಯನ್ನು ಒಪ್ಪಿಕೊಂಡಂತಾಗುತ್ತದೆ ಎಂಬುದನ್ನು ತಿಳಿಯುವುದಿಲ್ಲವೇಕೋ ಎಂದು, ಈ ಸಂಸ್ಥೆಯನ್ನು ಧಿಕ್ಕರಿಸುವ ನನ್ನಂಥವರಿಗೆ ಜೀರ್ಣಿಸಿಕೊಳ್ಳಲಾಗದ ವಿಷಯ. ಈ ಚರ್ಚೆಯೇ ಅಪ್ರಸ್ತುತ; ವೃಥಾ ಕಾಲಹರಣ ಕೂಡ. ಏಕೆಂದರೆ, ಪ್ರಶಸ್ತಿಯಿಂದಲೇ ಬೆಲೆಗಟ್ಟುವುದಾದರೆ ಪ್ರೇಮಚಂದ್, ಮುಕ್ತಿಬೋಧ್, ಹರಿಶಂಕರ ಪರಸಾಯಿ, ರಾಹುಲ ಸಾಂಕೃತ್ಯಾಯನ ಮುಂತಾದ ಮಹಾನ್ ಸಾಹಿತಿಗಳು (ಯಾವದೇ ಪ್ರಶಸ್ತಿ ಪಡೆಯದಿರುವುದರಿಂದ) ಅಗಣ್ಯರೆನ್ನುವುದು ಸಾಧ್ಯವೇ? ಸಾಹಿತ್ಯದ ಹೊರಗೂ ಸುಭಾಸ್ ಚಂದ್ರ ಬೋಸ್, ಭಗತ್ ಸಿಂಗ್ ಮುಂತಾದವರ ಹೆಸರುಗಳಿವೆ. ಸ್ವತಃ ಹರಿಹರಪ್ರಿಯರು ಮೆಚ್ಚಿ ಬರೆದಿರುವ ಗೋವಿಂದ ಪೈಗಳೇ ಮೈಸೂರು ವಿವಿಯ ಗೌರವ ಡಿ.ಲಿಟ್. ಪದವಿಯನ್ನು ಧಿಕ್ಕರಿಸಿದ್ದಕ್ಕೆ ಏನರ್ಥ? ಬೇರೆ ಮಾತಿನಲ್ಲಿ ಹೇಳುವುದಾದರೆ, ಜ್ಞಾನಪೀಠ ಪ್ರಶಸ್ತಿ ಪಾತ್ರರಾದ ಕಾರಂತ - ಕುವೆಂಪು - ಬೇಂದ್ರೆ (ಉಳಿದವರ ವಿಷಯ ಬಿಡೋಣ) ಅವರಾದರೂ ಆ ಪ್ರಶಸ್ತಿಯಿಂದಲೇ ದೊಡ್ಡವರೆನಿಸಿದರೇ?

ಹರಿಹರಪ್ರಿಯರ ಈ ಆಕ್ರೋಶ, ಅಸಹನೆ ಅವರ ಈಚಿನ ಪತ್ರವೊಂದರ ಮೂಲಕ ನನಗೆ ಹಲವು ಸಂಗತಿಗಳನ್ನು ಕಲಿಸಿದೆ. ಕಳೆದ ಅ.ಭಾ. ಸಾಹಿತ್ಯ ಸಮ್ಮೇಳನದ ವೇಳೆ ಎಸ್.ಎಲ್. ಭೈರಪ್ಪ ಅವರ ಭಾಷಣದಲ್ಲಿದ್ದ ತೀವ್ರ ಪ್ರತಿಗಾಮಿ ಧೋರಣೆಗಳಿಗಾಗಿ ಅವರ ಭಾಷಣದ ಪ್ರತಿಯನ್ನು ಸುಟ್ಟು ಹಾಕಿ ಪ್ರತಿಭಟನೆ ವ್ಯಕ್ತಪಡಿಸಿದವರಲ್ಲಿ ತಾನು ಮೊದಲಿಗನಾದರೂ ಪ್ರತಿಷ್ಠಿತ ಪತ್ರಿಕೆಗಳಲ್ಲಿ ತನ್ನ ಹೆಸರೇ ಪ್ರಕಟವಾಗಲಿಲ್ಲ ಎಂಬ ಬಗ್ಗೆ ಅವರು ನೊಂದುಕೊಂಡು ಬರೆದಿದ್ದರು. ಅವರು ಮಾಡಿರುವ ಕೆಲಸ ಅವರ ಮನಸ್ಸಾಕ್ಷಿಗೆ ಹೊಂದುವಂಥಾದ್ದಾಗಿದ್ದು, ಸಾಮಾಜಿಕವಾಗಿ ಪ್ರಗತಿಪರವೂ ಆಗಿದ್ದುದರಿಂದ, ಅದರ ಬಗ್ಗೆ ಪತ್ರಿಕೆಗಳಲ್ಲಿ ಮೆಚ್ಚುಗೆಯ ಮಾತಿರಬೇಕಿತ್ತು ಎಂದು ಅವರು ನಿರೀಕ್ಷಿಸಿದಂತಿದೆ. ಆದರೆ, ನಿಜವಾದ ಹೋರಾಟಗಾರನಿಗೆ ಇಂಥ ಅನುಭವಗಳು ಕ್ಷಣ-ಕ್ಷಣಕ್ಕೂ ಎದುರಾಗುತ್ತವೆ. (ನನಗೇ ಇಂಥ ಹಲವು ಅನುಭವಗಳಾಗಿವೆ; ಗಣ್ಯ ಪರ ಪತ್ರಿಕೆಗಳಿಂದ ಅನ್ಯಾಯವಾಗಿದೆ). ಅದನ್ನು ಧೈರ್ಯದಿಂದ, ನಿರುದ್ವಿಗ್ನವಾಗಿ

ಸ್ವೀಕರಿಸಬೇಕು;ಇಲ್ಲವೇ,ಪರ್ಯಾಯ ವ್ಯವಸ್ಥೆಯನ್ನು - ಹೋರಾಟಗಾರರದ್ದೇ ಆದ ಪತ್ರಿಕೆಗಳು - ರೂಪಿಸಿಕೊಳ್ಳಬೇಕು.ಇದು ಸದ್ಯದ ಪರಿಸ್ಥಿತಿಯಲ್ಲಿ ದೂರದ ಮಾತಾದರೂ ಆ ಕುರಿತಾದ ಮುನ್ನೋಟ ಹೋರಾಟಗಾರನಿಗೆ ಇರಬೇಕಷ್ಟೇ?

ಹರಿಹರಪ್ರಿಯರಿಗೆ ಇನ್ನೊಂದು ನೋವಿದೆ.ತಾನು ಇಷ್ಟೆಲ್ಲ ಬರೆದಾಗಲೂ,ತನ್ನ ವಾಗ್ವಾದಗಳನ್ನು ಗಮನಿಸದಂತಿರುವ ಅಕಾಡೆಮಿಕ್ ವಿಮರ್ಶಕರ ನಿರ್ಲಕ್ಷ್ಯದ ರಾಜಕೀಯದ ಬಗ್ಗೆ ಅವರ ನೋವು ಯಾರಿಗೂ ಅರ್ಥವಾಗುತ್ತದೆ.ಆದರೆ,ನಿಜವಾದ ಹೋರಾಟಗಾರರಾಗಿ ಹರಿಹರಪ್ರಿಯ ಈ ರಾಜಕೀಯವನ್ನು ಉಪೇಕ್ಷಿಸಬೇಕಿತ್ತು.ಪ್ರಶಸ್ತಿ ರಾಜಕೀಯದಂತೆಯೇ ನಿರ್ಲಕ್ಷ್ಯದ ರಾಜಕೀಯವೂ ಸ್ವಾತಂತ್ರ್ಯೋತ್ತರ ದಿನಗಳಲ್ಲಿ-ರಾಜಕೀಯ ರಂಗದಲ್ಲಿ ಎಂತೋ ಸಾಂಸ್ಕೃತಿಕ ರಂಗದಲ್ಲೂ ಅಂತೆ-ತೀವ್ರವಾಗಿ ಸಾಂಕ್ರಾಮಿಕವಾಗುತ್ತಿದೆ.ಇದೀಗ ಈ ಪ್ರವೃತ್ತಿ ತೀರಾ ಸಹಜವೆಂಬಂತೆ ನಮ್ಮ ಮನಸ್ಸು ಅದನ್ನು ಸ್ವೀಕಾರ ಮಾಡಿಕೊಂಡಿದೆ.ನವ್ಯದ ಕಾಲದಲ್ಲಿ ಹುಟ್ಟಿಕೊಂಡ ಗುಂಪುಗುಳಿತನ ಇಂದಿಗೂ ಮುಂದುವರಿಯುತ್ತಿದ್ದು, ಇದರ ಹಿಂದೆ ಸಾಂಸ್ಥಿಕ-ಮತೀಯ-ಜಾತೀಯ-ಭಾಷಿಕ ಶಕ್ತಿಗಳೂ ಹಿತಾಸಕ್ತಿಗಳೂ ಕಾರ್ಯಪ್ರವೃತ್ತವಾಗಿವೆ. ಜೊತೆಗೆ ವಿದೇಶೀ ಧನಕ್ಕೆ ಮಾರಿಕೊಂಡ ಜಾನಪದ ವಿದ್ವಾಂಸರ ವಲಯ,ಅಪಸಿದ್ಧಾಂತಗಳ ಮೂಲಕ ಹೊಸ ಗೊಂದಲಗಳನ್ನು,ಬೌದ್ಧಿಕ ಅರಾಜಕತೆಯನ್ನು ಸೃಷ್ಟಿಸುತ್ತ ಬಂದಿದೆ.ಬಂಡಾಯ ಸಾಹಿತ್ಯ ವೇದಿಕೆಯಂಥ ಎಡಪಂಥೀಯ ವೇದಿಕೆ ಕೂಡ ಈ ಅರಾಜಕತೆಯಿಂದ ಪಾರಾಗದಿರುವುದು ಹೋರಾಟಗಾರರನ್ನು ಆತ್ಮವಿಮರ್ಶೆಗೆ ಹಚ್ಚಬೇಕೆಂಬುದು ನನ್ನ ಅನಿಸಿಕೆ.

ನವೋದಯ ಕಾಲದಲ್ಲಿ 'ಟೈಟಾನಿಕ್ ಮುಳುಗತಕ್ಕದ್ದಲ್ಲ' ಎಂದು ಬರೆಯುವ ಮೂಲಕ ಜಾಗತಿಕ ಸ್ಪಂದನೆ ವ್ಯಕ್ತಪಡಿಸುತ್ತಿದ್ದ ಜೀವಂತ ವಿದ್ವಾಂಸರಿದ್ದರು ;ಪೌರಾಣಿಕ ಕತೆಯನ್ನು ಐತಿಹಾಸಿಕ ಸಂಗತಿಗಳೊಂದಿಗೆ ಬೆರೆಸಿದುದರಿಂದ ಪಂಪ ಭಾರತದಲ್ಲಿ ಜಾನಪದ ಸಂವೇದನೆಗೆ ಪ್ರವೇಶ ಸಿಗುವಂತಾಯಿತು ಎಂದು ಅಭಿಪ್ರಾಯ ಪಡುವ ವಿದ್ವಾಂಸರಿದ್ದರು.ಇಂದು ತಂತಮ್ಮ ಸಾಮ್ರಾಜ್ಯವನ್ನು ಗಟ್ಟಿಮುಟ್ಟಾಗಿಸಿಕೊಂಡಿರುವ ಸಾಂಸ್ಕೃತಿಕ ಗುತ್ತಿಗೆದಾರರು ಕಣ್ಣೆದುರೇ ಪ್ರಪಂಚ ಮುಳುಗಿದರೂ ತುಟಿಪಿಟಕ್ಕೆನ್ನಲಾರರು.ವಿಮರ್ಶೆಯ ಉದ್ದೇಶವೇನೆಂಬುದನ್ನು ವಿಮರ್ಶಕರಿಗೆ ತಿಳಿಸಿಕೊಡಬೇಕಾದ ಕಾಲವಿದು.ಸಂವಾದ ಹೀನ,ಪುಸ್ತಕ ವಿಮುಖಿ, ಜ್ಞಾನ ದ್ವೇಷಿ ಗುಂಪನ್ನು 'ಬೌದ್ಧಿಕ'ರೆಂದು ಹರಿಹರಪ್ರಿಯರು ಏಕೆ ಕರೆಯುತ್ತಾರೋ ಎಂದು ನನಗೆ ಅಚ್ಚರಿ.ಅವರಿಗೆ ಭವಭೂತಿ ನೆನಪಾಗಲಿ ಎಂದಷ್ಟೆ ಹಾರೈಸುತ್ತೇನೆ.

- ಡಾ.ಆರ್ಕೆ ಮಣಿಪಾಲ

ಪ್ಯಾಂಜಿಯಾ (ಕವನಗಳು)
ಲೇ: ಜಿ.ಕೆ.ರವೀಂದ್ರಕುಮಾರ
ಪ್ರ :ಶ್ರೀ ರಾಘವೇಂದ್ರ ಪ್ರಕಾಶನ,ಅಂಬಾರಕೊಡ್ಲ (ಉ.ಕ.ಜಿಲ್ಲೆ)
ಪು : ೯೮ ಬೆಲೆ :ರೂ .೪೦/

ಮೊದಲು 'ಸಿಕಾಡ',ನಂತರ 'ಪ್ಯಾಂಜಿಯಾ'.ಹೊಸ ಬಗೆಯ ಈ ಶಬ್ದಗಳೇ ಕನ್ನಡ ಓದುಗರಲ್ಲಿ ಒಂದು ರೀತಿಯ ಕುತೂಹಲವನ್ನು ಕೆರಳಿಸುವಂತೆ ಕಂಡರೂ,ಜಿ.ಕೆ.ರವೀಂದ್ರಕುಮಾರ್ ಇಷ್ಟಕ್ಕಾಗಿಯೇ ತಮ್ಮ ಕಾವ್ಯಾಸಕ್ತಿಯನ್ನು ಮೀಸಲಿಡುವ ತೆಳುಹಂಬಲದ ಕವಿಯಲ್ಲದಿರಬಹುದು.ಇದನ್ನು 'ಪ್ಯಾಂಜಿಯಾ'

ಸಂಕಲನದ ಪದ್ಯಗಳೇ ತೋರಿಸುತ್ತವೆ. ಅವರ ಮಹಾತ್ವಾಕಾಂಕ್ಷೆಯನ್ನೂ ಈ ಸಂಕಲನ ತೋರಿಸುತ್ತದೆ. ಆದರೆ ಈ ಮಹಾತ್ವಾಕಾಂಕ್ಷೆಯೊಂದೇ ಕಾವ್ಯವನ್ನು ಲವಲವಿಕೆಯಿಂದ , ಜೀವಂತಿಕೆಯಿಂದ ಇಡುತ್ತದೆ ಎಂದು ಹೇಳಲು ಬರುವುದಿಲ್ಲ.

ಮಹಾತ್ವಾಕಾಂಕ್ಷೆಯೇ ಇಲ್ಲದ ಅನೇಕ ಕವಿಗಳು ತಮ್ಮ ಕಾವ್ಯದಲ್ಲಿ ಜೀವಂತಿಕೆಯನ್ನು ತುಳುಕಿಸಿರುವ ಉದಾಹರಣೆಗಳು ಹೇರಳವಾಗಿ ಸಿಕ್ಕುತ್ತವೆ. ಗೇಲಿ, ಹುಡುಗಾಟ, ತಮಾಷೆಗಳ ಮೂಲಕವೇ ತಮ್ಮ ಕಾವ್ಯಕ್ಕೆ ಜೀವಂತಿಕೆಯ, ಬೆಚ್ಚನೆಯ ಗುಣವನ್ನು ತುಂಬಿರುವವರೂ ಇದ್ದಾರೆ. ಪೋಲಿ ಪದ್ಯಗಳನ್ನು ಬರೆಯುತ್ತಲೇ ಬದುಕಿನ ಗಹನ ಪ್ರಶ್ನೆಗಳಿಗೆ ಕೈಹಾಕಿದ ಕವಿಗಳನ್ನೂ ನೋಡಬಹುದಾಗಿದೆ. ಇದು ಕವಿಯ ಗ್ರಹಿಕೆಯ , ಕಾಣ್ಕೆಯ ಮತ್ತು ಸಾಮರ್ಥ್ಯದ ಪ್ರಶ್ನೆ.

ಗಂಭೀರ ಕಾವ್ಯಾಸಕ್ತಿಯ ರವೀಂದ್ರಕುಮಾರ್ ಕಾವ್ಯವನ್ನು 'ವಿಸ್ಮಯ', 'ಮಾಯೆ' ಎಂದು ನಂಬಿದವರು. ಈ ಎರಡು ಪದಗಳನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಅರ್ಥೈಸಲು ಅವಕಾಶವಿದೆಯಾದರೂ ಇವುಗಳ ಒಟ್ಟಾರೆಯ ಪರಿಣಾಮವಾದರೂ ಒಂದು ಕಾವ್ಯದಲ್ಲಿದೆಯೇ ಎಂಬುದು ಮುಖ್ಯ. ರವೀಂದ್ರ ಕುಮಾರ್ ಅವರ ಪ್ಯಾಂಜಿಯಾದಲ್ಲಿ ಈ ಪರಿಣಾಮ ಕಾಣಿಸದೇ ಇರುವುದು ಸೋಜಿಗ ಹುಟ್ಟಿಸುತ್ತದೆ.

ರವೀಂದ್ರ ಕುಮಾರ್ ಅವರ ಮಹಾತ್ವಾಕಾಂಕ್ಷೆಗೆ ಪ್ರಾತಿನಿಧಿಕ ಎನ್ನಬಹುದಾದ 'ಪ್ಯಾಂಜಿಯಾ' ಮತ್ತು 'ಸರಪಳಿ' ಎಂಬ ಪದ್ಯಗಳನ್ನೇ ಗಮನಿಸಿ : '*ಸಾವ ಸರಪಳಿಯಲ್ಲಿ ಕೊಂಡಿ ಕೊಂಡಿಗೂ ಸಾವು/ ನಿಟ್ಟುಸಿರಿಗೂ ಬಿಡದ ನೋವು*' ಎಂಬ ಸತ್ಯವನ್ನು ಸಾರುವ 'ಸರಪಳಿ' ಕವಿತೆಗೆ ಆಧಾರ ಕನ್ನಡ ವಿಷಯ ವಿಶ್ವಕೋಶದಲ್ಲಿ ಸೂಚಿತವಾಗಿರುವ 'ನಾಶದ ಸರಪಳಿ 'ಯ ಅಂಶ. ಹೊಯ್ಸಳ ಶಿಲ್ಪದಲ್ಲಿಯ 'ನಾಶದಸರಪಳಿ'ಯ ಶಿಲ್ಪಗಳಲ್ಲಿ ಜಿಂಕೆಯನ್ನು ನುಂಗುತ್ತಿರುವ ಹೆಬ್ಬಾವನ್ನು ಆನೆಯೊಂದು ತನ್ನ ಸೊಂಡಲಿನಲ್ಲಿ ಸಿಕ್ಕಿಸಿಕೊಂಡಿದೆ. ಆನೆಯನ್ನು ಸಿಂಹವೂ, ಸಿಂಹವನ್ನು ಶರಭವೂ, ಶರಭವನ್ನು ಗಂಡಭೇರುಂಡವೂ ಕೊಲ್ಲುವಂತೆ ಕೆತ್ತಲಾಗಿದೆ..... ಇದನ್ನೇ ಕಾವ್ಯದಲ್ಲಿ ಚಿತ್ರಿಸಲು ರವೀಂದ್ರ ಕುಮಾರ್ ಕೊಂಡಿ ಕೊಂಡಿಗಳನ್ನು ಜೋಡಿಸಿದ್ದಾರೆ. ಹೀಗೆ ಒಂದು ಗೊತ್ತಾದ ಜಾಡಿನಲ್ಲಿಯೇ ಸಾಗುವ ಈ ಕೊಂಡಿ ಕವಿತೆ ಅನಿರೀಕ್ಷಿತ ತಿರುವು ಪಡೆಯುವಂತೆ 'ಅನುಮಾನ ಸರಪಳಿ 'ಯೆಂಬ ಎರಡನೆಯ ಕಾಂಡದಲ್ಲಿ ಮುಂದುವರೆಯುತ್ತದೆ. ಆದರೆ ಈ ಭಾಗದಲ್ಲಿಯೂ ಕಾವ್ಯದ ಅಭಿವ್ಯಕ್ತಿಗಾಗಲೀ, ಕಾಣ್ಕೆಗಾಗಲೀ ಹೊಸ ಆಯಾಮ ಪ್ರಾಪ್ತವಾಗುವುದಿಲ್ಲ. 'ಮಾನವ ಸರಪಳಿಯೆಂಬ ಕೊನೆಯ ಕಾಂಡ'ದಲ್ಲೂ ಈ ಕಾವ್ಯ 'ವಿಸ್ಮಯ' ಹುಟ್ಟಿಸುವ ಬೆಳವಣಿಗೆಯನ್ನು ತೋರಿಸುವುದಿಲ್ಲ ; ಮಾಯೆಯನ್ನೂ ಕವಿಸುವುದಿಲ್ಲ. '*ಪ್ರೀತಿಗೂ ಸರಪಳಿ ಬೇಡುವ ಕಾಲದ ಹಿಂದೆ ಕರುಳ ಸರಪಳಿಯ ಚರಿತೆಯುಂಟು*' ಎಂಬ ಮತ್ತು '*ಕುಡುಕುವ ಕೊಂಡಿಯಲಿ/ ಬದುಕ ಗುಟ್ಟನಿಟ್ಟುಕೊಂಡು*' ಎಂಬ ಹೇಳಿಕೆಯನ್ನಷ್ಟೆ ಜೋಡಿಸುತ್ತದೆ.

'ಪ್ಯಾಂಜಿಯಾ ' ಎನ್ನುವ ಪದ ಕುತೂಹಲ ಕೆರಳಿಸಿದರೂ, 'ಹಿಂದೊಮ್ಮೆ ಇಡೀ ಜಗತ್ತು ಬೆಸೆದುಕೊಂಡಿತ್ತು. ಖಂಡಗಳು ಬೇರೆ ಬೇರೆಯಾಗಿರಲಿಲ್ಲ. ಆ ಸಮಸ್ತ ಭೂಮಿಯ ಹೆಸರೇ ಪ್ಯಾಂಜಿಯಾ' ಎಂಬ ಅರ್ಥ ವಿವರಣೆಗೇ ಈ ಕುತೂಹಲ ಮುಗಿದುಬಿಡುತ್ತದೆ. ಒಂದು ಕಾವ್ಯ ಪತ್ತೇದಾರಿ ಕಾದಂಬರಿಯಂತೆ 'ಕುತೂಹಲ 'ವನ್ನು ಉದ್ದಕ್ಕೂ ಉಳಿಸಿಕೊಂಡು ಹೋಗಬೇಕು ಎಂಬುದು ಇದರ ಅರ್ಥವಲ್ಲ. ಆದರೆ ವಿವಿಧ ಘಟ್ಟಗಳಲ್ಲಿ ಕಾವ್ಯ ಅರಳುವ, ಬೆಳೆಯುವ ಪರಿಯೇ ಇಂಥ 'ಕುತೂಹಲ 'ಕ್ಕೆ

ಕಾರಣವಾಗಬಹುದು.ಈ ಕವಿತೆಯಲ್ಲೂ ರವೀಂದ್ರ ಕುಮಾರ್ ಒಂದು ಹೇಳಿಕೆಯ ಅರ್ಥವನ್ನು ಸಾಲು ಸಾಲುಗಳಲ್ಲಿ ಹಿಗ್ಗಿಸಲು ನೋಡುತ್ತಾರೆ.ಈ ಪ್ರಯತ್ನವೇ ಬಹುಶಃ ಅವರ ಕಾವ್ಯಕ್ಕೆ ಒಂದುಬಗೆಯ ಜಡತೆಯನ್ನು ತಂದಿರುವಂತೆ ಕಾಣಿಸುತ್ತದೆ. 'ಹುಡುಕುತ್ತ ಹೋದಂತೆ ಬಗೆ ಬಗೆಯ ಪರಿವೇಷ / ಸೌರಮಂಡಲದಲ್ಲೂ ಒಡೆದ ಇತಿಹಾಸ...', 'ಮೂಲಗಾಣದ ಮೂಲಕ್ಕೆ ಒಡಲೆಂಬ ಅಂತ್ಯಮೂಲ / ಮೂಲ ಕಾಣುವ ಮೂಲಕ್ಕೆ ಬಿಂದು ಬಿಂದುವಿನಲ್ಲೂ ಒಡಲು' ಹೀಗೆ ವಸ್ತು ಸತ್ಯವನ್ನಷ್ಟೆ ಕಾಣಿಸಲು ಕವಿತೆ ಯತ್ನಿಸುತ್ತದೆ.ಇದನ್ನು ಮೀರಿದ ಕಾವ್ಯ ಸತ್ಯ ಕಾಣಿಸುವುದು ಸಾಧ್ಯವಾಗಿದ್ದರೆ 'ಪ್ಯಾಂಜಿಯಾ'ದ ಕವಿತೆಗಳು 'ಮಾಯೆ' ಎನ್ನಿಸಿಕೊಳ್ಳಬಹುದಿತ್ತು.

- ಜಿ.ಪಿ.ಬಸವರಾಜು

ನೀಲಾಂಜನ (ಎನ್.ಎಸ್.ಎಲ್. ಅಭಿನಂದನ ಗ್ರಂಥ)

ಸಂ : ಎಲ್.ಎಸ್.ಶೇಷಗಿರಿರಾವ್, ಎಚ್.ಎಸ್.ವೆಂಕಟೇಶಮೂರ್ತಿ, ಬಿ.ಆರ್.ಲಕ್ಷ್ಮಣರಾವ್

ಪ್ರ : ಪುಸ್ತಕಾಲಯ, ಬೆಂಗಳೂರು ; ಪುಟ :೭೨೮ ಬೆಲೆ : ರೂ .೨೭೫/

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅಭಿನಂದನ ಗ್ರಂಥಗಳ ಒಂದು ಪರಂಪರೆಯೇ ಇದೆ. ಬಿ.ಎಂ.ಶ್ರೀ, ಕುವೆಂಪು, ಬೇಂದ್ರೆ, ಮಾಸ್ತಿ, ಆನಂದಕಂದ, ಕಾರಂತ, ಕೆ.ಎಸ್.ನ., ಹೀಗೆ ಕನ್ನಡದ ಅನೇಕ ಮಹತ್ವದ ಲೇಖಕರಿಗೆ ಅಭಿನಂದನಗ್ರಂಥಗಳು ಸಂಧಾಯವಾದ ದಾಖಲೆಯಿದೆ.ಆಯಾ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿದ ವ್ಯಕ್ತಿಗಳನ್ನು ಗೌರವಿಸುವ ದೃಷ್ಟಿಯಿಂದ ಅಭಿನಂದನ ಗ್ರಂಥಗಳು ರೂಪುಗೊಳ್ಳುವುದು ಸಹಜವಾದರೂ ಸಲ್ಲಬೇಕಾದವರಿಗೆಲ್ಲಾ ಇದು ಸಂದಿದೆ ಎಂದರೆ ತಪ್ಪಾದೀತು.

ಎಲ್ಲರೂ ಹುಟ್ಟಿರುವುದು ನಿಜವಾದರೂ, ಹಲವರು ಅರವತ್ತರ ಗಡಿ ದಾಟುವುದು ಸಹಜವಾದರೂ ಎಲ್ಲರ ಮನೆಯಲ್ಲಿ ಹುಟ್ಟುಹಬ್ಬದ ಸಮಾರಂಭಗಳು, ಷಷ್ಟ್ಯಬ್ಧಿ ಸಮಾರಂಭಗಳು ನಡೆಯುವುದಿಲ್ಲವಷ್ಟೇ. ಒಡಹುಟ್ಟಿದವರ ಅನುರಾಗ, ಬಂಧುಬಳಗದವರ ಒತ್ತಾಸೆ ಮೇಲೆ ಕಾಣಿಸಿದ ಸಮಾರಂಭಗಳಿಗೆ ಕಾರಣವಾಗುವಂತೆ ಸಹಲೇಖಕರು, ಗೆಳೆಯರು, ಅಭಿಮಾನಿಗಳು, ಹಿತೈಷಿಗಳು ಅಭಿನಂದನ ಗ್ರಂಥಗಳ ಹಿಂದಿರುತ್ತಾರೆ.

'ಅಭಿನಂದನೆ' ಹೆಸರೇ ಸೂಚಿಸುವಂತೆ ಇಲ್ಲಿ ನಿಂದನೆ -ಟೀಕೆ -ವಿಮರ್ಶೆ-ಚಿಂತನೆ - ಚರ್ಚೆಗಳಿಗೆ ಅವಕಾಶ ಕಡಿಮೆ.ಹುಟ್ಟುಹಬ್ಬದ ದಿನ ಉಡಾಳ ಮಗುವಿಗೂ ಬೈಗುಳ-ಹೊಡೆತಗಳಿಂದ ವಿನಾಯಿತಿ ಇರುವಂತೆ ಈ ಅಭಿನಂದನ ಗ್ರಂಥಗಳಲ್ಲಿ ಪರಕೆ -ಹಾರೈಕೆ -ಆಶೀರ್ವಾದ ಇವೇ ಪ್ರಧಾನ ಅಂಶಗಳು.ಅಭಿನಂದನಾ ಗ್ರಂಥಗಳು ಒಂದು ರೀತಿಯಲ್ಲಿ ಉಡುಗೊರೆ ರೀತ್ಯಾ ಬರೆಹಗಳಿಂದ ತುಂಬಿರುತ್ತವೆ ಎಂದರೆ ತಪ್ಪಾಗಲಾರದು.ಕನ್ನಡದ ಹಿರಿಯ ಕವಿ ಶ್ರೀ ನೈಶಿಲಭಟ್ಟರಿಗೆ ಸಮರ್ಪಿಸಲ್ಪಟ್ಟ 'ನೀಲಾಂಜನ' ಕೂಡ ಈ ನಡಾವಳಿಗೆ ಹೊರತಾಗಿಲ್ಲ ಎಂದು ಹೇಳಬೇಕಾಗುತ್ತದೆ.

'ನೀಲಾಂಜನ' ೭೦೦ ಪುಟಗಳ ಬೃಹತ್ ಗ್ರಂಥ.ನವ್ಯ ಕಾವ್ಯ, ಭಾವಗೀತೆ, ವಿಮರ್ಶೆ, ಸಂಪಾದನೆ, ಅನುವಾದ, ನಾಟಕ ಇವೇ ಮೊದಲಾದ ಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಜನಪ್ರಿಯರಾಗಿರುವ ಡಾ.ಲಕ್ಷ್ಮೀನಾರಾಯಣ ಭಟ್ಟರಿಗೆ ಅವರ ಮಿತ್ರರು, ಅಭಿಮಾನಿಗಳು ಪ್ರೀತಿಯಿಂದ ಸಮರ್ಪಿಸಿರುವ ಈ

ಅಭಿನಂದನ ಗ್ರಂಥದ ಹೆಸರು ಆಕರ್ಷಕವಾಗಿದೆ. ರಕ್ಷಾಕವಚ, ಮುದ್ರಣ ಸೊಗಸಾಗಿವೆ.

ಪ್ರಸ್ತುತ ಗ್ರಂಥ ಐದು ಭಾಗಗಳಲ್ಲಿ ಹಬ್ಬಿಕೊಂಡಿದೆ. ಭಾಗ ಒಂದು : ಎ.ಎನ್.ಮೂರ್ತಿರಾವ್, ಪುತಿನ, ಕೆ.ಎಸ್.ನ., ಹಾಮಾನಾ, ಕಣವಿ, ಭೈರಪ್ಪ , ಬಲ್ಲಾಳ ಮುಂತಾದವರ ಹರಕೆ ಹಾರೈಕೆಗಳಿಂದ ತುಂಬಿಕೊಂಡಿದ್ದು 'ಪ್ರೀತಿಯ ಶಿಷ್ಯ ' ಎನ್ನುವ ತ.ಸು.ಶಾಮರಾಯರ ಲೇಖನ ಗಮನ ಸೆಳೆಯುತ್ತದೆ. ತ.ಸು.ಶಾಮರಾಯರು , ಭಟ್ಟರು ಹುಡುಗನಾಗಿದ್ದಾಗಿನ ಚಿತ್ರಣ ಕೊಡುತ್ತಾ ವಾರಾನ್ನ ಕೇಳಲೂ ಕಂಡರಿಯದ ಊರಿಗೆ ಬಂದಿದ್ದ ಹುಡುಗನ ಧೈರ್ಯ, ಸಂಕಲ್ಪಶಕ್ತಿ ಮೆಚ್ಚುತ್ತಾ ಈ ಹುಡುಗ ನೋಡ ನೋಡುತ್ತಲೇ ಎಲ್ಲಿಂದೆಲ್ಲಿಗೆ ಏರಿಬಿಟ್ಟ ಅನ್ನಿಸಿ, ಸಂತೋಷ ಆಶ್ಚರ್ಯ ಎರಡನ್ನೂ ವ್ಯಕ್ತಪಡಿಸುತ್ತಾರೆ.

ಎರಡನೆಯ ಭಾಗ ಭಟ್ಟರ ಸಮಗ್ರ ವ್ಯಕ್ತಿತ್ವವನ್ನು ಕಟ್ಟಿಕೊಡುವ ಪ್ರಯತ್ನವಾಗಿದ್ದು ಇಲ್ಲಿನ ೨೮ ಲೇಖನಗಳಲ್ಲಿ ಭಟ್ಟರು ಸ್ನೇಹಶೀಲ ವ್ಯಕ್ತಿಯಾಗಿ, ಹಿರಿಯಣ್ಣನಾಗಿ, ಕಲಾವಿದರ ಪರವಾಗಿ ನಿಂತ ಕವಿಯಾಗಿ, ಮುಕ್ತ ಮನಸ್ಸಿನ ಸ್ನೇಹಿತನಾಗಿ, ಹೆಮ್ಮೆಯ ಮೇಸ್ಟ್ರು ಆಗಿ, ಅನುಕರಣೀಯ ವ್ಯಕ್ತಿ -ಚೈತನ್ಯದ ಚಿಲುಮೆಯಾಗಿ ಬಿಂಬಿತರಾಗಿದ್ದಾರೆ. ಪ್ರಸ್ತುತ ಭಾಗದ 'ರಾಗದ ಬೆನ್ನೇರಿ' ಎಂಬ ಹಾಮಾನಾ ಅವರ ಲೇಖನದಲ್ಲಿ , ಯಶಸ್ಸು ಪಡೆಯುವ ಆಶೆಯಿಂದ ರಾಗದ ಬೆನ್ನೇರಿ ಹೋಗುವ ಆತುರದಲ್ಲಿರುವ ಕ್ಯಾಸೆಟ್ ಕವಿಗಳಿಗೆ ಹೇಳಿರುವ ಕಿವಿಮಾತುಗಳು ಸಮಯೋಚಿತವಾಗಿವೆ. ಅವರ ಮಾತುಗಳನ್ನೇ ಪುನರುಚ್ಚರಿಸುವುದಾದರೆ 'ರಾಗದ ಬೆನ್ನು ಹತ್ತಿ ಭಾವನೆಗಳು ಹೊರಟಾಗ ಕವಿ ತನ್ನ ಕೆಲಸವನ್ನು ಸಮರ್ಪಕವಾಗಿ ಮಾಡದೆ ಹೋಗುವ ಅಪಾಯಗಳುಂಟು. ರಾಗದ ಪರಿಕರಗಳಾಗಿ ಏಕತಾನದ ಪ್ರಾಸ, ಅನವಶ್ಯಕ ಪದ ಜೋಡಣೆ, ಒಗ್ಗದ ದೀರ್ಘತೆ ಇವುಗಳಿಂದ ಕಾವ್ಯದ ಶಕ್ತಿ ಸ್ವರೂಪ ಕುಗ್ಗುತ್ತದೆ. ನಿಜವಾದ ಕವಿ ಇದಕ್ಕೆ ಗಮನ ಕೊಡಬೇಕು. ರಾಗ, ಭಾವಗಳನ್ನು ಹಿಂಬಾಲಿಸಬೇಕು. ಭಾವ ರಾಗವನ್ನು ಅವಲಂಬಿಸಬಾರದು. ಸರಳತೆ ಕಾವ್ಯದ ಶ್ರೇಷ್ಠತೆಯನ್ನೇನೂ ಕೆಡಿಸದು. ಆದರೆ ಅದು ಇನ್ನೊಂದನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದಾಗಿರಕೂಡದು, ಅಷ್ಟೇ. ಮೊದಲು ಸೃಷ್ಟಿ, ಆಮೇಲೆ ಸಂವಹನ. ಸಂವಹನಕ್ಕಾಗಿಯೇ ಸೃಷ್ಟಿಯಾಗಬಾರದು'. ಹೆಚ್ಚು ಹೆಚ್ಚು ಕಿವಿಗಳಿಗೆ ಮುಟ್ಟಬೇಕೆಂಬ ಆಕರ್ಷಣೆಗೆ ಬಲಿಯಾಗಿ ಸಂವಹನ ಮಾಧ್ಯಮಗಳ ಪ್ರಲೋಭನೆಗೆ ಶರಣಾಗಿ ಒಂದರ್ಥದಲ್ಲಿ ಅದರ ಗುಲಾಮರಾಗಿ ಕಾಗದದ ಹೂವುಗಳನ್ನು ಸೃಷ್ಟಿಸಿ ಮಾರುತ್ತಿರುವ ಕನ್ನಡದ ಕೆಲವು ಭಾವಗೀತೆಕಾರರು ಇದನ್ನು ಅವಶ್ಯ ಗಮನಿಸಬೇಕು. ಪ್ರಸ್ತುತ ಭಾಗದಲ್ಲಿ ಕನ್ನಡದ ಖ್ಯಾತ ಕವಿಗಳು, ಕಾದಂಬರಿಕಾರರು, ನಾಟಕಕಾರರು, ವಿಮರ್ಶಕರು, ಭಾಷಾವಿಜ್ಞಾನಿಗಳು, ಸಂಶೋಧಕರು, ಪ್ರತಿಭಾವಂತ ಅಧ್ಯಾಪಕರು ಇತ್ಯಾದಿ ಇತ್ಯಾದಿಯಾಗಿ ಭಟ್ಟರನ್ನು ಹೊಗಳಿ ಹೊಗಳಿ ಹೊನ್ನಶೂಲಕ್ಕೇರಿಸಿದ ಲೇಖನಗಳೇ ಇಡಿಕಿರಿದು, ಓದುವಾಗ ಏಕತಾನತೆ ಒದಗಿ ನಿರಾಸೆ ಹುಟ್ಟಿಸಿದರೂ ...

ಬಿ.ಆರ್.ಛಾಯಾ ಅವರ 'ನಮ್ಮ ಭಟ್ಟಮಾಮ' ಲೇಖನದೊಳಗೆ ಬಿಂಬಿತವಾಗಿರುವ ಭಟ್ಟರ ವ್ಯವಹಾರ ಜ್ಞಾನ; ಲೇಖಕರ ಪರವಾನಗಿ ತೆಗೆದುಕೊಳ್ಳದೆಯೇ ಅವರ ಭಾವಗೀತೆಗಳನ್ನು ಬಳಸಿಕೊಂಡವರನ್ನು ಭಟ್ಟರಿಂದ ರಕ್ಷಿಸಿಕೊಳ್ಳಲು ಮುಂದಾಗಿ ಸ್ವತಃ ತಮ್ಮನ್ನೇ ಅನಾವರಣಗೊಳಿಸಿಕೊಳ್ಳುವ ವೈ.ಕೆ.ಮುದ್ದುಕೃಷ್ಣರ ಜಾಣತನ ! ..ಮುಂದೆ ಭಟ್ಟರೊಂದಿಗೆ ಅವರ ಗೆಳೆತನ ! ...ಸಿ.ಅಶ್ವಥ್ ಅವರು ಲೇಲೇಲೇ...ಎಂದು ಟ್ಯೂನ್ ಹಾಕುತ್ತಿದ್ದಂತೆಯೇ ಅಲ್ಲೇ ಕೆಳಗೆ ಬಿದ್ದಿದ್ದ ವಿಲ್ಸ್ ಫಿಲ್ಟರ್ ಸಿಗರೇಟಿನ ಕಾಗದದ ಮೇಲೆ ಆ ಲಯಕ್ಕೆ ಒಪ್ಪುವಂತೆ ಒಂದು ಪದ್ಯವನ್ನೇ ಬರೆದು ಮುಗಿಸುವಂತಹ ಸನ್ನಿವೇಶಗಳು,

ಅನಿರೀಕ್ಷಿತವಾಗಿ ಪ್ರಕಟಗೊಂಡು ಭಟ್ಟರ ಮನುಷ್ಯ ಸಹಜ ದೌರ್ಬಲ್ಯಗಳನ್ನು ಅರಿಯುವಲ್ಲಿ ಸಹಾಯಕವಾಗಿವೆ! 'ಸ್ವರ್ಗ ಮೂರೇ ಗೇಣು ಉಳಿದಿತ್ತು' 'ಕಲ್ಲುಸಕ್ಕರೆ ಚಪ್ಪರಿಸಿದ ಅನುಭವ','ನಮ್ಮ ಹೆಮ್ಮೆಯ ಮೇಸ್ಟ್ರು'ಮುಂತಾದ ಲೇಖನಗಳೊಳಗಿನ ಅವರ ಶಿಷ್ಯರ ಅನ್ನಿಸಿಕೆಗಳು ಭಟ್ಟರ ಮೇಲಿನ ಗೌರವ ಹೆಚ್ಚಿಸುವುದರಲ್ಲಿ ಸಹಾಯಕವಾಗುವಂತಿವೆ.

ಪ್ರಸ್ತುತ ಗ್ರಂಥದ ಮೂರನೆಯ ಭಾಗದಲ್ಲಿ ಎನ್.ಎಸ್.ಎಲ್ ಕೃತಿಗಳನ್ನು ಕುರಿತು ಸವಿಸ್ತಾರವಾದ ೬೩ ಲೇಖನಗಳಿವೆ.ಭಟ್ಟರ 'ವೃತ್ತ' ಕವನ ಸಂಕಲನಕ್ಕೆ ೧೯೬೮ರಲ್ಲಿ ಜಿ.ಎಸ್.ಎಸ್.ಬರೆದ ಮುನ್ನುಡಿ 'ನಿರಾತಂಕ ಮನೋಭಾವದ ಕವಿ 'ಶೀರ್ಷಿಕೆಯಡಿ ಪುನರ್ಮುದ್ರಿತವಾಗಿದ್ದು ಈ ಲೇಖನದಲ್ಲಿ ಭಟ್ಟರ ಪ್ರಥಮ ಕವನಸಂಕಲನದ ಮೊದಲ ಕವಿತೆ 'ಸೀಮಂತಿನಿ' ಕುರಿತು ಸೊಗಸಾದ ಒಳನೋಟವಿದೆ.ಇದೇ ಲೇಖನದಲ್ಲಿ ಜಿ.ಎಸ್.ಎಸ್.ಅವರು ಸಾಹಿತ್ಯ ಕ್ಷೇತ್ರದಲ್ಲಿನ ಗುಂಪುಗಾರಿಕೆ ಕುರಿತು ಬರೆಯುತ್ತಾರೆ.'ಸಮಾನ ಮನೋಧರ್ಮವುಳ್ಳ ಜನ ವೈಚಾರಿಕ ಜಾಗೃತಿಗಾಗಿ ಒಂದು ಗುಂಪಾಗುವುದು ಸಹಜವಾದರೂ ಬರಬರುತ್ತಾ ತಮ್ಮ ತಮ್ಮ ವೈಯಕ್ತಿಕ ಸ್ವತಂತ್ರ ವಿಚಾರಶೀಲತೆಯನ್ನು ಬೆಳೆಯಿಸಿಕೊಳ್ಳುವ ಬದಲು ಆ ಗುಂಪಿನ ಮುಖವಾಣಿಯಾಗಿ ಸಾಮೂಹಿಕವಾಗಿ ಆಲೋಚಿಸತೊಡಗುತ್ತಾರೆ.ಹೀಗೆ ಸಾಮೂಹಿಕವಾಗಿ ಆಲೋಚಿಸುವ ಪದ್ಧತಿ ಅತ್ಯಂತ ಅಪಾಯಕಾರಿಯಾದದ್ದು.ವ್ಯಕ್ತಿಗೆ ಹಾಗೂ ಪಂಥಕ್ಕೆ,ಯಾವುದೇ ಒಂದು ಗುಂಪಿಗೆ ತತ್ವಶಃ ತಾವು ಬದ್ಧರಾಗಿದ್ದರೂ ತಮಗೆ ತಾವೇ ಸ್ವತಂತ್ರರಾಗಿ ಆಲೋಚಿಸುತ್ತಿದ್ದೇವೆ,ಅದನ್ನು ಧೈರ್ಯವಾಗಿ ಪ್ರಕಟಿಸಬೇಕು ಎಂದು ಕಂಡುಕೊಳ್ಳುವವರು ತೀರ ವಿರಳ.ಯಾವ ಒಂದು ಗುಂಪಿಗೆ ಸೇರದೆ ಹೊರಗೆ ನಿಂತ ವ್ಯಕ್ತಿಗಳು ತಾವು ಏಕಾಕಿಗಳಾಗಿ,ಅನಾಥರಾಗಿ,ಗುಂಪುಗಾರಿಕೆಯ ಜನರ ಟೀಕೆಗೋ ಅನಾದರಕ್ಕೋ,ಅವಜ್ಞೆತೆಗೋ ಪಾತ್ರರಾಗಬೇಕಾದದ್ದು ಅನಿವಾರ್ಯ.ಇಂದು ಇಂತಹ ಗುಂಪುಗಳು ತಿಳಿದವರಿಂದ,ತಿಳಿಯದವರಿಂದ ರೂಪುಗೊಂಡಿವೆ.ಹೊಸದಾಗಿ ಬರೆಯುವವರು ,ಅಷ್ಟೆ ಏಕೆ,ಸಾಕಷ್ಟು ಶಕ್ತರಾದವರೂ ಸಹ ತಮ್ಮ ಇಚ್ಛೆಯಿಂದಲೋ ಅಥವಾ ಗುಂಪಿನ ಕೆಲವು ಬುದ್ಧಿವಂತರ ಚಾಕಚಕ್ಯತೆಯಿಂದಲೋ,ತಮ್ಮ ಪ್ರಕಾಶನ ಹಾಗೂ ಪ್ರಸಾರಕ್ಕಾಗಿ ಇಂಥ ಗುಂಪುಗಳ ಆಕರ್ಷಣೆಯನ್ನೋ ರಕ್ಷಣೆಯನ್ನೋ ಬಯಸುವಂಥ ಒಂದು ಆತಂಕ ಇಂದಿನ ಪರಿಸರದಲ್ಲಿದೆ'.೧೯೬೮ರಲ್ಲಿ ಈ ರೀತಿಯಾಗಿ ಬರೆಯುವ ಜಿ.ಎಸ್.ಎಸ್.ಅವರ observation ಇಂದಿಗೂ ಪ್ರಸ್ತುತವಾಗಿರುವುದನ್ನು ಕಂಡರೆ ಆಶ್ಚರ್ಯವೆನಿಸುತ್ತದೆ.ಇದೇ ಭಾಗದಲ್ಲಿ ,ಯು.ಆರ್.ಅನಂತಮೂರ್ತಿ ಅವರು 'ಚೆನ್ನದ ಹಕ್ಕಿ '(ಏಟ್ಸ್ ಕವಿಯ ಮಹತ್ವದ ಕವನಗಳ ಅನುವಾದ)ಕುರಿತು ಬರೆದಿರುವ 'ಘನವಾದ ಪದ್ಯಗಳ ಹಿತವಾದ ಅನುವಾದ' ಗಮನಾರ್ಹವೆನಿಸುತ್ತದೆ.ಮಿಕ್ಕ ಲೇಖನಗಳು ಓದಿಸಿಕೊಳ್ಳುವ ಗುಣ ಪಡೆದಿದ್ದರೂ ಯಾಕೋ ಅಂತಹ ಉತ್ಸಾಹ ಮೂಡಿಸುವುದೇ ಇಲ್ಲ.

ಪ್ರಸ್ತುತ ಗ್ರಂಥದ ನಾಲ್ಕನೆಯ ಭಾಗದಲ್ಲಿ ಭಟ್ಟರ ಕೃತಿಗಳನ್ನು ಕುರಿತಾದ ಇಪ್ಪತ್ತೆರಡು ಪತ್ರಿಕಾ ವಿಮರ್ಶೆಗಳನ್ನು ಕಲೆಹಾಕಲಾಗಿದೆ.'ಶ್ರೀ ಲಕ್ಷ್ಮೀನಾರಾಯಣ ಭಟ್ಟರ ಕಾವ್ಯ ದೊಡ್ಡ ಧ್ಯೇಯವನ್ನುಳ್ಳ ಮತ್ತು ಅದನ್ನು ಸಾಧಿಸುವ ಪ್ರಯತ್ನದಲ್ಲಿ ಸೋಲದೆ ಇರುವ ಕಾವ್ಯ' ಎಂದು ಪ್ರೊ.ಕೀರ್ತಿನಾಥ ಕುರ್ತಕೋಟಿ ಭಟ್ಟರ 'ಚಿತ್ರಕೂಟ ' ಕುರಿತು ತಮ್ಮ ಪ್ರಜಾವಾಣಿ ವಿಮರ್ಶೆಯಲ್ಲಿ ಹೇಳಿದರೆ,ಅದೇ ಕವನ ಸಂಕಲನ ಕುರಿತು - ಬದುಕಿನ ಉತ್ಕರ್ಷದ ಬಗೆಗೆ ಅದಮ್ಯ ಆಶಾವಾದಿತ್ವವನ್ನು ಹೊಂದಿರುವ,ವರ್ತಮಾನದ ಒಡಲಲ್ಲಿ ಇರುವ 'ಆರ್ಷ ' ಪ್ರಜ್ಞೆಯನ್ನು ಚಿತ್ರಿಸುವ 'ಚಿತ್ರಕೂಟ ' ಭಟ್ಟರ ನವೋದಯ ದೃಷ್ಟಿಯ ನವ್ಯ ಸೃಷ್ಟಿಗೆ

ಸಾಕ್ಷಿಯಾಗಿದೆ ಎನ್ನುತ್ತಾರೆ - ಎಂ.ಎಲ್.ಅಚ್ಯುತರಾವ್ ,ತಮ್ಮ ಮಲ್ಲಿಗೆಯಲ್ಲಿನ ಪುಸ್ತಕ ವಿಮರ್ಶೆಯಲ್ಲಿ. ಬಿ.ಭಾಸ್ಕರರಾವ್ ಅವರು ತರಂಗ ಪತ್ರಿಕೆಯಲ್ಲಿನ ಪುಸ್ತಕ ವಿಮರ್ಶೆಯಲ್ಲಿ , 'ಸುನೀತ ' ಅನುವಾದ ಕುರಿತು ಮಾದರಿ ಅನುವಾದ ಎಂದು ಶ್ಲಾಘಿಸಿದರೆ,ಕೊರತೆ ನೀಗುವ ಉತ್ತಮ ಕಾಣಿಕೆ ಎಂದು ಜಿ.ಎಸ್.ಅಮೂರ ಅವರು ಪ್ರಜಾವಾಣಿ ವಿಮರ್ಶೆಯಲ್ಲಿ ಬರೆಯುತ್ತಾರೆ.ಮುರಳೀಧರ ಉಪಾಧ್ಯ ಹಿರಿಯಡ್ಕ ಅವರು ಭಟ್ಟರ 'ಹೊಳೆಸಾಲಿನ ಮರ ' ಕುರಿತು ಬರೆಯುತ್ತಾ ''ಭಟ್ಟರು ನವ್ಯಕಾವ್ಯದ ಜತೆಗೆ ಭಾವಗೀತೆಗಳನ್ನು ಬರೆದ ಕವಿ.ಅವರು ಎರಡು ದೋಣಿಗಳಲ್ಲಿ ಕಾಲಿಟ್ಟು ಜಯಿಸಿದ್ದಾರೆ.'ಹೊಳೆಸಾಲಿನ ಮರ' ಕನ್ನಡದ ನವ್ಯಕಾವ್ಯ ಮತ್ತು ಭಟ್ಟರ ಕಾವ್ಯ ಪ್ರತಿಭೆ ಎರಡೂ ಕ್ರಿಯಾಶೀಲವಾಗಿರುವುದನ್ನು ಸಾಬೀತು ಪಡಿಸುವ ಸಂಕಲನ '' ಎಂದು ತರಂಗ ಪತ್ರಿಕಾ ವಿಮರ್ಶೆಯಲ್ಲಿ ಹೇಳಿದ್ದರೆ;ಇದೇ ಸಂಕಲನ ಕುರಿತು ಮಲ್ಲೇಪುರಂ ಜಿ ವೆಂಕಟೇಶ್, ಕನ್ನಡ ಪ್ರಭದಲ್ಲಿ -'ಕವನಸಂಕಲನದ ಶೀರ್ಷಿಕೆಯ ಪದ್ಯ ಮೊದಲೋದಿಗೇ ನಮ್ಮ ನೋಟವನ್ನು ಗಪ್ಪನೆ ಹಿಡಿಯುತ್ತದೆ.ಭಟ್ಟರು ಇಲ್ಲಿ ಪದಗಳೊಡನೆ ನಡೆಸಿರುವ ಚೆಲ್ಲಾಟ,ಆ ಪದಗಳ ಮೂಲಕ ಅನೂಹ್ಯ ಲೋಕವನ್ನು ಸೃಷ್ಟಿಸುವ ತವಕ,ಜೊತೆಜೊತೆಗೆ ಪ್ರಕೃತಿಯ ಉಸಿರಾಟ -ಮಾನವನ ಅಕ್ಷುಣ್ಣ ಬದುಕು, ಇವನ್ನು ಕೇಂದ್ರೀಕರಿಸಿಕೊಂಡು ನಮ್ಮ ಮನಸ್ಸನ್ನು ದೋಚುತ್ತದೆ.ಪದ್ಯದ ಮೂಲಕ ಮನಸ್ಸುಗಳ ರಿಂಗಣಗುಣಿತವನ್ನು ಜೋಡಿಸುವ ಅರ್ಥ ಶರೀರ,ಶಬ್ದಗಾರುಡಿ,ಆಧುನಿಕ ಕನ್ನಡ ಕಾವ್ಯದ ಅಧ್ಯಯನ ಶ್ರದ್ಧೆ ,ತಪಸ್ಸುಗಳ ಫಲವಾಗಿ ಇಲ್ಲಿನ ಅನೇಕ ಪದ್ಯಗಳು ಅರಳಿವೆ ' ಎಂದು ಬರೆಯುತ್ತಾರೆ.

ಮೇಲೆ ಕಾಣಿಸಿದ ಈ ಪತ್ರಿಕಾ ವಿಮರ್ಶೆಗಳೂ ಸೇರಿದಂತೆ ಈ ಗ್ರಂಥದ ಅನೇಕ ಲೇಖನಗಳನ್ನು ಓದಿದಾಗ,ಅದರಲ್ಲೂ ಭಟ್ಟರ ಕಾವ್ಯವನ್ನು ಕುರಿತ ವಿಮರ್ಶೆಯ ಲೇಖನಗಳನ್ನು ಓದಿದಾಗ,ನನ್ನ ಮನಸ್ಸಿಗೆ ಢಾಳಾಗಿ ಗೋಚರಿಸಿದ್ದು ,ನಮ್ಮ ಕನ್ನಡ ವಿಮರ್ಶಕರ ಹಿಪಾಕ್ರಸಿ.ಈ ನಿಟ್ಟಿನಲ್ಲಿ ತಮ್ಮ ದಾಕ್ಷಿಣ್ಯಪರ ವಿಮರ್ಶೆಯ ಮೂಲಕ ಅವರು ಭಟ್ಟರಿಗೆ ಅನ್ಯಾಯ ಬಗೆದಿದ್ದಾರೆ ಎಂದೇ ಹೇಳಬಹುದು!

ಭಾಗ ಐದರಲ್ಲಿ ಭಟ್ಟರ ಜೊತೆ ನಡೆಸಿದ ಒಂದು ಸಂದರ್ಶನವಿದೆ.ಹಾಗೂ ಭಟ್ಟರ ವಿವಿಧ ಕಾವ್ಯ ಸಂಗ್ರಹಗಳಿಂದ ಕಲೆಹಾಕಿದ ಎನ್.ಎಸ್.ಎಲ್.ಸೂಕ್ತಿಗಳಿವೆ.ಒಂದೆರಡು ಸೂಕ್ತಿಗಳನ್ನು ಉಲ್ಲೇಖಿಸುವುದಾದರೆ -

'ಕಳ್ಳ ಮುತ್ತಿಟ್ಟರೆ ಹಲ್ಲೆಣಿಸಿಕೊಳ್ಳುವ ಕಾಲ'

'ಸಾರ ತೀರಿದ ಬಾಳು ತುರಿದ ತಿರುಳಿನ ಕರಟ'

'ತನ್ನ ಹಿನ್ನೆಲೆಯಲ್ಲಿ ಹಬ್ಬುತ್ತಿರುವ ಮೂಲ ಶ್ರುತಿಗೆ ಮತ್ತೆ ಪಡಿಮಿಡಿಯಬೇಕು' ...ಇತ್ಯಾದಿ... ಆಯಾ ಕವನಗಳಲ್ಲಿ ಈ ಸಾಲುಗಳು ಸಾಂದರ್ಭಿಕ ಅರ್ಥ ಹೊರಡಿಸಬಹುದಾದರೂ ಬಿಡಿಯಾಗಿ ಇವನ್ನು ಕಲೆಹಾಕಿರುವ ಔಚಿತ್ಯ ತಿಳಿಯುವುದಿಲ್ಲ.ಭಾವಗೀತೆಗಳ ಸಂಗ್ರಹದಿಂದ ಆರಿಸಿ ಕಲೆಹಾಕಿರುವ ಗೀತೆಗಳ ಕೆಲವು ಸಾಲುಗಳು ಮಾತ್ರ ಮೆಲುಕು ಹಾಕುವಂತಿವೆ.ಉದಾಹರಣೆಗೆ :

'ಕುರುಡು ಹಮ್ಮು ಬೇಟೆಯಾಡಿ
ಪ್ರೀತಿ ನರಳಿದೆ '

'ಯಾರು ಏನೆ ಜರೆಯಲಿ
ಯಾವ ಹೆಸರೆ ಕರೆಯಲಿ

ತಾಳಿನಿಲ್ಲು ಜೀವವೇ
ಸಹನೆ ಅದುವೆ ಗೆಲ್ಲಲಿ'

'ಹೂವು ಅರಳಿ ಕಾಯಿಗೆ
ಕಾಯಿ ಹೊರಳಿ ಹಣ್ಣಿಗೆ
ಹಣ್ಣೊಳಗಿನ ಬೀಜ ಚಿಮ್ಮಿ
ಮತ್ತೆ ತವರು ಮಣ್ಣಿಗೆ'

'ಎಲೆ ಹೂವು ಮರ ಚಿಗುರು
ಮಾತ್ರ ಪ್ರತ್ಯಕ್ಷ
ಇದನೆತ್ತಿ ನಿಲಿಸಿದಾ ಬೇರು ಅದೃಶ್ಯ' ...ಇತ್ಯಾದಿ ...

ಈ ಗ್ರಂಥದಲ್ಲಿ ಭಟ್ಟರ ಅರ್ಧಾಂಗಿಯಾದ ಶ್ರೀಮತಿ ಜ್ಯೋತಿಯವರಿಂದಾಗಲೀ, ಭಟ್ಟರ ಮಕ್ಕಳಿಂದಾಗಲೀ ಒಂದಾದರೂ ಲೇಖನ ಬರೆಸದೆ ಇರುವುದು ದೊಡ್ಡ ಕೊರತೆಯಾಗಿ ಕಾಣುತ್ತದೆ.

ಇಡಿಯಾಗಿ ಈ ಗ್ರಂಥವನ್ನು ಕುರಿತು ಹೇಳುವುದಾದರೆ : ಮೆಚ್ಚುಗೆ + ಆಶ್ಚರ್ಯ ಎರಡೂ ಉಂಟಾಗುತ್ತವೆ. ಹಾಗೆಯೇ ಏಳುನೂರು ಪುಟಗಳ ಈ ಬೃಹತ್ ಗ್ರಂಥ ಭಟ್ಟರನ್ನಾಗಲೀ, ಅವರ ಕೃತಿಗಳನ್ನಾಗಲಿ ನಿಜಾರ್ಥದಲ್ಲಿ ಬಿಂಬಿಸಿದೆ ಎಂಬುದರ ಬಗ್ಗೆ ನನಗೆ ಅನುಮಾನವೂ ಇದೆ.

- ಸವಿತಾ ನಾಗಭೂಷಣ

ವಿಕ್ಟೋರಿಯಾ ಮಗ ದೇವಲಿಂಗು (ಕಥೆಗಳು)
ಲೇ : ಕೆ.ಸತ್ಯನಾರಾಯಣ
ಪ್ರ : ನುಡಿ ಪ್ರಕಾಶನ, ಬೆಂಗಳೂರು -೨೮
ಪುಟಗಳು : ೧೩೩ **ಬೆಲೆ :** ರೂ.೬೦/-

ಮಾಸ್ತಿಕಥೆಗಾರಿಕೆಯನ್ನು ಬಹುವಾಗಿ ಮೆಚ್ಚುತ್ತಾ ತಮ್ಮ ಕಥನ ಕಲೆಯನ್ನು ರೂಢಿಸಿಕೊಂಡ ಕೆ.ಸತ್ಯನಾರಾಯಣ ಅವರ ಮೊದಲ ಕಥಾಸಂಕಲನದಲ್ಲಿ ('ನಿಮ್ಮ ಮೊದಲ ಪ್ರೇಮದ ಕಥೆ', ೧೯೯೩) ಮಾಸ್ತಿ ಕಥೆಗಾರಿಕೆಯ ಪ್ರಭಾವ ಢಾಳಾಗಿ ಕಾಣುತ್ತಿತ್ತು. ಮಾಸ್ತಿ ಕಥೆಗಳನ್ನು ಹೇಳುತ್ತಿರಲಿಲ್ಲ, ದಾಟಿಸುತ್ತಿದ್ದರು ಎಂದು ನಂಬುವ ಸತ್ಯನಾರಾಯಣ ಈ ದಾಟಿಸುವ ಕ್ರಿಯೆಯಲ್ಲಿ ಕಥೆ ಅರ್ಥಪಡೆದುಕೊಳ್ಳುತ್ತದೆ ಎಂದು ಕಂಡುಕೊಂಡವರು. ತಮ್ಮ ಮೊದಲ ಕಥೆಗಳಲ್ಲಿ ಈ ಥರದ ಪ್ರಯೋಗ ಮಾಡಿ ಕುತೂಹಲ ಹುಟ್ಟಿಸಿದ್ದ ಇವರು ಈ ಸಂಕಲನದಲ್ಲಿ ಪ್ರಯೋಗಶೀಲತೆಯ ಹಂತವನ್ನು ದಾಟಿ ಈ ಶೈಲಿಯನ್ನು ತಮ್ಮದೇ ರೀತಿಯಲ್ಲಿ ಪಳಗಿಸುವ ಪ್ರಯತ್ನಗಳನ್ನು ಮಾಡಿದ್ದಾರೆ.

ಇದಕ್ಕೆ ಉದಾಹರಣೆಯಾಗಿ ಈ ಸಂಕಲನದ 'ನಡೆಯುತ್ತಿತ್ತ ; ಕತೆ, ಬೆಳೆಯುತ್ತಿತ್ತ' ಹಾಗೂ

'ಹೀಗಿಲ್ಲಿ ಅಮೇರಿಕಾ '-ಈ ಎರಡು ಕಥೆಗಳನ್ನು ನೋಡಬಹುದು.'ನಡೆಯುತ್ತಿತ್ತ;ಕತೆ,ಬೆಳೆಯುತ್ತಿತ್ತ ' ಕಥೆ ದಾಟಿಸುವ ಮಾಸ್ತಿ ಪರಂಪರೆಯನ್ನು ತಂತ್ರವಾಗಿ ಮಾತ್ರ ಮುಂದುವರೆಸದೆ,ಅದನ್ನು ಈ ಕಾಲದ - ಈವೊತ್ತಿನ ಕಥೆ ದಾಟಿಸಲು ಮತ್ತು ಇಂಥ ಕಥೆಗಾಗಿಯೇ ಇಡಿಯಾಗಿ ಪುನರ್ವಿನ್ಯಾಸಗೊಳಿಸಿದ್ದರ ಸೃಜನಶೀಲ ಉದಾಹರಣೆಯಾಗಿ ನಮ್ಮನ್ನು ಸೆಳೆಯುತ್ತದೆ. ಜೆ.ಕೆ.(ಜಿಡ್ಡು ಕೃಷ್ಣಮೂರ್ತಿ) ಒಂದು ವೈಚಾರಿಕ ಆಕೃತಿಯೋ,ಜೀವಂತ ಸ್ಪಂದನವೋ(ಭೂಪಟವೋ ,ಭೂಮಿಯೋ) ಎಂಬ ಪ್ರಶ್ನೆಯನ್ನು ಅರಿವು ಮರೆವುಗಳ ಸಂದಿನಲ್ಲಿ ಬಿಡಿಸುವ-ಬುದ್ಧಿ ಭಾವಗಳೆರಡನ್ನೂ ಬೇಡುವ -ಸಾಹಸವನ್ನು ಮೂರ್ತೀಕರಿಸುವ ಈ ಕಥೆ;ಇನ್ನೊಂದು ಹಂತದಲ್ಲಿ ಕಥೆ ಎಂಬುದು ಅರಿವೋ ಮರೆವೋ ಎಂಬ ಪ್ರಶ್ನೆಯನ್ನು ನಿರ್ವಹಿಸುತ್ತಾ, ಮಾಸ್ತಿ ಕಥಾ ಮೀಮಾಂಸೆಗೆ ನಮ್ಮ ಕಾಲಕ್ಕೆ ವಿಶಿಷ್ಟವಾದ ಒಂದು ಹೊಸ ಆಯಾಮವನ್ನು ಕಲ್ಪಿಸುತ್ತದೆ. ಈ ಕಥೆಯಲ್ಲಿ ಬರುವವರೆಲ್ಲರೂ ಒಂದಿಲ್ಲೊಂದು ರೀತಿಯಲ್ಲಿ ಜೆ.ಕೆ. ಪ್ರಭಾ ವಲಯದಲ್ಲಿದ್ದವರೇ. ಆದರೆ ಜೆ.ಕೆ.ಅವರ ನಡೆ -ನುಡಿಗಳು ಈ ಒಬ್ಬೊಬ್ಬರ ವ್ಯಕ್ತಿತ್ವದ ಕನ್ನಡಿಯಲ್ಲೂ ಒಂದೊಂದು ರೀತಿಯಲ್ಲಿ ಪ್ರತಿಫಲನಗೊಳ್ಳುತ್ತವೆ. ಹೀಗೆ ಜೆ.ಕೆ. ನಿಜವಾಗಿ ಏನು ಎಂಬುದು ಅವರವರ ನಿಜದಲ್ಲೇ ಸಾಕ್ಷಾತ್ಕಾರವಾಗಬೇಕಾದದ್ದು ಎಂಬ (ಜೆ.ಕೆ.ಯದ್ದೇ) ಸತ್ಯವನ್ನು ಈ ಕಥೆ ಪರೋಕ್ಷವಾಗಿ ಹೊಳೆಸುತ್ತಲೇ; ಇದು ಕಥೆ - ಅಂದರೆ ಪ್ರತಿಬಿಂಬ ಮಾತ್ರ ;ಇದರಾಚೆಗೂ ಚಾಚಿದ್ದಿದೆ ನಮ್ಮದೇ ಜೀವನವೆಂಬ ಬಿಂಬ ಎಂದು ಧ್ವನಿಸುವ 'ಕತೆ ಇಷ್ಟೆ ;ಮುಂದೆ ಜೀವನ 'ಎಂಬ ಅಧ್ಯಾಯದೊಂದಿಗೆ ಮುಗಿಯುತ್ತದೆ . ಈ ಕಥೆಯ ಆರಂಭದಲ್ಲಿ ಜೆ.ಕೆ.ವಿಚಾರಗಳ ಕಲಿಕೆಯ ಭಾರದಿಂದಾಗಿ ಕೀಳರಿಮೆಯಿಂದ ನರಳುವ ಕಥೆಗಾರ, ಕಥೆ ಮುಗಿದು ಅದರಾಚೆ ಜೀವನ ಆರಂಭವಾಗುವ ಹೊತ್ತಿಗೆ ಎಲ್ಲ ಕೀಳರಿಮೆ ಕಳೆದುಕೊಂಡಿರುತ್ತಾನೆ. ಹೀಗೆ,ಕಥೆಯನ್ನು ದಾಟಿಸುವುದೆಂದರೆ ತಾನು ಕೂಡಾ ಅದನ್ನು ದಾಟುವುದೂ ಆಗುತ್ತದೆ ಎಂಬುದನ್ನು ಸೂಚಿಸುವ ಮೂಲಕ,ಈ ಕಥೆ ಮಾಸ್ತಿ ಪರಂಪರೆಯನ್ನು ತನ್ನದೇ ರೀತಿಯಲ್ಲಿ ಮುಂದುವರಿಸುತ್ತದೆ.

'ಹೀಗಿಲ್ಲಿ ಅಮೆರಿಕಾ ' ಇಷ್ಟು ಸಂಕೀರ್ಣ ಕಥೆಯಲ್ಲ. ಇದೂ ಕೂಡಾ ಮಾಸ್ತಿ ಪರಂಪರೆಯ ದಾಟಿಸುವ ಕ್ರಿಯೆಯಲ್ಲಿಯೇ ಕಟ್ಟಿಕೊಳ್ಳುವ ಕಥೆಯಾದರೂ, 'ನಡೆಯುತ್ತಿತ್ತ;ಕತೆ, ಬೆಳೆಯುತ್ತಿತ್ತ' ಕಥೆಯಂತೆ ವೈಯಕ್ತಿಕ ನೆಲೆಗಳಲ್ಲಿ ಮಾತ್ರ ಕ್ರಿಯಾಶೀಲವಾಗುವ ಕಥೆಯಲ್ಲ. ಅಲ್ಲಿ ಜೆ.ಕೆ. ಇದ್ದರೆ,ಇಲ್ಲಿ ಅಮೆರಿಕಾ. ಆಧುನಿಕ ನಾಗರಿಕತೆಯ ಯಶಸ್ಸಿನ ಸಂಕೇತವೆಂದು ತೋರುವ ಇದನ್ನು ನಾವು ಒಂದು ಸಮಾಜವಾಗಿ, ರಾಷ್ಟ್ರವಾಗಿ ಗ್ರಹಿಸಿರುವುದರಲ್ಲಿ ಅರಿವೆಷ್ಟಿದೆ, ಮರೆವೆಷ್ಟಿದೆ ಎಂಬುದನ್ನು ಈ ಕಥೆ,ಅಮೆರಿಕಾಕ್ಕೆ ಹೆಮ್ಮೆ ಸಂಭ್ರಮಗಳಿಂದ ಕಳಿಸಲ್ಪಟ್ಟ ಹಳ್ಳಿಯ ಶ್ರೀಮಂತ ಮನೆತನದ ಸಾವಿತ್ರಿ ಎಂಬ ಹೆಣ್ಣು ಮಗಳೊಬ್ಬಳು ಅಲ್ಲಿ ಪಟ್ಟ ಪಾಡನ್ನೂ, ಹಾಗೂ ಅಲ್ಲಿಂದ ಇಲ್ಲಿಗೆ ಬಂದು ಪಡುವ ಪಡಿಪಾಟಲನ್ನೂ ಮತ್ತು ಆ ಮೂಲಕ ಆಕೆಯ ವ್ಯಕ್ತಿತ್ವ ಪಡೆವ ನವ ಗಾಂಭೀರ್ಯವನ್ನೂ , ವಿಷಾದ ಬೆರೆತ ನಿರ್ಲಿಪ್ತಿಯಿಂದ ಪರಿಶೀಲಿಸುತ್ತದೆ. ಇಲ್ಲಿ ಪರಿಶೀಲಿಸಲ್ಪಟ್ಟಿರುವುದು -ನಿಜವಾಗಿ ಅಮೆರಿಕಾ ಅಲ್ಲ ,ನಮ್ಮೊಳಗಿರುವ ಅಮೆರಿಕಾ. ಸತ್ಯನಾರಾಯಣ ಈ ಕಥೆಯನ್ನು ,ಕೆಂಟುಕಿ ಚಿಕನ್ ಅಂಗಡಿಯ ಮೇಲೆ ನಡೆಯುವ ದಾಳಿಯ ಸಂದರ್ಭದಲ್ಲಿ ಇನ್ನೊಬ್ಬರ ಮೂಲಕ ಕೇಳಿಸಿಕೊಳ್ಳುವ ಹಾಗೂ ಆ ಇನ್ನೊಬ್ಬರು ಕಥೆ ಹೇಳುವ ಕ್ರಿಯೆಯ ಭಾಗವಾಗಿಯೇ ಮಾಡುವ ವ್ಯಾಖ್ಯಾನದೊಂದಿಗೆ ನಿರೂಪಿಸುವ ಮೂಲಕ,ರಾಜಕೀಯ ನೆಲೆಗೂ ಒಯ್ಯುತ್ತಾರೆ. ಆದರೆ ಮತ್ತೆ ಕೊನೆಗೆ ಕಥೆ ಮುಗಿಯುವುದು ಈ ಎಲ್ಲ ರಾಜಕೀಯ,ಸಾಮಾಜಿಕ ವ್ಯಾಖ್ಯಾನಗಳನ್ನೂ ಮೀರಿದ, ಕಥೆಯಾಚೆಗೆ ಚಾಚಿದ ವೈಯಕ್ತಿಕ ಸ್ಪಂದನದಲ್ಲಿ ಸ್ಥಿತಗೊಂಡ ಪ್ರಶ್ನೆಯೊಂದಿಗೇ :'ಈಗ ನನ್ನ ಕುತೂಹಲ ಸಾವಿತ್ರಿಯ

ಈ ಕತೆ ಓದಿದವರು ಅವಳ ಕಷ್ಟಕ್ಕೆ ಮರುಗುತ್ತಾರೋ ಇಲ್ಲವೋ ಎಂಬುದರಲ್ಲಲ್ಲ.ಸಾವಿತ್ರಿ ನಮಗೆ ಸಿಕ್ಕೇ ಬಿಟ್ಟು,ಮುಂದೊಂದು ದಿನ ರೈತಸಂಘದವರು,ಪರಿಸರವಾದಿಗಳು ಅಮೆರಿಕಾದ ಚಿಕನ್ ಕಂಪನಿಯ ಮೇಲೋ,ಚಿಪ್ಸ್ ಕಂಪನಿಯ ಮೇಲೋ,ಕೋಲಾ ಕಂಪನಿಯ ಮೇಲೋ ಪ್ರತಿಭಟನೆ ಮಾಡುವಾಗ ನಡೆಸುವ ಸಭೆಯಲ್ಲಿ ಅವಳನ್ನು ಮಾತಾಡಬೇಕು,ಮಾತಾಡಲೇಬೇಕು ಅಂತ ಕೇಳಿದರೆ ಆಕೆ ಏನು ಭಾಷಣ ಮಾಡಬಹುದು ಅಂತ ... '.

ಹೀಗೆ ಈ ಎರಡು ಕಥೆಗಳು ನಮ್ಮ ಕಾಲದ,ನಮ್ಮದೇ ತಲೆಮಾರಿನ ಕಥೆಗಳನ್ನು ,ಮಾಸ್ತಿಯಂತೆ ಕಥೆಯೊಳಗೆ ಇದ್ದೂ ಇಲ್ಲದಂತೆ ಹೇಳುವ ಕಲೆಗಾರಿಕೆಯನ್ನು ಪ್ರದರ್ಶಿಸುವ ಮೂಲಕ,ಮಾಸ್ತಿ ಪರಂಪರೆಯನ್ನು ಹೊಸ ನೆಲೆಗಳಿಗೆ ವಿಸ್ತರಿಸುವುದನ್ನು ನಾವು ಕಾಣುತ್ತೇವೆ.

ಈ ಎರಡೂ ಕಥೆಗಳಲ್ಲಿ ಕಥೆಯ ಹೃದಯದಲ್ಲಿರುವವರು ಹೆಂಗಸರು -ಗಾಯತ್ರಿ ಹಾಗೂ ಸಾವಿತ್ರಿ-ಎಂಬುದರ ಎಳೆ ಹಿಡಿದುಕೊಂಡು ನಾವು ಸತ್ಯನಾರಾಯಣರ ಇನ್ನೂ ನಾಲ್ಕು ಕಥೆಗಳ ಸ್ಪಂದನಶೀಲತೆಯ ರಹಸ್ಯವನ್ನು ಗುರುತಿಸಬಹುದೆಂದೆನಿಸುತ್ತದೆ.ನಗರ ಬದುಕಿನ ಉದ್ಯೋಗಸ್ತ ಹೆಣ್ಣುಮಗಳೊಬ್ಬಳ ಅಂತರಾಳದ ಸಣ್ಣ ಹಂಬಲದ,ಮುಗಿಯದ ಕಥೆಯನ್ನು ಲಲಿತ ಪ್ರಬಂಧದ ಲಹರಿಯಲ್ಲಿ ಹೇಳುವ ಮೂಲಕ,ಅಂಥ ಬದುಕಿನ ಸೂಕ್ಷ್ಮ ಸಮತೋಲನವನ್ನು ಹಿಡಿದಿಡುವ 'ಸೈಕಲ್ ಇನ್ನೊಂದು ಸಾಕು';ಆಧುನೀಕರಣದ ಅಬ್ಬರದಲ್ಲಿ ಕಳೆದುಹೋಗುತ್ತಿರುವ ಸೂಕ್ಷ್ಮ ಸಂವೇದನೆಗಳನ್ನು, ಅವು ಕಳೆದು ಹೋಗುತ್ತಿವೆ ಎಂಬುದನ್ನೂ ಗುರುತಿಸಲಾಗದಷ್ಟು ರೂಕ್ಷವಾಗುತ್ತಿರುವ ಪರಿಸರದ ಥಣ್ಣನೆಯ ದುರಂತವನ್ನು,ಅಷ್ಟೇ ಥಣ್ಣಗೆ ಚಿತ್ರಿಸುವ 'ಮಿಸೆಸ್ ಡೆತ್ ಅಮ್ಮನ ಸಾವು';ಸಂಪ್ರದಾಯಸ್ಥ ನೆಂಟರಿಷ್ಟರ ಕಟು ಟೀಕೆ ದೂಷಣೆಗಳ ನಡುವೆಯೂ,ತಮ್ಮಷ್ಟಕ್ಕೆ ತಾವು ಪರಸ್ಪರ ಸಂಗಾತಿಗಳಾಗಿ,ಬದುಕಿನ ಕಳೆದುಹೋಗಿದ್ದ ಚೆಲುವನ್ನು ಪುನರಾವಿಷ್ಕರಿಸಿಕೊಳ್ಳುವ, ಹಿರಿಯರಿಬ್ಬರ ಮೌನ ಕ್ರಾಂತಿಯ ಕಥೆಯನ್ನು ಲೋಕಾಭಿರಾಮವಾಗಿ ಹೇಳುವ 'ಹೀಗೂ ಉಂಟೆ ಪ್ರೇಮದ ಶೈಲಿ' ಹಾಗೂ ರಾಷ್ಟ್ರದ ಒಂದು ತಲೆಮಾರಿನ ರಾಜಕಾರಣದ ಸಾರ್ಥಕತೆಯನ್ನು ಒಬ್ಬ ಸಾಮಾನ್ಯ ಹೆಣ್ಣುಮಗಳೊಬ್ಬಳ ಸಾಮಾನ್ಯ ವಿವೇಕದ ಮಾತುಗಳ ಮೂಲಕ ಮರುಪರಿಶೀಲನೆಗೆ ಒಡ್ಡುವ ಸಾಹಸವನ್ನು, ಸಂಜೆಗಣ್ಣಿನ ವ್ಯವಧಾನದ ಶೈಲಿಯಲ್ಲಿ ಸಮರ್ಥವಾಗಿ ನಿರ್ವಹಿಸುವ 'ಲೋಕನಾಯಕರ ಮೇಲುಕೋಟೆ ಪುರಾಣ ' ಕಥೆಗಳ ಭಾವಕೇಂದ್ರದಲ್ಲಿರುವವರು ಹೆಣ್ಣುಗಳೇ.ಬದುಕಿನಂತೆ ಕಥೆಗೆ ಕೂಡಾ ಧಾರಣಶಕ್ತಿ ನೀಡುವುದು ಹೆಣ್ತನವೇ ಎಂಬುದು, ಸತ್ಯನಾರಾಯಣ ಅವರು ತಮ್ಮ ಕಥಾಕಲೆಗಾರಿಕೆಯ ಮೂಲಕ ಕಂಡುಕೊಂಡಿರುವ ಸತ್ಯವಿರಬಹುದು.ಇದು ಮೂಲತಃ ಲೋಕವನ್ನು ಪ್ರೀತಿಯಿಂದ,ಸಹಾನುಭೂತಿಯಿಂದ ಕಾಣಬೇಕೆಂಬ; ಆ ಕಾಣುವ ಕ್ರಿಯೆಯ ಭಾಗವಾಗಿಯೇ ಕಥೆ ಮೂಡಿ ಬರಬೇಕೆಂಬ,ಮಾಸ್ತಿ ಕಥಾಧರ್ಮದ ತತ್ವವೇ ಆಗಿದೆ. ಇದಕ್ಕೆ ಪೂರಕವಾಗಿ ಬರುವುದು,ಕಥಾ ಸಂದರ್ಭದ ಪ್ರತಿಯೊಂದು ಸನ್ನಿವೇಶವನ್ನೂ -ಅಕ್ಕಪಕ್ಕದಲ್ಲಿರುವ ಅದರ ಎಲ್ಲ ಸಣ್ಣ ಅಥೆಂಟಿಕ್ ವಿವರಗಳೊಂದಿಗೆ -ಅವೂ ಕೂಡಾ ಬಹು ಮುಖ್ಯ ಎಂಬ ತುರ್ತಿನೊಂದಿಗೆ ಮಂಡಿಸುವ ಸತ್ಯನಾರಾಯಣ ಅವರ ತುಂಬು ಸಡಗರದ ಶೈಲಿ -ಕೆಲವು ಕಡೆ,ನವಮಧ್ಯಮವರ್ಗಕ್ಕೇ ವಿಶಿಷ್ಟವಾದ ಈ ಸಡಗರವು,ಕಥೆಗಾರನ ಅತಿಯಾದ ಪ್ರವೇಶ,ಮಾತು ಹಾಗೂ ವ್ಯಾಖ್ಯಾನಗಳಿಗೆ ದಾರಿ ಮಾಡಿಕೊಡುತ್ತದೆ ಎನ್ನಿಸುವುದಾದರೂ.

ಈ ಶೈಲಿ, ವರ್ಗಸ್ಥಿತನಾದ ಸತ್ಯನಾರಾಯಣರಂಥ ಲೇಖಕನಿಗೆ(ಇದನ್ನು ಅವರು ತಮ್ಮ ಕಥೆಗಳ

ಮಧ್ಯಂತರ ಪ್ರವೇಶಗಳಲ್ಲಿಯೇ ಸೂಚಿಸಿಕೊಂಡಿದ್ದಾರೆ) ಸ್ವಲ್ಪ ಅಪಾಯದ ಶೈಲಿಯೇ. ಸ್ವಲ್ಪ ಹದ ತಪ್ಪಿದರೆ ಈ ಶೈಲಿ ಬರೀ ಉಡಾಫೆಯ ಮಟ್ಟಕ್ಕಿಳಿಯುವ, ಕೇವಲ ಬೌದ್ಧಿಕ ಕಸರತ್ತಿನಂತೆ ಕಾಣಿಸುವ, ಜಾಣ ಮಾತುಗಾರನ ಸಾಂಸ್ಕೃತಿಕ ಹರಿಕಥೆಯಂತೆ ಕೇಳಿಸುವ, ಕಥೆಗಳನ್ನು ಸೃಷ್ಟಿಸಬಲ್ಲದು. ಈ ಸಂಕಲನದ ಮಿಕ್ಕ ಕಥೆಗಳು ಇದಕ್ಕೆ ವಿವಿಧ ರೀತಿಯ ಉದಾಹರಣೆಗಳಂತಿವೆ. ಈ ಸಂಕಲನದ ಶೀರ್ಷಿಕಾ ಕಥೆಯಾದ 'ವಿಕ್ಟೋರಿಯಾ ಮಗ ದೇವಲಿಂಗು'ವನ್ನೇ ತೆಗೆದುಕೊಳ್ಳಿ. ಇಲ್ಲಿ ನಮ್ಮ ಪಾರಂಪರಿಕ ಕಥೆಗಾರಿಕೆಗೆ ಒದಗಿರುವ ಸಾಂಸ್ಕೃತಿಕ ಬಿಕ್ಕಟ್ಟನ್ನು ಸತ್ಯನಾರಾಯಣ, ತಮ್ಮದೇ ವಿಶಿಷ್ಟ ವಾಸ್ತವವಾದೀ ಸಡಗರದ ಶೈಲಿಯಲ್ಲಿ ಸಾಂಕೇತಿಕವಾಗಿ ಹೇಳಲು ಹೋಗಿ, ಒಂದು ಬೌದ್ಧಿಕ ಗೊಂದಲ ಸೃಷ್ಟಿಸುವುದರಲ್ಲಷ್ಟೇ ಯಶಸ್ವಿಯಾಗುತ್ತಾರೆ. ಇಲ್ಲಿ ಶೈಲಿಯ ಬಿಕ್ಕಟ್ಟಿನ ಜೊತೆಗೆ ಕಥಾ ಆವರಣದ ಸಾಮಾಜಿಕ ಅಪರಿಚಿತತೆಯೂ ಸೇರಿ, ಕಥೆಗಾರಿಕೆಯಲ್ಲಿ ಒಂದು ರೀತಿಯ ವಕ್ರತೆ ಕಾಣತೊಡಗುತ್ತದೆ. ಹೀಗೇ, 'ಇನ್ನೊಬ್ಬ ಗಾಂಧಿಯ ಹೆಂಡತಿ', 'ಇಂಗ್ಲಿಷ್ ಗೌಡರು ಎಂಬ ಭಯವು' ಹಾಗೂ 'ಚಿನ್ನಸ್ವಾಮಿಯೆಂಬ ಮಂಡಲ್ ವರದಿ' ಎಂಬ ಕಥೆಗಳೂ ಈ ಮೊದಲು ಚರ್ಚಿಸಿದ ಕಥೆಗಳಂತೆಯೇ, ಬದಲಾಗುತ್ತಿರುವ ಕಾಲದ ಹೊಸ ಸವಾಲುಗಳು ಜನಸಾಮಾನ್ಯರನ್ನು ಕಂಗೆಡಿಸಿ ಉಂಟುಮಾಡುತ್ತಿರುವ ವಿಸಂಗತಿಗಳನ್ನು ಚಿತ್ರಿಸುವ ಗಂಭೀರ ಉದ್ದೇಶದಿಂದ ಹೊರಡುತ್ತವಾದರೂ, ಅಂತಿಮವಾಗಿ ಇವು ವಿಷಾದಕ್ಕೆ ಬದಲಾಗಿ ವ್ಯಂಗ್ಯವನ್ನು ಸೃಷ್ಟಿಸುವುದರಿಂದಾಗಿ ಕಥೆಗಾರನ ನೋಟದಲ್ಲೇ ಏನೋ ಐಬಿದೆ ಎಂಬ ಅನುಮಾನವನ್ನು ಉಂಟುಮಾಡುತ್ತದೆ. ಇದಕ್ಕೆ ಮುಖ್ಯಕಾರಣ ಸತ್ಯನಾರಾಯಣ ತಮ್ಮ ವರ್ಗಧರ್ಮದಲ್ಲೇ ಸ್ಥಿತರಾಗಿ ತಮ್ಮ ಸವಿವರ ಸಡಗರದ ಶೈಲಿಯನ್ನು ತಮ್ಮ ವರ್ಗದಾಚೆಗಿನ ಬದುಕಿನ ವ್ಯಾಖ್ಯಾನಕ್ಕಾಗಿ ಹರಿಯಬಿಡುವುದು. ಇದರಿಂದಾಗಿ ಈ ಕಥೆಗಳ ದೇವಲಿಂಗು, ಕೆ.ಎಮ್.ಗೌಡ ಆಂಡ್ ಕೋ., ಸಿ.ಎಸ್.ಆಚಾರ್ಯ ಹಾಗೂ ಚಿನ್ನಸ್ವಾಮಿ ಆಂಡ್ ಕೋ., ಹೊಸಕಾಲದ ಒತ್ತಡಗಳಿಗೆ ನಲುಗಿ ಸಹಾನುಭೂತಿಗೆ ಪಾತ್ರರಾಗಬೇಕಾದ ದುರಂತ ನಾಯಕರಾಗಬೇಕಾಗುವ ಬದಲು, ಅಣಕಕ್ಕೆ ಒದಗಿ ಬರುವ ವಿದೂಷಕರಾಗಿ ಮೂಡಿಬರುತ್ತಾರೆ. ವರ್ಗದೋಷದಿಂದ ಉಂಟಾಗುವ ಈ ಆಭಾಸ ಕಥೆಗಾರನಾಗಿ ಸತ್ಯನಾರಾಯಣ ಇನ್ನೂ ಆಂತರ್ಯದ ಸಮಗ್ರತೆಯನ್ನು ಸಾಧಿಸಲಾಗಿಲ್ಲ ಎನ್ನುವುದನ್ನು ತೋರುತ್ತದೆ.

ಈ ದೃಷ್ಟಿಯಿಂದ ಸತ್ಯನಾರಾಯಣ ತಮ್ಮ ಗುರು ಮಾಸ್ತಿಯಿಂದ 'ತಂತ್ರ' ದೀಕ್ಷೆ ಪಡೆದಂತೆ 'ಮಂತ್ರ' ದೀಕ್ಷೆಯನ್ನೂ ಪಡೆಯಬೇಕಾಗಿದೆ. ಕಥೆಗಳನ್ನು ದಾಟಿಸುವ ಕಲೆಗಾರಿಕೆಯಲ್ಲಿ ಮನಸ್ಸಿಟ್ಟಷ್ಟು ಸತ್ಯನಾರಾಯಣ, ತಮ್ಮನ್ನು ತಾವು ದಾಟಿಕೊಳ್ಳುವ ಕಡೆಗೆ ಮನಸ್ಸಿಟ್ಟಂತೆ ತೋರುತ್ತಿಲ್ಲ. ಇದು - ಮೇಲ್ನೋಟಕ್ಕೆ ಕಥೆಗಾರನ ಕಸುಬುಗಾರಿಕೆಯ ಸಾಮರ್ಥ್ಯದ ಪ್ರಶ್ನೆಯಾಗಿ ಕಂಡರೂ - ಮೂಲಭೂತವಾಗಿ ಕಥೆಗಾರನ ವ್ಯಕ್ತಿತ್ವದ ಅಖಂಡತೆ-ಪೂರ್ಣತೆಗೆ ಸಂಬಂಧಪಟ್ಟ ಆಧ್ಯಾತ್ಮಿಕ ಪ್ರಶ್ನೆ. ಈ ದೊಡ್ಡ ಪ್ರಶ್ನೆಯನ್ನು ಎಷ್ಟರಮಟ್ಟಿಗೆ ಕಥೆಗಾರ ಎದುರಿಸಿದ್ದಾನೆ ಎಂಬುದರ ಮೇಲೆ ಆತನ ಕಥೆಗಾರಿಕೆಯ ಒಟ್ಟಾರೆಯ ಸಾರ್ಥಕತೆ ನಿರ್ಧಾರಿತವಾಗುತ್ತದೆ. ಇಲ್ಲಿನ ಕಥಾಮೀಮಾಂಸೆಯಲ್ಲಿನ, ಅರಿವು ಯಾವುದು ಮರೆವು ಯಾವುದು ಎಂಬ ಪ್ರಶ್ನೆಯು ಕಥೆ ಮತ್ತು ಅದು ಚಿತ್ರಿಸುವ ಬದುಕಿನ ನಡುವಣ ಪ್ರಶ್ನೆ ಮಾತ್ರ ಅಲ್ಲ; ಅದು ಕಥೆ ಮತ್ತು ಕಥೆಗಾರನ ನಡುವಣ ಪ್ರಶ್ನೆ ಕೂಡಾ ಎಂಬುದನ್ನು ಸತ್ಯನಾರಾಯಣ ಅರಿಯದೇ ಹೋದಲ್ಲಿ ಇವರ ಯಶಸ್ವೀ ಎನಿಸುವ ಕಥೆಗಳು ಕೂಡಾ ಆತ್ಯಂತಿಕ ನೋಟದಲ್ಲಿ ಮರೆವುಗಳಾಗಿಯೇ ಕಂಡಾವು.

- ಡಿ .ಎಸ್.ನಾಗಭೂಷಣ

೧೦೫ /ಏಪ್ರಿಲ್ -ಜೂನ್ ೧೯೯೯

ಮೊದಲ ನೋಟ

ಡಿ.ವಿ.ಗುಂಡಪ್ಪ **ಲೇ:** ಜಿ.ವೆಂಕಟಸುಬ್ಬಯ್ಯ

ಪ್ರ : ಕೇಂದ್ರ ಸಾಹಿತ್ಯ ಅಕಾದೆಮಿ ನವದೆಹಲಿ **ಪು. :** ೧೩೬ **ಬೆಲೆ :** ರೂ :೧೫ /-

ಭಾರತೀಯ ಸಾಹಿತ್ಯ ನಿರ್ಮಾಪಕರು ಮಾಲಿಕೆಯಲ್ಲಿ ಪ್ರಕಟವಾಗಿರುವ ಈ ಪುಸ್ತಕದಲ್ಲಿ ಲೇಖಕರು ಡಿ.ವಿ.ಜಿ.ಯವರ ಬದುಕು ಬರೆಹಗಳ ಸಂಕ್ಷಿಪ್ತ ಪರಿಚಯ ಮಾಡಿಕೊಡುವ ಪ್ರಯತ್ನವನ್ನು ಮಾಡಿದ್ದಾರೆ. ಬಹುಮುಖ ಪ್ರತಿಭೆಯ ಡಿ.ವಿ.ಜಿ.ಯವರ ಸಾಹಿತ್ಯ ಸೃಷ್ಟಿಯೂ ಬಹುಮುಖವಾದದ್ದು. ಕಾವ್ಯ, ಕಾವ್ಯ ಮೀಮಾಂಸೆ, ಸಂಶೋಧನೆ, ಪತ್ರಿಕೋದ್ಯಮ, ಜೀವನ ಚರಿತ್ರೆ, ನಾಟಕ, ಸಾರ್ವಜನಿಕ ಬದುಕಿಗೆ ಸಂಬಂಧಪಟ್ಟ ಬರೆಹಗಳು -ಹೀಗೆ ವೈವಿಧ್ಯಮಯವೂ ಸಮೃದ್ಧವೂ ಆದ ಸಾಹಿತ್ಯವನ್ನು ಕನ್ನಡಿಯಲ್ಲಿ ಕರಿಯನ್ನು ತೋರಿಸುವಂತೆ ಈ ಪುಟ್ಟ ಪುಸ್ತಕದಲ್ಲಿ ಸ್ವಲ್ಪ ಅಭಿಮಾನಪೂರ್ವಕವಾಗಿಯೇ ಪರಿಚಯಿಸಿದ್ದಾರೆ. ಡಿ.ವಿ.ಜಿ. ಅವರ ಸಮಗ್ರ ಸಾಹಿತ್ಯವನ್ನು ಓದುವ ವ್ಯವಧಾನವಿಲ್ಲದವರು ಈ ಪ್ರವೇಶಿಕೆ ಓದಿ ಅವರ ವ್ಯಕ್ತಿತ್ವದ ಆಯಾಮಗಳನ್ನು ಕಲ್ಪಿಸಿಕೊಳ್ಳಲು ಸಾಧ್ಯ.

ಕುವೆಂಪು ಸಾಹಿತ್ಯ : ವೈಚಾರಿಕ ನೆಲೆಗಳು **ಪ್ರಧಾನ ಸಂ. :** ಡಾ. ಶ್ರೀಕಂಠ ಕೂಡಿಗೆ

ಪ್ರ : ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾಲಯ **ಪು :** ೧೨೫ **ಬೆಲೆ :** ರೂ :೫೦ /-

ಕುವೆಂಪು ಅವರ ಸಮಗ್ರ ಸಾಹಿತ್ಯವನ್ನು ತತ್ವವಿವೇಚನೆಗೊಳಪಡಿಸುವ ಒಂಭತ್ತು ಲೇಖನಗಳನ್ನೊಳಗೊಂಡ ಈ ಪುಸ್ತಕದಲ್ಲಿ ಹತ್ತು ಪುಟಗಳ 'ನವ್ಯ, ನವ್ಯೋತ್ತರ, ವಸಾಹತೋತ್ತರ ವಿಮರ್ಶೆಯ ಹಿನ್ನೆಲೆಯಲ್ಲಿ ಕುವೆಂಪು' ಎಂಬ ಲೇಖನದ ೯ನೇ ಪುಟದವರೆಗೂ ಕುವೆಂಪು ಪ್ರಸ್ತಾಪಕ್ಕೇ ಬಾರದಿರುವ ವೈಪರೀತ್ಯದಿಂದ ಹಿಡಿದು 'ಕುವೆಂಪು ಸಾಹಿತ್ಯ : ಒಂದು ಸಂವಾದ' ಎಂಬ ಲೇಖನದಲ್ಲಿ ಸಂವಾದಕ್ಕೆ ವಿರುದ್ಧವಾದ ಭಟ್ಟಂಗಿ ಬರೆಹ ವಿಜೃಂಭಿಸುವ ತಮಾಷೆಯವರೆಗೂ ಹರಿದಾಡುವ ವಿವಿಧ ಆಳ-ವಿಸ್ತಾರಗಳ ಲೇಖನಗಳಿವೆ. 'ಕುವೆಂಪು ಕಾದಂಬರಿಗಳಲ್ಲಿ ವಸಾಹತುಶಾಹಿ ಅನುಭವದ ಸ್ವರೂಪ' ಹಾಗೂ 'ಕುವೆಂಪು ವಿಮರ್ಶೆಯ ತಾತ್ವಿಕ ನಿಲುವುಗಳು' ಲೇಖನಗಳಲ್ಲಿ ಗಂಭೀರ ಅಧ್ಯಯನದ ಸೆಳಕುಗಳು ಕಂಡರೆ ಮಿಕ್ಕವುಗಳು ನೇರ, ಸರಳ, ಮತ್ತು ಪರಿಚಯಾತ್ಮಕ ನೆಲೆಯಲ್ಲಿಯೇ ನಿಲ್ಲುತ್ತವೆ. 'ಕುವೆಂಪು ಅವರ ಕಾದಂಬರಿಗಳಲ್ಲಿ ಸ್ತ್ರೀತ್ವದ ಪ್ರತೀಕಗಳು' ಎಂಬ ಲೇಖನ ಸ್ತ್ರೀವಾದದ ಭಾರದಿಂದ ಕುಗ್ಗಿದೆ.

ಬೆಡಗಿನ ವಚನಗಳು **ಲೇ :** ಡಾ. ಎಲ್ ಬಸವರಾಜು.

ಪ್ರ : ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾಲಯ **ಪು. :** ೪೨ **ಬೆಲೆ :** ರೂ. ೨೦ / -

ಬೆಡಗಿನ ಪರಿಭಾಷೆಯನ್ನು ಪರಿಚಯ ಮಾಡಿಕೊಡುವ ಮೂಲಕ ಹಲವು ಬೆಡಗಿನ ವಚನಗಳನ್ನು

ಈ ಪುಟ್ಟ ಪುಸ್ತಕದಲ್ಲಿ ವಿಶ್ಲೇಷಿಸಿ ವಿವರಿಸಲಾಗಿದೆ.ಬೆಡಗಿನ ವಚನಗಳ ಬಂಧ -ಅನುಬಂಧಗಳನ್ನು ಸಂಕ್ಷಿಪ್ತವಾಗಿ ವಿವೇಚಿಸಲಾಗಿದೆ .ಬೆಡಗಿನ ವಚನಗಳ ಅಧ್ಯಯನಕ್ಕೆ ಇದೊಂದು ಒಳ್ಳೆಯ ಪ್ರವೇಶಿಕೆಯಾಗಿದೆ.

ಸತ್ವದ ಗುಡಿಯ ಸುತ್ತ **ಲೇ:**ಬಿ.ಆರ್.ಪೋಲೀಸ್‌ಪಾಟೀಲ

ಪ್ರ :ಸುರುಚಿ ನವಪ್ರಕಾಶನ ಬನಹಟ್ಟಿ **ಪು** : ೬೪ **ಬೆಲೆ** : ರೂ.೨೦/-

ಈಗಾಗಲೇ ನಾಟಕ,ಕತೆ,ಕವಿತೆ,ವಿಮರ್ಶೆ ಅಂಕಣ ಇತ್ಯಾದಿ ಸಾಹಿತ್ಯ ಪ್ರಕಾರಗಳಲ್ಲಿ ಕೈಯಾಡಿಸಿ ಹೆಸರಾಗಿರುವ ಈ ಲೇಖಕರು ಈ ಪುಸ್ತಕದ ಮೂಲಕ ಈಗ ಆಂಗ್ಲ ಕವಿತೆಗಳ ಅನುವಾದ ಕ್ಷೇತ್ರಕ್ಕೂ ಕಾಲಿಟ್ಟಿದ್ದಾರೆ.ಷೇಕ್ಸ್‌ಪಿಯರ್‌ನಿಂದ ಹಿಡಿದು ಮನಮೋಹನಸಿಂಗ್‌ರ ಕವಿತೆಗಳ ವರೆಗೆ ವಿವಿಧ ಕಾಲಗಳ, ಶೈಲಿಗಳ ,ಪಂಥಗಳ ೩೧ ಕವಿತೆಗಳ ಅನುವಾದಗಳು ಇಲ್ಲಿವೆ.ಬಿಜಾಪುರ ಜಿಲ್ಲೆಯ ಕನ್ನಡ ಭಾಷೆಯ ಬನಿ ತೊಟ್ಟಿಕ್ಕುವ ಇಲ್ಲಿಯ ಹಲವಾರು ಅನುವಾದಗಳು ಭಾಷೆ-ಸಂಸ್ಕೃತಿಗಳನ್ನು ದಾಟಿ ಮನಮುಟ್ಟುವಂತಿವೆ. ವಿಶೇಷವಾಗಿ ಆಫ್ರಿಕನ್ ಕವಿತೆಗಳ ಅನುವಾದ.ಗೀತವಿದ್ದೆಡೆಯಲ್ಲೆಲ್ಲ ಅನುವಾದ ಸರಾಗ-ಸಜೀವವಾಗಿದೆ. ಆದರೆ ಎಲ್ಲಿ ಕವಿತೆ 'ಘನ'ವಾಗಿದೆಯೋ (ಉದಾ :daffodils,ozymandias,A poison tree,On his blindness ಮುಂ.) ಅಲ್ಲಿ ಭಾಷೆ ಸೆಟಗೊಂಡು ಅನುವಾದ ಜಡವಾಗಿದೆ.ಅನುವಾದಕ್ಕಾಗಿ ಕವನಗಳ ಆಯ್ಕೆಯ ಹಿಂದೆ ಒಂದು ಸಜೀವ ಸೂತ್ರವಿಲ್ಲದಿರುವುದೇ ಈ ವೈಪರೀತ್ಯಗಳಿಗೆ ಕಾರಣವಿರಬಹುದು.

ಋಣ (ಕಥೆಗಳು) **ಲೇ** :ಮನು ಬಳಿಗಾರ

ಪ್ರ : ಪರಮಶಂಕರ ಪ್ರಕಾಶನ ಶಿಗ್ಗಿ **ಪು** : ೧೦೦ **ಬೆಲೆ** :ರೂ .೭೫/

ನಗರ ಸೇರಿ ಬದುಕಿನಲ್ಲಿ 'ಯಶಸ್ವಿ'ಯಾಗಿ ನೆಲೆಗೊಳ್ಳುತ್ತಿರುವ ಹಳ್ಳಿಯ ಮನಸ್ಸೊಂದರ ಹಿನ್ನೋಟದಲ್ಲಿ ಮೈದಳೆಯುವ ಈ ಸಂಕಲನದಲ್ಲಿನ ಬಹುತೇಕ ಕಥೆಗಳಲ್ಲಿ ಲೇಖಕ ಆ ಹಳ್ಳಿ ತನ್ನೆಲ್ಲ ಪ್ರಾಕೃತಿಕ-ಸಾಮಾಜಿಕ-ಆರ್ಥಿಕ-ಸಾಂಸ್ಕೃತಿಕ ಆಯಾಮಗಳೊಂದಿಗೆ ತೆರೆದುಕೊಳ್ಳುವಂತೆ ವಿನ್ಯಾಸಗೊಳಿಸಿ ಅಲ್ಲಿನ ಮೌಲ್ಯಗಳನ್ನು ತನ್ನ ವರ್ತಮಾನದ ಬದುಕಿನ ಅಧಿಕಾರಶಾಹಿ ಆಯಾಮಗಳಲ್ಲಿ ಹುಟ್ಟುವ ಮೌಲ್ಯ ಗಳೊಂದಿಗೆ ತೂಗಿ ನೋಡುವ ಪ್ರಯತ್ನ ಮಾಡಿದ್ದಾರೆ.ಮೊದಲ ಐದು ಕತೆಗಳಲ್ಲಿ ಈ ಎರಡೂ ಮೌಲ್ಯ ಪ್ರಪಂಚಗಳು ನಿಷ್ಠುರವಾಗಿ ಮುಖಾಮುಖಿಯಾಗಿರುವುದರಿಂದ ಅವುಗಳಲ್ಲಿ ಹುಟ್ಟುವ ವಿಷಾದವು ಜೀವಂತವಾದದ್ದೂ, ಅರ್ಥಪೂರ್ಣವಾದದ್ದೂ ಆಗುತ್ತದೆ.ಹಾಗಾಗಿ ಮೊದಲಿನ ಐದು ಕತೆಗಳು ಯಶಸ್ವಿಯಾದುದೆನಿಸುತ್ತವೆ.ಇವುಗಳಲ್ಲಿ ಕತೆಗಾರನ ಪೂರ್ಣ ವ್ಯಕ್ತಿತ್ವ ದುಡಿಯುತ್ತಿರುವುದು ಗೋಚರವಾಗುತ್ತದೆ.ಆದರೆ, ಮಿಕ್ಕ ಕತೆಗಳು ಚಮತ್ಕಾರದ,ಪರಿಚಿತ ವ್ಯಂಗ್ಯದ, ಭಾವಾವೇಶದ ಅಂತ್ಯಗಳತ್ತ ಚಲಿಸುವುದರಲ್ಲಿ ತೊಡಗಿ ನಮ್ಮನ್ನು ಅಷ್ಟಾಗಿ ತಟ್ಟದೇ ಹೋಗುತ್ತವೆ.

ಈ ಪುಸ್ತಕಕ್ಕೆ ಯು.ಆರ್.ಅನಂತಮೂರ್ತಿಯವರು ಬರೆದಿರುವ ಉದಾರ ಮುನ್ನುಡಿಯಿಂದ ಕತೆಗಾರರಾದ ಮನು ಬಳಿಗಾರರವರು ಉಬ್ಬಿ ಹೋಗದೆ, ಹದಮೀರದ ಐರನಿ ತುಂಬಿದ, ಪರಿಣಾಮಕಾರಿಯಾಗಿರುವ ತಮ್ಮ ನಿರೂಪಣಾ ಶೈಲಿಯೊಂದಿಗೆ ಬದುಕನ್ನು ಇನ್ನಷ್ಟು ಆಳವಾಗಿ ಮತ್ತು

ನಿಷ್ಠುರವಾಗಿ ನೋಡುವ ವ್ಯವಧಾನವನ್ನು ರೂಢಿಸಿಕೊಂಡರೆ ಕನ್ನಡಕ್ಕೆ ಗಮನಾರ್ಹವಾದ ಕತೆಗಳ ಕೊಡುಗೆಯನ್ನು ಸಲ್ಲಿಸಬಲ್ಲರು.

ಶಬ್ದರೇಖೆ **ಲೇ :** ಕೇಶವಶರ್ಮ ಕೆ .
ಪ್ರ : ಅಭಿನವ, ಬೆಂಗಳೂರು **ಪು :** ೧೨೮ **ಬೆಲೆ :** ರೂ.೫೦/

ಆಕರ್ಷಕ ಶೀರ್ಷಿಕೆ ಹೊತ್ತ ಈ ಗ್ರಂಥದಲ್ಲಿ ಪ್ರಾಚೀನ ಸಾಹಿತ್ಯದಿಂದ ಹಿಡಿದು ಆಧುನಿಕ ಮಹಿಳಾ ಸಾಹಿತ್ಯದವರೆಗೆ ಹರಡಿಕೊಂಡಿರುವ ಹದಿಮೂರು ಲೇಖನಗಳಿದ್ದು,'ಬೌದ್ಧಿಕ ' ನೆಲೆಯಲ್ಲಿಯೇ ಸಾಹಿತ್ಯವನ್ನು ಗ್ರಹಿಸುವ ವಿಚಿತ್ರ ಪ್ರಯತ್ನವನ್ನು ಇಲ್ಲಿ ಕಾಣಬಹುದಾಗಿದೆ. ಹಾಗಾಗಿ ಈ ಗ್ರಂಥದ ಭಾಷೆಯೂ ವಿಚಿತ್ರವಾಗಿದೆ . ಅವಿಷದತೆ , ಅಸ್ಪಷ್ಟತೆ , ಢಾಳಾಗಿ ಗೋಚರಿಸುತ್ತವೆ. ಸಾಮಾನ್ಯ ಓದುಗನಿಗೆ ಈ ಕೃತಿಯನ್ನು ಪ್ರವೇಶಿಸುವುದೇ ದುಸ್ತರವೆನಿಸುತ್ತದೆ. ಹಟದಿಂದ ಮುಂದುವರಿದಲ್ಲಿ ಬುದ್ಧಿಗೆ ಮಂಕು ಕವಿದಂತಾಗುತ್ತದೆ. ಗೋಜಲಾದ ಹೇಳಿಕೆಗಳು, ಅಪೂರ್ಣ ಅಸಮಂಜಸ ವಾಕ್ಯಗಳು ಜೊತೆಗೆ ಅಚ್ಚಿನ ದೋಷಗಳು ಯಥೇಚ್ಛವಾಗಿದ್ದು ಅವೆಲ್ಲ ಸೇರಿ ಓದುಗನ ತಲೆ ತಿನ್ನುತ್ತವೆ. ಸ್ತ್ರೀವಾದ, ಮಾರ್ಕ್ಸ್‌ವಾದ ಪುರಾಣ, ಇತ್ಯಾದಿ ಇತ್ಯಾದಿಗಳನ್ನು ಓದಿಕೊಂಡಿರುವ ಕುರುಹುಗಳನ್ನು ತಮ್ಮ ಲೇಖನಗಳಲ್ಲಿ ತೋರಿಸಿರುವ ಲೇಖಕರು ತಮ್ಮ ಮುನ್ನುಡಿಯಲ್ಲಿ , ಒಂದು ಲೇಖನ ಬರೆಯುವುದೆಂದರೆ 'ಜೀವ ಹಿಂಸೆ ' ಎಂದು ತೋಡಿಕೊಂಡಿದ್ದಾರೆ. ಇಂತಹ ಲೇಖನಗಳನ್ನು ಓದುವವನಿಗೂ ಹಾಗೆನಿಸಿದರೆ ಆಶ್ಚರ್ಯ ಪಡುವಂತಿಲ್ಲ!

ಯೇಗ್ದಾಗೆಲ್ಲಾ ಐತೆ **ಲೇ :** ಬೆಳಗೆರೆ ಕೃಷ್ಣಶಾಸ್ತ್ರಿ .
ಪ್ರ : ಅಭಿಜ್ಞಾನ ಪ್ರಕಾಶನ ದಾವಣಗೆರೆ **ಪು :** ೧೦೬ **ಬೆಲೆ :** ರೂ.೨೫/-

'ಯೇಗ್ದಾಗೆಲ್ಲಾ ಐತೆ ' - ಯೋಗದಲ್ಲಿ ಎಲ್ಲಾ ಇದೆ ಎಂಬ ಶಿಷ್ಟ ವಾಕ್ಯದ ಗ್ರಾಮ್ಯ ರೂಪ. ಇದು ಬೆಳಗೆರೆ ಕೃಷ್ಣಶಾಸ್ತ್ರಿಗಳಿಗೆ ಚಿಕ್ಕಮಗಳೂರು ಜಿಲ್ಲೆಯ ದೇವನೂರಿನಲ್ಲಿ ಶಿಕ್ಷಕರಾಗಿದ್ದಾಗ ಪರಿಚಯವಾದ ಒಬ್ಬ ಸಾಧಕನ ಭರತ ವಾಕ್ಯ. ಈ ಇಡೀ ಪುಸ್ತಕದಲ್ಲಿ ಈ ಯೋಗದ ವಿವರಣೆ ಎಲ್ಲಿಯೂ ನೇರವಾಗಿ ಬರುವುದಿಲ್ಲ. ಮುಕುಂದೂರು ಸ್ವಾಮಿಗಳೆಂದೇ ಹೆಸರಾಗಿದ್ದ ಈ ಸಾಧಕ ವಿವಿಧ ಸಂದರ್ಭಗಳಲ್ಲಿ, ವಿವಿಧ ಜನರೊಂದಿಗೆ ವರ್ತಿಸಿದ ರೀತಿ, ಆಡಿದ ಮಾತುಗಳೇ ಒಂದು ವಿಶಿಷ್ಟ ಯೋಗವಾಗಿ ಈ ಕೃತಿಯಲ್ಲಿ ಮೂಡಿಬಂದಿದೆ. ಅಪಾರ ಅರಿವು ಹೊಂದಿದ್ದೂ ಎಂದೂ ಜ್ಞಾನಿಯ ಹೆಮ್ಮೆಯನ್ನು ಪ್ರಕಟಿಸದ, ಹಲವು ನಿಗೂಢ ವಿದ್ಯಮಾನಗಳಿಗೆ ಕಾರಣರಾದರೂ ಪವಾಡ ಪುರುಷರಂತೆ ವರ್ತಿಸದ ಈ ಸಾಧಕ ಹಳ್ಳಿಗರ ನಡುವೆ ಹಳ್ಳಿಗರಾಗಿ ವಿನಯ, ಮುಗ್ಧತೆಗಳನ್ನೇ ಜ್ಞಾನದ ಬಾಗಿಲುಗಳನ್ನಾಗಿ ತೆರೆದು ತೋರಿದವರು.

'ಯೇಗ್ದಾಗೆಲ್ಲಾ ಐತೆ ' ಎಂಬ ಈ ಚಿಕ್ಕ ಪುಸ್ತಕದಲ್ಲಿ ಬೆಳಗೆರೆಯವರು ತಮ್ಮ ಮೇಲೆ ಅಪಾರ ಪ್ರಭಾವ ಬೀರಿದ ಈ ಸಾಧಕನನ್ನು ತಮ್ಮದೇ ಸರಳ ಪಾರದರ್ಶಕವಾದ ಶೈಲಿ ಹಾಗೂ ಭಾಷೆಗಳಲ್ಲಿ ಚಿತ್ರಿಸುವ ಪ್ರಯತ್ನ ಮಾಡಿದ್ದಾರೆ. ಈ ಸಾಧಕ ತಮಗೆ ಪರಿಚಯವಾದ ಬಗೆ; ಹತ್ತಿರವಾದ ಹಿನ್ನೆಲೆ ; ಆತನ ಸರಳತೆಯ ಹಿಂದೆ ಹುದುಗಿದ್ದ ಅಪಾರ ಆಧ್ಯಾತ್ಮಿಕ ಶಕ್ತಿ ಸಾಮರ್ಥ್ಯಗಳು ಪ್ರಕಟವಾಗುತ್ತಿದ್ದ ವಿಚಿತ್ರ ಆತ್ಮೀಯ ಸಂದರ್ಭಗಳು; ಆತ ದೇವರ ಪ್ರತೀಕಗಳನ್ನು , ಪ್ರಕೃತಿಯನ್ನು , ಜನಸಾಮಾನ್ಯರನ್ನು, ಅಧಿಕಾರ ಮತ್ತರನ್ನು ನೋಡುತ್ತಿದ್ದ ರೀತಿ-ನೀತಿ; ಸುಮ್ಮನೆ ನೋಡಿದರೆ, ಕೇಳಿದರೆ ಸಾಮಾನ್ಯವೆಂದು ಕಾಣುವ

ಸನ್ನಿವೇಶಗಳು- ಕಥೆಗಳು ಆತನ ವ್ಯಾಖ್ಯಾನದಿಂದ ಅಸಾಮಾನ್ಯವಾಗಿ ಹೋಗಿಬಿಡುವ ಬೆರಗು-ಇವನ್ನೆಲ್ಲಾ ಆ ಸಾಧಕನ ಯಥಾವತ್ ಹಳ್ಳಿಮುಕ್ಕನ ಮಾತುಗಳಲ್ಲಿಯೇ ಕಟ್ಟಿಕೊಡುವ ಮೂಲಕ ಕೃಷ್ಣಶಾಸ್ತ್ರಿಗಳು ಒಂದು ವ್ಯಕ್ತಿತ್ವವನ್ನು ನಿರ್ಮಾಣಮಾಡಿ, ಸಾಮಾನ್ಯ ಸಂದರ್ಭಗಳಲ್ಲಿ ನಂಬಲಾಗದ್ದನ್ನು ಓದುವ ಸಂದರ್ಭದಲ್ಲಾದರೂ ನಂಬುವಂತೆ ಪ್ರೇರೇಪಿಸುತ್ತಾರೆ.ಇದೇ ಈ ಪುಸ್ತಕದ ಹೆಗ್ಗಳಿಕೆ. ಅಲ್ಲದೆ, ರಾಷ್ಟ್ರೀಯ,ಅಂತರಾಷ್ಟ್ರೀಯ ಗಮನ ಸೆಳೆದ ಸಾಧು-ಸಂತ -ಸಾಧಕರ ಮಧ್ಯೆ ಸಮಾನವಾಗಿ ನಿಲ್ಲಬಲ್ಲ ಅಪ್ಪಟ ಜನಪದ ಸಂತರಾದ ಈ ಮುಕುಂದೂರು ಸ್ವಾಮಿಗಳು,ಅವರನ್ನು ಕಂಡು ಒಡನಾಡಿದವರ ನೆನೆಪುಗಳೊಂದಿಗೇ ಮರೆಯಾಗಿ ಹೋಗದಂತೆ ಕನ್ನಡ ಜನತೆಗಾಗಿ ಅವರ ಚೇತನವನ್ನು ಈ ಲೇಖಕರು ಅಕ್ಷರಗಳಲ್ಲಿ ಮೂಡಿಸಿಡುವ ಐತಿಹಾಸಿಕ ಕೆಲಸ ಮಾಡಿದ್ದಾರೆ.ಅದಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ.

ತ್ರಿವೇಣಿ (ಅನಸೂಯಾ ಶಂಕರ) **ಲೇ :**ಸಿ.ಎನ್.ರಾಮಚಂದ್ರನ್

ಪ್ರ : ಸಾಹಿತ್ಯ ಅಕಾದೆಮಿ, ನವದೆಹಲಿ **ಪು :** ೧೧೦ **ಬೆಲೆ :** ರೂ .೨೫/-

'ಭಾರತೀಯ ಸಾಹಿತ್ಯ ನಿರ್ಮಾಪಕರು' ಮಾಲಿಕೆಯಲ್ಲಿ ಪ್ರಕಟವಾಗಿರುವ ಈ ಕೃತಿ,ತಮ್ಮ ಮಧ್ಯಮಮಾರ್ಗದ ಬರವಣಿಗೆಯಿಂದ ಕನ್ನಡ ಸಾಹಿತ್ಯ ಪ್ರಿಯರ ಮನಸ್ಸನ್ನು ಸೂರೆಗೊಂಡು ಲೇಖಕಿಯರಿಗೆ ಕನ್ನಡಸಾಹಿತ್ಯ ಚರಿತ್ರೆಯಲ್ಲಿ ಗೌರವಾನ್ವಿತ ಸ್ಥಾನವನ್ನು ಕಲ್ಪಿಸಿಕೊಟ್ಟ ತ್ರಿವೇಣಿಯವರ ಸಮಗ್ರ ಸಾಹಿತ್ಯವನ್ನು ಹೃದ್ಯವಾಗಿ ಪರಿಚಯಿಸುತ್ತದೆ.ಸಾಹಿತ್ಯ ಕುಟುಂಬದಲ್ಲಿ ಜನಿಸಿದ ತ್ರಿವೇಣಿಯವರ ವ್ಯಕ್ತಿತ್ವವನ್ನು ಪರಿಚಯಿಸುವುದರಲ್ಲಿ ಈ ಕೃತಿ ಅಷ್ಟೇನೂ ಯಶಸ್ವಿಯಾಗಿರದಿದ್ದರೂ ,'ಬೆಳ್ಳಿಮೋಡ', 'ಮುಕ್ತಿ','ಕಂಕಣ' ಮುಂತಾದ ಕಾದಂಬರಿಗಳಲ್ಲಿ ಬಿಂಬಿತವಾಗಿರುವ ಸ್ತ್ರೀದೃಷ್ಟಿಕೋನವನ್ನೂ , 'ಶರಪಂಜರ','ಬೆಕ್ಕಿನಕಣ್ಣು' ಮುಂತಾದ ಕಾದಂಬರಿಗಳಲ್ಲಿನ ಮನೋವೈಜ್ಞಾನಿಕ ನೆಲೆಗಳನ್ನೂ ವಿವರವಾಗಿ ಪರಿಶೀಲಿಸುತ್ತದೆ.ಈ ಕೃತಿ ಓದಿ ಮುಗಿಸಿದಾಗ ತ್ರಿವೇಣಿಯವರ ಬಗ್ಗೆ ಪ್ರೀತಿ ಗೌರವ ಮೂಡುತ್ತವೆ.

ಲೋಕಾವಲೋಕನ **ಲೇ:**ಡಾ.ಐ.ಎ.ಲೋಕಾಪುರ

ಪ್ರ : ವಿದ್ಯಾನಿಧಿ ಪ್ರಕಾಶನ,ಗದಗ **ಪುಟ :** ೩೫೦ **ಬೆಲೆ :** ರೂ .೧೨೫ /-

ಶಿಕ್ಷಣಶಾಸ್ತ್ರದ ಅಧ್ಯಾಪಕರಾದ ಲೇಖಕರು ರೋಟರಿ ಸಂಸ್ಥೆಯ ಸಮೂಹ ಅಧ್ಯಯನ ವಿನಿಮಯ ಯೋಜನೆಯಡಿ ಕೈಗೊಂಡ ಅಮೇರಿಕಾ ಹಾಗೂ ಕೆನಡಾ ದೇಶಗಳ ೪೫ ದಿನಗಳ ಪ್ರವಾಸದ ಬಗೆಗಿರುವ ಟಿಪ್ಪಣಿಗಳ ಸಂಕಲನವಿದು.ಇವು ಟಿಪ್ಪಣಿಗಳು ಏಕೆಂದರೆ, ೯೪ ಅಧ್ಯಾಯಗಳುಳ್ಳ ಈ ಪುಸ್ತಕವು, ಯಾವೊಂದು ವಿಷಯದ ಬಗ್ಗೆಯೂ ಆಳವಾದ ಒಳನೋಟ ನೀಡುವ ಪ್ರಯತ್ನ ಮಾಡದೇ ಎಲ್ಲ ಸಂಗತಿಗಳ ಹೊರನೋಟಗಳನ್ನು ನೀಡುವುದಕ್ಕಷ್ಟೇ ತನ್ನನ್ನು ಸೀಮಿತಗೊಳಿಸಿಕೊಂಡಿದೆ .ಈ ಪ್ರವಾಸವು ಪಾಶ್ಚಿಮಾತ್ಯ ಕುಟುಂಬಗಳೊಡನೆ ವಾಸ ಹಾಗೂ ಶಿಕ್ಷಣ ಸಂಸ್ಥೆಗಳ ಪರಿಣತರೊಂದಿಗೆ ಸಂವಾದಗಳನ್ನೊಳಗೊಂಡಿತ್ತೆಂದು ಹೇಳಲಾಗಿದೆಯಾದರೂ ಎಲ್ಲಿಯೂ ಆ ಕೌಟುಂಬಿಕ ಹಾಗೂ ಪರಿಣತೆಯ ಸ್ಪರ್ಶ ಕಾಣಿಸದೆ,ಇಡೀ ಬರಹವು ಬರಿಯ ಪ್ರವಾಸದ ದಾಖಲೆಯಾಗಷ್ಟೆ ಮೂಡಿಬಂದಿದೆ.ಅಧ್ಯಾಯಗಳ ಆಕರ್ಷಕ ಶೀರ್ಷಿಕೆಗಳು ಹಾಗೂ ಬರವಣಿಗೆಯ ಸರಳ ಗದ್ಯಶೈಲಿ ಪುಸ್ತಕವನ್ನು ಓದಿಸಿಕೊಂಡು ಹೋಗುತ್ತವೆ.

ಪತ್ರಗಳು ಮತ್ತು ಪ್ರತಿಕ್ರಿಯೆ

ಪ್ರಿಯ ಪಾಟೀಲರೇ,

ವಂದನೆಗಳು. ಸಾಹಿತ್ಯ ಸಂವಾದ -೪೯ ತಲುಪಿದೆ.

ಕಾರಂತರೊಂದಿಗೆ ಡಿ.ಎಸ್.ನಾಗಭೂಷಣರ ಸಂದರ್ಶನದ ಸಂಭಾಷಣೆ ಓದಿದೆ. ಯಥಾ ಪ್ರಕಾರ ಖಾರಂತರ ಮುಕ್ತ ಮನಸ್ಸು ಉತ್ತರಿಸಿರುವುದು ಕಾಣುತ್ತದೆ...''ನೀನೊಬ್ಬನೇ ಹುಟ್ಟಿದ್ದಲ್ಲ. ನಿನ್ನ ಹಾಗೆ ಮಾತಾಡುವವರು ನೂರು ಜನ ಇದ್ದಾರೆ. ದಿವಸಕ್ಕೆ ಇಷ್ಟಿಷ್ಟು ಪೇಪರ್ ಓದ್ತಾರೆ. ನಿಂದೂ ಒಂದೆರಡು ಹಾಳೆ ಓದಿರಬಹುದು. ಆದದ್ದರಿಂದ ನಾನು ಬರೀತೀನಿ ಅಂತ ಹೇಳ್ಕೊಂಡು ತಲೆಗೆ ಪಿತ್ಥ ಹಚ್ಕೊಳ್ಳಬೇಡ. ಆ ದೃಷ್ಟಿಯಿಂದ ನನಗೆ ಎಲ್ಲ ಸಾಹಿತಿಗಳ ಮೇಲೆ ಬೇಜಾರು ಇದೆ. ನಾವೇ ಒಂದು ಜಾತಿ ಬೇರೆ ...ಈ ಸಮಾಜವನ್ನ ಮೇಲೆತ್ತುತ್ತೇವೆ...ಈ ಪಿತ್ಥ ಹೋಗದ ವರೆಗೆ ಅವರೂ ದುರಸ್ತಿ ಆಗೋದಿಲ್ಲ, ಇನ್ನೊಬ್ರೂ ದುರಸ್ತಿ ಆಗೋದಿಲ್ಲ. ನಿರಾಸೆ ಬರೋದೇ. ಇಡೀ ನಿಮ್ಮ ಆಯುಷ್ಯ ಮಾತಾಡೇ ಕಳೀತದೆ. ನನ್ನ ಮಾತು ಮುಖ್ಯ ಆಗಬೇಕಾದರೆ ಅವನಿಗೆ ಅದು ಎಲ್ಲಿಯೋ ತಾಗಬೇಕಾಗುತ್ತೆ. ನೆನಪು ಉಳೀಬೇಕಾಗ್ತದೆ. ಅಂವ ನಮ್ಮ ಕಡೆ ನೋಡಬೇಕಾಗ್ತದೆ. ಅಂವ ನೋಡದೆ ಇದ್ರೆ ಏನ್ಮಾಡೋದು ...? ಸಾಹಿತಿಯಾದವ ತನ್ನನ್ನ ತಾನು ಅಳಕೊಳ್ಳೋದು ಒಳ್ಳೆಯದು ...''. ಮತ್ತು ''ವಿಚಾರ ಮಾಡ್ತೀರೋ ಅಥವಾ ನಂದೇ ಸರಿ, ಬಾಕಿಯವರದ್ದು ಬೇಡಾಂತ ಹೇಳ್ತೀರೋ?'' ಎಂಬ ಮಾತುಗಳು quotable quotes ಮತ್ತು ಎಲ್ಲ ಕಾಲದಲ್ಲೂ ಲೇಖಕರಿಗಿರುವ arrogance ಗೆ ಹಿಡಿದ ಕನ್ನಡಿ; ಸದ್ಯಕ್ಕಂತೂ ನಮ್ಮ ವಿಮರ್ಶಕರ ಕುರಿತ ಒಳ್ಳೆಯ ವಿಮರ್ಶೆ. ಅಕಡೆಮಿಕ್ ನೆಲೆಯಿಂದಲೇ ಉಳಿದೆಲ್ಲವನ್ನು ನೋಡುತ್ತ ದಂತಗೋಪುರದಲ್ಲಿರುವವರಿಗೆ ಕಾರಂತರ ಈ ಅಂಬೋಣ ನಿಜದ ನೆಲೆಯಲ್ಲಿ ಅಡಕವಾದರೆ ಒಳ್ಳೆಯದು.

ಸಂದರ್ಶಕರ ಪ್ರಶ್ನೆಗಳಿಗೆ ಉತ್ತರಿಸುವ ಮಾತುಗಳು ತಮ್ಮಿಂದ ತಾವೇ ಅಭಿವ್ಯಕ್ತಿಸಬಲ್ಲವಾದ್ದರಿಂದ ಅವಕ್ಕೆ ಬ್ರಾಕೆಟ್ಟಿನಲ್ಲಿ ರಸಪೋಷಣೆಯಂತೆ ''(ಸ್ವಲ್ಪ ಶಾಂತರಾದಂತೆ)'', ''(ಉದ್ವಿಗ್ನತೆಯಲ್ಲೇ)'' ಮುಂತಾದ ಭಾವಾರೋಪಣವು ಅನುಚಿತವಾದುದು. ಇದಕ್ಕೆ ಪ್ರತಿಯಾಗಿ ನಾಗಭೂಷಣರ ಮಾತುಗಳಿಗೆ ''(ಕಂಗಾಲಾಗಿ)'', ''(ಏನೂ ಹೇಳಲು ತೋಚದೆ)'' ಮುಂತಾದ ಪದಗಳನ್ನು ಪ್ರಯೋಗಿಸಿದರೆ ಹೇಗಿದ್ದೀತು? ಬ್ರಾಕೆಟ್ಟಿನಲ್ಲಿ ಪ್ರಕಟವಾದ ಈ ಅಧಿಕ ಪ್ರಸಂಗ ಇಡೀ ಸಂದರ್ಶನವನ್ನು ಒಂದು ಪ್ರಹಸನದಂತೆ ಓದಿಸುತ್ತದೆ. ಸಂದರ್ಶನವೆಂದರೆ ನಾಟಕವಲ್ಲ.

''(ಒಮ್ಮೆಗೆ ಸಿಟ್ಟಿನಿಂದ)'' ಎಂಬುದನ್ನು ಓದಿ ನಗು ಬಂದಿತು.

''ದಲಿತ - ಬಂಡಾಯ ಸ್ಥಗಿತತೆ : ಒಂದು ಸಂವಾದ '' ದಲ್ಲೂ ಇದೇ ಶೈಲಿ ಇದೆಯಲ್ಲವೇ? ''(ನಗು)'' ಇತ್ಯಾದಿ.

ಭೈರಪ್ಪನವರ ಸಾರ್ಥದ ಕುರಿತು ನೀವು ಮತ್ತು ಎ.ಎನ್.ಮಂಜುನಾಥ ಬರೆದದ್ದಕ್ಕೆ ನನ್ನ ಭಿನ್ನಮತವಿದೆ. ಆ ಬಗ್ಗೆ ವಿವರವಾಗಿ ಪ್ರತ್ಯೇಕ ಬರೆಯಲು ಇಚ್ಛಿಸಿದ್ದೇನೆ.

(ಡಿ.ಎಸ್.ನಾಗಭೂಷಣ ನಿಮ್ಮ ಸಂಪಾದಕ ಮಂಡಳಿಯಲ್ಲಿರುವುದರಿಂದ ಪ್ರಾಯಶಃ ಈ ಪ್ರತಿಕ್ರಿಯೆಯನ್ನು ಪ್ರಕಟಿಸುವುದು ನಿಮಗೆ ಸಾಧ್ಯವಾಗದು.ಆದರೂ ಹೇಳಬೇಕೆಂದನ್ನಿಸಿದ್ದನ್ನು ನಿಮಗೆ ತಲುಪಿಸುತ್ತಿದ್ದೇನೆ.)

ನಿಮ್ಮ

ಬಾಲಸುಬ್ರಹ್ಮಣ್ಯ ಕಂಜರ್ಪಣೆ

'ಸಿರಿ', ಬ್ರಾಹ್ಮಿನ್ ವ್ಯಾಲಿ

ಮಡಿಕೇರಿ, ಕೊಡಗು ಜಿಲ್ಲೆ

ಪ್ರೀತಿಯ ಬಾಲಸುಬ್ರಹ್ಮಣ್ಯ ಕಂಜರ್ಪಣೆಯವರಿಗೆ,

ವಂದನೆಗಳು.

ಮೊದಲಿಗೆ, ನಿಮ್ಮ ಅನಿಸಿಕೆಗಳನ್ನು ಬರೆದದ್ದಕ್ಕೆ ಧನ್ಯವಾದಗಳು. ಕೇವಲ ಒರಟು ರಾಜಕೀಯವೇ ಇಡಿಯಾಗಿ ವಾತಾವರಣವನ್ನು ತುಂಬಿಕೊಂಡು ಯಾವದೇ ಸಾಂಸ್ಕೃತಿಕ ಚರ್ಚೆಯೂ ಸಾಧ್ಯವಾಗದಿರುವ ಇಂದಿನ ಸಂದರ್ಭದಲ್ಲಿ, ಸಂವಾದವು ತೀವ್ರವಾಗಿ ಅಪೇಕ್ಷಿಸುತ್ತಿರುವುದು ಸಾಂಸ್ಕೃತಿಕ ಚರ್ಚೆಯನ್ನು. ಇಂಥ ಚರ್ಚೆ-ಸಂವಾದಗಳ ನೆಲೆಯಲ್ಲಿಯೇ ಹೊಸ ನಾಗರಿಕತೆಯ ಹೊಸ ಮೌಲ್ಯಗಳು ಮೂಡಬಹುದೆನ್ನುವುದು ಸಂವಾದದ ನಂಬಿಕೆಯಾಗಿದೆ. ಆದ್ದರಿಂದ ನೀವು ಸಂವಾದದಲ್ಲಿ ಪ್ರಕಟವಾಗುವ ಯಾವದೇ, ಯಾರದೇ ಬರೆಹಗಳ ಬಗೆಗಿನ ನಿಮ್ಮ ಅನಿಸಿಕೆ -ಅಭಿಪ್ರಾಯಗಳನ್ನು ನಿಃಸಂಕೋಚದಿಂದ ಬರೆಯಿರಿ. ಅವುಗಳಿಗೆ ಸ್ವಾಗತವಿದೆ.

ಎರಡನೆಯದಾಗಿ, ನಿಮ್ಮ ಪತ್ರದ ಕೊನೆಯಲ್ಲಿ, ಬ್ರಾಕೆಟ್ಟಿನಲ್ಲಿ ಬರೆದ ವಿಷಯ ಕುರಿತು: ನೀವು ಸಂವಾದವನ್ನು ಮತ್ತು ಅದರ ಸಂಪಾದಕ ಮಂಡಳಿಯನ್ನು ತಪ್ಪಾಗಿ ತಿಳಿದುಕೊಂಡಿದ್ದೀರಿ ಎಂದು ಸೂಚಿಸಬಯಸುತ್ತೇನೆ. ಸಂವಾದದ ಗೆಳೆಯರು -ನಾವು- ಭಾವಿಸಿರುವುದೇನೆಂದರೆ-ಸಂವಾದಕ್ಕೆ ನಮ್ಮನ್ನು ಮೀರಿದ ವ್ಯಾಪ್ತವಾದ ಒಂದು ವ್ಯಕ್ತಿತ್ವವಿದೆ; ಆ ವ್ಯಕ್ತಿತ್ವದ ಮೂಲಾಂಶ ಒಟ್ಟು ನಾವು ಬದುಕುತ್ತಿರುವ ವಾತಾವರಣದ ಆರೋಗ್ಯದ ಬಗೆಗಿನ ಚಿಂತನೆ, ಶೋಧನೆ. ಹೀಗಾಗಿ ಸಂವಾದಕ್ಕೆ ಒಂದು ವಿಶಾಲವಾದ ವ್ಯಕ್ತಿತ್ವವಿದೆ ಮತ್ತು ಸಂವಾದದ ಸಂದರ್ಭದಲ್ಲಿ, ಅದರ ವ್ಯಕ್ತಿತ್ವದಲ್ಲಿ ನಮ್ಮ ಸ್ವತಂತ್ರ ವ್ಯಕ್ತಿತ್ವಗಳು ಲಯವಾಗುತ್ತವೆ. ಸಂವಾದದ ಹೊರಗೆ ಮಾತ್ರ, ನಾವು, ಪಾಟೀಲ -ನಾಗಭೂಷಣ -ಸವಿತಾ ನಾಗಭೂಷಣರು. ಸಂವಾದದೊಳಗೆ ನಾವು ಇವರಲ್ಲ. ಹಾಗಿರುವುದರಿಂದ ನಿಮ್ಮ ಪ್ರತಿಕ್ರಿಯೆಯು ಪ್ರಕಟವಾಗುವುದಿಲ್ಲವೆಂದು ನೀವು ಭಾವಿಸಿರುವುದು ನಿಮ್ಮಲ್ಲಿರುವ ಎಂಥದೋ ಕಹಿಯ ಭಾಗವೆಂದು ನಮ್ರವಾಗಿ ಸೂಚಿಸಬಯಸುತ್ತೇನೆ.

ಇನ್ನು ಕಾರಂತರ ಸಂದರ್ಶನದಲ್ಲಿನ ಬ್ರಾಕೆಟ್ಟು ಬರೆಹಗಳನ್ನು ಕುರಿತು ನೀವು ವ್ಯಕ್ತಪಡಿಸುತ್ತಿರುವ ಆಕ್ಷೇಪ ಕುರಿತಂತೆ: ಸಂದರ್ಶನದ ಜೀವಂತಿಕೆಯನ್ನೇ ಆಕ್ಷೇಪಿಸುತ್ತಿರುವ ನಿಮ್ಮ ರೀತಿ ಆಶ್ಚರ್ಯವುಂಟು ಮಾಡುತ್ತದೆ. ಒಂದು ಆದರ್ಶವಾದ ಸಂದರ್ಶನ ಅದು ನಡೆದ ಇಡೀ ಸಂದರ್ಭದ ಜೀವಂತಿಕೆಯನ್ನು ಮಿಡಿಯುವಂತಿರಬೇಕು. ನಿಜವಾದ ಯಶಸ್ವಿಯಾದ ಸಂದರ್ಶನ ಅದು ನಡೆದ ಸಂದರ್ಭವನ್ನು ನಾಟ್ಯೀಕರಿಸಬೇಕು. ಇಂಥ ನಾಟ್ಯೀಕರಣವನ್ನು ನೀವು 'ರಸಪೋಷಣೆ' ಎಂದು ಸರಿಯಾಗಿಯೇ ಹೇಳುತ್ತ

ಅದನ್ನು ಅಧಿಕ ಪ್ರಸಂಗ ಎನ್ನುತ್ತ ನಿಮ್ಮ ಪೂರ್ವಾಗ್ರಹವನ್ನು ಹೇರುತ್ತೀರಿ. ಎಲ್ಲ ಜೀವಂತಿಕೆಯನ್ನು ನಿವಾರಿಸಿ ಕೇವಲ ನಿರ್ಜೀವ ಅಕ್ಷರಗಳಲ್ಲಿ ಮಾತ್ರ ಕಾರಂತರ ಬದುಕಿನ - ನಮ್ಮ ಬದುಕಿನ - ತುಮುಲಗಳ ಒಳಗಾದ ಇಡೀ ಸಂದರ್ಭದ ಕ್ಷಣಗಳನ್ನು ಹೇಳಬೇಕು ಎನ್ನುವ ನಿಮ್ಮ ಆಗ್ರಹ ನನಗೆ ಖಂಡಿತವಾಗಿಯೂ ವಿಚಿತ್ರ ವೆನ್ನಿಸುತ್ತದೆ. ಆದರೆ, ಹೌದು. ಬೇರೊಂದು ರೀತಿಯ ಸಂದರ್ಶನಗಳನ್ನೇ ನೀವು ಇಷ್ಟಪಡುತ್ತಿರಬಹುದು. ಆದರೆ ನಿಮ್ಮ ಇಷ್ಟದಾಚೆಗೆ ಇರಬಹುದಾದ ಇನ್ನೊಂದು ಸಾಧ್ಯತೆಯನ್ನು ನೀವು ಹೀಗೆ ಸಾರಾಸಗಟಾಗಿ ಅನುಚಿತ ಎಂದು ಹೇಳಿಬಿಟ್ಟರೆ ಹೇಗೆ? ಸಾಹಿತಿಯಾದವ ತನ್ನ ಮೂಗಿನ ನೇರಕ್ಕೆ ಯೋಚಿಸುವುದನ್ನು ಮತ್ತು ತಾನು ಯೋಚಿಸುವುದೊಂದೇ ಸರಿಯಾದ ಮಾರ್ಗ ಎನ್ನುವ ಪಿತ್ಥವನ್ನು ಬಿಡಬೇಕೆನ್ನುವ ಕಾರಂತರ ಮಾತನ್ನು ಅಷ್ಟೊಂದು ಒಪ್ಪಿಕೊಳ್ಳುತ್ತಲೇ ನೀವೇ ಹೀಗೆ ಇದಮಿತ್ಥಂ ಎನ್ನುವ ಧೋರಣೆ ತಾಳಿದರೆ ಹೇಗೆ?

ಇನ್ನು, 'ದಲಿತ - ಬಂಡಾಯ ಸ್ಥಗಿತತೆ : ಒಂದು ಸಂವಾದ' ಇದರಲ್ಲಿ ಬರುವ ಬ್ರಾಕೆಟ್ಟಿನಲ್ಲಿಯ 'ನಗು' ಆ ಸಂವಾದದ ಸಂದರ್ಭದ ಜೀವಂತಿಕೆಯನ್ನು ಕಟ್ಟಿಕೊಡುವ ಪ್ರಯತ್ನವಾಗಿರುವಂತೆಯೇ ನನ್ನ ದೃಷ್ಟಿಕೋನದ ಐರನಿಯೂ ಅದರಲ್ಲಿ ಸೇರಿರಬಹುದೆಂದು ಒಪ್ಪಿಕೊಳ್ಳುತ್ತೇನೆ. ಆದರೆ ಆ ನಗು ಮಾತ್ರ ನನ್ನ ಐರನಿಯು ಸೃಷ್ಟಿಸಿದ್ದಲ್ಲ.

ಭೈರಪ್ಪನವರ ಸಾರ್ಥದ ಬಗೆಗೆ ನನ್ನ ಮತ್ತು ಎ.ಎನ್. ಮಂಜುನಾಥ ಅವರ ಬರೆಹಗಳ ಬಗ್ಗೆ ನೀವು ಭಿನ್ನಮತ ಹೊಂದಿರುವುದಾಗಿ ಹೇಳಿದ್ದೀರಿ. ದಯವಿಟ್ಟು ಯಾವ ಮುಜುಗರವನ್ನೂ ಇಟ್ಟುಕೊಳ್ಳದೆ ಆ ಬಗೆಗಿನ ನಿಮ್ಮ ಅಭಿಪ್ರಾಯಗಳನ್ನು ಬರೆದು ಸಂವಾದದಲ್ಲಿ ಸಾಂಸ್ಕೃತಿಕ ಚರ್ಚೆಯನ್ನು ಬೆಳೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಬರೆಯಿರಿ,

ವಂದನೆಗಳೊಂದಿಗೆ

ನಿಮ್ಮ,
ರಾಘವೇಂದ್ರ ಪಾಟೀಲ
ಸಂಪಾದಕ ಮಂಡಳಿಯ ಪರವಾಗಿ

o

ಪ್ರಿಯ ರಾಘವೇಂದ್ರ ಪಾಟೀಲರಿಗೆ,

ಏನಿದ್ದರೂ ನೀವು ದ್ವೈಮಾಸಿಕವನ್ನು ತ್ರೈಮಾಸಿಕವನ್ನಾಗಿ ಪರಿವರ್ತಿಸಬಾರದಿತ್ತು.

ಬಂಡಾಯಕ್ಕೆ ಸಂಬಂಧಿಸಿದ ಸಂವಾದದಲ್ಲಿ 'ಸಂವಾದ'ಕ್ಕಿಂತ ಪೂರ್ವಾಗ್ರಹಗಳು, ಕುತರ್ಕಗಳು, ಗಿಮಿಕ್ಸ್‌ಗಳು ಹೆಚ್ಚಾಗಿವೆ.

ನಿಮ್ಮ
ಆರ್ಕೆ ಮಣಿಪಾಲ

(ಪ್ರಿಯ ಆರ್ಕೆ, ನಿಮ್ಮ ಅಭಿಪ್ರಾಯಗಳನ್ನು ವಿವರವಾಗಿ ಬರೆದು ಕಳಿಸಿದರೆ ಪ್ರಕಟಿಸಬಹುದು - ಸಂ.)

'ಸಾರ್ಥದ ವಾಸ್ತವಿಕತೆ ' : ಒಂದು ಪ್ರತಿಕ್ರಿಯೆ

ಸಾಹಿತ್ಯ ಸಂವಾದ -೪೯ರಲ್ಲಿ ಪ್ರಕಟವಾಗಿರುವ ರಾಘವೇಂದ್ರ ಪಾಟೀಲರು 'ಸಾರ್ಥ' ಕುರಿತು ಬರೆದಿರುವ ಲೇಖನವನ್ನು ಓದಿ ಈ ಪ್ರತಿಕ್ರಿಯೆ ಬರೆಯುತ್ತಿದ್ದೇನೆ.ಎಸ್.ಎಲ್.ಭೈರಪ್ಪನವರ 'ಸಾರ್ಥ' ಕಾದಂಬರಿ ಕುರಿತಂತೆ ಲಂಕೇಶರು ತಮ್ಮ ಪತ್ರಿಕೆಯಲ್ಲಿ ಬರೆದ ವಿಮರ್ಶೆಯ ಮಾತುಗಳಿಗೆ ಉತ್ತರ ಕೊಡುವ ನೆಪದಲ್ಲಿ ಒಟ್ಟಾರೆ ಲಂಕೇಶರ (ಮತ್ತು ಅವರ ಪತ್ರಿಕೆಯ) ಸಾಹಿತ್ಯ ವಿಮರ್ಶಾ ವೈಖರಿಯನ್ನೇ ತರಾಟೆಗೆ ತೆಗೆದುಕೊಳ್ಳುವ-ಲೇಖನದ ಸಂದರ್ಭದಲ್ಲಿ ಅಪ್ರಸ್ತುತ ಎನ್ನಬಹುದಾದ-ಉತ್ಸಾಹದ ಭರದಲ್ಲಿ 'ಸಾರ್ಥ'ವನ್ನು ಸಲ್ಲದ ಕಾರಣಗಳಿಗಾಗಿ ಸಮರ್ಥಿಸುವಂತಹ ಅಪಾಯಕ್ಕೆ ಪಾಟೀಲರು ಸಿಲುಕಿಬಿಟ್ಟಿರುವುದು ದುರದೃಷ್ಟಕರ.ಲಂಕೇಶರ ವಿಮರ್ಶಾ ರಾಜಕಾರಣವನ್ನು ಖಂಡಿಸಲು ಪಾಟೀಲರು ತಪ್ಪಾದ ಉದಾಹರಣೆಯನ್ನು ಆರಿಸಿಕೊಂಡು ಸಮಸ್ಯೆಯನ್ನು ಸೃಷ್ಟಿಸಿಕೊಂಡಿದ್ದಾರೆ ಎನ್ನಿಸುತ್ತದೆ.

''ಕಾದಂಬರಿಯಂತಹ ಸಾಹಿತ್ಯ ಕೃತಿಯನ್ನು ಅದರ ವಾಸ್ತವಿಕತೆಯ ನೆಲೆಯನ್ನು ಕುರಿತಂತೆ ಚರ್ಚಿಸುವುದು ಅಂತಹ ಖುಶಿಯ ವಿಚಾರವೇನೂ ಅಲ್ಲ.ಯಾವದೇ ಸಾಹಿತ್ಯ ಕೃತಿಯಲ್ಲಿನ ವಾಸ್ತವಿಕತೆ ಕುರಿತ ಚರ್ಚೆಯು ಅದರ ಕಲಾತ್ಮಕತೆಯ ಹೊರ ಆವರಣದ ಚರ್ಚೆಯಾಗಿರುತ್ತದೆ ಮತ್ತು ಇದು ಆ ಕೃತಿಯ ಹೃದಯವನ್ನು ಪರಿಗಣನೆಗೆ ತೆಗೆದುಕೊಳ್ಳದ ಉರುಟು ಅನುಸಂಧಾನವಾಗಿರುತ್ತದೆ.ಇಂತಹ ಅನುಸಂಧಾನವನ್ನು ಕೃತಿಕಾರ ಮತ್ತು ವಿಮರ್ಶಕ ಇಬ್ಬರೂ ಇಷ್ಟಪಡಲಾರರು'' ಎಂಬ ಪ್ರಸ್ತಾವನೆಯೊಂದಿಗೆ ತಮ್ಮ ಲೇಖನವನ್ನು ಆರಂಭಿಸುವ ಪಾಟೀಲರು ''ಕೃತಿಯಲ್ಲಿ ಬಿಂಬಿತವಾದ ಜೀವನ ಕೃತಿಯ ಹೊರಗಡೆ ಇದ್ದ ಜೀವನದ ಪ್ರತಿಬಿಂಬ ಎಂದು ವಿವರಿಸುವುದು ಕೃತಿಕಾರನ ಕಲ್ಪಕತೆ ಮತ್ತು ಕಲಾತ್ಮಕ ಸೃಷ್ಟಿಗಳೆರಡನ್ನೂ ಅಲ್ಪಗೊಳಿಸಿ ನೋಡುವ ವಿಧಾನವಾಗಿರುತ್ತದೆ '' ಎಂದು ತರ್ಕಿಸುತ್ತಾ ಲಂಕೇಶರ ವಿಮರ್ಶೆಯನ್ನು ಪ್ರಶ್ನಿಸಲೆಂದೇ ಒಂದು ಪ್ರಸ್ತಾವನೆಯನ್ನು ಹಾಕಿಕೊಂಡು ಅದರ ಸಹಜ ಮುಂದುವರಿಕೆಯಾಗಿ 'ಸಾರ್ಥ'ವನ್ನು ಚರ್ಚಿಸಹೊರಟು ತಪ್ಪು ತೀರ್ಮಾನಗಳಿಗೆ ಬರುತ್ತಾರೆ.

ಕೃತಿ ಮೀಮಾಂಸೆಯಿಂದ ಹುಟ್ಟುವುದು ವಿಮರ್ಶಾ ಮೀಮಾಂಸೆ.ಕೃತಿಯ ವಿಮರ್ಶಾ ಮಾನದಂಡಗಳು ಕೃತಿಯ ಹೊರಗಿನಿಂದ ಬರತಕ್ಕವಲ್ಲ.ಪ್ರತಿಯೊಂದು ಕೃತಿಯು ತನ್ನ ವಿಮರ್ಶಾ ಸ್ವರೂಪವನ್ನು ತಾನೇ ನಿರ್ಧರಿಸಿಕೊಳ್ಳುತ್ತದೆ.'ಸಾರ್ಥ'ವೂ ಇದಕ್ಕೆ ಹೊರತಾಗಿರಲಾರದು.ಕೃತಿಯೊಂದರ ಕಲಾತ್ಮಕತೆಯೇ ಏಕೈಕ ಹಾಗೂ ಪರಮ ಮೌಲ್ಯ ಎಂದು ನಂಬಿದಂತೆ ತೋರುವ ಪಾಟೀಲರು ಕೃತಿಯ ವಾಸ್ತವಿಕತೆಯ ನೆಲೆಯನ್ನು ಕುರಿತಂತೆ ಚರ್ಚಿಸುವುದು ಉರುಟು ಅನುಸಂಧಾನ ಎಂದು ಬಗೆಯುತ್ತಾರೆ. ಆದರೆ ಕೃತಿಯ ಕಲಾತ್ಮಕತೆಯೆನ್ನುವುದು ಸೃಷ್ಟಿಯಾಗುವುದು ಕೃತಿಯ ಎಲ್ಲ ಆಯಾಮಗಳ ಅನುಸಂಧಾನದಿಂದ;'ಸಾರ್ಥ'ದ ಬರವಣಿಗೆಯ ಮಸಿ ತನ್ನ ಬಣ್ಣವನ್ನು ಪಡೆದಿರುವುದೇ ಅದರ ಚಾರಿತ್ರಿಕ ವಾಸ್ತವ ಶೈಲಿಯಿಂದಾಗಿರುವುದರಿಂದ ಅದರ ಕಲಾತ್ಮಕತೆಯ ತೀರ್ಮಾನವಾಗಬೇಕಾಗಿರುವುದು ಈ ಶೈಲಿಗೆ ಅದು ಎಷ್ಟು ನಿಷ್ಠವಾಗಿದೆ ಎಂಬುದರ ಚರ್ಚೆಯಿಂದಲೇ ಎನ್ನುವುದು ಪಾಟೀಲರ ಗಮನಕ್ಕೆ ಬಾರದಿರುವುದು ಆಶ್ಚರ್ಯಕರ.

ಈ ಸಂಬಂಧವಾಗಿ ಕೃತಿಯ ಭಾವಕೋಶದ ರಚನೆ ಮತ್ತು ವ್ಯುತ್ಪತ್ತಿಯ ಪ್ರಸ್ತಾಪ ಮಾಡುತ್ತ 'ಸಂಸ್ಕಾರ'ದ ಉದಾಹರಣೆ ಕೊಡುವ ಪಾಟೀಲರಿಗೆ 'ಸಂಸ್ಕಾರ'ದಂತೆ ಕೃತಿಯ ಆಂತರಿಕ ಭಾವಕೋಶವನ್ನು

ನಿರ್ಮಿಸಬಲ್ಲ ತೀವ್ರತೆ ಹಾಗೂ ತುರ್ತು 'ಸಾರ್ಥ'ದ ರಚನಾ ಕ್ರಮದಲ್ಲೇ ಇಲ್ಲವೆಂಬುದು ಏಕೆ ಗೊತ್ತಾಗಲಿಲ್ಲವೋ ತಿಳಿಯದು. ಕೊನೆಯ ಎರಡು ಅಧ್ಯಾಯಗಳ ಹೊರತಾಗಿ, ಒಳತೋಟಿಯೇ ಇಲ್ಲದೆ ಸಿದ್ಧ ಉದ್ದೇಶಗಳಿಗನುಗುಣವಾಗಿ ವರ್ತಿಸುವ ಪಾತ್ರಗಳಿಂದ ಚಲನೆ ಪಡೆಯುವ 'ಸಾರ್ಥ' ಪೂರಾ ಬಹಿರಂಗವನ್ನೇ ನಂಬಿಕೊಂಡು ಅಂತರಂಗವನ್ನೇ ಕಳೆದುಕೊಂಡಿರುವ ಕೃತಿ. ಇದು ಅಪ್ರಜ್ಞಾಪೂರ್ವಕವಾಗಿ ಪಾಟೀಲರಿಗೆ ಗೊತ್ತಾಗಿಯೋ ಏನೋ, ಈ ಕೃತಿಯು ಎಂಟನೇ ಶತಮಾನದ ಧಾರ್ಮಿಕ ಆವರಣವನ್ನು ವಿಶ್ಲೇಷಿಸುತ್ತದೆ ಎಂದು ಹೇಳಲು ಕೃತಿಯ ಒಳಗಿನ ವಿವರಗಳಿಗಿಂತ (ಇತಿಹಾಸ ಪುಸ್ತಕಗಳಿಂದ ಆಯ್ದ) ಕೃತಿಯ ಹೊರಗಿನ ಮಾಹಿತಿಯನ್ನೇ ಅವಲಂಬಿಸುತ್ತಾರೆ. ಇದು ಸಹಜ ಕೂಡಾ. ಏಕೆಂದರೆ ಧಾರ್ಮಿಕ ಆವರಣದ ವಿಶ್ಲೇಷಣೆಯ ಉದ್ದೇಶವನ್ನೇ ಈ ಕೃತಿ ಹೊಂದಿಲ್ಲ ಅಥವಾ ಅದನ್ನು ಯಾವ ಘಟ್ಟದಲ್ಲೂ ಪ್ರಕಟಿಸಿಲ್ಲ. ಕಾದಂಬರಿಯ ತುಂಬಾ ತುಂಬಿರುವುದು ರಾಜಕಾರಣ - ಧಾರ್ಮಿಕ ರಾಜಕಾರಣ. ಈ ಕೃತಿಯ ನಿರೂಪಕ ಪಾತ್ರದ ನಿರ್ವಹಣೆಯಲ್ಲಿನ ಅಪ್ರಾಮಾಣಿಕತೆಯಲ್ಲೇ ಇದು ಅಂತರ್ಗತವಾಗಿದೆ.

ಈ ನಿರೂಪಕ ಪಾತ್ರವಾದ ನಾಗಭಟ್ಟ ತಾನು ಕಲಿತ ವೈದಿಕ ವಿದ್ಯೆಯನ್ನು ಕೈಬಿಟ್ಟು ತನ್ನ ಗೆಳೆಯ ಅಮರುಕನೆಂಬ ದೊರೆಯ ಸಲಹೆಯ ಮೇರೆಗೆ ಸಾರ್ಥವೆಂಬ ದೇಶಾಂತರ ವ್ಯಾಪಾರ ವಿದ್ಯೆಯ ಮರ್ಮವನ್ನು ಅರಿಯಲು ರಾಜಕೀಯ ಪಾತ್ರ ವಹಿಸಿಕೊಳ್ಳುತ್ತಾನೆ. ಮುಂದೆ ಇವನದು ಬರೀ ರಾಜಕೀಯ ಪಾತ್ರವೇ - ಧರ್ಮದ ಛದ್ಮ ವೇಷದಲ್ಲಿ. ಇಂಥ ವೇಷಧಾರಿಯ ಕಣ್ಣಿನ ಮೂಲಕ ಚಿತ್ರಿತವಾಗುವ ಆವರಣವನ್ನು ಧಾರ್ಮಿಕ ಆವರಣವೆಂದು ಕರೆಯುವುದು ಮತ್ತು "ಧಾರ್ಮಿಕ ಆವರಣವೆಂಬುದು ವ್ಯಕ್ತಿಯೊಬ್ಬನ ಮಾನಸಿಕ ಆರೋಗ್ಯವನ್ನು, ಸಮಾಜ ವ್ಯವಸ್ಥೆಯ ಆರೋಗ್ಯವನ್ನು ಕಾಪಾಡಬೇಕು. ಧಾರ್ಮಿಕ ಆವರಣದ ಕರ್ತವ್ಯವೇ ಇದು. ಭಾರತವೆಂಬ ದೇಶದಲ್ಲಿ - ಎಂಟನೆಯ ಶತಮಾನವೆಂಬ ಕಾಲದಲ್ಲಿ, ತನ್ನ ಕರ್ತವ್ಯವನ್ನು ಯಶಸ್ವಿಯಾಗಿ ನಿರ್ವಹಿಸುವ ಧಾರ್ಮಿಕ ಆವರಣ ಇದ್ದಿತೆ ಎನ್ನುವ ಪ್ರಶ್ನೆಯೊಂದನ್ನು 'ಸಾರ್ಥ' ಎತ್ತುತ್ತದೆ ಮತ್ತು ಅಂದು ಇಂಥ ಧಾರ್ಮಿಕ ಆವರಣವು ಇರಲಿಲ್ಲವೆಂದು ಹೇಳುತ್ತದೆ. ಅಂದಿನ ಧಾರ್ಮಿಕ ಆವರಣವು ನಾಗಭಟ್ಟನನ್ನು ಅವನ ಮಾನಸಿಕ ವಿಪ್ಲವದಿಂದ ರಕ್ಷಿಸಲು ಸಮರ್ಥವಾಗಿರಲಿಲ್ಲ; ಅಂದಿನ ಸಮಾಜವನ್ನು ವಿಪ್ಲವದಿಂದ ರಕ್ಷಿಸಲು ಸಮರ್ಥವಾಗಿರಲಿಲ್ಲ; ಮತ್ತು ಅಂತಿಮವಾಗಿ ಹಿಂದೂಸ್ತಾನವೆಂಬ ದೇಶವನ್ನು ಬಾಹ್ಯ ಆಕ್ರಮಣದಿಂದ ರಕ್ಷಿಸಲು ಸಮರ್ಥವಾಗಲಿಲ್ಲ. 'ಸಾರ್ಥ' ಎತ್ತುವ ಈ ಪ್ರಶ್ನೆಯನ್ನು ಯಾವ ನೆಲೆಯಲ್ಲಿಯೂ ಪರಿಗಣಿಸದೆ, ಭೈರಪ್ಪನೆನ್ನುವವನು ಒಬ್ಬ ಪ್ರತಿಗಾಮಿ ಲೇಖಕ, ಅವನ ಕಾದಂಬರಿಯೆನ್ನುವುದು ಸನಾತನ ಧರ್ಮ ಪ್ರಚಾರದ ಕಗ್ಗ ಎನ್ನುವಂತೆ ಲಂಕೇಶರಂತಹ ಸಂವೇದನಾಶೀಲರು ವಿಮರ್ಶೆ ಬರೆಯಲು ಆರಂಭಿಸಿದರೆ ಹೇಗೆ?" ಎಂದು ಪ್ರಶ್ನಿಸುವ ಪಾಟೀಲರಿಗೆ ಸ್ವತಃ ತಾವು ಹಿಡಿದಿರುವ ಭಯಂಕರ ಸಂವೇದನಾಹೀನ ದಾರಿಯ ಕಲ್ಪನೆ ಇದ್ದಂತಿಲ್ಲ.

ಒಂದು ರಾಷ್ಟ್ರದ ಆರೋಗ್ಯ, ಅದರ ಧಾರ್ಮಿಕ ಆವರಣ, ಅದರ ಕರ್ತವ್ಯ ಎಂದೆಲ್ಲಾ ಬೋಳು ಬೋಳಾಗಿ ಮಾತನಾಡುವುದು ಮತ್ತು ರಾಷ್ಟ್ರದ ಕಲ್ಪನೆಯೇ ಇಲ್ಲದಿದ್ದ ಎಂಟನೆಯ ಶತಮಾನಕ್ಕೆ ಅವನ್ನೆಲ್ಲಾ ಅನ್ವಯಿಸಿ, ಆ ಮೂಲಕ ಬಾಹ್ಯ ಆಕ್ರಮಣದಿಂದ ರಾಷ್ಟ್ರ ರಕ್ಷಣೆಯ ಸಾಮರ್ಥ್ಯದ ಪ್ರಶ್ನೆಯನ್ನೆತ್ತಿ, ಆ ಪ್ರಶ್ನೆಯನ್ನಿಟ್ಟುಕೊಂಡೇ ಆ ಮೂಲಕ ಕೃತಿಯನ್ನು ಚರ್ಚಿಸಹೊರಡಬೇಕೆಂಬ ತೀರ್ಮಾನಕ್ಕೆ ಬರುವುದು ಧರ್ಮ ಮತ್ತು ಇತಿಹಾಸಗಳ ಕಲ್ಪನೆ ಕುರಿತ ಮೂಲ ಸೂಕ್ಷ್ಮಗಳನ್ನೇ ಕಳೆದುಕೊಂಡಿರುವ ಸ್ಥಿತಿ ಎನಿಸುತ್ತದೆ. ಅಷ್ಟೇ ಅಲ್ಲ, ಕೃತಿಯು ಸಾಹಿತ್ಯೇತರ ಉದ್ದೇಶಗಳನ್ನು ಮುಗಮ್ಮಾಗಿ ಒಪ್ಪಿಕೊಂಡಂತೆಯೂ ಆಗುತ್ತದೆ.

ಒಂದುಕಾಲದ ಧಾರ್ಮಿಕ ಸಂಘರ್ಷವನ್ನು ಕಥಿಸುವ ಪ್ರತಿಭೆಗೆ,ಇರುವುದೊಂದೇ ಧರ್ಮ; ಚರಿತ್ರೆಯ ವಾರೆನೋಟಗಳನ್ನು ಗೆಲ್ಲಲಾಗದವನ ದೃಷ್ಟಿಯಲ್ಲಿ ಅದು ವಿಧವಿಧವಾಗಿ ಕಾಣಬಲ್ಲ ಅಪಾಯವಿದೆ ಎಂಬ ಆಧ್ಯಾತ್ಮಿಕ ಎಚ್ಚರವಿರಬೇಕು.ಆಧ್ಯಾತ್ಮಿಕತೆ ಕಳೆದುಕೊಂಡ ಧರ್ಮ ಬರೀ ರಾಜಕಾರಣವಾಗುತ್ತದೆ.ಆದರೆ ತಮ್ಮ ಬಹುತೇಕ ಕಾದಂಬರಿಗಳಲ್ಲಿ ಧರ್ಮವನ್ನು ಅದರ ಆಧ್ಯಾತ್ಮಿಕತೆಯನ್ನು ಕಳಚಿಟ್ಟ ಸ್ಥೂಲತೆಯೊಂದಿಗೇ ಚರ್ಚಿಸುವಮೂಲಕ ಸಹಜವಾಗಿಯೇ,ಸಹೃದಯರ ಹೊರತಾಗಿ ಪಂಡಿತ-ಪಾಮರರಿಬ್ಬರನ್ನೂ ರಂಜಿಸುತ್ತ ಬಂದಿರುವ ಭೈರಪ್ಪನವರು ಈ ಕಾದಂಬರಿಯಲ್ಲಿ ತಮ್ಮ ಚಾರಿತ್ರಿಕ ವಾರೆನೋಟದ ಮೂಲಕ ವೈದಿಕ ಹಾಗೂ ಬೌದ್ಧ ಧರ್ಮಗಳೆರಡನ್ನೂ ಸ್ಥೂಲಗೊಳಿಸಿ ಅನ್ಯಾಯವೆಸಗಿದ್ದಾರೆ.ಈ ವಾರೆನೋಟಕ್ಕೆ ಉಪಕರಣವಾಗಿ ಒದಗಿ ಬಂದಿರುವವನು ನಾಗಭಟ್ಟ.

ಬೆನ್ನೆಲುಬೇ ಇಲ್ಲದ ನಾಗಭಟ್ಟನಿಗೆ ಅನ್ನಿಸಿದ್ದೆಲ್ಲಾ ಇಲ್ಲಿ ಅನುಭವವೆಂಬಂತೆ ನಿರೂಪಿತವಾಗಿ ಕಾದಂಬರಿ ಬೆಳೆಯುತ್ತಾ ಹೋಗುತ್ತದೆ.ಇವನಿಗೆ ಎಲ್ಲ ತತ್ವಗಳೂ ಇರುವುದು 'ಆಗು'ವುದಕ್ಕಲ್ಲ; ಕೇವಲ ರುಚಿಗೆ, ನೆಕ್ಕಲು.ಈ ರುಚಿಗೆ ಬಿದ್ದ ನಾಗಭಟ್ಟ ಸಹಜವಾಗಿಯೇ ವೇದ ವಿದ್ಯೆ, ವಿವಾಹ, ಗೆಳೆತನ,ಸಾರ್ಥ ವಿದ್ಯೆಗಳನ್ನು ನೆಕ್ಕಿದಂತೆಯೇ ಅಭಿನಯ ವಿದ್ಯೆ, ಪ್ರೇಮ ವಿದ್ಯೆ, ಕಾಮವಿದ್ಯೆ, ಧ್ಯಾನ ವಿದ್ಯೆ, ಬೌದ್ಧ ವಿದ್ಯೆ ತಂತ್ರ ವಿದ್ಯೆ ಇತ್ಯಾದಿಗಳನ್ನು ಬರೀ ನೆಕ್ಕುತ್ತ ಹೋಗುತ್ತಾನೆ.ನಾಗಭಟ್ಟ ಹೀಗೆ ಎಲ್ಲವನ್ನು ನೆಕ್ಕುತ್ತ ಹೋಗುವ ಕ್ರಿಯೆ, ಭೈರಪ್ಪನವರು ತಮ್ಮ ಅಧ್ಯಯನ ಶ್ರಮದ ಮೂಲಕ ಕಲೆ ಹಾಕಿರುವ ಈ ವಿವಿಧ ವಿದ್ಯೆಗಳ ಪಾರಿಭಾಷಿಕ ವಿವರಗಳ ಮೂಲಕ ಒಂದು ವಿದ್ವತ್‌ಪ್ರಭೆಯನ್ನು ಪಡೆದು ವೈಚಾರಿಕ ಆಭಾಸವನ್ನುಂಟುಮಾಡುತ್ತದೆ.ಈ ಆಭಾಸದಲ್ಲಿ ಬೌದ್ಧ ಧರ್ಮ ಬರೀ ತರ್ಕದ ಕಗ್ಗಂಟಾಗಿ,ಬುದ್ಧಿ ಕುಶಲತೆಯ ಶಾಸ್ತ್ರವಾಗಿ ಪ್ರತಿಪಾದಿತಗೊಳ್ಳುತ್ತದೆ.ಅದರಲ್ಲಿಯ ಮಹತ್ವದ ಪರಿಕಲ್ಪನೆಗಳಿರಲಿ, ತೀರ್ಥ ಕ್ಷೇತ್ರ ಕೂಡಾ ಮೂಲದಲ್ಲಿ ವೈದಿಕ ಧರ್ಮಕ್ಕೆ ಸೇರಿಬಿಡುತ್ತವೆ.ಬೌದ್ಧ ಗುರುಗಳು ವಾಣಿಜ್ಯ ಲಾಭಕ್ಕಾಗಿ ವಣಿಕರನ್ನು, ಮತಾಂತರಕ್ಕಾಗಿ ಜನಸಾಮಾನ್ಯರನ್ನು ಒಲಿಸಿಕೊಳ್ಳಲು ಹೊಂಚುಹಾಕುತ್ತಾರೆ. ಇತಿಹಾಸ ಪ್ರಸಿದ್ಧ ನಾಲಂದ ವಿಶ್ವವಿದ್ಯಾನಿಲಯ ಬೌದ್ಧೇತರ ಧರ್ಮಗಳನ್ನು ಹೀಗಳೆಯುವ ಪಾಖಂಡಿ ಬೌದ್ಧರ ಕೇಂದ್ರವಾಗುತ್ತದೆ.ಮಾರುವೇಷದಲ್ಲಿ ಬೌದ್ಧ ಧರ್ಮವನ್ನು ಕಲಿಯಲು ಬಂದ ಕುಮಾರಿಲ ಭಟ್ಟ ಮಹಾ ಗೌರವಸ್ಥ ಘನಪಂಡಿತನಾದರೆ,ಅವನಿಗೆ ಪಾಠ ಹೇಳುವ ಬೌದ್ಧಗುರುಗಳು ಕುಹಕ ಕಟೂಕ್ತಿಗಳ ಹೀನ ಪಂಡಿತರಾಗುತ್ತಾರೆ.ಇನ್ನು, ಇಂದಿನ ಅಗ್ರಹಾರದ ಇಬ್ಬರು ಬ್ರಾಹ್ಮಣ ಪಂಡಿತರುಗಳ ನಡುವಣ ವಾದದ ಮಟ್ಟಕ್ಕಿಳಿಸಲ್ಪಟ್ಟಿರುವ,ಮಂಡನಮಿಶ್ರ ಹಾಗೂ ಶಂಕರ ಯತಿಗಳ ನಡುವಣ ವಾದದ ಭಾಗವಾಗಿ ಬರುವ ಈ ಮಾತುಗಳು : ''...ಬುದ್ಧನು ಹಿಂಡುಗಟ್ಟಳೆ ಶಿಷ್ಯರಿಗೆ ತಲೆ ಬೋಳಿಸಿ, ಕಾಷಾಯ ಉಡಿಸಿ ಸಂನ್ಯಾಸ ದೀಕ್ಷೆ ಕೊಟ್ಟ.ದುಡಿದು ತಿನ್ನುವುದನ್ನು ತಪ್ಪಿಸಿ ಭಿಕ್ಷೆಯಿಂದ ಜೀವಿಸುವಂತೆ ಹೇಳಿ ಅವರಿಗೆಲ್ಲ ಭಿಕ್ಷುಗಳೆಂದು ನಾಮಕರಣ ಮಾಡಿದ.ಅವರು ಹೀಗೆಯೇ ಎಂಟೂ ದಿಕ್ಕುಗಳಿಗೆ ಹರಡಿ ಇನ್ನೂ ಸಾವಿರಾರು ಸಂಸಾರಿಗಳನ್ನು ಭಿಕ್ಷುಕರನ್ನಾಗಿ ಮಾಡಿದರು.ಭಿಕ್ಷುಕರ ಸಂಖ್ಯೆ ಹೆಚ್ಚಿರುವ ನಾಡಿನಲ್ಲಿ ಸುಭಿಕ್ಷೆ ಎಲ್ಲಿ ಬರಬೇಕು?.... ಆಗಾಗ್ಗೆ ಅನಾವೃಷ್ಟಿ ,ಸರಿಯಾದ ಕೃಷಿ ಇಲ್ಲ, ಬರ, ಉಪವಾಸದ ಸಾವುಗಳು.''

ಹೀಗೆ ಚರಿತ್ರೆಯನ್ನು ನಿರ್ಲಜ್ಜವಾಗಿ ಏಕಪಕ್ಷೀಯಗೊಳಿಸಿ 'ಪುರಾಣ' ಬರೆಯುವುದನ್ನು ಸಾಹಿತ್ಯ ಎಂದು ಕರೆಯಬೇಕೆ? ಇದರ ಕಲಾತ್ಮಕತೆಯನ್ನು ಪರಿಶೀಲಿಸಲು ಸಾಹಿತ್ಯಿಕ ಪರಿಕರಗಳು ಬೇಕೆ? ಅನ್ಯ ಮನಃಪ್ರವೇಶ, ಪರಕಾಯ ಪ್ರವೇಶದಂತಹ ಅಸಾಮಾನ್ಯ ಸಂಗತಿಗಳಿಂದ ಚಲನೆ ಪಡೆಯುವ ಕೃತಿ

ಚಾರಿತ್ರಿಕ ವಾಸ್ತವ ಶೈಲಿಯನ್ನು ಅಳವಡಿಸಿಕೊಳ್ಳುವುದರ ಹಿಂದಿರುವ ಉದ್ದೇಶವಾದರೂ ಏನು? ಹಾಗೂ ಈ ಶೈಲಿಗೆ ಅದು ಎಷ್ಟರಮಟ್ಟಿಗೆ ನಿಷ್ಠವಾಗಿರಲು ಸಾಧ್ಯ? ಈ ಪ್ರಶ್ನೆಗಳನ್ನು ಬಿಟ್ಟು, ಈ ಕೃತಿಯಲ್ಲಿ ಧಾರ್ಮಿಕ ಆವರಣವು ಇಡಿಯಾಗಿ ಚರ್ಚೆಗೆ ಒಳಪಡುತ್ತದೆ ಎನ್ನುತ್ತ, ಕೃತಿಯ ತರ್ಕ ಹಾಗೂ ಉದ್ದೇಶಗಳಿಗೆ ಸಂಬಂಧಪಡದ ಚಿಲ್ಲರೆ ವಿವರಗಳನ್ನು ಪಾಟೀಲರು ಉದಾಹರಿಸುವುದನ್ನು ಎಂತಹ ವಿವೇಚನೆ ಎಂದು ಕರೆಯುವುದು?

ಲಂಕೇಶರ ವಿಮರ್ಶಾ ರಾಜಕಾರಣದ ಗುಂಗನ್ನು ಬದಿಗಿಟ್ಟು 'ಸಾರ್ಥ'ವನ್ನು ನಿರ್ವಿಕಾರವಾಗಿ ಓದಿದ್ದರೆ ಪಾಟೀಲರಿಗೆ ಖಂಡಿತಾ ಗೊತ್ತಾಗುತ್ತಿತ್ತು, ಈ ಕಾದಂಬರಿಯ ತುಂಬಾ ಅನುರಣಿಸುವುದು ಭಾರತದಲ್ಲಿ ಧಾರ್ಮಿಕ ಏಕಾಧಿಪತ್ಯವನ್ನು ಮುರಿದ ಬೌದ್ಧ ಧರ್ಮದ ಮೇಲಿನ ಸಿಟ್ಟು ಎಂದು. ವಿಷಾದವೇ ಇಲ್ಲದ ಈ ಸಿಟ್ಟು ಅವನತಿಗೊಂಡಿದ್ದ ಬೌದ್ಧ ಧರ್ಮದ ರೂಪವನ್ನಷ್ಟೇ ಚಿತ್ರಿಸುವ ಪಾಖಂಡಿತನವನ್ನು ಸೃಷ್ಟಿಮಾಡಿದೆ. ವೈದಿಕ ಧರ್ಮ ಅವನತಿಗೊಂಡು ಬೌದ್ಧ ಧರ್ಮ ವ್ಯಾಪಿಸಲು ನಿಜವಾದ ಕಾರಣಗಳಾದರೂ ಏನು ಎಂದು ನಿಷ್ಠುರವಾಗಿ ಪ್ರಶ್ನಿಸಿಕೊಳ್ಳುವ ವಿವೇಚನೆಯನ್ನೇ ಹೊಂದಿರದ ಈ ಕೃತಿ, ಇದಕ್ಕೆ ಕಂಡುಕೊಂಡಿರುವ ಸುಲಭದ ಉತ್ತರಗಳು :''ಬುದ್ಧ ಕ್ಷತ್ರಿಯನಾದುದರಿಂದ ಕ್ಷತ್ರಿಯ ರಾಜರುಗಳು ಬೌದ್ಧ ಧರ್ಮದಲ್ಲಿ ಅಭಿಮಾನ ತಾಳಿ ಅದನ್ನು ಸ್ವೀಕರಿಸಿ ಪ್ರೋತ್ಸಾಹಿಸಿದರು ... ಸುಸಂಘಟಿತವಾದ ಪ್ರಚಾರಕ ಸಂಘವು ಪರಿಸ್ಥಿತಿಯನ್ನು ಬಳಸಿಕೊಂಡು ಜನರನ್ನು ಪರಿವರ್ತಿಸುತ್ತಿತ್ತು'', ''ರಾಜಾಶ್ರಯ ಹಾಗೂ ವೈಶ್ಯಾಶ್ರಯಗಳಿಂದ ಬೌದ್ಧ ಧರ್ಮ ಬೆಳೆಯಿತು'', ''ವೇಶ್ಯೆಯರು ಪಾಪ ಮಾರ್ಗದಿಂದ ಸಂಪತ್ತು ಮಾಡಿದರೆಂದು ಬುದ್ಧ ಅದನ್ನು ಸಂಘಕ್ಕೆ ದಾನ ಮಾಡಿಸಿದ'' ಇತ್ಯಾದಿ ...ಇತ್ಯಾದಿ ...

ಈ ಮಟ್ಟದ ವೈಚಾರಿಕತೆಯನ್ನೂ ಕಲಾತ್ಮಕತೆಯನ್ನೂ ಪ್ರಕಟಿಸುವ ಈ ಕಾದಂಬರಿಯ ಮುಖ್ಯ ಹಳಹಳಿಕೆ :''ಅಶೋಕ ಚಕ್ರವರ್ತಿಯಿಂದ ಹಿಡಿದು ಇದುವರೆಗೆ ಬಹಳ ಜನ ಬೌದ್ಧರಾಜರು ಆಳಿ ಭರತಖಂಡ ನಿರ್ವೀರ್ಯವಾಗಿದೆ''. ಈ ಹಳಹಳಿಕೆ , ಅಶ್ವಮೇಧ ಯಾಗದ ಮೂಲಕ ವೀರ್ಯ ಪ್ರಚೋದನೆಯ ಪ್ರಯತ್ನಗಳು ವೈದಿಕ ದೊರೆಗಳ ಆಲಸ್ಯ , ಬೌದ್ಧರ ಸಂಚು ಹಾಗೂ ಶಂಕರಾಚಾರ್ಯರ ಸಂನ್ಯಾಸ ಧರ್ಮ ಮತ್ತು ಜ್ಞಾನಮಾರ್ಗ ಪ್ರಚಾರಗಳಿಂದಾಗಿ ವಿಫಲಗೊಂಡು ಭರತಖಂಡವು, 'ಒಬ್ಬ ಹೆಣ್ಣು ಸಿಕ್ಕರೆ ಹೊತ್ತುಕೊಂಡು ಹೋಗಿ ಅತ್ಯಾಚಾರ ಮಾಡುವ ' ಮ್ಲೇಚ್ಛಜನರ ಕೈಗೆ ಸಿಕ್ಕು ವರ್ಣಸಂಕರಕ್ಕೆ ಈಡಾಗುತ್ತದೆಂಬುದನ್ನು ವಿಷಾದದಿಂದ ಚಿತ್ರಿಸುವ ಮೂಲಕ ತನ್ನ 'ಸಾರ್ಥಕ್ಯ 'ವನ್ನು ಕಂಡುಕೊಳ್ಳುತ್ತದೆ. ಅಲ್ಲದೆ, ಅವಿವೇಕದ ಪರಮಾವಧಿಯಂತೆ ಕಾಣುವ ಕುಮಾರಿಲ ಭಟ್ಟನ ತುಷಾನಲ ಪ್ರವೇಶದ ಘಟನೆ ವೈದಿಕ ಧರ್ಮದ ವೀರ್ಯ ಭಾವದ ಅತ್ಯುಚ್ಚ ಉದಾಹರಣೆಯೆಂಬಂತೆ ವೈಭವೀಕರಣಗೊಂಡು, ಅದು ಈ ಕಾದಂಬರಿಯ ಮುಖ್ಯ ಕಾಳಜಿಯಾದ ವೀರ್ಯಪ್ರಚೋದನೆಯ ಕಲ್ಪನೆ ಎಂಥಾ ವಿಕ್ಷಿಪ್ತತೆಯಿಂದ ಕೂಡಿದೆ ಎಂಬುದರ ಸೂಚನೆಯನ್ನೂ ನೀಡುತ್ತದೆ.

ಹೀಗೆ ಇತಿಹಾಸ , ಧರ್ಮ, ಕಾದಂಬರಿ ಪ್ರಕಾರ - ಈ ಮೂರನ್ನೂ ಒಟ್ಟಿಗೆ ವಿಕ್ಷಿಪ್ತಗೊಳಿಸಿರುವ ಈ ಕೃತಿಯನ್ನು ಮೆಚ್ಚಿಕೊಳ್ಳಲು ರಾಘವೇಂದ್ರ ಪಾಟೀಲರು ವಿಮರ್ಶಾ ಮೀಮಾಂಸೆಯ ಕಸರತ್ತು ಮಾಡಬೇಕಾಗಿ ಬಂದಿರುವುದು ಸಹಜವೇ ಆಗಿದೆ .

- ಡಿ.ಎಸ್.ನಾಗಭೂಷಣ

ಸಂಪಾದಕರ ಟಿಪ್ಪಣಿಗಳು ...

ಸಾಹಿತ್ಯ ಸಂವಾದದ **ಸ್ವರ್ಣ ಸಂಚಿಕೆ**ಯನ್ನು ನಿಮ್ಮ ಕೈಯಲ್ಲಿಡಲು ಸಂತೋಷವಾಗುತ್ತಿದೆ. ಸಂವಾದದ ಕಳೆದ ೪೯ ಸಂಚಿಕೆಗಳನ್ನು ನೀವು ನೋಡಿರುವಿರಿ. ಈ ಸಂಚಿಕೆಗಳು ಕಳೆದ ಹದಿನಾಲ್ಕು ವರ್ಷಗಳಿಂದ ಕನ್ನಡದ ಸಾಹಿತ್ಯಿಕ -ಸಾಂಸ್ಕೃತಿಕ ಸಂವಾದಗಳನ್ನು ದಾಖಲಿಸುತ್ತಾ ಬಂದಿವೆ. ಕನ್ನಡದ ಹಿರಿಯ-ಕಿರಿಯ ಅತ್ಯುತ್ತಮ ಲೇಖಕರೆಲ್ಲ ಸಂವಾದಕ್ಕೆ ಬರೆಯುತ್ತಾ ಬಂದಿದ್ದಾರೆ. ಹೀಗೆ ಕಳೆದ ಹದಿನಾಲ್ಕು ವರ್ಷಗಳಲ್ಲಿ ಸಂವಾದ ಕನ್ನಡ ಸಂಸ್ಕೃತಿಯ ಬಹುಮುಖ ಅಭಿವ್ಯಕ್ತಿಯ ಸಾಧನವಾಗಿ ಬೆಳೆಯುವ ಆಶಯ ವ್ಯಕ್ತಪಡಿಸಿದೆ. ಚಂದಾದಾರರ/ ಓದುಗರ/ ಲೇಖಕರ ಬೆಂಬಲವಿಲ್ಲದೆ ಯಾವ ಪತ್ರಿಕೆಯೂ ಮುನ್ನಡೆಯಲು ಸಾಧ್ಯವಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿಯೇ. ಹಾಗಾಗಿ ಹದಿನಾಲ್ಕು ವರುಷಗಳ ಕಾಲ ಸಂವಾದವನ್ನು ಜೀವಂತವಾಗಿರಿಸಿದ ಕೀರ್ತಿ ಸಂವಾದದ ಓದುಗ/ ಚಂದಾದಾರರಿಗೆ/ ಲೇಖಕರಿಗೆ ಸಲ್ಲುತ್ತದೆ.

ಸಂವಾದ ಶುರುವಾದದ್ದು ೧೯೮೫ರಲ್ಲಿ. ಆರೂ ಜನ ಸಂಪಾದಕರು ಸಹಭಾಗಿತ್ವದಲ್ಲಿ ಸಾಮೂಹಿಕವಾಗಿ ಕೆಲಸ ನಿರ್ವಹಿಸುವುದು ಅಷ್ಟು ಸುಲಭವಾಗಿದ್ದರೆ ಆ ಆರೂ ಜನರು ಈಗಲೂ ಸಂವಾದದಲ್ಲಿ ಇರಬೇಕಿತ್ತು. ಅಶಿಸ್ತು, ಆಲಸ್ಯ, ಅಹಂ, ಅರಾಜಕ ಸಾಹಿತ್ಯ ವಾತಾವರಣ ಇವೆಲ್ಲವುಗಳು ಜತೆಯಾಗಿ ಕೆಲಸ ಮಾಡಬೇಕೆನ್ನುವ ನಮ್ಮ ಉದ್ದೇಶಕ್ಕೆ ಭಂಗ ತಂದವು. ವೈಯಕ್ತಿಕ ಸ್ನೇಹ ಮುಕ್ಕಾಗದಿದ್ದರೂ ಸಂವಾದ ಮಾತ್ರ ನರಳಿತು. ಸಂವಾದದ ಮೇಲಣ ಪ್ರೀತಿಯೇ ಈಗ ನಮ್ಮಲ್ಲಿ ಮೂವರನ್ನು ಮತ್ತೆ ಒಗ್ಗೂಡಿಸಿದೆ ಎಂದು ಹೇಳಬಹುದು.

ಸಂವಾದವನ್ನು ೧೯೮೫ರಲ್ಲಿ ಶುರುಮಾಡಿದಾಗ ಒಂದೆರಡು ವಿಷಯಗಳ ಬಗ್ಗೆ ನಾವು ಸ್ಪಷ್ಟವಾಗಿದ್ದೆವು. ಒಂದು ಗುಂಪಾಗಿ ಕೆಲಸ ಮಾಡಬೇಕೆಂಬ ಆಶಯ ನಮ್ಮದಾಗಿದ್ದರೂಗುಂಪಿನ ಬಲ ವರ್ಧಿಸಿದ ಮಾತ್ರಕ್ಕೆ ಮತಿಯನ್ನು ಕಳೆದುಕೊಳ್ಳಬಾರದೆನ್ನುವ ನಿಲುವು ನಮ್ಮದಾಗಿತ್ತು. 'ಗುಂಪಿನ ಸನ್ನಿ' ಬಹಳ ಅಪಾಯಕಾರಿ. ಈ ವಿಷಯ ಪದೇ ಪದೇ ನಮ್ಮಲ್ಲಿ ಚರ್ಚೆಗೆ ಬರುತ್ತಿತ್ತು : ಸ್ಥಾಪಿತ ಹಿತಾಸಕ್ತಿಗಳ ಗುಂಪಿನ, ಜಾತಿಯ ಮುಖವಾಣಿಯಾಗಿ ಪತ್ರಿಕೆಯನ್ನು ನಡೆಸದಿರುವುದು; ಯಾವುದೇ ಸ್ಟಾರ್ ಲೇಖಕರ ಮರ್ಜಿ ಹಿಡಿಯದಿರುವುದು; ಯಾವುದೇ ಸಾಹಿತ್ಯಿಕ ಲಾಬಿಗೆ ಮರುಳಾಗದೇ ಇರುವುದು; ವೈಯಕ್ತಿಕ ಹಿತಾಸಕ್ತಿಗಾಗಿ ಸಂವಾದವನ್ನು ಬಳಸಿಕೊಳ್ಳದೇ ಇರುವುದು; ಯಾವುದೇ ಪೂರ್ವಾಗ್ರಹವಿಲ್ಲದೆ ಪತ್ರಿಕೆಯ

ನಿಲುವನ್ನು ಪಕ್ಷಪಾತವಿಲ್ಲದೆ ಸ್ಪಷ್ಟಗೊಳಿಸುವುದು, ಇತ್ಯಾದಿ ... ಯಾವುದೇ ಜಾತಿಗೆ, ಗುಂಪಿಗೆ ಸೇರದೇ 'ಗುಂಪಾಗಿ' ಕೆಲಸ ಮಾಡಿದರೂ ಅದರ ಸನ್ನಿಗೆ ಒಳಗಾಗದೇ, ಸರ್ವ ಸ್ವತಂತ್ರ ಸದುದ್ದೇಶದ, ಸದಭಿರುಚಿಯ ಸಾಹಿತ್ಯ ಪತ್ರಿಕೆ ತರಬೇಕೆಂಬುದೇ ನಮ್ಮ ಆಶಯವಾಗಿದ್ದಿತು. ಸಂವಾದದ ಆಶಯಗಗಳ ಸೋಲು ಗೆಲುವುಗಳೇನೇ ಇರಲಿ ಅದು ಪ್ರಮುಖವಾಗಿ ನಮ್ಮ ನಮ್ಮಲ್ಲೇ ಜಾತಿಗಳನ್ನು, ವೈಯಕ್ತಿಕ ಸಾಹಿತ್ಯಿಕ ಒಲವು ನಿಲುವುಗಳನ್ನು ಮೀರಿ ಪರಸ್ಪರ ವಿಶ್ವಾಸ -ಸ್ನೇಹ -ನಂಬಿಕೆಗಳನ್ನು ಗಟ್ಟಿಗೊಳಿಸುವುದರಲ್ಲಿ ಸಹಕಾರಿಯಾಯಿತು. ಆ ಮೀರುವಿಕೆ ಸಹಜವಾಗಿಯೇ ಸಂವಾದದಲ್ಲಿ ಪ್ರತಿಫಲನಗೊಂಡಿತು. ಸಂವಾದದ ಸಾಹಿತ್ಯ ವಿಮರ್ಶೆಯ ಕಾಲಂಗಳಾದ 'ಹೊಸ ಓದು' ಮತ್ತು 'ಮೊದಲ ನೋಟ'ಗಳೇ ಇದಕ್ಕೆ ಸಾಕ್ಷಿ.

ಒಂದು ಕಾಲದಲ್ಲಿ ಸಂವಾದಕ್ಕೆ ಹತ್ತಿರ ಹತ್ತಿರ ಒಂದು ಸಾವಿರದಷ್ಟು ಚಂದಾದಾರರಿದ್ದರು. ಪತ್ರಿಕೆ ಹೊರತಂದ 'ಆಲನಹಳ್ಳಿ ಕೃಷ್ಣ', 'ಮಾಸ್ತಿ', 'ಮಹಿಳಾ ಸಾಹಿತ್ಯ', 'ಕಾವ್ಯ' ವಿಶೇಷ ಸಂಚಿಕೆಗಳು ಸಂವಾದ ಪ್ರಕಾಶನಕ್ಕೆ ಆತ್ಮವಿಶ್ವಾಸ ಹಾಗೂ ಆರ್ಥಿಕ ಚೈತನ್ಯ ತಂದುಕೊಟ್ಟವು. ತದನಂತರ ಚಂದಾದಾರರ ಸಂಖ್ಯೆಯಲ್ಲಿ ಏರು ಪೇರಿದ್ದರೂ ನಷ್ಟವಿಲ್ಲದಂತೆ ಸಂವಾದವನ್ನು ನಡೆಸಿಕೊಂಡು ಹೋಗುವಷ್ಟು ಚಂದಾದಾರರು ಈಗಲೂ ಇದ್ದಾರೆ. ಶ್ರೇಷ್ಠತೆಯ ವ್ಯಸನ ನಮಗಿಲ್ಲವಾದರೂ ಬರೆಹಗಳಲ್ಲಿ ವ್ಯಕ್ತವಾಗುವ ವಿಚಾರಗಳ ಮೌಲಿಕತೆಯೇ ಅದರ ಪ್ರಕಟಣೆಗೆ ಮಾನದಂಡವಾಗಿರುವುದರಿಂದ ಹಲವಾರು ಬರೆಹಗಾರರನ್ನು -ಚಂದಾದಾರರನ್ನು ನಾವು ಕಳೆದುಕೊಂಡಿದ್ದೇವೆ. ದೊಡ್ಡ ಲೇಖಕರ ಕೆಟ್ಟ ಲೇಖನಗಳನ್ನು ಪ್ರಕಟಿಸಿದ ಹಾಗೂ ಪ್ರತಿಭಾವಂತ ಕಿರಿಯರ ಒಳ್ಳೆಯ ಬರೆಹಗಳನ್ನು ತಿರಸ್ಕರಿಸಿದ ದಾಖಲೆ ಸಂವಾದದಲ್ಲಿಲ್ಲ. ಅನೇಕ ಬಾರಿ ಪುಸ್ತಕ ವಿಮರ್ಶೆ, ಲೇಖನಗಳ ಪ್ರಕಟಣೆಗೆ ಸಂಬಂಧಿಸಿದಂತೆ ಸಂವಾದ ಬಳಗ ಇರಿಸುಮುರಿಸು ಎದುರಿಸಬೇಕಾದ ಸಂದರ್ಭಗಳು ಬಂದಿವೆ. ಆದರೆ ನಮ್ಮ ಬಳಗದ ಸದುದ್ದೇಶವನ್ನು ಅರಿತ ಲೇಖಕರು ಈಗಲೂ ಸಂವಾದದ ಜೊತೆಗಿರುವುದರಿಂದ ಸಂವಾದ ಉಳಿಯಲು ಸಾಧ್ಯವಾಗಿದೆ.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಒಂದೋ ಎರಡೋ ಸಾಹಿತ್ಯ ಪತ್ರಿಕೆಗಳು ಈಗಲೂ ಸಣ್ಣದಾಗಿ ಉಸಿರಾಡುತ್ತಿವೆ. ಮಿಕ್ಕವು ಎಂದೋ ಜೀವ ಕಳೆದುಕೊಂಡಿವೆ. ಇದು ಒಟ್ಟಾರೆ ಸದ್ಯದ ಕನ್ನಡ ಸಾಹಿತ್ಯ ವಾತಾವರಣದ ದುಸ್ಥಿತಿಯನ್ನೇ ಬಿಂಬಿಸುತ್ತದೆ. ಕನ್ನಡದ ಅಸಂಖ್ಯ ಸಾಹಿತ್ಯ ಕೃತಿಗಳು ನಮ್ಮ ಮನಸ್ಸನ್ನು ತಿದ್ದಿ, ವ್ಯಕ್ತಿತ್ವವನ್ನು ಬೆಳೆಸಿ, ನಮ್ಮ ಜೀವಕ್ಕೆ ಹೊಸ ಚೈತನ್ಯ, ಜೀವಿತಕ್ಕೆ ಹೊಸ ಅರ್ಥ ಕೊಟ್ಟಿವೆ. ಹಿಂದಣ ಹಿರಿಯರು ಸಾಹಿತ್ಯ ಪತ್ರಿಕೆಗಳ ಮೂಲಕ ನಮಗೆ ಏನನ್ನು ತಲುಪಿಸಿದರೋ ಅದನ್ನೇ ಸಂವಾದದ ಮೂಲಕ ನಾವು ಮುಂದಿನ ಪೀಳಿಗೆಗೆ ಮರಳಿ ನೀಡಲು ಪ್ರಯತ್ನಿಸಿದ್ದೇವೆ. ಕನ್ನಡ ಸಾಹಿತ್ಯ ಪತ್ರಿಕೆಗಳ ಇತಿಹಾಸದಲ್ಲಿ ಸಂವಾದದ ಸ್ಥಾನಮಾನವೇನು? ... ನಮಗೆ ತಿಳಿಯದು.

ಹದಿನಾಲ್ಕು ವರುಷಗಳ ನಂತರವೂ ಸಂವಾದ ಉಳಿದಿರುವುದರಿಂದ ನಮ್ಮ ಉದ್ದೇಶಕ್ಕೆ ಸಫಲತೆ ತಾನಾಗಿಯೇ ಒದಗಿ ಬಂದಿದೆ. ಇದೋ ... ಐವತ್ತನೆಯ ಸಂಚಿಕೆ ನಿಮ್ಮ ಮುಂದಿದೆ.

–ಸವಿತಾ ನಾಗಭೂಷಣ

ಪುಸ್ತಕ ಸ್ವೀಕಾರ :

೧.ಒಂದು ಊರಿನ ಕಥೆ (ಕಾದಂಬರಿ) ಲೇ:ಪೊಟ್ಟೆಕ್ಕಾಟ್ ಎಸ್.ಕೆ. ಅನು:ಕೆ.ಕೆ.ನಾಯರ್ ಮತ್ತು ಅಶೋಕ ಕುಮಾರ್ ಪುಟ:೭೭೮ ಬೆಲೆ:ರೂ.೩೦೦/-

೨.ನಿಶಿ ಕುಟುಂಬ (ಕಾದಂಬರಿ) ಲೇ:ಮನೋಜ್ ಬಸು ಅನು:ಮೀರಾ ಚಕ್ರವರ್ತಿ ಪುಟ:೭೨೪ ಬೆಲೆ:ರೂ.೩೦೦/-

೩.ದುರ್ದಮ್ಯ (ಕಾದಂಬರಿ) ಲೇ:ಗಂಗಾಧರ ಗಾಡಗೀಳ ಅನು:ವಸಂತ ದಿವಾಣಜಿ ಪುಟ:೯೬೬ ಬೆಲೆ:ರೂ.೩೦೦/-

೪.ಆವೇಳೆ (ಕಾದಂಬರಿ) ಲೇ:ಬಿಮಲ್ ಕರ್ ಅನು:ಗೀತಾ ವಿಜಯಕುಮಾರ್.ಪುಟ:೪೩೬ ಬೆಲೆ:ರೂ.೨೦೦/-

೫.ತೆಲುಗು ಕಥೆ ಸಂ:ಡಿ.ರಾಮಲಿಂಗಂ ಅನು:ಕುಂ.ವೀರಭದ್ರಪ್ಪ ಪುಟ:೩೯೪ ಬೆಲೆ:ರೂ.೨೦೦/-

೬.ಮುದ್ರಾಮಂಜೂಷವು ಲೇ:ಕೆಂಪುನಾರಾಯಣ ಸಂ:ಟಿ.ವಿ.ವೆಂಕಟಾಚಲಯ್ಯ ಶಾಸ್ತ್ರಿ ಪುಟ:೩೫೧ ಬೆಲೆ:ರೂ.೨೦೦/-

೭.ಭಗವಾನ್ ಬುದ್ಧ ಲೇ:ಧರ್ಮಾನಂದ ಕೋಸಂಬೀ ಅನು:ಆದ್ಯ ರಂಗಾಚಾರ್ಯ ಪುಟ:೩೪೪ ಬೆಲೆ:ರೂ.೨೦೦/

೮.ಋಕ್ಸಂಹಿತಾಸಾರ ಲೇ:ಜಿ.ಎನ್.ಚಕ್ರವರ್ತಿ ಪುಟ:೫೭೬ ಬೆಲೆ:ರೂ.೨೫೦/-

೯.ಜನಪದ ಮತ್ತು ಬುಡಕಟ್ಟು ಗೀತೆಗಳು ಸಂ:ಕೃಷ್ಣಮೂರ್ತಿ ಹನೂರು ಪುಟ:೨೫೦ ಬೆಲೆ:ರೂ.೧೦೦/-

ಭಾರತೀಯ ಸಾಹಿತ್ಯ ನಿರ್ಮಾಪಕರು ಮಾಲಿಕೆಯ ಪುಸ್ತಕಗಳು : ಬೆಲೆ :ಪ್ರತಿಯೊಂದಕ್ಕೆ ರೂ.೨೫ /-

೧೦.ಆನಂದಕಂದ ಲೇ:ರಾಘವೇಂದ್ರ ಪಾಟೀಲ

೧೧.ಮುದ್ದಣ ಲೇ:ಎಂ.ವಿ.ಸೀತಾರಾಮಯ್ಯ

೧೨.ಬಸವರಾಜ ಕಟ್ಟೀಮನಿ ಲೇ:ಮಾಲತಿ ಪಟ್ಟಣಶೆಟ್ಟಿ

೧೩.ಮಧುರಚೆನ್ನ ಲೇ:ಗುರುಲಿಂಗ ಕಾಪಸೆ

೧೪.ಆಲೂರ ವೆಂಕಟರಾವ್ ಲೇ:ವ.ಹುಯಿಲಗೋಳ

೧೫.ಅನುಪಮಾ ನಿರಂಜನ ಲೇ:ಡಾ.ವಿಜಯಾ ದಬ್ಬೆ

೧೬.ಆನಂದೊರಾಮ್ ಬರುವಾ ಲೇ:ಬಸ್ವನಾರಾಯಣ ಶಾಸ್ತ್ರಿ/ವಿ.ನಾಗರಾಜರಾವ್

೧೭.ಪಮ್ಮಲ್ ಸಂಬಂಧ ಮೊದಲಿಯಾರ್ ಲೇ:ಎ.ಎನ್.ಪೆರುಮಾಳ್/ಕೆ.ಜಯರಾಮನ್

೧೮.ನಿರಾಲಾ ಲೇ:ಪರಮಾನಂದ ಶ್ರೀವಾಸ್ತವ/ಧರಣೇಂದ್ರ ಕುರಕುರಿ

೧೯.ಕಾಕಾ ಕಾಲೇಲ್‌ಕರ್ ಲೇ:ವಿಷ್ಣು ಪ್ರಭಾಕರ್/ಎಸ್.ವಿ.ಶ್ರೀನಿವಾಸರಾವ್

೨೦.Triveni by C.N.Ramachandran

೨೧.Vinayaka Krishna Gokak by Surendranath Minajagi

(ಮೇಲಿನ ಎಲ್ಲ ಪುಸ್ತಕಗಳ ಪ್ರಕಾಶಕರು : ಸಾಹಿತ್ಯ ಅಕಾದೆಮಿ,ನವದೆಹಲಿ)

೨೨.ಆತ್ಮ ಪ್ರಕಾಶ (ಕಾದಂಬರಿ) ಲೇ:ಸುನೀಲ್ ಗಂಗೋಪಾಧ್ಯಾಯ ಅನು:ಗೀತಾ ವಿಜಯಕುಮಾರ್ ಪುಟ:೨೧೬ ಬೆಲೆ:ರೂ೬೦/-

೨೩.ನಿಮ್ಮ ಆಹಾರ ಮತ್ತು ನೀವು ಲೇ:ಕೆ.ಟಿ.ಅಚ್ಚಯ್ಯ ಅನು:ಡಾ.ಎಂ.ಎನ್ .ಮಧ್ಯಸ್ಥ ಪುಟ:೧೨೦ ಬೆಲೆ:ರೂ.೩೦/-

೨೪.ಮೋಸೂಮುಗಳು ಲೇ.ಪಿ.ಕೆ.ದಾಸ್ ಅನು:ಡಾ.ಕೆ.ಶಿವರಾಮ ಕಾರಂತ ಪುಟ :೨೩೪ ಬೆಲೆ :ರೂ.೫೦/-

(ಈ ಮೂರೂ ಪುಸ್ತಕಗಳ ಪ್ರಕಾಶಕರು :ನ್ಯಾಶನಲ್ ಬುಕ್ ಟ್ರಸ್ಟ್ ,ಇಂಡಿಯಾ -ನವದೆಹಲಿ.)

೨೫.ತಮಂಧದ ಕೇಡು (ಕಥಾಸಂಕಲನ) ಲೇ:ಅಮರೇಶ ನುಗಡೋಣಿ ಪ್ರ. ಕನ್ನಡ ಸಂಘ, ಕ್ರೈಸ್ಟ ಕಾಲೇಜ್, ಬೆಂಗಳೂರು ಪುಟ:೧೯೫ ಬೆಲೆ:ರೂ.೬೦/-

೨೬.ಡುಂಡಿರಾಜರ ಆಯದ ಕವನಗಳು ಪ್ರ:ಹಾಸ್ಯಸಂಘ ಕುಂದಾಪುರ ಪುಟ:೧೪೪ ಬೆಲೆ.ರೂ.೪೦/-

೨೭.ನಮ್ಮಂಗಳದ ಹರಳುಗಳು (ಕವನಗಳು) ಲೇ:ಡಾ .ಅರಕಲಗೂಡು ನೀಲಕಂಠಮೂರ್ತಿ ಪ್ರ.ಚಿಗುರು ಸಾಹಿತ್ಯ ಬಳಗ,ಮೈಸೂರು ಪುಟ: ೬೩ ಬೆಲೆ:ರೂ೫೦/-

೨೮.ಚಿತ್ರಾಂತರಂಗ (ಕಲಾವಿಮರ್ಶೆ) ಲೇ:ಶಂಕರ ಪಾಟೀಲ ಪ್ರ. ಪ್ರಗತಿ ಪ್ರಕಾಶನ ದಾವಣಗೆರೆ ಪುಟ:೧೨೩ ಬೆಲೆ:ರೂ.೮೦/-

೨೯.ಅಟಲ್ ಬಿಹಾರಿ ವಾಜಪೇಯಿ ಕವಿತೆಗಳು ಅನು:ಸರಜೂ ಕಾಟಕರ್ ಪ್ರ:ವಿಮೋಚನಾ ಪ್ರಕಾಶನ,ಅಥಣಿ ಪುಟ: ೮೮ ಬೆಲೆ :ರೂ.೧೦೦/-

೩೦.ಸಾಮಾನ್ಯರ ಸ್ವಾಮೀಜಿ (ಗದುಗದತೋಂಟದಾರ್ಯ ಸ್ವಾಮಿಗಳನ್ನು ಕುರಿತು ಅಭಿಪ್ರಾಯ ಸಂಗ್ರಹ) ಸಂ:ಡಾ.ಬಸವರಾಜ ಮಲಶೆಟ್ಟಿ ಹಾಗೂ ಪ್ರೊ.ಚಂದ್ರ- ಶೇಖರ ವಸ್ತ್ರದ ಪ್ರ:ಜೇವಿ, ಗದಗ ಪುಟ:೧೭೪ ಬೆಲೆ:ರೂ. ೫೦/-

ಆನಂದಕಂದ ಗ್ರಂಥಮಾಲೆ

ಮಲ್ಲಾಡಿಹಳ್ಳಿ -೫೭೭ ೫೩೧ (ದೂರವಾಣಿ-೦೮೧೯೧-೮೯೫೦೧)

ಆನಂದಕಂದ ಗ್ರಂಥಮಾಲೆಯು ಸದಭಿರುಚಿಯ ಕನ್ನಡ ಪುಸ್ತಕಗಳನ್ನು ಪ್ರಕಟಿಸುವ ಸಾಹಸದ ಕೆಲಸವನ್ನು ಕೈಗೊಂಡು ಇದೀಗ ಎರಡು ವರ್ಷಗಳನ್ನು ಪೂರ್ಣಗೊಳಿಸುತ್ತಿದೆ.

ಗ್ರಂಥಮಾಲೆಯ ಎರಡನೆಯ ವರ್ಷದ ನಾಲ್ಕೂ ಪುಸ್ತಕಗಳು ಬಿಡುಗಡೆಗೊಂಡಿವೆ. ಎರಡನೆಯ ವರ್ಷದ ಪ್ರಕಟಣೆಗಳಾದ ಈ ನಾಲ್ಕು ಪುಸ್ತಕಗಳ ವಿವರ ಹೀಗಿದೆ:

೧. **ನನ್ನ ನೆನಪುಗಳು** : ಆನಂದಕಂದ (ಡಾ. ಬೆಟಗೇರಿ ಕೃಷ್ಣಶರ್ಮ) ಅವರ ಆತ್ಮ ಚರಿತ್ರೆ- ಒಂದು ಮಹತ್ವದ ಸಾಂಸ್ಕೃತಿಕ ದಾಖಲೆ. ಬೆಲೆ: ರೂ.೧೫೦.

೨. **ಅವಾಂತರ** : ಕವಿ, ವಿಮರ್ಶಕ ಪ್ರಹ್ಲಾದ ಅಗಸನಕಟ್ಟೆಯವರ ಕಾದಂಬರಿ ಬೆಲೆ: ರೂ.೭೫.

೩. **ಶ್ರೀಕೃಷ್ಣ ಪಾರಿಜಾತ** : ಉತ್ತರ ಕರ್ನಾಟಕದ ಪ್ರಸಿದ್ಧ ಜಾನಪದ ರಂಗಭೂಮಿ 'ಶ್ರೀಕೃಷ್ಣ ಪಾರಿಜಾತ'ವನ್ನು ಸಂಪಾದಿಸಿಕೊಟ್ಟಿದ್ದಾರೆ ಜಾನಪದ ತಜ್ಞ, ಡಾ. ಬಸವರಾಜ ಮಲಶೆಟ್ಟಿಯವರ ಬೆಲೆ: ರೂ.೭೫.

೪. **ಬೋಧಿವೃಕ್ಷದ ಕೆಳಗೆ** : ಸ್ವಾತಂತ್ರ್ಯೋತ್ತರ ಭಾರತದ ಅಭಿವೃದ್ಧಿಯ ವಿನ್ಯಾಸಗಳು ಈ ಮನನೀಯ ಲೇಖನಗಳ ಸಂಕಲನದ ಲೇಖಕ ಜಿ.ಎನ್. ಮಲ್ಲಿಕಾರ್ಜುನ. ಬೆಲೆ: ರೂ.೮೫

ಆನಂದಕಂದ ಗ್ರಂಥಮಾಲೆಗೆ ಚಂದಾದಾರರಾಗುವ ಮೂಲಕ ನೀವು ಈ ನಾಲ್ಕೂ ಪುಸ್ತಕಗಳನ್ನು ಕೇವಲ ರೂ.೨೫೦ ನೀಡಿ ಪಡೆಯಬಹುದು.

ನೀವು ರೂ.೨೫೦ ಕಳಿಸಿದರೆ ನಿಮಗೆ ನಮ್ಮ ವೆಚ್ಚದಲ್ಲಿ ರೂ.೩೭೫ ಬೆಲೆಯ ಈ ನಾಲ್ಕೂ ಪುಸ್ತಕಗಳನ್ನು ರಜಿಸ್ಟರ್ಡ್ ಅಂಚೆಯಿಂದ ಕಳಿಸಿ ಕೊಡುತ್ತೇವೆ. ಇವುಗಳಲ್ಲದೆ ಲಭ್ಯವಿರುವ ಆನಂದಕಂದ ಗ್ರಂಥಮಾಲೆಯ ಇತರ ಪ್ರಕಟಣೆಗಳೆಂದರೆ:

ಮೊದಲ ವರ್ಷದ ಪ್ರಕಟಣೆಗಳು :

೧. ಕೂಡು ಕಟ್ಟು - ಜಾನಪದ ಅಧ್ಯಯನಗಳು ಲೇ: ಡಾ. ಪುರುಷೋತ್ತಮ ಬಿಳಿಮಲೆ ಬೆಲೆ: ರೂ.೧೫೦

೨. ಅಮೇರಿಕಾದಲ್ಲಿ ಬಿಲ್ಲುಹಬ್ಬ - ಕವಿತೆಗಳು ಲೇ: ಡಾ. ಎಚ್. ಎಸ್. ವೆಂಕಟೇಶಮೂರ್ತಿ ಬೆಲೆ: ರೂ.೭೫

೩. ಓದುಗರು ಮತ್ತು ಓದುವಿಕೆ - ಪಾಶ್ಚಾತ್ಯ ಓದುಗ ಸ್ಪಂದನ ಸಿದ್ಧಾಂತಗಳು ಲೇ: ಡಾ. ಸಿ. ಎನ್. ರಾಮಚಂದ್ರನ್. ಬೆಲೆ: ರೂ.೫೦

೪. ಮಾಯಿಯ ಮುಖಗಳು - ಕಥೆಗಳು ಲೇ: ರಾಘವೇಂದ್ರ ಪಾಟೀಲ. ಬೆಲೆ: ರೂ.೭೫

ಮೂರನೆಯ ವರ್ಷದ ಪ್ರಕಟಣೆ :

೧. ಒಂದು ಗುಲಾಬಿ - ಕಥೆಗಳು ಲೇ: ಜಿ. ಪಿ. ಬಸವರಾಜು. ಬೆಲೆ: ರೂ.೮೦

(ಬಿಡಿಯಾಗಿ ಈ ಪ್ರತಿಗಳನ್ನು ೨೦% ಸೋಡಿ ಮುರಿದುಕೊಂಡು ಹಣ ಕಳಿಸಿ ಪಡೆದುಕೊಳ್ಳಬಹುದು)

ಗ್ರಂಥಮಾಲೆಯ ಚಂದಾ ಅಥವಾ ಬಿಡಿ ಪ್ರತಿಗಳಿಗಾಗಿ ಹಣವನ್ನು ಎಂಓ ಮೂಲಕ ಅಥವಾ ಮಲ್ಲಾಡಿಹಳ್ಳಿಯ ಸಿಂಡಿಕೇಟ್ ಬ್ಯಾಂಕ್‌ನ ಡಿಡಿ ಮೂಲಕ **ಆನಂದಕಂದ ಗ್ರಂಥಮಾಲೆ ಮಲ್ಲಾಡಿಹಳ್ಳಿ - ೫೭೭೫೩೧** ಈ ವಿಳಾಸಕ್ಕೆ ಕಳಿಸಬಹುದು. ಹೊರಗಡೆಯ ಚೆಕ್/ಡಿಡಿ ಕಳಿಸುವುದಾದರೆ ದಯವಿಟ್ಟು ರೂ. ೨೫ ಹೆಚ್ಚಿಗೆ ಸೇರಿಸಿ ಕಳಿಸಿರಿ.

ಕೇಂದ್ರ, ಸಾಹಿತ್ಯ ಅಕಾದೆಮಿ

ಬೆಂಗಳೂರು

ಕನ್ನಡ ಪ್ರಕಟಣೆಗಳು

ಕಾದಂಬರಿಗಳು

ಕತ್ತಲೆಯಿಂದ ಕಗ್ಗತ್ತಲೆಗೆ ರೂ.೯೦-೦೦
(ಪಂಜಾಬಿ ಮೂಲ: ನರೇಂದ್ರಪಾಲ್ ಸಿಂಗ್
ಅನು : ಶಶಿಕಲಾ . ಪಿ)

ಜನುಮದ ಜೋಡಿ ರೂ.೯೦-೦೦
(ಗುಜರಾತಿ ಮೂಲ: ಪನ್ನಲಾಲ್ ಪಟೇಲ್
ಅನು: ಕೃಷ್ಣಕುಮಾರ್ ಕಲ್ಲೂರ)

ಪಾರ್ಥಿಬನ ಕನಸು ರೂ.೯೦-೦೦
(ತಮಿಳು ಮೂಲ: ಕಲ್ಕಿ
ಅನು: ಶೇಷನಾರಾಯಣ)

ಆರು ಬಿಘೇ ಭೂಮಿ ರೂ.೮೦-೦೦
(ಒರಿಯಾ ಮೂಲ: ಫಕೀರ್ ಮೋಹನ
ಅನು: ಗುರುನಾಥ್ ಜೋಶಿ)

ಒಂದು ಊರಿನ ಕಥೆ ರೂ.೩೦೦-೦೦
(ಮಲಯಾಳಂ ಮೂಲ: ಎಸ್. ಕೆ. ಪೊಟ್ಟಕಟ್ಟ
ಅನು: ಕೆ. ಕೆ. ನಾಯರ್ ಮತ್ತು ಅಶೋಕ್
ಕುಮಾರ್)

ಕೆಂಪು ಮೀನು ರೂ.೩೦-೦೦
(ಮಲಯಾಳಂ ಮೂಲ: ತಕಳಿ ಶಿವಶಂಕರ ಪಿಳ್ಳೆ
ಅನು: ನಾ. ಕಸ್ತೂರಿ)

ನಾರಾಯಣರಾವ್ ರೂ.೧೨೦-೦೦
(ತೆಲುಗು ಮೂಲ: ಅಡವಿ ಬಾಪಿ ರಾಜು
ಅನು: ಕೆ. ಎಸ್. ಜಾನಕಿ ರಾಮಯ್ಯ)

ನಾರಿ ರೂ.೫೦-೦೦
(ಹಿಂದಿ ಮೂಲ: ಸಿಯಾರಾಮ್ ಶರಣ ಗುಪ್ತ
ಅನು: ಪಂಚಾಕ್ಷರಿ ಹಿರೇಮಠ್)

ಯಾರು ಲಕ್ಷಿಸುವರು ರೂ.೪೦-೦೦
(ಮರಾಠಿ ಮೂಲ: ಹರಿನಾರಾಯಣ ಆಪ್ಟೆ
ಅನು: ಲೀಲಾ ಕಾರಂತ ಮತ್ತು ಶಿವರಾಮ
ಕಾರಂತ)

ಅವೇಳೆ ರೂ.೨೦೦-೦೦
(ಬಂಗಾಳಿ ಮೂಲ: ಬಿಮಲ್ ಕರ್
ಗೀತಾ ವಿಜಯ್ ಕುಮಾರ್)

ಕಾವ್ಯ

ಕಬೀರ ವಚನಾವಳಿ ರೂ.೫೦-೦೦
(ಹಿಂದಿ ಮೂಲ: ಕಬೀರ್-ಸಂತಕವಿ
ಅನು: ದ. ರಾ. ಬೇಂದ್ರೆ)

ಕುಮಾರನ್ ಆಶಾನ್ ಮೂರು ಕವಿತೆಗಳು ರೂ.೪೦-೦೦
(ಮಲಯಾಳಂ ಮೂಲ: ಕುಮಾರನ್ ಆಶಾನ್
ಅನು: ಚಿ. ಉಬ್ಬೈದ್ ಮತ್ತು ಕೈಯಾರ್ ಕಿಂಞಣ್ಣ ರೈ)

ನಾಟಕ

ಏಕಾಂಕ ಸಂಗ್ರಹ ರೂ.೩೦-೦೦
(ಸಂಪಾದಕರು: ಸಿಂಧುವಳ್ಳಿ
ಅನಂತಮೂರ್ತಿ)

ಮೀಡಿಯಾ ರೂ.೨೦-೦೦
(ಗ್ರೀಕ್ ಮೂಲ: ಯೂರಿಪಿಡೀಸ್
ಅನು: ಕೆ. ಎಸ್. ನರಸಿಂಹಸ್ವಾಮಿ)

ಪ್ರತಿಗಳಿಗೆ ಮತ್ತು ವಿವರಗಳಿಗೆ ಸಂಪರ್ಕಿಸಿರಿ

ಸಾಹಿತ್ಯ ಅಕಾದೆಮಿ

ದಕ್ಷಿಣ ಪ್ರಾದೇಶಿಕ ಕಾರ್ಯಾಲಯ, ೧೦೯, ಜೆ. ಸಿ. ರಸ್ತೆ, ಬೆಂಗಳೂರು - ೫೬೦ ೦೦೨

Reg.No.KAR.KAN.08358/05 TC

ಸಾಹಿತ್ಯ ಸಂವಾದ – ೫೦

ಸುವರ್ಣ ಸಂಚಿಕೆಗೆ

ಶುಭಾಶಯಗಳು

ಸಂವಾದದ ಗೆಳೆಯರ ಸ್ನೇಹ ಸೇತು ಸ್ಥಿರವಾಗಿರಲೆಂದು
ಹಾರೈಸುವ ಸಂವಾದದ ಅಭಿಮಾನಿ ದಂಪತಿಗಳು

SAHITYA SAMVADA - 50 APRIL - JUNE 1999

EDITED AND PUBLISHED BY SAMVADA PRAKASHANA
MALLADIHALLI - 577 531, CHITRADURGA - DIST

PHONE : 08191 - 89501